H. Gundert
1858

# LITURGIE

DER

# EVANGELISCH DEUTSCHEN MISSIONSKIRCHE

IN

# INDIEN.

---

ದ್ಯೈಚ ದೇಶದಿಂದ ಬಂದ ಬೋಧಕರು
ಸುವಾರ್ತೆಯ ಆಧಾರದಿಂದ ಹಿಂದು ದೇಶದಲ್ಲಿ ಕೂಡಿಸಿ ಸ್ಥಾಪಿಸಿದ
ಸಭೆಗಳಲ್ಲಿ ದೇವರ ಆರಾಧನೆಗಾಗಿ ಮಾಡಲಿಕ್ಕೆ ನೇಮಿಸಿದ

# ಸಭೇಪ್ರಾರ್ಥನೆಗಳು.

MANGALORE:
PRINTED BY G. PLEBST, GERMAN MISSION PRESS.
1858.

# I. Gebete.

## Sonntag Morgengottesdienst.

(ಆದಿತ್ಯವಾರದ ಪ್ರಾತಃಕಾಲದ ದೇವಾರಾಧನೆ.)

(Zuerst tritt der Prediger an den Altar, oder wo keiner vorhanden ist, auf die Kanzel, und spricht den Kanzelgruss, wozu die Gemeinde aufsteht.)

### Kanzelgrüsse beim Auftritt.

(ಆರಂಭದಲ್ಲಿ ಹೇಳ ತಕ್ಕ ಆಶೀರ್ವಾದಗಳು.)

೧.

ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮನ ಐಕ್ಯವೂ, ನಿಂಮೆಲ್ಲರ ಸಂಗಡ ಇರಲಿ. ಆಮೆನ್.

೨.

ನಂಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.

೩.

ತಂದೆಯಾದ ದೇವರಿಂದಲೂ, ತಂದೆಯ ಮಗನಾಗಿರುವ ಕರ್ತನಾದ ಯೇಸು ಕ್ರಿಸ್ತನಿಂದಲೂ, ಕೃಪೆಯೂ, ಕರುಣೆಯೂ, ಸಮಾಧಾನವೂ ಸತ್ಯದಲ್ಲಿಯೂ, ಪ್ರೀತಿಯಲ್ಲಿಯೂ, ನಿಂಮ ಸಂಗಡ ಇರಲಿ.

೪.

ನಂಮ ಆರಂಭವು ದೇವರಾದ ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ಆಗಲಿ. ಆಮೆನ್

## An Festtagen.

(ಸಭೆಯ ಹಬ್ಬ ದಿವಸಗಳಲ್ಲಿ.)

### Advent. (ಕ್ರಿಸ್ತನ ಆಗಮ.)

೧.

ದಾವೀದನ ಮಗನಿಗೆ ಹೋಸಂನ! ಕರ್ತನ ಹೆಸರಿನಲ್ಲಿ ಬರುವವನು ಸ್ತುತಿಸಲ್ಪಡಲಿ. ಅತ್ಯುನ್ನತವಾದವುಗಳಲ್ಲಿ ಹೋಸಂನ!

೨.

ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾದ ನಂಬಿಕೆಯಾದ ವಾಕ್ಯವು ಇದೇ—ಕ್ರಿಸ್ತ ಯೇಸು ಪಾಪಿಗಳಂನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನು.

---

### Christtag. (ಕ್ರಿಸ್ತನ ಜನನ.)

೧.

ಸರ್ವಾ ಜನರಿಗೆಲ್ಲಾ ಉಂಟಾಗುವ ಮಹಾ ಸಂತೋಷವಂನು ನಿಮಗೆ ಸಾರುತ್ತೇನೆ. ಯೇನಂದರೆ ಈಹೊತ್ತು ಕರ್ತನಾದ ಕ್ರಿಸ್ತನೆಂಬ ರಕ್ಷಕನು ದಾವೀದನ ಪಟ್ಣದಲ್ಲಿ ನಿಮಗೆ ಹುಟ್ಟಿದ್ಧಾನೆ.

೨.

ಮಹೋಂನತವಾದವುಗಳಲ್ಲಿ ದೇವರಿಗೆ ಮಹಿಮೆಯೂ, ಭೂಮಿಯ ಮೇಲೆ ಸಮಾಧಾನವೂ, ಮನುಷ್ಯರಲ್ಲಿ ದಯವೂ ಆಗಲಿ.

---

## Neujahr. (ಯುಗಾದಿ.)

೧.

ಇರುವವನೂ, ಇದ್ದವನೂ, ಬರುವವನೂ, ಆಗಿರುವಾತನಿಂದಲೂ, ಆತನ ಸಿಂಹಾಸನದ ಮುಂದೆ ಇರುವ ಏಳು ಆತ್ಮಗಳಿಂದಲೂ, ನಂಬಿಕೆಯಾದ ಸಾಕ್ಷಿಯೂ, ಸತ್ತವರಲ್ಲಿಂದಾದ ಚೊಚ್ಚಲವನೂ, ಭೂರಾಜರ ಒಡೆಯನೂ, ಆಗಿರುವ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ, ಸಮಾಧಾನವೂ, ಆಗಲಿ.

೨.

ದೇವರು ನಮಗೆ ಆಶ್ರಯವೂ, ಬಲವೂ, ಆಗಿದ್ದಾನೆ. ಇಕ್ಕಟ್ಟುಗಳಲ್ಲಿ ವಿಶೇಷವಾಗಿ ಸಹಾಯಕನಾಗಿ ಕಾಣಿಸಿ ಕೊಳ್ಳುತ್ತಾನೆ.

---

## Erscheinungsfest. (ಪ್ರತ್ಯಕ್ಷತೆಯ ಹಬ್ಬ.)

ಏಳು. ಬೆಳಗು. ಯಾಕಂದರೆ ನಿಂನ ಬೆಳಕು ಬಂತು. ಕರ್ತನ ಘನವು ನಿಂನ ಮೇಲೆ ಉದಯವಾಯಿತು.

---

## Charfreitag. (ಕ್ರಿಸ್ತನ ಮರಣ.)

ಕೊಲ್ಲಲ್ಪಟ್ಟ ಕುರಿಮರಿಯು ಬಲ, ಐಶ್ವರ್ಯ, ಜ್ಞಾನ, ಶಕ್ತಿ, ಘನ, ಮಹಿಮೆ, ಸ್ತೋತ್ರಗಳಂನು ಹೊಂದ ಯೋಗ್ಯವಾಗಿದೆ.

---

## **Ostern.** (ಕ್ರಿಸ್ತನ ಉತ್ಥಾನ.)

೧.

ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರಿಗೆ ಸ್ತೋತ್ರವು. ಆತನು ತಂನ ಅಧಿಕವಾದ ಕರುಣೆಯ ಪ್ರಕಾರ ಯೇಸು ಕ್ರಿಸ್ತನು ಸತ್ತವರೊಳಗಿಂದ ಹೊಂದಿದ ಪುನರುತ್ಥಾನದ ಮೂಲವಾಗಿ ನಂಮನ್ನು ಜೀವ ಉಳ್ಳ ಕ್ಯಾರಿಕೆಗೆ, ಲಯ ಕಳಂಕ ಕ್ಷಯ ಇಲ್ಲದ ಬಾಧ್ಯತೆಗೆ, ತಿರಿಗಿ ಹುಟ್ಟಿಸಿದ್ದಾನೆ.

೨.

ನಿತ್ಯ ಒಡಂಬಡಿಕೆಯ ರಕ್ತದಿಂದ ಕುರಿಗಳ ದೊಡ್ಡ ಕುರುಬನಾಗಿರುವ ನಂಮ ಕರ್ತನಾದ ಯೇಸುವಂನು ಸತ್ತವರೊಳಗಿಂದ ತಿರಿಗಿ ಬರಮಾಡಿದ ಸಮಾಧಾನದ ದೇವರು, ಆತನ ಚಿತ್ತವಂನು ಮಾಡುವ ಹಾಗೆ, ನಿಂಮನ್ನು ಸಕಲ ಸತ್ಕ್ರಿಯೆಗಳಲ್ಲಿ ಸಂಪೂರ್ಣರಾಗ ಮಾಡಿ, ತಂನ ಸಮ್ಮುಖದಲ್ಲಿ ಸಮರ್ಪಕವಾದದ್ದಂನು ನಿಂಮಲ್ಲಿ ಯೇಸು ಕ್ರಿಸ್ತನ ಮುಖಾಂತರ ಉಂಟು ಮಾಡಲಿ. ಆತನಿಗೆ ಯುಗ ಯುಗಾಂತರಗಳಿಗೂ ಮಹಿಮೆ. ಆಮೆನ್.

---

## **Himmelfarth.** (ಕ್ರಿಸ್ತನ ದಿವಾರೋಹಣದ ಹಬ್ಬ.)

ಕೀರ್ತಿಸಿರಿ, ದೇವರಂನು ಕೀರ್ತಿಸಿರಿ. ನಂಮ ಅರಸನಂನು ಕೀರ್ತಿಸಿರಿ. ಯಾಕಂದರೆ ದೇವರು ಯೆಲ್ಲಾ ಭೂಮಿಗೆ ಅರಸನು. ಬುದ್ಧಿಯಿಂದ ಕೀರ್ತಿಸಿರಿ. ದೇವರು ಜನಾಂಗಗಳನ್ನು ಆಳುತ್ತಾನೆ. ದೇವರು ತಂನ ಪರಿಶುದ್ಧ ಸಿಂಹಾಸನದಲ್ಲಿ ಕೂತಿದ್ದಾನೆ.

---

**Pfingsten.** (ಪಂಚಾಶತ್ತಿನ ಹಬ್ಬ.)

ನೀವು ಮಕ್ಕಳಾಗಿರುವದರಿಂದ, ದೇವರು ತಂನ ಮಗನ ಆತ್ಮವಂನು ನಿಂಮ ಹೃದಯಗಳೊಳಗೆ ಕಳುಹಿಸಿದನು.

---

**Dreieinigkeitsfest.** (ತ್ರಿಯೈಕತ್ವದ ಹಬ್ಬ.)

ಇದ್ದವನೂ, ಇರುವವನೂ, ಬರುವವನೂ, ಆಗಿರುವಂಥಾ, ಸರ್ವತ್ರಾಣಿಯಾದ ದೇವರಾಗಿರುವಂಥಾ, ಕರ್ತನೇ ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು.

---

**Gesang.** (ಗೀತ.)

Hierauf singt die Gemeinde den vom Prediger anzugebenden Vers allgemeinen Inhalts (Gebets, - Lob - oder Dank - Lied). Sodann beginnt das Gebet.

---

## Gebete.

### Einleitung. (ಪ್ರೇರಿಕೆ.)

ಕರೆಯಲ್ಪಟ್ಟಂಥ ಪರಿಶುದ್ಧ ಮಾಡಲ್ಪಟ್ಟವರೇ! ನಿಂಮ ಪ್ರಾರ್ಥನಯಿಂದ ದೇವರ ಮುಂದೆ ಭಕ್ತಿಯಿಂದ ಬರುವದಕ್ಕೆ ನಿಂಮ ಹೃದಯಗಳಂನು ಯೆತ್ತಿಕೊಳ್ಳಿರಿ. ನಿಶ್ಚಯವಾಗಿ ಇಲ್ಲಿಯೇ ಸಹಾ ದೇವರ ಮಂದಿರವೂ, ಪರಲೋಕದ ಬಾಗಲೂ ಅದೆ. ಆತನ ಆನಂದದ ಮಗನಾದ ಯೇಸು ಕ್ರಿಸ್ತನಲ್ಲಿ, ಸ್ವೀಕಾರದ ಪರಿಶುದ್ಧಾತ್ಮಸಹಿತವಾಗಿ, ವಾಕ್ಯದ ಮುಖದಿಂದಲೂ, ಮರ್ಮವಾದ ಕೃಪೇ ಸಾಹಿತ್ಯಗಳ ಮುಖದಿಂದಲೂ, ಪರಲೋಕದ ಜ್ಞಾನ ತಿಳುವಿಕೆಗಳ ಆಶ್ಚರ್ಯವಾದ ಬೆಳಕಂನೂ,

ದೈವಾಚಾರವಂನೂ, ಆದರಣೆಯಂನೂ, ಯೆಲ್ಲಾ ಬುದ್ಧಿಗೆ ಮೀರುವ ಸಮಾಧಾನ ಸಂತೋಷವಂನೂ, ತನ್ನ ರಾಜ್ಯದ ಮಕ್ಕಳ ಮೇಲೆ ವಿಸ್ತರಿಸುವದಕ್ಕೆ, ಇಲ್ಲಿ ಸುದಾ ಆತನ ಪರಿಶುದ್ಧ ಮಹಿಮೆಯು ಅತಿ ಕೃಪೆಯಾಗಿ ದೊರಕುವದು. ಮತ್ತು ನಿಮಗೆ ಸಹಾ, ಯೆಲ್ಲಾ ವಾಳ್ಕೆಯವುಗಳಿಗೆ ಜೀವವುಳ್ಳ ಬುಗ್ಗೆಯಾಗಿರುವ ತ್ರಿಯೇಕನಾದ ಮಹೋನ್ನತನ ಬಳಿಗೆ ನಿಂಮ ಪ್ರಾರ್ಥನೆಯಿಂದಲೂ, ಆತ್ಮಭಾವವಾದ ಸ್ತೋತ್ರದ ಬಲಿಗಳಿಂದಲೂ, ರಮ್ಯವಾದ ದೇವಾರಾಧನೆಗಳಿಂದಲೂ, ಪ್ರವೇಶ ಉಂಟಾಗಿರಲಿ. ಅದಕ್ಕಾಗಿ ನಾವು ಮನಃಪೂರ್ವಕವಾದ ದೀನತ್ವದಿಂದಲೂ, ಪುತ್ರಭಾವವಾದ ಭರವಸದಿಂದಲೂ, ಕೃಪಾಸನದ ಮುಂದೆ ಬಂದು, ಯೆಲ್ಲಾಕ್ಕಿಂತ ಮುಂದಾಗಿ ನಂಮ ಪಾಪಗಳನ್ನು ಮನೋದುಃಖದಿಂದ ಅರಿಕೆ ಮಾಡಿ, ಹೇಳುವದೇನಂದರೆ —

---

### **Sündenbekenntniss.** (ಪಾಪದ ಅರಿಕೆ.)

(Alle knieen.)

ಬಡ ಪಾಪವುಳ್ಳ ಮನುಷ್ಯರಾದ ನಾವು ಪರಲೋಕದಲ್ಲಿರುವ ನಂಮ ತಂದೆಯಾದ ದೇವರ ಮುಂದೆ, ದುಃಖ ಪಟ್ಟು, ಅರಿಕೆ ಮಾಡುವದೇನಂದರೆ — ನಾವು ಬಹಳ ಪಾಪ ಮಾಡಿ, ಕೆಟ್ಟ ಆಲೋಚನೆ ಮಾತು ಕ್ರಿಯೆಗಳಿಂದಲೂ, ನಾನಾತರದ ಅವಿಶ್ವಾಸ ಅಪಕಾರ ಅಪನಂಬಿಕೆಗಳಿಂದಲೂ, ನಂಮ ಯೆಲ್ಲಾ ನಡತೆಯಲ್ಲಿ ಸಹೋದರರ ಪ್ರೀತಿ ಕಡಿಮೆ ಮಾಡಿದದರಿಂದಲೂ, ಆತನ ಪರಿಶುದ್ಧ ಆಜ್ಞೆಗಳಂನು ಬಹಳ ಸರ್ತಿ ನಾನಾವಿಧವಾಗಿ ಮೀರಿದ್ದೇವೆ. ಅದರಿಂದ ನಾವು ದೇವರ ದಂಡ

ಕ್ಕೂ, ದೇಹದ ಸಾವಿಗೂ, ನಿತ್ಯಮರಣಕ್ಕೂ, ಪಾತ್ರರಾದೆವು. ಆದರೆ ನಮ್ಮ ಸಕಲ ಪಾಪಗಳಿಗೆ ನಾವು ಬಹಳವಾಗಿ ಪಶ್ಚಾತ್ತಾಪಗೊಂಡು, ಮನಃಪೂರ್ವಕವಾದ ದುಃಖ ಪಡುತ್ತೇವೆ. ನಮ್ಮ ದೋಷಕ್ಕಿಂತ ದೊಡ್ಡವಾದ ದೇವರ ಕೃಪೆಯೂ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಮೂಲ್ಯವಾದ ಪುಣ್ಯವೂ ಇವು ಅಲ್ಲದೆ, ನಮಗೆ ಬೇರೊಂದು ಆಶ್ರಯವಿಲ್ಲ. ಈ ಕೃಪೆಗೆ ಆಶೆ ಮಾಡಿ, ನಾವು ಹೇಳುವದೇನಂದರೆ — ತಂದೆಯೇ, ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ. ನಾನು ಇನ್ನು ನಿನ್ನ ಮಗನೆಂದು ಕರೆಯಲ್ಪಡ ಯೋಗ್ಯನಲ್ಲ; ಆದರೆ ನಾನು ಪಾಪಪರಿಹಾರವನ್ನೂ, ನಿನ್ನ ಕಡೆಗಾವ ಹೊಸ ಧೈರ್ಯವನ್ನೂ, ಶುದ್ಧೀಕರಣಕ್ಕೆ ನಿನ್ನ ಆತ್ಮದಿಂದ ತ್ರಾಣವನ್ನೂ, ಹೊಂದುವ ಹಾಗೆ, ಈ ಕೃಪೆಯ ಸಮಯದಲ್ಲಿ ಬರುತ್ತೇನೆ. ಆಮೆನ್.

ನಿಮ್ಮೊಳಗೆ ಯಥಾರ್ಥವಾಗಿ ತಮ್ಮ ಪಾಪಗಳನ್ನು ತಿಳಿದು ಕೊಂಡು, ಅರಿಕೆ ಮಾಡಿ, ಸದ್ವಿಶ್ವಾಸದಿಂದ ನಿಮ್ಮ ಹೃದಯಗಳ ನೆಲೆಯಿಂದ ಕೃಪೆಯನ್ನೂ ಕ್ಷಮೆಯನ್ನೂ ಬೇಡಿ ಕೊಂಡು, ದೇವರಿಗೆ ಮೊರೆ ಇಟ್ಟವರೆಲ್ಲರೇ, ಸರ್ವತ್ರಾಣಿಯಾದ ದೇವರು, ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯು, ನಿಮಗೆ ಕೃಪೆ ಅಂತಃಕರುಣ ಉಳ್ಳಾತನಾಗಿ, ತನ ಪ್ರಿಯ ಮಗನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗೋಸ್ಕರ ಶ್ರಮೆ ಪಟ್ಟು, ಮರಣ ಹೊಂದಿದ ನಿಮಿತ್ತ, ಅವುಗಳನ್ನೆಲ್ಲಾ ನಿಮಗೆ ಕ್ಷಮಿಸುವನೆಂಬುವ ವಿಶ್ವಾಸದಲ್ಲಿ ಆಶ್ರಯವಾಗಿರಿ. ಈ ನಮ್ಮ ಕರ್ತ

ನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ — ಯಾರ ಪಾಪಗಳನ್ನು ಬಿಡುತ್ತೀರೋ, ಅವರಿಗೆ ಬಿಟ್ಟವೆ; ಯಾರವುಗಳನ್ನು ಹಿಡಿಯುತ್ತೀರೋ, ಹಿಡಿಯಲ್ಪಟ್ಟವೆ — ಯೆಂಬ, ಆತನ ವಾಕ್ಯದ ಬಲದಿಂದಲೇ, ನಾನು ಕ್ರಿಸ್ತನ ಸಭೆಯ ಕರೆಯಲ್ಪಟ್ಟ ಸೇವಕನಾಗಿ, ಮಾನಸಾಂತರ ವಿಶ್ವಾಸವುಳ್ಳ ನಿಮಗೆ ಹೇಳುವದೇನಂದರೆ — ನೀವು ನಿಂಮ ಯೆಲ್ಲಾ ಪಾಪಗಳಿಂದ ಬಿಡುಗಡೆಯಾಗಿ, ಅವುಗಳ ಹಂಗು ಬಂಧನೆಗಳಿಲ್ಲದವರಾಗಿದ್ಧೀರಿ. ಯೇಸು ಕ್ರಿಸ್ತನು ಪುಷ್ಕಳವಾಗಿಯೂ ಸಂಪೂರ್ಣವಾಗಿಯೂ ಪಾಪ ಪರಿಹಾರವಂನು ತಂನ ಶ್ರಮೆ ಮರಣದಿಂದ ಸಂಪಾದಿಸಿ, ಸುವಾರ್ತೆಯಿಂದ ಸಮಸ್ತ ಲೋಕದಲ್ಲಿ ಸಾರುವದಕ್ಕೆ ಆಜ್ಞಾಪಿಸಿದಷ್ಟು, ನಿಂಮ ಪಾಪಗಳೆಲ್ಲಾ ನಿಮಗೆ ಪರಿಹಾರವಾಗಿವೆ. — ನಾನು ಈಗ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಹೇಳಿದ ಈ ಆದರಣೆಯಾದ ವಚನವಂನು ನೀವು ಸಮಾಧಾನಕ್ಕಾಗಿ ಹಿಡಿದು ಕೊಂಡು, ನಿಂಮ ಮನಸ್ಸಾಕ್ಷಿಗಳಂನು ಈ ಆಧಾರದಿಂದ ಶಾಂತಿ ಪಡಿಸಿ, ನಿಂಮ ಪಾಪಗಳು ನಿಮಗೆ ನಿಶ್ಚಯವಾಗಿ ಪರಿಹಾರವಾಗಿವೆಂದು, ತಂದೆ ಮಗ ಪರಿಶುದ್ಧಾತ್ಮದ ಹೆಸರಿನಲ್ಲಿ ದೃಢವಾಗಿ ನಂಬಿ ಕೊಳ್ಳಿರಿ.

ಪರಂತು ಮಾನಸಾಂತರವಿಲ್ಲದವರಾಗಲಿ, ಅಥವಾ ಅವಿಶ್ವಾಸಿಗಳಾಗಲಿ, ಇವರೆಲ್ಲರು ತಿಳಿಯ ತಕ್ಕದ್ದೇನಂದರೆ — ಅವರ ಪಾಪಗಳು ಅವರಿಗೆ ಹಿಡಿಯಲ್ಪಟ್ಟವೆ. ಅವರು ತಿರಿಗಿ ಕೊಳ್ಳದೆ, ಮಾನಸಾಂತರ ಪಡದೆ ಇದ್ದರೆ, ದೇವರು ನಿಶ್ಚಯವಾಗಿಯೂ ಪೂರ್ಣವಾಗಿಯೂ ಅವರನ್ನು ಇಹದಲ್ಲಿ ತತ್ಕಾಲಿಕವಾಗಿಯೂ, ಪರದಲ್ಲಿ ನಿತ್ಯವಾಗಿಯೂ ಶಿಕ್ಷಿಸಿ ದಂಡಿ

ಸುವನು. ಇದನ್ನು ನಾನು ಅವರಿಗೆ ನಂಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಪೆಸರಿನಲ್ಲಿ, ಆತನ ಅಪ್ಪಣೆಯಿಂದ, ಸಾರಿ ತಿಳಿಸಿ; ಅವರು ಮಾನಸಾಂತರ ಪಟ್ಟು ಸುವಾರ್ತೆ ನಂಬಿಕೊಂಡು ದೇವರಿಗೆ ಅನ್ಯೋನ್ಯವಾಗ ಬೇಕೆಂದು, ದೇವರ ಸ್ಥಳದಲ್ಲಿ ಅವರನ್ನು ಬೇಡಿ ಕೊಳ್ಳುತ್ತೇನೆ.

Oder (ಅಥವ):

ಓ ಸರ್ವತ್ರಾಣಿಯಾದ, ನಿತ್ಯನಾದ ಅಂತಃಕರುಣವುಳ್ಳ ದೇವರೇ! ನಂಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ತಂದೆಯೇ! ಬಡ ಪಾಪವುಳ್ಳ ಮನುಷ್ಯರಾದ ನಾವು ನಿನ್ನ ದಿವ್ಯ ಮಹಿಮೆಯ ಮುಂದೆ ತಿಳಕೊಂಡು, ದುಖ್ಖದಿಂದ ಅರಿಕೆ ಮಾಡುವದೇನಂದರೆ,—ನಾವು ಪಾಪದಲ್ಲಿ ತಾಯಿಯ ಗರ್ಭಕ್ಕೆ ಬಂದು, ಹುಟ್ಟಿ, ಈ ಪ್ರಕಾರ ಸ್ವಭಾವದಿಂದ ಕೋಪದ ಮಕ್ಕಳಾಗಿದ್ದೇವೆ. ನಾವು ಬದುಕುವಷ್ಟರಲ್ಲಿ, ಆಲೋಚನೆ ವಾಕ್ಯ ಕ್ರಿಯೆಗಳಿಂದ, ಬಹಳವಾಗಿ ನಿನ್ನ ಕೋಪವನ್ನು ಯೆಬ್ಬಿಸಿದೆವು. ಸೃಷ್ಟಿ ಕರ್ತನೂ, ವಿಮೋಚಕನೂ, ಶುದ್ಧ ಮಾಡುವಾತನೂ, ಆಗಿರುವ ನಿನಗೆ, ನಾವು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ನಂಮ ಪೂರ್ಣ ಬಲದಿಂದಲೂ, ಪ್ರೀತಿ ಮಾಡಲಿಲ್ಲ. ಮತ್ತು ನೀನು ಆಜ್ಞಾಪಿಸಿದಾಗ್ಯೂ ನಂಮ ನೆರೆಯವನಂನು ನಂಮ ಹಾಗೆ ಪ್ರೀತಿಸಲಿಲ್ಲ. ಆದದರಿಂದ ನಿಂನ ಕೋಪಕ್ಕೂ, ನ್ಯಾಯತೀರ್ವಿಕೆಗೂ, ನಿತ್ಯ ಮರಣಕ್ಕೂ, ಆಜ್ಞಾತೀರ್ವಿಕೆಗೂ ತಕ್ಕಂಥಾ ಅಪರಾಧಸ್ಥರಾಗಿದ್ದೇವೆಂದು ಒಪ್ಪಿ ಕೊಳ್ಳುತ್ತೇವೆ. ಆ

ದರೆ ನಿನ್ನ ಅಗಾಧವಾದ ಅಂತಃಕರುಣವನ್ನು ಆಶ್ರಯ ಮಾಡಿ, ನಾವು ಕೃಪೆಯನ್ನು ಹುಡಿಕಿ, ಆಶಿಸಿ, ನಂಮ ಹೃದಯದ ನೆಲೆಯಿಂದ ನಿನ್ನನ್ನು ಬೇಡಿಕೊಳ್ಳುವದೇನಂದರೆ — ನಂಮಂನು ಕರುಣಿಸು! ನಂಮ ಪಾಪಗಳಂನೆಲ್ಲಾ ಕೃಪೆಯಾಗಿ ಕ್ಷಮಿಸು. ನಿಜವಾದ ತಿದ್ದಿಕೆಯನ್ನು ದಯಪಾಲಿಸು. ನಿನ್ನ ಪ್ರಿಯ ಮಗನಾದ, ನಂಮ ಕರ್ತ ರಕ್ಷಕನಾಗಿರುವ, ಯೇಸು ಕ್ರಿಸ್ತನ ನಿಮಿತ್ತವಾಗಿಯೂ, ನಿನ್ನ ಪರಿಶುದ್ಧ ಹೆಸರಿನ ಘನದ ನಿಮಿತ್ತವಾಗಿಯೂ, — ಕರ್ತನೇ! ಬಡ ಪಾಪಿಷ್ಠರಾದ ನಮಗೆ ಕೃಪೆಯುಳ್ಳಾತನಾಗಿರು! ಆಮೆನ್.

Hier erhebt sich der Liturgus und spricht die

### Absolution. (ಪಾಪಪರಿಹಾರದ ಸಾರುವಿಕೆ.)

ಮನಃಪೂರ್ವಕವಾದ ಪಶ್ಚಾತ್ತಾಪದಿಂದ ನಿಂಮ ಪಾಪಗಳಿಗೆ ದುಖ್ಖ ಪಟ್ಟು, ವಿಮೋಚಕನಾದ ಕ್ರಿಸ್ತ ಯೇಸುವಿನಲ್ಲಿ ವಿಶ್ವಾಸವಿಟ್ಟು, ನಿಮ್ಮ ಹೃದಯವನ್ನೂ ನಡತೆಯನ್ನೂ ನಿಜವಾಗಿ ತಿದ್ದುಕೊಳ್ಳಲಿಕ್ಕೆ ಮನಸ್ಸಾಗಿರುವವರೆಲ್ಲರೇ! ಈಗ ಪರಿಶುದ್ಧ ಸುವಾರ್ತೆಯಿಂದ ಪಾಪಪರಿಹಾರದ ಆದರಣೆಯನ್ನು ಕೇಳಿರಿ. ಸರ್ವತ್ರಾಣಿಯಾದ ದೇವರು ನಿಮಗೆ ಕರುಣೆ ಮಾಡಿದ್ಧಾನೆ. ನಂಮ ಪಾಪಕ್ಕೋಸ್ಕರ ಸತ್ತು, ನಂಮ ನೀತಿಗೋಸ್ಕರ ಯೆದ್ದ, ತನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖದಿಂದ ನಿಮಗೆ ನಿಂಮ ಪಾಪಗಳಂನೆಲ್ಲಾ ಮಂನಿಸುತ್ತಾನೆ. ಮತ್ತು ಕ್ರೈಸ್ತಸಭೆಯ ನೇಮಿಸಲ್ಪಟ್ಟ ಸೇವಕನಾದ ನಾನು, ನಂಮ ಕರ್ತನಾದ ಯೇಸು ಕ್ರಿಸ್ತನ ಅಪ್ಪಣೆಯ ಪ್ರಕಾರ, ನಿಮಗೆ ಈ ನಿಂಮ ಯೆಲ್ಲಾ ಪಾಪಗಳ

ಪರಿಹಾರವಂನು, ತಂದೆ ಮಗ ಪರಿಶುದ್ಧಾತ್ಮನೆಂಬ ದೇವರ ಹೆಸರಿನಲ್ಲಿ, ಸಾರಿ ತಿಳಿಸುತ್ತೇನೆ. ಆದರೆ ನಿಂಮಲ್ಲಿ ಮಾನಸಾಂತರ ಪಡದೆ, ಅವಿಶ್ವಾಸಿಗಳಾಗಿರುವವರಿಗೆ ಪಾಪಗಳು ಹಿಡಿಯಲ್ಪಟ್ಟವೆ. ಅವರು ತಿರಿಗಿ ಕೊಳ್ಳದೆ, ಪಶ್ಚಾತ್ತಾಪ ಪಡದೆ, ಹೋದರೆ, ದೇವರ ಕೋಪವು ಅವರ ಮೇಲೆ ನೆಲೆಗೊಳ್ಳುವದು—ಯೆಂದು, ನಾನು ಅವರಿಗೂ, ನಂಮ ಕರ್ತ ರಕ್ಷಕನಾದ ಯೇಸು ಕ್ರಿಸ್ತನ ಹೆಸರಿನಲ್ಲಿ, ಆತನ ಆಜ್ಞೆಯ ಪ್ರಕಾರವಾಗಿ, ಸಾರಿ ತಿಳಿಸುತ್ತೇನೆ. ಆಮೆನ್.

---

(Hierauf folgt das **Glaubensbekenntniss**, etwa mit folgendem Vorwort:)

(Alle stehen auf.)

ಅಂತಃಕರುಣವುಳ್ಳ ದೇವರು, ನಿಂಮಲ್ಲಿ ಪಶ್ಚಾತ್ತಾಪವುಳ್ಳವರಿಗೆ, ಶುದ್ಧ ಕೃಪೆಯಿಂದ, ಪಾಪಗಳನ್ನು ಮಂನಿಸಿರಲಾಗಿ; ನೀವು ಕರ್ತನ ವಿಶ್ವಾಸವುಳ್ಳ ಪ್ರಜೆಯಾಗಿ, ತ್ರಿಯೇಕನಾದ ದೇವರನ್ನು ಹೊಸತಾಗಿ ಹಿಡಿದುಕೊಂಡು, ಆತನಲ್ಲಿಡುವ ನಿಂಮ ವಿಶ್ವಾಸವಂನು, ನುಡಿನಡಿಯಿಂದ, ಯಾವಾಗಲೂ, ಯೆಲ್ಲೆಲ್ಲಿಯೂ, ಅರಿಕೆ ಮಾಡಿರೆಂದು ಯೆಚ್ಚರಿಸುತ್ತೇನೆ. ಹೀಗಾಗಿ ನಂನ ಸಂಗಡ ನಿಂಮ ಹೃದಯಗಳಂನು ಯೆತ್ತಿಕೊಂಡು, ಹೇಳಿರಿ—ಯೇನಂದರೆ—

---

(Die Gemeinde steht auf und der Liturgus spricht den Glauben, welchen, wenn es *vernehmlich* geschehen kann, auch die Gemeinde nachspricht.)

**Glaubensbekenntniss.** (ವಿಶ್ವಾಸದ ವಿಧಿ)

ಪರಲೋಕ ಭೂಲೋಕಗಳ, ಸರ್ವತ್ರಾಣವುಳ್ಳ, ಸೃಷ್ಟಿ ಕರ್ತನಾಗಿರುವ, ತಂದೆಯಾದ ದೇವರಲ್ಲಿ ನಂಬುತ್ತೇನೆ.

ದೇವರ ಒಬ್ಬನಾಗಿ ಹುಟ್ಟಿದ ಮಗನಾಗಿರುವ, ನಂಮ ಕರ್ತನಾದ, ಯೇಸು ಕ್ರಿಸ್ತನಲ್ಲಿಯೂ ನಂಬುತ್ತೇನೆ.

ಆತನು ಪರಿಶುದ್ಧಾತ್ಮದಿಂದ ಗರ್ಭದಲ್ಲಿ ಬಂದು, ಮರಿಯಳೆಂಬ ಕನ್ಯಸ್ತ್ರೀಯಿಂದ ಹುಟ್ಟಿದನು.

ಪೊಂತಿಪಿಲಾತನ ಕಾಲದಲ್ಲಿ ಶ್ರಮೆಪಟ್ಟು, ಶಿಲುಬೆಗೆ ಹಾಕಲ್ಪಟ್ಟು ಸತ್ತು ಹೂಣಲ್ಪಟ್ಟನು.

ಪಾತಾಳಕ್ಕೆ ಇಳಿದು, ಮೂರನೆ ದಿವಸದಲ್ಲಿ ಸತ್ತವರೊಳಗಿಂದ ಯೆದ್ದನು.

ಪರಲೋಕಕ್ಕೆ ಯೇರಿ, ಅಲ್ಲಿ ಸರ್ವತ್ರಾಣಿಯಾದ, ತಂನ ತಂದೆಯಾಗಿರುವ ದೇವರ ಬಲಪಾರ್ಶ್ವದಲ್ಲಿ ಕೂತು ಕೊಳ್ಳುತ್ತಾನೆ.

ಅಲ್ಲಿಂದ ಇಂನು ಮುಂದೆ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯತೀರಿಸುವನು.

ಪರಿಶುದ್ಧಾತ್ಮನಲ್ಲಿಯೂ ನಂಬುತ್ತೇನೆ.

ಒಂದೇ ಪರಿಶುದ್ಧ ಕ್ರೈಸ್ತಸಭೆಯೂ, ಪರಿಶುದ್ಧರ ಅನ್ಯೋನ್ಯವೂ,
ಪಾಪಪರಿಹಾರವೂ,

ದೇಹದ ಪುನರುತ್ಥಾನವೂ,

ನಿತ್ಯಜೀವವೂ, ಉಂಟೆಂದು ನಂಬುತ್ತೇನೆ.

(Hierauf sagt der Liturgus während Alle stehen:)

ಪ್ರಾರ್ಥನೆ ಮಾಡೋಣ.

ಸರ್ವತ್ರಾಣಿಯಾದ ದೇವರೇ! ಅಂತಃಕರುಣಾದ ತಂದೆಯೇ! ನಿಂನ
ಅಯೋಗ್ಯ ಸೇವಕರಾದ ನಾವು, ನಮಗೂ ಸಕಲ ಮನುಷ್ಯರಿಗೂ ನೀ
ನು ಮಾಡುವ ನಿಂನ ಯೆಲ್ಲಾ ದಯದ ನಿಮಿತ್ತ, ನಿನಗೆ ವಿನಯವಾಗಿ
ಮನಃಪೂರ್ವಕವಾದ ಸ್ತೋತ್ರ ಮಾಡುತ್ತೇವೆ. ನೀನು ನಂಮನ್ನು ನಿ
ರ್ಮಾಣ ಮಾಡಿದಕ್ಕೂ, ಸಲಹುವದಕ್ಕೂ, ಪ್ರಪಂಚದ ಯೆಲ್ಲಾ ಆ
ಶೀರ್ವಾದಕ್ಕೂ, ವಿಶೇಷವಾಗಿ ನಂಮ ಕರ್ತನಾದ ಯೇಸು ಕ್ರಿಸ್ತನ ಮು
ಖದಿಂದಾದ ಲೋಕದ ವಿಮೋಚನೆಯಲ್ಲಿ ಕಾಣಬಂದ ನಿಂನ ಅಮೂ
ಲ್ಯವಾದ ಪ್ರೀತಿಗೂ, ನಿಂನ ಪರಿಶುದ್ಧ ವಾಕ್ಯ ಮುಂತಾದ ಕೃಪೆ ಸಾಹಿ
ತ್ಯಗಳಿಗೂ, ನಿತ್ಯಜೀವದ ಹಾರೈಕೆಗೂ, ನಾವು ನಿಂನನ್ನು ಸ್ತುತಿಸುತ್ತೇ
ವೆ. ನಿನ್ನ ಸಕಲ ಅಂತಃಕರುಣಗಳನ್ನು ಸವಿನೋಡುವ ಅನುಭವ
ದಿಂದ, ನಂಮ ಹೃದಯಗಳು ಯಥಾರ್ಥವಾದ ಸ್ತೋತ್ರ ಪೂರಿತವಾ
ಗಿ, ನಾವು ಬಾಯಿಂದ ಮಾತ್ರವಲ್ಲಾ, ನಂಮ ನಡತೆಯಿಂದ ಸಹಾ,—
ಅಂದರೆ ನಂಮನ್ನು ನಿನ್ನ ಸೇವೆಗೆ ಒಪ್ಪಿಸಿಕೊಂಡು, ಜೀವವಿರುವನಕ,
ಪರಿಶುದ್ಧತ್ವದಿಂದಲೂ, ನೀತಿಯಿಂದಲೂ, ನಿಂನ ಮುಂದೆ ನಡೆದು
ಕೊಳ್ಳುವದರಿಂದ, ನಿನ್ನನ್ನು ಸ್ತುತಿಸುವ ಹಾಗೆ; ನಮಗೆ ದಯ ಮಾ
ಡು —ಯೆಂದು, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ,

ಬೇಡಿ ಕೊಳ್ಳುತ್ತೇವೆ. ಆತನಿಗೂ, ನಿನಗೂ, ಪರಿಶುದ್ಧಾತ್ಮಕ್ಕೂ, ಮಾನವೂ, ಮಹಿಮೆಯೂ, ಯುಗ ಯುಗಾಂತರಗಳಿಗೂ ಉಂಟಾಗಿರಲಿ. ಆಮೆನ್.

(Eines, oder nach Bedürfniss zwei der unter Beilage A. enthaltenen Gebete wird hier eingeschaltet. Sodann folgt die allgemeine und besondere Fürbitte.)

---

## Allgemeine Fürbitte. (ಸರ್ವ ವಿಜ್ಞಾಪನೆ.)

ಸರ್ವತ್ರಾಣಿಯಾದ ಅತಃಕರುಣವುಳ್ಳ ದೇವರೇ! ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ನಿನ್ನ ಮಗನ ನಿಮಿತ್ತ. ನಿನ್ನ ಹೃದಯವನ್ನು ನಮ್ಮ ಕಡೆಗೆ ಬಾಗಿಸು! ದೇವರೇ! ನಿನ್ನ ಕೃಪೆಯ ಪ್ರಕಾರ ನಂಮನ್ನು ಕರುಣಿಸು, ನಿಂನ ಅಂತಃಕರುಣದ ಬಾಹುಳ್ಯದ ಪ್ರಕಾರ, ನಂಮ ದ್ರೋಹಗಳನ್ನು ಅಳಿಸಿ ಬಿಡು. ನಂಮ ಸಂಗಡ ನ್ಯಾಯ ವಿಚಾರಣೆ ಮಾಡದೆ, ನಂಮ ಮಧ್ಯಸ್ತನಾದ ಯೇಸು ಕ್ರಿಸ್ತನ ನಿಮಿತ್ತ, ನಂಮ ಅಪರಾಧಗಳನ್ನು ನಮಗೆ ಮನ್ನಿಸು. ನಿನ್ನ ಸಭೆಯು ನಿನ್ನ ಪರಾಮರಿಕೆಯಲ್ಲಿ ಇರಲಿ. ನಿನ್ನ ವಾಕ್ಯವಂನು, ಕೃಪೆಭರಿತವಾದ ಸ್ನಾನ ರಾತ್ರಿಭೋಜನ ಸಹಿತವಾಗಿ, ನಮಗೆ ಶುದ್ಧ ಅಚ್ಚವಾಗಿ ಉಳಿಸು. ನಿನ್ನ ಬೆಳೆಗೆ ನಂಬಿಕೆಯುಳ್ಳ ಕೆಲಸದವರನ್ನು ಕಳುಹಿಸು! ನಿನ್ನ ವಾಕ್ಯದ ಪ್ರಸಂಗಕ್ಕೆ ನಿನ್ನ ಆತ್ಮವನ್ನೂ ನಿನ್ನ ತ್ರಾಣವನ್ನೂ ದಯಪಾಲಿಸು. ಅದನ್ನು ಸಕಲ ದೇಶಗಳಲ್ಲಿ ಸಾರ ಮಾಡು! ಜನಾಂಗಗಳ ಮನಸ್ಸನ್ನು ತಿರಿಗಿಸಿ, ಚದರಿ ಹೋದ ನಿನ್ನ ಇಸ್ರಾಯೇಲಿನ ಕುರಿಗಳಂನು ಕೂಡಿಸು. ಯೆಲ್ಲಾ ಆತಂಕಗಳಿಗೆ ಅಡ್ಡಿ ಮಾಡು. ಯೆಲ್ಲಾ ತಪ್ಪಿ ಹೋದವರನ್ನೂ, ಮೋಸ

ಹೋದವರನ್ನು ರಕ್ಷಣ್ಯದ ಮಾರ್ಗಕ್ಕೆ ನಡಿಸು. ಲೋಕದ ಸಂಗಡಲೂ ನಂಮ ಸ್ವಂತ ಮಾಂಸದ ಸಂಗಡಲೂ, ನಮಗಿರುವ ಹೋರಾಟದಲ್ಲಿ ನಾವು ಗೆಲ್ಲುವ ಹಾಗೆ, ನಂಮಂನು ಬಲ ಗೊಳಿಸು.

ನಮ್ಮ ಅಧಿಕಾರಿಗಳನ್ನು ನಿನಗೆ ಒಪ್ಪಿಸುತ್ತೇವೆ. (Für die Obrigkeit.) ನಮ್ಮ ದೇಶದಲ್ಲಿ ಮಾನವು ವಾಸ ಮಾಡಿ; ದಯ, ನಂಬಿಕೆ, ನೀತಿ, ಸಮಾಧಾನ ನಂಮೊಳಗೆ ಆಳುವ ಹಾಗೆ, ಅವರಿಗೆ ಜ್ಞಾನದ ಆತ್ಮವನ್ನು ದಯಪಾಲಿಸಿ, ಅವರಿಗೆ ಹಿತವಾದ ಆಲೋಚನೆಗಳನ್ನು ಕೊಡು. ದಿನದಿನಕ್ಕೆ ಬೇಕಾದ ರೊಟ್ಟಿಯನ್ನು ನಂಮೆಲ್ಲರಿಗೆ ಕೊಡು. ನಮ್ಮ ಉದ್ಯೋಗ ಕೆಲಸಗಳನ್ನು ಆಶೀರ್ವದಿಸು. ಆಕಾಶದಿಂದ ಮಳೆಯಂನೂ, ಫಲ ಫಲಿಸುವ ಕಾಲಗಳನ್ನೂ ನಮಗೆ ಕೊಡು. (Für die Gewächse der Erde.) ಹೊಲಗಳ ಧಾನ್ಯಗಳಂನು ಕಾಪಾಡಿ, ಭೂಮಿಯು ತನ್ನ ಬೆಳೆ ಕೊಡ ಮಾಡು. ಗಂಡ ಹೆಂಡರಲ್ಲಿಯೂ, ಕುಟುಂಬಗಳಲ್ಲಿಯೂ ಸಮಾಧಾನವಂನೂ, ಅನ್ಯೋನ್ಯವಂನೂ, ಮನೆ ಶಾಲೆಗಳಲ್ಲಿ ಬಾಲಶಿಕ್ಷೆಗೆ ಫಲವನ್ನೂ ಕೊಡು. ಚಿಕ್ಕವರ ಹೃದಯಗಳನ್ನು ನಿಂನ ಪರಿಶುದ್ಧಾತ್ಮದಿಂದ ಯೆಲ್ಲಾ ಒಳ್ಳೆಯವುಗಳ ಕಡೆಗೆ ನಡಿಸು. ಊರನ್ನೂ ಸೀಮೆಯಂನೂ ನಿಂನ ದಿವ್ಯ ಆಶ್ರಯದಲ್ಲಿ ಸೇರಿಸು. ಯುದ್ಧ ಕೋಟಕಾಯಿಗಳಿಗೂ, ಬಿರುಹಾಳಿ ಕಲ್ಮಳೆಗಳಿಗೂ, ಹ್ಯಾಕು ರೋಗ ಬರಕ್ಕೂ, ಬೆಂಕಿ ಗಂಡ ನೀರಿನ ಗಂಡಕ್ಕೂ, ಕೆಟ್ಟ ಶೀಘ್ರ ಸಾವಿಗೂ, ನಂಮಂನು ತಪ್ಪಿಸು. ನಂಮ ಸುತ್ತಲೂ ಇಳುಗೊಳ್ಳುತ್ತಾ, ನಂಮ ಮಾರ್ಗಗಳಲ್ಲಿ ನಂಮಂನು ಕಾಯುವ ನಿನ್ನ ಪರಿಶುದ್ಧ ದೂತರಂನು ನಂಮ ಬಳಿಗೆ ಕಳುಹಿಸು. ಬಡವರಿಗೂ,

ದಿಕ್ಕಿಲ್ಲದವರಿಗೂ ಸಂರಕ್ಷಕನೂ, ವಿಧವೆಗಳಿಗೂ, ತಂದೆ ತಾಯಿ ಇಲ್ಲದ ಮಕ್ಕಳಿಗೂ ಆದರಿಕನೂ, ಬಲಹೀನರಿಗೂ, ರೋಗಿಷ್ಟರಿಗೂ ಸಹಾಯಕನೂ ಆಗಿರು. {Gegen Seuchen. / Für einen Kranken.} ಆತ್ಮಕ್ಕೆ ಹತ್ತುವ ಯೆಲ್ಲಾ ಸಂಕಟ ಗಂಡಾಂತರಕ್ಕೆ ನಂಮಂನು ತಪ್ಪಿಸು. ನಾವು ಘಟ್ಟಿ ವಿಶ್ವಾಸ ಯೆಚ್ಚರಿಗೆ ಪ್ರಾರ್ಥನೆಗಳಿಂದ ನಂಮ ರಕ್ಷಣ್ಯದ ವೈರಿಗಳಂನು ಯೆದುರಿಸುವದಕ್ಕೆ ಸಹಾಯ ಮಾಡು. ನಾವು ಪ್ರೀತಿ, ಸಮಾಧಾನ, ಸಾತ್ವಿಕತ್ವ, ಮನೋದೀನತ್ವ, ನಿರ್ಮಲತ್ವ, ಮಿತಾನುಭವಗಳಿಂದ ನಡೆದು, ಅಂತ್ಯದ ಪರಿಯಂತರ ವಾಳ್ಕೆಯದರಲ್ಲಿ ನೆಲೆಗೊಳ್ಳುವ ಹಾಗೆ, ದಯ ಮಾಡು. ಮತ್ತು ಕಡೇಲಿ ಈ ಲೋಕವಂನು ಬಿಟ್ಟು ಹೋಗುವಾಗ, ಮರಣದ ಸಂಕಟದಲ್ಲಿ, ನಿಂನ ಸರ್ವತ್ರಾಣವುಳ್ಳ ಕೃಪೆಯಿಂದ, ನಮಗೆ ಸಹಾಯ ಮಾಡು. ನಾವು ವಿಶ್ವಾಸದಿಂದ ನಿದ್ರೆ ಹೋಗಲೂ, ನಂಮ ಪ್ರಾಣವು ಸಮಾಧಾನದಿಂದ ಇಹ ಬಿಟ್ಟು ನಿನ್ನ ಬಳಿಗೆ ಶೇರ ಕೊಡು. ನಾವು ಹರುಷದಿಂದ ನಿನ್ನ ಪರಿಶುದ್ಧ ಮುಖವನ್ನು ದೃಷ್ಟಿಸಿ, ಯೆಲ್ಲಾ ದೂತರೂ ಆಯಲ್ಪಟ್ಟವರೂ ಸಹಿತವಾಗಿ, ನಿನ್ನನ್ನು ಯೆಂದೆಂದಿಗೂ ಸ್ತುತಿಸಿ ಕೊಂಡಾಡುವ ಹಾಗೆ, ನಮ್ಮನ್ನು ಮಹಿಮೆಯ ರಾಜ್ಯದಲ್ಲಿ ಶೇರಿಸು. ಆಮೆನ್.

Oder (ಅಥವಾ):

ಅಂತಃಕರಣವುಳ್ಳ ದೇವರೇ! ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ನೀನು ನಮಗೆ ಮಾಡಿದ ನಿನ್ನ ಯೆಲ್ಲಾ ಕರುಣಕ್ಕೂ ನಂಬಿಕೆಗೂ ನಾವು ಅಯೋಗ್ಯರಾಗಿದ್ದೇವೆ. ಕರ್ತನೇ! ನಮ್ಮನ್ನು ಕರುಣಿಸು.

ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನ ನಿಮಿತ್ತ, ನಮಗೆ ನಂಮ ಪಾಪಗಳನ್ನು ಮನ್ನಿಸು.

ಭಯ ಯೆಚ್ಚರಿಕೆ ಇಲ್ಲದ ಪಾಪಿಷ್ಠರು ಪಶ್ಚಾತ್ತಾಪ ಪಟ್ಟು, ಮನಃಪೂರ್ವಕವಾಗಿ ತಿರುಗಿ ಕೊಳ್ಳುವ ಹಾಗೆ, ಅವರೆಲ್ಲರನ್ನು ಯೆಬ್ಬಿಸು. ಪುನರ್ಜನ್ಮ ಹೊಂದಿದವರು ಒಳಮನುಷ್ಯನಲ್ಲಿ ಬಲಗೊಳ್ಳುವ ಹಾಗೆ, ಅವರಿಗೆ ದಯ ಮಾಡಿ, ಯೇಸು ಕ್ರಿಸ್ತನ ಸುವಾರ್ತೆಯು ವಿಶ್ವಾಸಿಸುವವರೆಲ್ಲರಿಗೆ ರಕ್ಷಣೆಗೋಸ್ಕರವಾದ ದೇವರ ಬಲವಾಗಿದೆಂದು—ಅನುಭವಿಸ ಮಾಡು. ಈ ನಿನ್ನ ಸುವಾರ್ತೆಯೇ ನಂಮ ಜ್ಞಾನವೂ, ಜೀವದಲ್ಲಿಯೂ ಮರಣದಲ್ಲಿಯೂ ನಮ್ಮ ಮುಖ್ಯವಾದ ಆದರಣೆಯೂ ಆಗಿರ ಮಾಡಿ, ಅದನ್ನೇ ನಮಗೂ ನಮ್ಮ ಮಕ್ಕಳಿಗೂ ಅಚ್ಚವಾಗಿ ಉಳಿಸು. ನಿನ್ನ ದಿವ್ಯ ಸತ್ಯವಂನು ತಿರಸ್ಕರಿಸುವ ಅವಿಶ್ವಾಸಕ್ಕೂ, ಒಬ್ಬನಾಗಿ ಆಧಾರವಾಗಿರುವ ನಿಂನಿಂದ ನಮ್ಮನ್ನು ಅಗಲಿಸುವ ಅಪನಂಬಿಕೆಗೂ ನಂಮನ್ನು ತಪ್ಪಿಸು. ನಿನ್ನ ಸಭೆಗೆ ಯಾವಾಗಲೂ ತಿಳಿವಿಕೆ ನಂಬಿಕೆಯುಳ್ಳ ಬೋಧಕರನ್ನು ಕೊಡು. ಅವರಿಗೆ ತಂಮ ಪರಿಶುದ್ಧ ಸೇವೆಗಾಗಿ ಜಾಗ್ರತೆ ಧೈರ್ಯ, ಸಂತೋಷ, ಬಲ ದಯಪಾಲಿಸು. ನಾವೆಲ್ಲರು ವಿಶ್ವಾಸದ ಐಕ್ಯಕ್ಕೂ, ದೇವರ ಮಗನ ತಿಳುವಿಕೆಯ ಐಕ್ಯಕ್ಕೂ, ಮುಟ್ಟುವ, ಕ್ರಿಸ್ತನ ಸಂಪೂರ್ಣತೆಯ ಪ್ರಾಯದ ಪ್ರಮಾಣಕ್ಕೆ ಸರಿಯಾದ, ಸಂಪೂರ್ಣ ಪುರುಷನು ಆಗುವ ತನಕ, ಕ್ರಿಸ್ತನ ಶರೀರ ಕಟ್ಟುವ ಸೇವೆಯ ಕೆಲಸಕ್ಕೆ ಪರಿಶುದ್ಧರನ್ನು ಸಿದ್ಧರಾಗ ಮಾಡು.

ಮಹಾ ದೇವರೇ! ಕರ್ತರ ಕರ್ತನೇ! ವಿಶೇಷವಾಗಿ ನಾವು ನಿನ್ನ ಸೇ

ವಕಳಾದ ರಾಣಿಗೋಸ್ಕರ ನಿಂನಂನು ಬೇಡುತ್ತೇವೆ. ಆಕೆಯೂ, ಆಕೆಯ ಪ್ರಧಾನರೂ, ಸೇವಕರೂ, ಮುಖ್ಯವಾಗಿ ಈ ದೇಶವಂನಾಳುವಧಾರೆ ಅಧಿಪತಿಗಳೂ ಮುಖದಾಕ್ಷಿಣ್ಯವಿಲ್ಲದೆ ನ್ಯಾಯ ನೀತಿ ನಡಿಸುವದಕ್ಕೂ, ನಂಮ ಪ್ರಿಯ ಜನ್ಮದೇಶವಂನು ಹಿತವಾಗಿ ಆಳಿ, ಕೇಡಿಗೆ ತಪ್ಪಿಸಿ, ಕಾಪಾಡುವದಕ್ಕೂ ಅವರಿಗೆ ಕ್ರೈಸ್ತಜ್ಞಾನವಂನೂ, ನಂಬಿಕೆಯುಳ್ಳ ಜಾಗ್ರತೆಯಂನೂ ದಯಪಾಲಿಸು.

ಅಂತಃಕರಣವುಳ್ಳ ತಂದೆಯೇ! ನಿಂನ ಧರ್ಮವುಳ್ಳ ದಯದ ಪ್ರಕಾರ, ದಿನಕ್ಕೆ ಬೇಕಾದ ನಂಮ ರೊಟ್ಟಿಯಂನು ನಮಗೆ ಕೊಡು. ನಂಮ ಉದ್ಯೋಗ ಕೆಲಸ ಆಶೀರ್ವದಿಸು. ನಂಮ ಹೊಲಗಳ ಧಾನ್ಯಗಳು ಚಂದಾಗಿ ಬೆಳೆಯ ಮಾಡು. (Für die Gewächse der Erde.) ತಕ್ಕ ಕಾಲದಲ್ಲಿ ಮಳೆ ಬಿಸಿಲು ಕೊಡು. ನಂಮ ದೇಶವು ನಿಂನ ಘನದಿಂದ ತುಂಬ ಮಾಡು. ನಾವು ನಿಂನ ಉಪಕಾರಗಳಂನು ದುರನುಭೋಗಕ್ಕೆ ತಾರದೆ, ಬಡವರ ಕಡೆಗೂ, ಆಪತ್ತಿನವರ ಕಡೆಗೂ ನಂಮ ಮನಸ್ಸಂನು ಕಠಿಣ ಮಾಡದೆ, ನಿಂನ ದಯಕ್ಕೆ ಸ್ತೋತ್ರದಿಂದ ಸಂತೋಷ ಪಟ್ಟು, ನಂಮ ತಂದೆಯಾದ ನೀನು ಅಂತಃಕರಣ ಉಳ್ಳಾತನಾಗಿರುವಂತೆ ಅಂತಃಕರಣ ಉಳ್ಳವರಾಗಿರುವ ಹಾಗೆ, ಕೃಪೆಯಾಗಿ ಮಾಡು.

ಅಮೂಲ್ಯವಾದ ಸಮಾಧಾನವನ್ನು ನಮಗೆ ಉಳಿಸು. ಮನೆತನದ ಸ್ಥಿತಿಯನ್ನು ಆಶೀರ್ವದಿಸಿ, ಯೆಲ್ಲಾ ಗಂಡ ಹೆಂಡತಿಯರಿಗೆ ಅನ್ಯೋನ್ಯವಂನೂ, ಸಮಾಧಾನವಂನೂ, ಯೆಲ್ಲಾ ಮನೆ ಯಜಮಾನ ಯಜಮಾನಿಯರಿಗೆ ಬದಕು ಸಾಗಿಸಿ, ತಂಮ ಮಕ್ಕಳನ್ನು ಸಾಕುವದಕ್ಕೆ ಜ್ಞಾನವಂನೂ,

ಆಶೀರ್ವಾದವಂನೂ ದಯಪಾಲಿಸು. ಚಿಕ್ಕವರಿಗೆ ಸಂತೋಷವಾದ ವಿಧೇಯತ್ವವಂನು ಕೊಟ್ಟು, ತಂಮ ತಂದೆ ತಾಯಿಗಳಿಗೆ ಭಯ ಪಟ್ಟು, ಪ್ರೀತಿ ಮಾಡ ಕಲಿಸು. ಯೆಲ್ಲಾ ಆಳು ಮಕ್ಕಳನ್ನು ಸಾದ ಶುದ್ಧ ಮನಸ್ಸಿನಿಂದ ತುಂಬಿಸು. ಯಜಮಾನರು—ತಮಗೆ ಸುದಾ ಪರಲೋಕಗಳಲ್ಲಿ ಯಜಮಾನನು ಇದ್ಧಾನೆಂದು—ನೆನಿಸಿ ಕೊಳ್ಳ ಕಲಿಸು. ಯೆಲ್ಲಾ ಮನುಷ್ಯರು ನಿನಗೆ ಪ್ರಾಪ್ತಿಸಲ್ಪಟ್ಟಿರಲಿ. ತಪ್ಪಿ ಹೋದವರನ್ನು ನೆಟ್ಟನೆಯಾದ ಹಾದಿಗೆ ತಿರುಗಿಸು. ವೈರಿಗಳನ್ನು ಅನ್ಯೋನ್ಯವಾಗ ಮಾಡು. ದುಃಖಿತರನ್ನು ಸಂತೈಸು. ಬಡವರಿಗೆ ಆಹಾರ ಕೊಡು. ವಿಧವೆಯರಂನೂ, ದಿಕ್ಕಿಲ್ಲದವರನ್ನೂ ಪರಾಮರಿಸುವಾತನೂ, ಉಪದ್ರ ಪಡುವವರ ಆಶ್ರಯವೂ, ರೋಗಿಷ್ಟರ ವೈದ್ಯಗಾರನೂ, ಸಾಯುವವರ ಭರವಸವೂ ಆಗಿರು. (Gegen Seuchen. / Für einen Kranken.) ಮತ್ತು ಕಡೇಲಿ ನಂಮನ್ನು ನಿತ್ಯ ಸಂತೋಷ ಆನಂದದ ರಾಜ್ಯದಲ್ಲಿ ಸೇರಿಸು. ಅಲ್ಲಿ ನಿನ್ನ ಮಕ್ಕಳ ಕಣ್ಣೀರಂನೆಲ್ಲಾ ಒರಸಿ, ಅವರ ಹೃದಯಗಳ ಅಭಿಲಾಷೆ ಯೆಲ್ಲಾ ತೀರಿಸುವಿ. ನಾವು ನಿನ್ನ ಕಡೆಯಿಂದ ಬೇಡಿದ್ದಂನೆಲ್ಲಾ ಯೇಸು ಕ್ರಿಸ್ತನ ನಿಮಿತ್ತ ಕೃಪೆಯಾಗಿ ದಯಪಾಲಿಸು. ಆಮೆನ್

In diese Fürbitte kann auch nach Bedürfniss irgend eines der in Beilage B gesammelten Gebete eingefügt werden, wie die in den Text eingeschalteten Angaben zeigen.

Hierauf wird das Vater Unser gebetet und von der Gemeinde vernehmlich nachgesprochen.

Sodann wird ein Liedervers gesungen, worauf die Lesung des Evangeliums und der Epistel oder der beiden Lectionen des Tages folgt.

Demnächst folgt das Hauptlied und die Predigt, eingeleitet und beschlossen mit freiem Gebet.

Nach Absingung eines weitern Liederverses sind etwaige Ankündigungen, namentlich in Betreff von Hochzeiten, Abendmahl etc. zu machen und das Ganze wird mit dem Segen beschlossen.

---

## Segenssprüche.

(ಕಡೆಯಲ್ಲಿ ಹೇಳತಕ್ಕ ಆಶೀರ್ವಾದಗಳು.)

೧.

ಕರ್ತನು ನಿಂಮನ್ನು ಆಶೀರ್ವದಿಸಿ, ಕಾಯಲಿ. ಕರ್ತನು ತನ್ನ ಮುಖವನ್ನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮನ್ನು ಕರುಣಿಸಲಿ. ಕರ್ತನು ತನ್ನ ಮುಖವನ್ನು ನಿಮ್ಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ.

೨.

ಯೆಲ್ಲಾ ಬುದ್ಧಿಯಂನು ಮೀರುವ ದೇವರ ಸಮಾಧಾನವು—ನಿಂಮ ಹೃದಯಗಳಂನೂ ಮನಸ್ಸುಗಳಂನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ.

೩.

ಸಮಾಧಾನದ ದೇವರು ತಾನೇ ನಿಮ್ಮನ್ನು ಸಂಪೂರ್ಣವಾಗಿ ಪರಿಶುದ್ಧ ಮಾಡಲಿ. ಮತ್ತು ನಿಮ್ಮ ಪೂರ್ಣ ಆತ್ಮ ಜೀವ ಶರೀರಗಳು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯಲ್ಲಿ ತಪ್ಪಿಲ್ಲದ ಹಾಗೆ, ಕಾಪಾಡಲ್ಪಡಲಿ.

೪.

ಕ್ರಿಸ್ತ ಯೇಸುವಿನಲ್ಲಿರುವ ತನ್ನ ನಿತ್ಯವಾದ ಮಹಿಮೆಗೆ ನಂಮನ್ನು ಕರೆದ ಸರ್ವ ಕೃಪೆಯುಳ್ಳ ದೇವರು ತಾನೇ, ಸ್ವಲ್ಪಕಾಲ ಶ್ರಮೆ ಪಟ್ಟ

ನಿಂಮಂನು ನೆಟ್ಟಗೆ ಮಾಡಿ, ಸ್ಥಿರ ಪಡಿಸಿ, ಬಲ ಪಡಿಸಿ ನೆಲೆಗೊಳ್ಳಿಸಲಿ. ಆತನಿಗೆ ಯುಗ ಯುಗಾಂತರಗಳ ವರೆಗೂ ಮಹಿಮೆಯೂ ಪರಾಕ್ರಮವೂ. ಆಮೆನ್.

೨೪.

ನಂಮಲ್ಲಿ ಯತ್ನಿಸುವ ಬಲದ ಪ್ರಕಾರ, ನಾವು ಬೇಡುವದಕ್ಕಿಂತಲೂ, ನೆನಸುವದಕ್ಕಿಂತಲೂ, ಯೆಲ್ಲಾದರ ಮೇಲೆ ಬಹು ಹೆಚ್ಚಾಗಿ ಮಾಡ ಶಕ್ತನಾಗಿರುವಾತನಿಗೆ, ಸಭೆಯೊಳಗೆ, ಕ್ರಿಸ್ತ ಯೇಸುವಿನಲ್ಲಿ, ಯುಗ ಯುಗಾಂತರಗಳ ಯೆಲ್ಲಾ ತಲಾಂತರಗಳ ವರಿಗೂ ಮಹಿಮೆ ಆಗಲಿ. ಆಮೆನ್.

---

## Nachmittags-Gottesdienst.

### (ಸಾಯಂಕಾಲದ ದೇವಾರಾಧನೆ.)

(Der Prediger spricht den Kanzelgruss, lässt sodann einen Vers singen, worauf eines der unter Beilage A. gegebenen Gebete, oder eines der folgenden gersprochen wird.)

ಪರಲೋಕದ ತಂದೆಯೇ! ನೀನು ನಂಮಂನು ನಿನ್ನ ಪರಿಶುದ್ಧ ಕರಿಯುವಿಕೆಯಿಂದ ಕರೆದು, ನಿಂನ ರಾಜ್ಯದ ಮಕ್ಕಳಾಗಿ, ಇಂನಾಂಮೆ ನಿಂನ ಪರಿಶುದ್ಧ ಸಮುಖದ ಮುಂದೆ ಬರಗೊಡಿಸುವದರಿಂದ, ನಿನಗೆ ಸ್ತುತಿ ಸ್ತೋತ್ರ ಮಾಡುತ್ತೇವೆ. ಕರ್ತನೇ! ನೀನು ಪರಿಶುದ್ಧನೂ, ಕರುಣೆಯಲ್ಲಿ ಐಶ್ವರ್ಯ ಉಳ್ಳಾತನೂ ಆಗಿದ್ಧಿ. ಆದರೆ ನಾವು ಈ ಕರಿಯುವಿಕೆಯ ದೊಡ್ಡಸ್ತನವಂನೂ, ಆನಂದವಂನೂ, ತಕ್ಕ ಹಾಗೆ ಸ್ತೋತ್ರದಿಂದ ನೆನಸದಕ್ಕೆ ನಾಚಿಕೊಳ್ಳುತ್ತೇವೆ. ಯೆಷ್ಟು ಸರ್ತಿ ನಿನ್ನ ಪರಿಶುದ್ಧಾತ್ಮನ ಕೃಪೆ ಖರಿತ

ವಾದ ಯತ್ನಕ್ಕೆ ಯೆದುರಾಡಿದೆವು! ಯೆಷ್ಟು ಸರ್ತಿ ಲೋಕದ ಪ್ರೀತಿ, ಚಿಂತೆ, ಅವಿಶ್ವಾಸಗಳೆಂಬ ಮುಳ್ಳುಗಳಲ್ಲಿ ನಿನ್ನ ವಾಕ್ಯದ ಬೀಜವು ಅಡಗಿಸಲ್ಪಟ್ಟಿತು! ಕರ್ತನೇ, ನಮಗೆ ನ್ಯಾಯವಾಗಿರುವ ಪ್ರಕಾರ, ಉಪಕಾರ ನೆನಸದ ಈ ನಂಮ ಬುದ್ಧಿಯನ್ನು ದಂಡಿಸ ಬೇಡ. ನಿನ್ನ ಸತ್ಯದ ಬೆಳಕಂನೂ, ನಿನ್ನ ಕೃಪೆಯ ರಾಜ್ಯವನ್ನೂ ನಂಮ ಕಡೆಯಿಂದ ತೆಗಿಯ ಬೇಡ. ನಂಮ ಅಪರಾಧಗಳನ್ನು ನಿನ್ನ ಪ್ರಿಯ ಮಗನ ಅಮೂಲ್ಯವಾದ ರಕ್ತದಿಂದ ಅಳಿಸಿ ಬಿಡು. ನಿನ್ನ ಪರಿಶುದ್ಧ ವಾಕ್ಯವೂ, ಸ್ನಾನ ರಾತ್ರಿ ಭೋಜನವೂ, ಇನ್ನು ಮುಂದೆ ಸಹಾ ನಂಮಲ್ಲಿ, ಬೆರಿಕೆ ಇಲ್ಲದೆ, ಅಚ್ಚವಾಗಿ ಪ್ರಯೋಗಿಸಲ್ಪಡ ಮಾಡು. ನಿನ್ನನ್ನು ಸ್ತುತಿಸುವದರಲ್ಲಿಯೂ, ನಿನ್ನ ಅಂತಃಕರಣದ ಐಶ್ವರ್ಯಕ್ಕೆ ಮೊರೆ ಇಡುವದರಲ್ಲಿಯೂ, ನಿನ್ನ ವಾಕ್ಯದ ತ್ರಾಣದಿಂದ ಬೆಳಕಂನೂ, ಪರಿಶುದ್ಧತ್ವವಂನೂ, ನಿತ್ಯ ಜೀವದ ಭರವಸವನ್ನು ಹೊಂದುವದರಲ್ಲಿಯೂ, ಆನಂದ ಪಡುವಂಥ, ನಿರ್ಮಲವಾದ, ವಿಶ್ವಾಸ ಉಳ್ಳ, ಆಸಕ್ತವಾದ ಹೃದಯವನ್ನೂ ನಂಮಲ್ಲಿ ಹುಟ್ಟಿಸು. ಇದಕ್ಕಾಗಿ ನಿನ್ನ ಸಭೆಗೆ, ನಿನ್ನ ಹೃದಯಕ್ಕೆ ಅನುಸಾರವಾದ ಬೋಧಕರಂನೂ, ಕುರುಬರಂನೂ ಕೊಡು. ಯೆಲ್ಲಾ ಕುಟುಂಬಗಳಲ್ಲಿ ನಿನ್ನ ಆತ್ಮದಿಂದ ಆಳು. ನಂಮ ಶಾಲೆಗಳಲ್ಲಿ ಕಲಿಸುವವರನ್ನೂ ಕಲಿಯುವವರನ್ನೂ ಆಶೀರ್ವದಿಸು. ಕ್ರಿಸ್ತನವರಾದ ಅಧಿಕಾರಿಗಳು, ತಂಮ ಯೆಲ್ಲಾ ನೇಮಕ, ಆಜ್ಞೆ, ಹಂಚಿಕೆಗಳಲ್ಲಿ, ಮುಖ್ಯವಾಗಿ ನಿನ್ನ ಘನವಂನೂ, ನಿನ್ನ ಸಭೆಯ ಸಂರಕ್ಷಣೆ ಹೆಚ್ಚಿಸುವಿಕೆಯಂನೂ, ಕ್ರೈಸ್ತ ವಿಶ್ವಾಸ, ನಡತೆ, ಶಿಕ್ಷೆ ಬೆಳಿಸುವದನ್ನೂ ಚಿಂತಿಸುವ ಹಾಗೆ,

ಅವರಿಗೆ ಜ್ಞಾನ, ತ್ರಾಣ, ದಯಪಾಲಿಸು. {Gegen Seuchen. / Für einen Kranken.} ನಂಮ ಸಮಸ್ತ ಜನ್ಮದೇಶದ ಸಂಗಡ ಇರು. ನಿಂನ ಪ್ರಜೆಯಂನು ಉಳಿಸು. ನಿಂನ ಬಾಧ್ಯತೆಯ ಉಳುವು ನಾಚಿಕೆ ಪಡದೆ ಇರಲಿ. ನಿಂನ ಸಭೆಗೆ ವಿರೋಧವಾಗಿರುವ ಯೆಲ್ಲಾ ಯುಕ್ತಿ, ಬಲಾತ್ಕಾರವಂನು ಹೀನ ಮಾಡು. ನಿಂನ ಪರಿಶುದ್ಧ ಹೆಸರಿನ ಅರಿಕೆಯ ನಿಮಿತ್ತ, ಹಿಂಸೆ ಪಡುವವರೆಲ್ಲರಂನು ಬಲಗೊಳಿಸಿ, ಬಿಡುಗಡೆ ಮಾಡು. ಭೂಮಿಯ ಮೇಲೆ ವಾಸ ಮಾಡುವವರೆಲ್ಲರ ಹೃದಯಗಳಲ್ಲಿ ನಿಂನ ಸುವಾರ್ತೆಯ ಬೆಳಕು ಪ್ರಕಾಶಿಸಲಿ. ದುಃಖಾಕ್ರಾಂತರು, ದಿಕ್ಕಿಲ್ಲದವರು, ರೋಗಿಷ್ಟರು, ಬಡವರು — ಇವರೆಲ್ಲರ ಕಷ್ಟವಂನು ಮನಸ್ಸಿಗೆ ತಾ. {Gegen Seuchen. / Für einen Kranken.} ಭೂಮಿಯ ಫಲಗಳಂನು ಕಾಪಾಡು. ಈ ಜೀವದ ಆಧಾರ, ಆದರಣೆ, ಸಮಾಧಾನಗಳಿಗೆ ಬೇಕಾದದ್ದಂನು ನಿಂನ ದಿವ್ಯ ದಾನಗಳ ಐಶ್ವರ್ಯದೊಳಗಿಂದ ನಮಗೆ ಕೊಡು. ನೀನು ನಂಮಂನು ಈ ಅಳುವಿಕೆಯ ತಗ್ಗಂನು ದಾಟಿಸಿ, ನಿಂನ ನಿರಂತರವಾದ ವಿಶ್ರಾಂತಿಯಲ್ಲಿ ಸೇರಿಸುವನಕ, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ಇದಂನು ಮಾಡು. ಆಮೆನ್.

Oder (ಅಥವಾ):

ಸರ್ವತ್ರಾಣವುಳ್ಳ ದೇವರೇ! ಪರಲೋಕ ಭೂಲೋಕಗಳಲ್ಲಿ ಇರುವ ಯೆಲ್ಲಾ ಕುಟುಂಬಕ್ಕೆ ಹೆಸರಿಡುವಂಥ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ನಾವು ನಿಂನ ಪರಿಶುದ್ಧ ಸಂಮುಖಕ್ಕೆ ಬಂದು, ನಿನಗೆ ನಂಮ ಹೃದಯಗಳ ಸ್ತುತಿ ಸ್ತೋತ್ರದ ಬಲಿಯಂನು ಅರ್ಪಿಸುತ್ತೇವೆ.

ನೀನು ನಂಮಂನು ನಿಂನ ಪ್ರತಿರೂಪವಾಗಿ ನಿರ್ಮಾಣ ಮಾಡಿ,

ನಂಮ ಪುಣ್ಯ ಯೋಗ್ಯತ್ವವಿಲ್ಲದಲ್ಲೇ, ಆತ್ಮದೇಹಗಳಿಗೆ ಮಾಡಿದ ಉಪಕಾರಗಳಿಂದ, ಚಿಕ್ಕಂದಿನಿಂದ ಈವರಿಗೂ ನಂಮಂನು ಐಶ್ವರ್ಯವಾಗಿ ಆಶೀರ್ವದಿಸಿದ್ಧಿ. ಇದಕ್ಕೆ ಓ ತಂದೆಯೇ! ನಂಮ ಪ್ರಾಣವು ನಿನಗೆ ಸ್ತೋತ್ರ ಮಾಡುತ್ತದೆ. ಆದರೆ ವಿಶೇಷವಾಗಿ ನಿನ್ನನ್ನು ಕೊಂಡಾಡುವ ಕಾರಣವೇನಂದರೆ—ಬಡ ಪಾಪಿಷ್ಠರಾದ ನಂಮ ಕಡೆಗೆ ಇರುವ ನಿನ್ನ ದೊಡ್ಡ ಕರುಣೆಯಿಂದ, ನೀನು ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನನ್ನು ನಮಗೋಸ್ಕರ ಪ್ರಾಪ್ತಿಸಿ ಕೊಟ್ಟೆ. ಮತ್ತು ಇಂದಿನ ತನಕ, ಆದರಣೆ ಸಮಾಧಾನಗಳಿಂದಲೂ, ನಿತ್ಯಜೀವದ ಹಾರೈಕೆಯಿಂದಲೂ ನಂಮಂನು ತುಂಬಿಸುವದಕ್ಕೆ, ನಿನ್ನ ವಿಶ್ವಾಸಿಗಳ ಹೃದಯಗಳಲ್ಲಿ ನಿನ್ನ ಪರಿಶುದ್ಧಾತ್ಮನಂನು ಕಳುಹಿಸುತ್ತಿ. ನಂಮ ದೇವರಾದ ಕರ್ತನೇ! ಈ ನಿಂನ ಕೃಪೆಗಳಿಗೆಲ್ಲಾ ನಾವು ನಿನಗೆ ಅರ್ಪಿಸುವ ನಂಮ ಹೃದಯಗಳ ಸ್ತೋತ್ರದ ಬಲಿಗೆ ನೀನು ಮೆಚ್ಚ ಬೇಕು.

ನಿಂನಂನು ಅರಿಯದವರೆಲ್ಲರಂನೂ, ಯೆಚ್ಚರಿಕೆ ಇಲ್ಲದ ಪಾಪಿಷ್ಠರೆಲ್ಲರಂನೂ, ನಿನ್ನ ವಾಕ್ಯದ ದಿವ್ಯ ಬಲವಾದ ಶಬ್ದದಿಂದ ಯೆಬ್ಬಿಸು. ನಿಂನ ಸಮಸ್ತ ಸಭೆಯ ಮೇಲೆ, ಬದುಕಿಸುವ ನಿನ್ನ ಆತ್ಮವಂನು ಹೊಯ್ಯು. ಇಂನು ಮರಣದ ನೆರಳಿನಲ್ಲಿ ಕೂತು ಕೊಳ್ಳುವ ಜನಾಂಗಗಳನ್ನು ಕರುಣಿಸಿ, ಅವರಿಗೆ ನಿಂನ ಬೆಳಕಂನೂ, ಸತ್ಯವಂನೂ ಕಳುಹಿಸು. ಸಕಲ ದೇಶಗಳಲ್ಲಿ ಸುವಾರ್ತೆಯ ಸೇವಕರಂನು ಕಾಪಾಡಿ, ನಡಿಸಿ, ಅವರ ಕೆಲಸಕ್ಕೆ ಬೇಕಾದ ಜ್ಞಾನ, ತ್ರಾಣ, ತಾಳ್ಮೆ ಅವರಿಗೆ ದಯಪಾಲಿಸು.

ಸಮಸ್ತ ಕ್ರೈಸ್ತ ಸಭೆಯ ಕಾರ್ಯವಂನೆಲ್ಲಾ ನಿಂನ ಹೃದಯದ ಮುಂ

ದೆ ಹೊಕುತ್ತೇವೆ. ಯೇಸು ಕ್ರಿಸ್ತನ ತಂದೆಯೇ! ಕ್ರಿಸ್ತನವರಾದ ಯೆಲ್ಲಾ ಅಧಿಕಾರಗಳಂನು ನಿನಗೆ ಒಪ್ಪಿಸುತ್ತೇವೆ. ಅವರು ನಿನಗೆ ಸರಿ ಬೀಳುವ ಪ್ರಕಾರ ದೇಶವಂನಾಳುವ ಹಾಗೆ, ಅವರನ್ನು ನಿಂನ ಆತ್ಮದಿಂದ ನಡಿಸು. ಕ್ರಿಸ್ತನ ಸುವಾರ್ತೆಯ ಪ್ರಸಂಗದ ಸೇವೆಗೆ, ತಂಮುವುಗಳಂನೆಲ್ಲಾ, ನಿಂನ ಮಾನವಂನೂ, ಕ್ರಿಸ್ತನ ಮಂದೆಯ ರಕ್ಷಣೆಯಂನೂ ಹುಡುಕುವ ನಂಬಿಕೆಯುಳ್ಳ ಸೇವಕರಂನು ನೇಮಿಸು. ಮದುವೆ ಸ್ಥಿತಿಯಂನು ಜೀವಕ್ಕೂ ಭಕ್ತಿಗೂ ಸಂಮಂಧವಾದವುಗಳಿಂದ ಆಶೀರ್ವದಿಸು. ತಂದೆ ತಾಯಿಗಳಿಗೆ, ತಂಮ ಮಕ್ಕಳಂನು ನಿಂನ ಭಯದಲ್ಲಿ ಸಾಕುವದಕ್ಕೆ, ಸಹಾಯ ಮಾಡು. ಮಕ್ಕಳಿಗೆ, ಉಪಕಾರ ನೆನಸುವಂಥ, ಮಾತು ಕೇಳುವಂಥ ಹೃದಯಗಳಂನು ದಯಪಾಲಿಸು. ಕ್ಷೇಮಕರವಾದ ಫಲ ಫಲಿಸುವಂಥ ಬಿಸಲು, ಗಾಳಿ, ಮಳೆಗಳಿಂದ ನಂಮಂನು ಆಶೀರ್ವದಿಸು. ಭೂಮಿಯ ಫಲಗಳಂನು ಬೆಳೆಯ ಮಾಡಿ, ಸೋಕು ರೋಗಗಳು, ಯುದ್ಧ ಮುಂತಾದ ಕೇಡುಗಳಂನು ಕೃಪೆಯಾಗಿ ನಮಗೆ ತಪ್ಪಿಸು. ಚಿಂತಾಕ್ರಾಂತರಿಗೂ, ರೋಗಿಷ್ಟರಿಗೂ, ಕಷ್ಟ ಪಡುವವರಿಗೂ, ವಿಧವೆಯರಿಗೂ, ತಂದೆ ತಾಯಿ ಇಲ್ಲದ ಮಕ್ಕಳಿಗೂ, ನಿಂನಂನು ಹೊರತು ಬೇರೆ ಸಹಾಯ ರಕ್ಷಣೆ ಹೊಂದದ ದಿಕ್ಕಿಲ್ಲದವರಿಗೂ, ನಿಂನ ಸಹಾಯ ಆದರಣೆಗಳಿಂದ ಕಾಣಿಸಿಕೊ. ಅವರ ಉಪದ್ರ ಚಿಂತೆಗಳಂನೆಲ್ಲಾ ಇಷ್ಟವಾದ, ಹಿತವಾದ ಅಂತ್ಯಕ್ಕೆ ಹೊಂದಿಸು. ಕ್ರೈಸ್ತ ಜನರಲ್ಲಿಯೆಲ್ಲಾ ಹಿಂಸೆ ಬಲಾತ್ಕಾರಗಳಂನು ನಿಲ್ಲಿಸು. ನಿಂನ ಸಭೆಗೆ ಆಶೀರ್ವಾದ ಆಶ್ರಯ ಕೊಡು. ನಮಗೂ ನಂಮ ಮಕ್ಕಳಿಗೂ ಸುವಾರ್ತೆ ಸತ್ಯ

ವಂನೂ, ನಿಂನ ದಿವ್ಯ ಸಮಾಧಾನದ ಅನುಭವವಂನೂ ಉಳಿಸು. ನಿಜವಾದ ಸಮಾಧಾನದ ರಾಜನಾದ, ನಿಂನ ಪ್ರಿಯ ಮಗನಾಗಿರುವ, ನಂಮ ಕರ್ತನಾದ, ಯೇಸು ಕ್ರಿಸ್ತನ ಮುಖದಿಂದ ಇದಂನು ದಯ ಮಾಡು. ಆಮೆನ್.

(Hierauf folgt die Vorlesung der Lection und sodann das Hauptlied. Weiter die Predigt, eingeleitet und beschlossen durch kurzes Herzensgebet. Dann Vater Unser, Schlussvers, Segen.) Siehe oben die Segenssprüche beim Morgengottesdienst.

---

## Kindergottesdienst.

### (ಚಿಕ್ಕವರ ಉಪದೇಶ.)

(Die Kinderlehre, welche an jedem Sonntag Nachmittag gehalten wird, beginnt mit dem Segen und Lied, nach welchem eines der folgenden Gebete gesprochen wird.)

ಕರ್ತನಾದ ಯೇಸು ಕ್ರಿಸ್ತನೇ! ಮಹಾ ಪ್ರವಾದಿಯೂ, ಯುಕ್ತಿಹೀನರ ಬೋಧಕನೂ ಆಗಿರುವಾತನೇ! ನೀನು ನಿನ್ನ ಬಾಲ್ಯದಲ್ಲಿ, ಹನ್ನೆರಡು ವರುಷದ ಹುಡುಗನಾಗಿ, ದೇವಾಲಯದೊಳಗೆ ಬೋಧಕರ ಮಧ್ಯದಲ್ಲಿ ಕೂತು ಕೊಂಡು, ಅವರಂನು ಕೇಳುತ್ತಾ, ಅವರಿಗೆ ಪ್ರಶ್ನೆ ಮಾಡುತ್ತಾ ಇದ್ದಿ. ನಾವು ನಿಂನ ಮನೆಗೆ ಬಂದು, ರಕ್ಷಣೆಯ ಮಾರ್ಗವಾದ ಕ್ರೈಸ್ತ ಧರ್ಮದ ಮುಖ್ಯ ಭಾಗಗಳಾದ ವಿಶ್ವಾಸದ ಆಧಾರವನ್ನೂ, ಭಕ್ತಿಯ ಪ್ರಕಾರವಾದ ಬೋಧನೆಯಂನೂ ಕೇಳುವದಕ್ಕೂ, ಅವುಗಳ ವಿಷಯವಾದ ಪ್ರಶ್ನೋತ್ತರಗಳಿಂದ ನಿಂನ ತಿಳುವಿಕೆಯಲ್ಲಿ ರಕ್ಷಣೆಗಾಗಿ ಕಟ್ಟಲ್ಪಡುವದಕ್ಕೂ, ಇಲ್ಲಿ ಕೂಡಿದ್ದೇವೆ. ಇದಕ್ಕಾಗಿ ನಮಗೆ

ಪರಿಶುದ್ಧಾತ್ಮನ ಕೃಪೆಯಂನು ದಯಪಾಲಿಸು. ನಿಂನ ನ್ಯಾಯಪ್ರಮಾಣ
ದೊಳಗಣ ಅದ್ಭುತಗಳಂನು ನಾವು ಕಾಣುವಂತೆ, ನಂಮ ಕಂಣುಗಳಂ
ನು ತೆರೆ. ನಂಮೆಲ್ಲರ ಹೃದಯವಂನು ಅರಳಿಸು. ನಾವು ನಿಂನ ಪರಿ
ಶುದ್ಧ ವಾಕ್ಯವಂನು ಹೆಚ್ಚು ಹೆಚ್ಚಾಗಿ ತಿಳಿಯುವ ಹಾಗೆ, ನಂಮ ಗ್ರ
ಹಿಕೆಯಂನು ಬಿಚ್ಚು. ನೀನ್ನೇ, ಓ ಕರ್ತನಾದ ಯೇಸು ಕ್ರಿಸ್ತನೇ! ಮೂ
ಲೆ ಕಲ್ಲೂ, ಅಪೊಸ್ತಲರೂ ಪ್ರವಾದಿಗಳೂ ಅಸ್ತಿವಾರವೂ ಆಗಿರುವ
ದೇವರ ಮಂದಿರದಲ್ಲಿ, ನಾವು ಜೀವವುಳ್ಳ ಕಲ್ಲುಗಳಾಗಿ ಕಟ್ಟಲ್ಪಟ್ಟು, ಸೈ
ತಾನನಿಂದಲೂ, ಲೋಕದಿಂದಲೂ ಬರುವ ಯೆಲ್ಲಾ ಶೋಧನೆಗಳಿಗೆ ಭ
ದ್ರರಾಗಿದ್ದು, ಕಡೇಲಿ ವಿಶ್ವಾಸದ ಫಲವಾಗಿರುವ ಪ್ರಾಣದ ರಕ್ಷಣೆಯಂ
ನು ಹೊಂದುವ ಹಾಗೆ, ದಯ ಮಾಡು. ಆಮೆನ್.

Oder (ಅಥವ):

ಅಂತಃಕರಣವುಳ್ಳ ಒಬ್ಬನೇ ಜ್ಞಾನಿಯಾದ, ದೇವರೇ! ತಂದೆಯೇ!
ನಾವು ಪಾಪಿಗಳಾಗಿ ಅಜ್ಞಾನಿಗಳಾಗಿ ಹುಟ್ಟಿದ ಮೇಲೆ, ನಂಮಂನು ನಾ
ವೇ ಅರಿಯದವರೂ, ಒಬ್ಬನೇ ನಿಜವಾದ ದೇವರಾಗಿರುವ ನಿಂನಂನೂ,
ನೀನು ಲೋಕಕ್ಕೆ ಕಳುಹಿಸಿದ ಯೇಸು ಕ್ರಿಸ್ತನಂನೂ ತಿಳಿಯದವರೂ
ಆಗಿದ್ಧೇವೆ. ಆದರೆ ನಿತ್ಯಜೀವ ಬೇಕಾದರೆ ಇಂಥಾ ತಿಳುವಿಕೆ ಇರ ಬೇ
ಕಲ್ಲಾ? ಹೀಗಾದ ಮೇಲೆ, ಮನುಷ್ಯನು ಚಿಕ್ಕಂದಿನಿಂದ ಈ ಹುಟ್ಟು
ಕೊರತೆಯನ್ನು ತಿದ್ದು ಕೊಂಡು, ಯೌವನಸ್ಥನು ತಂನ ನಡೆತೆಯಂನು ದೇ
ವರ ಕಡೆಗೂ, ನಿತ್ಯಜೀವದ ಕಡೆಗೂ ತಿರುಗಿಸಿ ಕೊಂಡು, ತಂನ ಹಾದಿ
ಯಂನು ಶುದ್ಧ ಮಾಡಿ ಕೊಳ್ಳುವದು ಹ್ಯಾಗೆ? ನಂಮ ಪಾದಗಳಿಗೆ ದೀ

ಪವೂ, ನಂಮ ದಾರಿಗೆ ಬೆಳಕೂ ಆಗಿರುವ ನಿಂನ ವಾಕ್ಯವಂನು ಕೈಕೊಳ್ಳುವದರಿಂದಲ್ಲೇ, ಸರಿ. ಅದುಕಾರಣ ನಾವು ಬೇಡುವದೇನಂದರೆ— ಈ ಭೂಮಿಯ ಮೇಲೆ ನಾವು ಪರದೇಶಿಗಳೂ, ಹಾದು ಹೋಗುವ ಯಾತ್ರಸ್ಥರೂ ಆಗಿರುವದರಿಂದ, ನಿಂನ ವಾಕ್ಯವಂನು ನಮಗೆ ಮುಚ್ಚಿ ಮರ್ಮವಾಗಿರಗೊಡ ಬೇಡ. ಜ್ಞಾನದ ಆತ್ಮವಂನು ನಮಗೆ ಕೊಟ್ಟು, ನಿಂನ ಸತ್ಯವಂನು ಶುದ್ಧವಾಗಿ ತಿಳುಕೊಳ್ಳುವದಕ್ಕೆ ನಂಮ ಮನಸ್ಸುಗಳನ್ನುಬೆಳಗಾಗ ಮಾಡು. ನಂಮ ಹೃದಯವೂ, ಸಮಸ್ತ ನಡತೆಯೂ— ತಿಳುಕೊಂಡ ಸತ್ಯಕ್ಕೆ ಅನುಸಾರವಾಗುವ ಹಾಗೆ, ಅವುಗಳಂನು ಹೊಸದಾಗ ಮಾಡು. ನಾವು ನಿಂನ ಮಹೋನ್ನತವಾದ ಮಹಿಮೆಯನ್ನು ಸಕಲ ವಿಷಯದಲ್ಲಿ ಮೆಚ್ಚಿಸುವ ಹಾಗೆ, ನಿತ್ಯ ತಂದೆಯಾದ ನಿಂನ ಬಳಿಗೆ ಒಬ್ಬನಾಗಿ ಸೇರಿಸುವ ಮಾರ್ಗ, ಸತ್ಯ, ಜೀವ ಆಗಿರುವ, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ಇದೆಲ್ಲಾ ನಮಗೆ ದಯಪಾಲಿಸು. ಆತನ ಮುಖಾಂತರ ನಾವು ನಿನಗೆ ಮೊರೆ ಇಟ್ಟು, ಇಂನು ಬೇಡುವದೇನಂದರೆ—

ಪರಲೋಕಗಳಲ್ಲಿರುವ ನಂಮ ತಂದೆಯೇ! ನಿಂನ ನಾಮವು ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯಂನು ಈಹೊತ್ತು ನಮಗೆ ಕೊಡು. ನಾವು ನಂಮ ಸಾಲಗಾರರಿಗೆ ಬಿಡುವ ಪ್ರಕಾರ ನಂಮ ಸಾಲಗಳಂನು ನಮಗೆ ಬಿಡು. ನಂಮಂನು ಶೋಧನೆಯಲ್ಲಿ ಸೇರಿಸದೆ, ಕೇಡಿನಾಳಗಿಂದ ನಂಮಂನು

ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳ ವರೆಗೂ ನಿಂನದಾಗಿವೆ. ಆಮೆನ್.

(Hierauf folgt die Katechisation, welche mit einem freien Herzensgebet, Liedervers und Segen beschlossen wird. Statt des Herzensgebets kann auch Nachfofgendes gelesen werden [namentlich wenn viele Kinder da sind].)

ನಂಮ ಕರ್ತನಾದ ಯೆಹೋವಾ! ನಿಂನ ಹೆಸರು ಯೆಲ್ಲಾ ಭೂಮಿಯಲ್ಲಿ ಯೆಷ್ಟೋ ಶ್ರೇಷ್ಟವಾಗಿದೆ? ನಿಂನ ಮಹಿಮೆಯಂನು ಆಕಾಶಗಳ ಮೇಲೆ ಇಟ್ಟಿದ್ದೀ. ನಿಂನ ವೈರಿಗಳ ನಿಮಿತ್ತ, ಶಿಶುಗಳ ಮೊಲೆಕೂಸುಗಳ ಬಾಯಿಂದ ಬಲವಂನು ಸ್ಥಾಪಿಸಿದ್ಧೀ. ಯೆಂಥಾ ಪ್ರೀತಿಯಿಂದ ನೀನು ನಂಮಂನು ಕರೆದು, ನಂನ ಮಗನೇ! ನಂನ ನ್ಯಾಯಪ್ರಮಾಣವಂನು ಮರೆತು ಬಿಡಬೇಡ. ನಿಂನ ಹೃದಯವು ನಂನ ಆಜ್ಞೆಗಳಂನು ಕೈಕೊಳ್ಳಲಿ. ಯಾಕಂದರೆ ಅವುಗಳು ನಿನಗೆ ದೀರ್ಘಾಯುಷ್ಯವಂನೂ, ಉತ್ತಮ ವರುಷಗಳಂನೂ, ಸಮಾಧಾನವಂನೂ, ತರುವವು. ಕೃಪೆಯೂ, ನಂಬಿಕೆಯೂ ನಿಂನಂನು ಬಿಡದೆ ಇರುವವು. ಅವುಗಳಂನು ನಿಂನ ಕೊರಳಿಗೆ ಹಾಕಿ, ನಿಂನ ಹೃದಯವೆಂಬ ಹಲಿಗೆಯ ಮೇಲೆ ಬರೆದುಕೋ. ಹಾಗಾದರೆ ದೇವರೂ ಮನುಷ್ಯರೂ ಮೆಚ್ಚುವ ದಯವಂನೂ, ವಿವೇಕವಂನೂ ಹೊಂದುವಿ—ಯೆಂದು ನಮಗೆ ಹೇಳುತ್ತಿ. ಯೆಂಥಾ ದಯಾಳುತ್ವದಿಂದ ನಿಂನ ಹಾಬ್ಬನಾಗಿ ಹುಟ್ಟಿದ ಮಗನಾದ ಯೇಸು ಕ್ರಿಸ್ತನು, ನಂಮಂನು ತಂನ ಬಳಿಗೆ ತರಬೇಕೆಂದೂ, ದೇವರ ರಾಜ್ಯವು ನಂಮದೆಂದೂ, ನಂಮ ವಿಷಯ ಉತ್ತಮವಾದದ್ದಂನು ಮಾತಾಡಿದ್ಧಾನೆ. ನೀನು ನಂಮಂನು ಬಾಲಪ್ರಾಯದಲ್ಲಿ ನಿಂನ

ಬಳಿಗೆ ಯೆಳೆದು, ಪರಿಶುದ್ಧ ಸ್ನಾನದಿಂದ ನಿಂನ ಸ್ವೀಕಾರವಂನು ನಮಗೆ ನಿಶ್ಚಯ ಮಾಡಿ, ಪ್ರಕಟವಾದ ನಿಂನ ದಿವ್ಯ ವಾಕ್ಯದ ಅಚ್ಚ ಹಾಲಂನು ನಂಮಂನು ಕುಡಿಸಿ, ಪರಿಶುದ್ಧ ನಡತೆಗೂ ಯೋಗ್ಯವಾದ ಜೀವಕ್ಕೂ ನಂಮಂನು ನಡಿಯ ಮಾಡುವ ಕಾರಣ ನಿಂನಂನು ನಂಮ ಹೃದಯದ ನೆಲದಿಂದ ಸ್ತುತಿಸುತ್ತೇವೆ. ನಾವು ಬೆಳೆದು, ಆತ್ಮದಲ್ಲಿ ಬಲಗೊಂಡು, ಪ್ರಾಯದಲ್ಲಿಯೂ, ದೇವರ, ಮನುಷ್ಯರ ಕೃಪೆಯಲ್ಲಿಯೂ ಹೆಚ್ಚಿ ಕೊಂಡು, ನಿನಗೆ ಭಯ ಪಟ್ಟು, ಮಾನ ಕಾಡುವ ಹಾಗೆಯೂ; ಸೂರ್ಯನೂ, ಚಂದ್ರನೂ ಇರುವ ಪರ್ಯಂತರ ನಿಂನಂನು ತಿಳಕೊಂಡು ಸನ್ಮಾನಿಸಿ, ನಿಂನಿಂದ ರಕ್ಷಣೆ ಹೊಂದುವ ಪ್ರಜೆಯು ಉಳಿಯುವ ಹಾಗೆಯೂ; ನಂಮ ಸಹಾಯಕನೂ; ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿಮಿತ್ತ, ದಯ ಮಾಡ ಬೇಕೆಂದು ನಿಂನಂನು ಬಹಳವಾಗಿ ಬೇಡಿಕೊಳ್ಳುತ್ತೇವೆ. ಆಮೆನ್.

Oder (ಅಥವ):

ಕೃಪೆಯುಳ್ಳ ದೇವರಾದ ತಂದೆಯೇ! ನೀನು ತಿರಿಗಿ ನಂಮ ರಕ್ಷಣೆಗಾಗಿ ನಮಗೆ ಉಪದೇಶ ಮಾಡಿಸಿದ್ದರಿಂದ, ನಿಂನಂನು ಸ್ತುತಿಸುತ್ತೇವೆ. ಈಗ ಕೇಳಿದ ವಾಕ್ಯದ ಮೇಲೆ ನಿಂನ ಆಶೀರ್ವಾದವಿಟ್ಟು, ಚಿಕ್ಕವರೂ ಹಿರಿಯರೂ ಅದಂನು ವಾಳ್ಕೆ, ಸದ್ಗುಣವುಳ್ಳ ಹೃದಯದಲ್ಲಿ ಇಟ್ಟು ಕೊಳ್ಳುವ ಹಾಗೆ, ದಯ ಮಾಡು. ನಿಂನ ವಾಕ್ಯವೂ, ಆತ್ಮವೂ ನಂಮನ್ನೂ, ನಂಮ ಮಕ್ಕಳಂನೂ ಯೆಂದಿಗೂ ಬಿಟ್ಟು ಹೋಗದೆಂಬ ವಾಗ್ದತ್ತವಂನು ನಂಮ ವಿಷಯದಲ್ಲಿ ಪೂರೈಸು. ಚಿಕ್ಕಂದಿನಿಂದ ನಂಮ

ಮಕ್ಕಳಿಗೆ, ತಾವು ನಿಂನ ವಾಕ್ಯವಂನು ಕೈಕೊಳ್ಳುವದರಿಂದಲೇ ಮಾತ್ರ ತಂಮ ಹಾದಿಯಂನು ಶುದ್ಧ ಮಾಡಿ ಕೊಳ್ಳುವರೆಂದು—ತಿಳಿಸು. ಅವರೆಲ್ಲರು ಬಾಲ್ಯದಿಂದ ತಂಮ ಸೃಷ್ಟಿ ಕರ್ತನಾದ ನಿಂನಂನು ನೆನಪು ಮಾಡಿ ಕೊಂಡು, ಅತಿಪರಿಶುದ್ಧ ಬಾಲಕನಾಗಿದ್ದ ಯೇಸುವಿನ ಮಾದರಿಯ ಪ್ರಕಾರ, ಪ್ರಾಯಕ್ಕೆ ಅನುಸಾರವಾಗಿ ಜ್ಞಾನದಲ್ಲಿಯೂ, ದೇವರ, ಮನುಷ್ಯರ ಕೃಪೆಯಲ್ಲಿಯೂ ಹೆಚ್ಚಿ ಕೊಂಡು, ಇಹದಲ್ಲಿ ತತ್ಕಾಲಕ್ಕೂ ಪರದಲ್ಲಿ ನಿರಂತರಕ್ಕೂ ಪರಿಣಾಮದಲ್ಲಿ ಇರುವ ಹಾಗೆ, ದಯ ಮಾಡು. ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನ ನಿಮಿತ್ತ ನಂಮಂನು ಆಲೈಸು. ಆಮೆನ್.

---

# Beilage A.

## Sonntagsgebete.

(ಆದಿತ್ಯವಾರದ ಪ್ರಾರ್ಥನೆಗಳು.)

೧.

ನಂಮ ದೇವರಾದ ಕರ್ತನೇ! ನೀನೇ ಬೆಳಕು. ನಿಂನಲ್ಲಿ ಕತ್ತಲೆ ಇಲ್ಲ. ನಿಂನ ಒಬ್ಬನಾಗಿ ಹುಟ್ಟಿದ ಮಗನಂನು ಹಿಂಬಾಲಿಸುವವರು ಕತ್ತಲೆಯಲ್ಲಿ ನಡಿಯದೆ, ಜೀವದ ಬೆಳಕಂನು ಕಾಣುವ ಹಾಗೆ, ನೀನು ಆತನಂನು ಈ ಲೋಕಕ್ಕೆ ಕಳುಹಿಸಿದ್ದಿ. ಆದದರಿಂದ ಇಂದು ಸಹಾ ನಿಂನ ಬೆಳಕೂ ಸತ್ಯವೂ ನಂಮಂನು ನಡಿಸುವ ಹಾಗೆ, ಅವುಗಳಂನು ದಯಪಾಲಿಸು. ಈಹೊತ್ತು ನಂಮಲ್ಲಿ ಸಾರಲ್ಪಡುವ ವಾಕ್ಯವು ನಂ

ಮ ಪಾದಕ್ಕೆ ದೀಪವೂ, ನಂಮ ದಾರಿಗೆ ಬೆಳಕೂ ಆಗಿರ ಮಾಡು.
ನಿಂನ ಪರಿಶುದ್ಧಾತ್ಮನಿಂದ ನಮಗೆ ನಂಮ ಹೃದಯದ ಸ್ಥಿತಿಯಂನು
ತೋರಿಸು. ನಂಮ ಹುಂಮಂನೂ, ನಂಮ ಸುಳ್ಳು ಭರವಸವಂನೂ ಯೆ
ಲ್ಲಾ ತೆಗದು ಹಾಕು. ನೀನೇ ನಂಮಂನು ಹುಟ್ಟಿಸುವ ಹಾಗೆ, ನಂಮ್ಮ
ನ್ನು ತಗ್ಗಿಸು. ನಿಂನ ಉತ್ತಮ, ಸಂಪೂರ್ಣವಾದ, ವರಗಳಿಂದ ನಂಮ
ನ್ನು ತುಂಬಿಸಿ, ನೀನೇ ನಂಮಲ್ಲಿ ವಾಸ ಮಾಡಲಿಕ್ಕೆ ಬರುವ ಹಾಗೆ,
ಮಾಂಸ ಆತ್ಮಗಳ ಯೆಲ್ಲಾ ಕಲ್ಮಷದಿಂದ ನಂಮಂನು ಶುದ್ಧ ಮಾಡು.
ನಂಮಲ್ಲಿ ನಿಂನ ದಿವ್ಯ ಹೋಲಿಕೆಯಂನು ಮಹಿಮೆ ಪಡಿಸು. ಇದ
ಕ್ಕಾಗಿ ನಿಂನ ಅತಿಶಯವಾದ ತಿಳುವಿಕೆಯು, ಈಗಲೇ ಇಹದಲ್ಲಿ ನಮ
ಗೆ ನಿತ್ಯಜೀವದ ಆರಂಭವಾಗಲಿ. ನಿನಗೆ ಪರಿಶುದ್ಧ ಮಾಡಲ್ಪಟ್ಟ ಈ
ದಿವಸಕ್ಕೆ ಐಶ್ವರ್ಯವಾದ ಆಶೀರ್ವಾದವಂನಿಕ್ಕು. ಈಹೊತ್ತು ನಿಂನ ವಾ
ಕ್ಯವಂನು ಸಾರುವ, ಕೇಳುವ, ಓದುವವರೆಲ್ಲರಲ್ಲಿ ನಿಂನ ಆತ್ಮದಿಂದ
ಬಲವಾಗಿ ಯತ್ನಿಸು· ನಿಂನ ಅಮೂಲ್ಯವಾದ ಸುವಾರ್ತೆಯಂನು ತಿರ
ಸ್ಕರಿಸುವವರಿಗೆ ಸುಧಾ ನಿಂನ ಸಾಕ್ಷಿ ಕಾಡು. ಈಪ್ರಕಾರ ನಿಂನ ಹೆಸರು
ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ಅನೇಕ ಪ್ರಾಣಗಳ ನಿತ್ಯ
ರಕ್ಷಣೆಯು ಉದ್ಧಾರವಾಗಲಿ. ಓ ಪರಲೋಕದ ತಂದೆಯೇ! ನಿಂನ ಪ್ರಿ
ಯ ಮಗನಾಗಿರುವ ನಂಮ ಕರ್ತನಾದ, ಯೇಸು ಕ್ರಿಸ್ತನ ನಿಮಿತ್ತ, ನಂ
ಮ ವಿಜ್ಞಾಪನೆಗಳಂನು ತೀರಿಸು. ಆಮೆನ್.

೨.

ಕರ್ತನಾದ ದೇವರೇ! ಪರಲೋಕದ ತಂದೆಯೇ ಪುತ್ರಭಾವವಾದ ವಿಜ್ಞಾಪನೆಯಿಂದ ನಾವು ನಿಂನಂನು ಬೇಡಿ ಕೊಳ್ಳುವದೇನಂದರೆ—ನಿಂನ ವಾಕ್ಯವಂನು ಪೂರ್ಣ ಹೃದಯದಿಂದ ಕೇಳಿ, ಅಂಗೀಕರಿಸುವದರಿಂದ, ನಾವು ನಿಂನ ವಿಶ್ರಾಂತಿ ದಿವಸವಂನು ತಕ್ಕ ಹಾಗೆ ಆಚರಿಸಿ, ನಿಂನ ವಾಕ್ಯದಿಂದ ನಾವೇ ಪರಿಶುದ್ಧ ಮಾಡಲ್ಪಡುವ ಹಾಗೆ, ನಂಮಂನು ನಿನ್ನ ಆತ್ಮದಿಂದ ಬೆಳಕಾಗ ಮಾಡಿ, ಆಳು. ನಿಂನ ವಾಕ್ಯದ ಸೇವಕರು ಇಂದು ನಮಗೆ ಯೇಸು ಕ್ರಿಸ್ತನ ಸುವಾರ್ತೆಯಂನು, ಜೀವಕ್ಕೆ ಹೊತ್ತುವ ಸಂಮತಿಯಿಂದ, ಶುದ್ಧ ಅಚ್ಚವಾಗಿ, ಸಾರುವ ಹಾಗೆ, ಅವರೆಲ್ಲರಿಗೆ ನಿಂನ ಪರಿಶುದ್ಧಾತ್ಮದ ಬೆಳಕಂನೂ, ಬಲವಂನೂ ಕೊಡು. ಯೆಲ್ಲರಿಗೂ, ವಿಶೇಷವಾಗಿ ಕಷ್ಟ ಪಟ್ಟು, ಭಾರ ಹೊರುವವರಿಗೂ, ರೋಗಿಷ್ಟರಿಗೂ ಸಾಯುವವರಿಗೂ, ಈ ದಿವಸ ಆಶೀರ್ವಾದವಂನು ದಯಪಾಲಿಸು. ನಾವು ನಿಂನ ಮಗನಾದ ಯೇಸು ಕ್ರಿಸ್ತನ ಮೇಲೆಯೇ ನಂಮ ಭರವಸ, ಹಾರೈಕೆಯಂನೆಲ್ಲಾ ಇಟ್ಟು, ನಂಮ ನಡತೆಯಂನು ನಿಂನ ವಾಕ್ಯಕ್ಕೆ ಅನುಸಾರವಾಗ ಮಾಡಿ, ಯೆಲ್ಲಾ ಆತಂಕಗಳಿಗೆ ದೂರವಾಗಿ, ನಮ್ಮ ಸಂಚಾರದ ಅಂತ್ಯದಲ್ಲಿ, ನಿಂನ ಪರಲೋಕದ ರಾಜ್ಯದಲ್ಲಿ ಶೇರುವನಕ, ಸ್ಥಿರವಾದ ನಂಬಿಕೆಯಿಂದ ನಂಮ ರಕ್ಷಕನಂನು ಹಿಂಬಾಲಿಸುವ ಹಾಗೆ, ನಮಗೆ ನಿಂನ ಕೃಪೆ ಕೊಡು. ಆಮೆನ್.

೩.

ಕರ್ತನಾದ ಯೇಸುವೇ! ಯೆಲ್ಲಾ ವಿಶ್ವಾಸವುಳ್ಳ ಆತ್ಮಗಳಿಗೆ ಅತಿಪರಿಶುದ್ಧವಾದ, ಪರಮವಿಶ್ರಾಂತಿಯು ನೀನೇ. ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ! ನಂನ ಬಳಿಗೆ ಬಂನಿರಿ. ನಾನು ನಿಮಗೆ ವಿಶ್ರಾಂತಿ ಕೊಡುವೆನೆಂದು, ನೀನು ಹೇಳಿದ ಕಾರಣ, ಲೋಕದಲ್ಲಿ ನಂಮ ಹೃದಯಗಳಿಗೆ ತೃಪ್ತಿ ಹೊಂದದ ನಾವು, ನಿಂನ ನಡತೆ, ಶ್ರಮ, ಮರಣದಿಂದ ಲೋಕವಂನು ಜೈಸಿದವನಾದ ನಿಂನ ಬಳಿಗೆ ಬರುತ್ತೇವೆ. ಕರ್ತನಾದ ಯೇಸುವೇ! ನಂಮ ಆತ್ಮಗಳಂನು ನಿಂನ ಪ್ರೀತಿಯಲ್ಲಿಯೂ, ನಿಂನ ಆದರಣೆಯಲ್ಲಿಯೂ, ನಿಂನ ಸಮಾಧಾನದಲ್ಲಿಯೂ ವಿಶ್ರಾಂತಿಯಾಗ ಮಾಡು — ಯೆಂದು ನಿಂನಂನು ಬಹಳವಾಗಿ ಬೇಡುತ್ತೇವೆ. ನಾವು ನಿಂನಂನು ಸತ್ಯವಾಗಿ ತಿಳಕೊಂಡು, ನಿಂನೊಬ್ಬನ ಕಡೆಗೆ ಅಪೇಕ್ಷೆ ಮಾಡಿ, ನಿಂನಲ್ಲಿಯೇ ನಂಮ ಸುಖ ಆನಂದ ಹುಡುಕುವ ಹಾಗೆ, ನೀನು ನಂಮಂನು ನಿತ್ಯಜೀವದ ವಿಶ್ರಾಂತಿಯಲ್ಲಿ ಸೇರಿಸುವ ತನಕ, ದಯ ಮಾಡು. ಅಲ್ಲಿ ನಿಂನ ಸಂಮುಖದಲ್ಲಿ ಸಂತೋಷಗಳ ಸಂಪೂರ್ಣತ್ವವೂ, ನಿಂನ ಬಲಗಡೆಯಲ್ಲಿ ಸದಾಕಾಲಕ್ಕೆ ಆನಂದಗಳೂ ಇರುತ್ತವೆ. ಆಮೆನ್.

೪.

ನಂಮ ತಂದೆಯಾದ ದೇವರೇ! ನಂಮ ರಕ್ಷಣೆಯೂ ಆದರಣೆಯೂ ಯೆಂದೆಂದಿಗೂ ನೀನೇ. ನಿಂನ ಕೃಪೆಯಿಂದ ನಾವು, ನಿಂನ ಪರಿಶುದ್ಧ ಸಂಮುಖದಲ್ಲಿ ಆರಾಧನೆ ಮಾಡುವದಕ್ಕೆ, ಕೂಡಿ ಬಂದಿದ್ದೇವೆ. ಮಂಣೂ, ಬೂದಿಯೂ ಆಗಿರುವ ನಾವು ನಿಂನ ಸಂಗಡ ಮಾತಾಡ

ಧೈರ್ಯ ಮಾಡುತ್ತೇವೆ. ನಂನ ಮುಖವಂನು ಹುಡುಕಿರಿ—ಯೆಂದು, ನೀನು ಹೇಳಿದ ಕಾರಣ, ನಾವು ನಿಂನ ಮುಖವಂನು ಹುಡಿಕಿ, ನಿಂನ ಸತ್ಯ ವಾಕ್ಯವಂನು ನಮಗೆ ಆಧಾರ ಮಾಡಿ ಕೊಳ್ಳುತ್ತೇವೆ. ನಿಂನ ಮನೆಯ ಸ್ಥಾನವಂನೂ, ನಿಂನ ಘನದ ನಿವಾಸವಂನೂ ಪ್ರೀತಿ ಮಾಡುತ್ತೇವೆ. ಅದರಲ್ಲಿ ಸ್ತುತಿಯ ಧ್ವನಿ ಕೇಳುವದು, ನಿಂನ ಅದ್ಭುತಗಳೆಲ್ಲಾ ಸಾರಲ್ಪಡುವವು. ನಂಮ ಕರ್ತನಾದ, ಯೇಸು ಕ್ರಿಸ್ತನ ತಂದೆಯಾಗಿರುವ, ದೇವರಾದ, ನಿನಗೆ ಸ್ತೋತ್ರ ಉಂಟಾಗಲಿ. ನೀನು ಆತ್ಮಖಾವವಾದ ಸಕಲ ಆಶೀರ್ವಾದದಿಂದ, ಪರಲೋಕದವುಗಳಲ್ಲಿ, ಕ್ರಿಸ್ತನ ಮುಖಾಂತರ, ಅಂದಿನ ಸುತ್ತ ನಂಮಂನು ಆಶೀರ್ವದಿಸಿದ್ಧಿ. ಆತನಲ್ಲಿಯೂ, ಆತನ ಮುಖದಿಂದಲೂ ನಂಮಂನು ಇಂದೂ, ಯೆಂದೆಂದಿಗೂ ಆಶೀರ್ವದಿಸು. ಹೀಗಾಗಿ ನಾವು ಈಗಲು ಕರ್ತನ ಆಶೀರ್ವದಿಸಲ್ಪಟ್ಟವರು ಆಗಿದ್ದು, ಯಾವಾಗಲೂ ಇರುವೆವು. ಯೆಲ್ಲಾ ಸತ್ಯದಲ್ಲಿ ನಂಮಂನು ಶೇರಿಸುವದಕ್ಕೆ ನಿಂನ ಪರಿಶುದ್ಧಾತ್ಮನಂನೂ, ವಿಶ್ವಾಸದಲ್ಲಿ ನಂಮಂನು ನೆಲೆಗೊಳಿಸುವದಕ್ಕೆ ಕೃಪೆಯ ಆತ್ಮವಂನೂ, ನಿಂನ ಸಂಗತಿಯಲ್ಲಿ ನಂಮಂನು ಸ್ಥಿರ ಪಡಿಸುವದಕ್ಕೆ ಪ್ರಾರ್ಥನೆಯ ಆತ್ಮವಂನೂ, ವಾಳ್ಕೈ ಹೋರಾಟಕ್ಕೆ ನಂಮಂನು ಬಲ ಗೊಳಿಸುವದಕ್ಕೆ ಶಕ್ತಿಯ ಆತ್ಮವಂನೂ, ನಂಮ ಹೃದಯಗಳಂನೂ, ಮನಸ್ಸುಗಳಂನೂ, ಕ್ರಿಸ್ತ ಯೇಸುವಿನಲ್ಲಿ, ನಿತ್ಯಜೀವಕ್ಕಾಗಿ, ಕಾಪಾಡುವದಕ್ಕೆ ಸಮಾಧಾನ ಹಾರೈಕೆಗಳ ಆತ್ಮವಂನೂ ನಮಗೆ ಕಳುಹಿಸು. ಆಮೆನ್.

೨೯.

ಅತ್ಯಧಿಕವಾದ ಸ್ತೋತ್ರಕ್ಕೆ ತಕ್ಕ ಕರ್ತನೇ! ನೀನು ನಿಂನ ಸಮಸ್ತ ವಾಕ್ಯವಂನು ನಂಮ ಬೋಧನೆಗೋಸ್ಕರ ಬರೆಸಿದಿ. ನಾವು ಅದಂನು ತಕ್ಕ ಹಾಗೆ ಕೇಳಿ, ಓದಿ, ಧ್ಯಾನಿಸಿ, ಕಲಿತು, ನಂಮ ಹೃದಯದಲ್ಲಿ ಆಲೋಚಿಸುವದರಿಂದ, ಈ ಪರಿಶುದ್ಧ ವಾಕ್ಯದ ತಾಳ್ಮೆಯಿಂದಲೂ ಆದರಣೆಯಿಂದಲೂ ನೀನು, ನಂಮ ರಕ್ಷಕನಾದ ಯೇಸು ಕ್ರಿಸ್ತನ ಮುಖದಿಂದ, ನಮಗೆ ದಯಪಾಲಿಸಿದ ನಿತ್ಯಜೀವದ, ಭಾಗ್ಯವಾದ, ಹಾರೈಕೆಯಂನು ಹಿಡಿದು, ಯೆಂದಿಗೂ ಬಿಡದ ಹಾಗೆ, ದಯ ಮಾಡು. ಆಮೆನ್.

೬.

ಓ ದೇವರೇ! ನಿಂನ ಅತ್ಯಧಿಕವಾಗಿ ಸ್ತುತಿಸ ತಕ್ಕ ಮಗನು ಸೈತಾನನ ಕೃತ್ಯಗಳಂನು ತೆಗದು ಹಾಕಿ, ನಂಮಂನು ನಿಂನ ಮಕ್ಕಳೂ, ನಿತ್ಯಜೀವದ ಬಾಧ್ಯಸ್ಥರೂ ಆಗ ಮಾಡುವದಕ್ಕೆ ಪ್ರತ್ಯಕ್ಷವಾದನು. ಇಂಥಾ ಹಾರೈಕೆ ಹೊಂದಿದ ನಾವು, ಆತನು ಪವಿತ್ರವಾಗಿರುವ ಪ್ರಕಾರವೇ, ನಂಮಂನು ನಾವೇ ಪವಿತ್ರ ಮಾಡಿ ಕೊಳ್ಳುವದರಿಂದ, ಆತನು ಮಹಾ ಘನದ ಶಕ್ತಿಯಿಂದ ತಿರುಗಿ ಪ್ರತ್ಯಕ್ಷವಾಗುವಾಗ, ಆತನ ನಿತ್ಯ ಮಹಿಮೆಯುಳ್ಳ ರಾಜ್ಯದಲ್ಲಿ ಆತನಿಗೆ ಸಾರುಪ್ಯವಾಗುವ ಹಾಗೆ, ನಮಗೆ ದಯ ಮಾಡು. ಅಲ್ಲಿ ಆತನು—ಓ ತಂದೆಯೇ ನಿಂನ ಸಂಗಡಲೂ, ಓ ಪರಿಶುದ್ಧಾತ್ಮನೇ ನಿಂನ ಸಹಿತವಾಗಿಯೂ, ಒಬ್ಬನೇ ದೇವರಾಗಿ, ಯುಗಯುಗಾಂತರಗಳಿಗೂ ಬಾಳುತ್ತಾ ಆಳುತ್ತಾ ಇರುವನು. ಆಮೆನ್.

---

## Festtagsgebete.

(ಹಬ್ಬಗಳ ಪ್ರಾರ್ಥನೆಗಳು.)

### Advent. (ಕ್ರಿಸ್ತನ ಆಗಮನ.)

ಸರ್ವತ್ರಾಣ ಉಳ್ಳ, ನಿತ್ಯ ದೇವರೇ! ನೀನು ನಿಂನ ಒಬ್ಬನಾಗಿ ಹುಟ್ಟಿದ ಮಗನಾದ ಯೇಸು ಕ್ರಿಸ್ತನಂನು, ಕಾಲದ ಸಂಪೂರ್ಣತೆ ಬಂದಾಗ, ನಂಮ ಬಳಿಗೆ ಇಳಿದು ಬರ ಮಾಡಿದದರಿಂದ, ನಿಂನಂನು ಮನಃಪೂರ್ವಕವಾಗಿ ಸ್ತುತಿಸುತ್ತೇವೆ. ಈ ಪ್ರಕಾರ ಮಾಂಸದಲ್ಲಿ ಆದ ಆತನ ಅವತಾರವಂನು ನಾವು ಯಾವಾಗಲು ನಮಗೆ ಆದರ್ಶ ಮಾಡಿ ಕೊಂಡು, ಆತನು ಈ ಲೋಕಕ್ಕೆ ಬಂದದ್ದು ಬಡ ಪಾಪಿಷ್ಟರಾದ ನಂಮಂನು ರಕ್ಷಿಸುವದಕ್ಕೆ ಆಯಿತೆಂದು — ಪೂರ್ಣ ಭರವಸದಿಂದ ನಂಬುವ ಹಾಗೆ, ದಯ ಮಾಡು. ಓ ನಂಬಿಕೆಯುಳ್ಳ ದೇವರೇ! ಆತನು ಇಂದಿನ ಪರಿಯಂತರಕ್ಕೂ ಇಂನು ತಂನ ವಾಕ್ಯದಿಂದಲೂ, ಪರಿಶುದ್ಧ ಸ್ನಾನ, ರಾತ್ರಿ ಭೋಜನಗಳಿಂದಲೂ ನಂಮಲ್ಲಿ ಬರುವ ಹಾಗೆಯೂ, ನಾವು ಆತನ ಶಕ್ತಿಯಿಂದ ನಂಮ ಹೃದಯಗಳಂನು, ಆತನು ಅವುಗಳಲ್ಲಿ ನಿರಂತರವಾಗಿ ವಾಸ ಮಾಡುವದಕ್ಕೆ, ಸಿದ್ಧ ಮಾಡುವ ಹಾಗೆಯೂ, ಕೃಪೆ ಕೊಡು. ಮತ್ತು ಇಂನು ಮುಂದೆ ಆಗುವ ಆತನ ಕಡೇ ಬರುವಿಕೆಗೆ ನಾವು ಬಹಳ ಅಪೇಕ್ಷೆ ಮಾಡುವ ಹಾಗೆ, ನಂಮ ಆಲೋಚನೆ ಮನಸ್ಸುಗಳಂನು ಯೆಬ್ಬಿಸಿ, ಅದರ ಕಡೆಗೆ ತಿರುಗಿಸು. ಕಡೇಲಿ ಆತನು ನ್ಯಾಯತೀರ್ವಿಕೆಗೆ ಬರುವಾಗ, ನಾವು ಸಂತೋಷದಿಂದ ಆತನ ಯೆದುರಿಗೆ ಹೋಗಿ, ಆತನ ಸಂಗಡ ನಿತ್ಯ ಮಹಿಮೆಯ ರಾಜ್ಯದಲ್ಲಿ ಶೇರುವ ಹಾಗೆ,

ಯುಗಗಳ ಅರಸನಾಗಿರುವ ನಿನಗೂ, ನಿನ್ನ ಸಂಗಡ ಬಾಳುವ, ಆಳುವ, ನಿನ್ನ ಮಗನಿಗೂ, ಸಭೆಯಲ್ಲಿ ಯುಗಯುಗಾಂತರಗಳ ವರಿಗೂ ಘನವು ಉಂಟಾಗಿರಲಿ. ಆಮೆನ್.

Oder (ಅಥವಾ):

ನಂಬಿಕೆ ಅಂತಕರಣ ಉಳ್ಳ ದೇವರೇ! ನೀನು ನಿನ್ನ ಒಬ್ಬನಾಗಿ ಹುಟ್ಟಿದ ಮಗನನ್ನು ಹಳೇ ಒಡಂಬಡಿಕೆಯ ಪಿತೃಗಳಿಗೆ ವಾಗ್ದತ್ತ ಮಾಡಿ, ಪರಿಶುದ್ಧ ಪ್ರವಾದಿಗಳ ಮುಖದಿಂದ ಮುಂತಿಳಿಸಿ, ಆತನು ನಿನ್ನ ಆಲೋಚನೆ ಚಿತ್ತವಂನೆಲ್ಲಾ ಪ್ರಕಟ ಮಾಡಿ, ಭೂಮಿಯ ಸಕಲ ಜನಾಂಗಗಳ ಮೇಲೆ ಆಶೀರ್ವಾದವಂನು ತರುವ ಹಾಗೆ, ಸಮಯ ಪೂರ್ಣವಾದಾಗ, ಆತನಂನು ಈ ಲೋಕಕ್ಕೆ ಕಳುಹಿಸಿದರಿಂದ, ನಿನಗೆ ಸ್ತುತಿ ಸ್ತೋತ್ರ ಮಾಡುತ್ತೇವೆ. ನಾವು ಸಂತೋಷದಿಂದ ಆತನಿಗೆ ನಂಮ ಹೃದಯಗಳನ್ನು ತೆರೆದು, ಆತನು ನಂಮಲ್ಲಿ ಸೇರಿ, ತಾನು ಪರಲೋಕದಿಂದ ತಂದಂಥ, ರಕ್ಷಣೆಗಾಗಿರುವಂಥ, ವರಗಳಿಂದ ನಂಮ ಅಂತರಂಗದಲ್ಲಿಯೂ, ನಂಮ ಮಧ್ಯದಲ್ಲಿಯೂ ವಾಸ ಮಾಡಿ, ನೆಲೆಗಾಳುವ ಹಾಗೆ, ನಿಂನ ಕೃಪೆ ನಮಗೆ ದಯಪಾಲಿಸೆಂದು—ನಿಂನಂನು ಬೇಡುತ್ತೇವೆ. ಆತನು ತನ್ನ ವಾಕ್ಯದಿಂದಲೂ, ಆತ್ಮದಿಂದಲೂ ಯಾವಾಗಲೂ ನಂಮ ಆತ್ಮದ ಸಂಗಡ ಮಾತಾಡಿ, ನಂಮಲ್ಲಿ ಪಾಪದ ಬಲ ಮುರಿದು, ಸಂಪೂರ್ಣವಾದ ನೀತಿವಂತರ ಅನ್ಯೋನ್ಯದಲ್ಲಿ ನಂಮಂನು ಸೇರಿಸುವ ಹಾಗೆ, ದಯ ಮಾಡು. ನಂಮ ಕರ್ತನಾದ ಯೇಸು ಕ್ರಿಸ್ತನ ದಿವಸದಲ್ಲಿ ನಾವು ನಿರಪರಾಧಿಗಳಾಗಿರುವ ಹಾಗೆ, ನಿಂನ ನಂ

ಬಿಕೆಯ ಪ್ರಕಾರ, ಕಡೇ ವರಿಗೂ ನಂಮಂನು ಸ್ಥಿರ ಪಡಿಸಿ ಕಾಪಾಡು. ಆಮೆನ್.

---

## Weihnachtsgebete. (ಕ್ರಿಸ್ತನ ಜನನ.)

ಕರ್ತನಾದ ದೇವರೇ! ಪರಲೋಕದ ತಂದೆಯೇ! ನೀನು ನಿನ್ನ ಒಬ್ಬನಾಗಿ ಹುಟ್ಟಿದ ಮಗನನ್ನು ಯುಗ ಕಾಲಗಳ ಮುಂಚೆ ನಂಮ ರಕ್ಷಣೆಗೆ ನೇಮಿಸಿ, ಕಾಲದ ಪೂರ್ಣತೆಯು ಬಂದಾಗ, ಮನುಷ್ಯನಾಗಿ ಹುಟ್ಟಗೊಟ್ಟದರಿಂದ, ನಿನಗೆ ಮನಃಪೂರ್ವಕವಾದ ಸ್ತುತಿ, ಸ್ತೋತ್ರ ಮಾಡುತ್ತೇವೆ. ನಾವು ನಂಮ ಮಾಂಸಭಾವವಾದ ಜನ್ಮದ ಕೆಟ್ಟತನದಿಂದ ಶುಚಿ ಮಾಡಲ್ಪಟ್ಟು, ನ್ಯಾಯಪ್ರಮಾಣದ ಶಾಪದೊಳಗಿಂದಲೂ, ಪಾಪ ಮರಣಗಳ ಅಧಿಕಾರದೊಳಗಿಂದಲೂ ಬಿಡುಗಡೆಯಾಗಿ, ನಿನ್ನ ಮಕ್ಕಳೂ, ಪರಲೋಕದ ರಾಜ್ಯದ ಬಾಧ್ಯಸ್ಥರೂ ಆಗುವ ಹಾಗೆ, ನೀನು ನಿಂನ ಕೃಪೆಯ ಐಶ್ವರ್ಯದ ಪ್ರಕಾರ, ಆತನನ್ನು ಬಡ ಮನುಷ್ಯಜಾತಿಗೆ ದಯಪಾಲಿಸಿದ್ಧಿ. ಕನಿಕರಗಳ ತಂದೆಯೇ! ನಾವು ನಿಂನಂನು ಬೇಡುವದೇನಂದರೆ,—ನಿಂನ ಪ್ರಿಯ ಮಗನಾದ, ನಂಮ ವಿಮೋಚಕನ ತಿಳುವಿಕೆಯಲ್ಲಿ ನಂಮಂನು ನಿಂನ ಆತ್ಮದಿಂದ ಕೃಪೆಯಾಗಿ ಕಾಪಾಡಿ, ಆತನ ಪರಿಶುದ್ಧ ಅವತಾರದಲ್ಲಿ ನಾವು ಯಾವಾಗಲೂ ಆದರಣೆ, ಸಮಾಧಾನ ಹೊಂದುವ ಹಾಗೆ, ಬಲಗೊಳಿಸ ಬೇಕು. ನಿಂನ ಆತ್ಮದಿಂದ ಆಗುವ ಪುನರ್ಜನ್ಮದ ಶಕ್ತಿಯಿಂದ ನಾವು ವಿಧೇಯ ಮಕ್ಕಳಾಗಿ, ನಿನಗೆ ಇಹದಲ್ಲಿ ನಡದು ಕೊಂಡು, ಸೇವಿಸಿ, ಪರದಲ್ಲಿ ನಿಂನ ಯೆಲ್ಲಾ ದೂ

ತರ ಸಂಗಡಲೂ, ಆಯಲ್ಪಟ್ಟವರ ಸಂಗಡಲೂ, ನಿಂನ ಪ್ರಿಯ ಮಗನಾಗಿರುವ, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ, ನಿಂನಂನು ಯೆಂದೆಂದಿಗೂ ಸ್ತುತಿಸಿ ಕೊಂಡಾಡುವ ಹಾಗೆ, ನಮಗೆ ಸಹಾಯ ಮಾಡು. ಆಮೆನ್.

Oder (ಅಥವಾ):

ಸರ್ವತ್ರಾಣವುಳ್ಳ ದೇವರೇ! ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ನಿಂನ ಪರಿಶುದ್ಧ ಹೆಸರಿಗೆ ಇಂದೂ ಯೆಂದೆಂದಿಗೂ ಸ್ತುತಿ ಉಂಟಾಗಲಿ. ನೀನು ನಮಗೆ ದೊಡ್ಡವುಗಳಂನು ಮಾಡಿದ್ದಿ. ಸಂತೋಷಿಸುತ್ತಾ ಇದ್ದೇವೆ. ಯಾಕಂದರೆ, ಈಹೊತ್ತು ಕರ್ತನಾದ ಕ್ರಿಸ್ತನೆಂಬ ರಕ್ಷಕನು ನಮಗೆ ಹುಟ್ಟಿದ್ದಾನೆ. ನೀನು ನಮಗೆ ಇಂಥಾ ಪ್ರೀತಿ ಮಾಡಿ, ನಿಂನ ಒಬ್ಬನಾಗಿ ಹುಟ್ಟಿದ ಮಗನಂನು, ನಾವು ಆತನಿಂದ ಬದುಕುವ ಹಾಗೆ, ಈ ಲೋಕಕ್ಕೆ ಕಳುಹಿಸಿದದರಿಂದ, ನಿನಗೆ ಮನಃಪೂರ್ವಕವಾದ ಸ್ತೋತ್ರ ಮಾಡುತ್ತೇವೆ.

ಕರ್ತನಾದ ಯೇಸುವೇ! ನಿನಗೆ ಘನವೂ, ಮಹಿಮೆಯೂ ಉಂಟಾಗಲಿ. ನಾವು ದೇವರ ಮಕ್ಕಳಾಗುವ ಹಾಗೆ, ನೀನು ಮನುಷ್ಯನ ಮಗನಾದಿ. ನಾವು ನಿಂನ ಬಡತನದಿಂದ ಐಶ್ವರ್ಯವಂತರಾಗುವ ಹಾಗೆ, ನೀನು ಬಡವನಾದಿ. ನಾವು ದೇವರ ಪ್ರತಿರೂಪಕ್ಕೆ ಮಾರ್ಪಡಿಸಲ್ಪಡುವ ಹಾಗೆ, ನೀನು ದಾಸನ ರೂಪ ಧರಿಸುವದಕ್ಕೆ ನಿಂನಂನು ತಗ್ಗಿಸಿಕೊಂಡಿ. ನಾವೆಲ್ಲರು ಕತ್ತಲೆಯಲ್ಲಿ, ಮರಣದ ನೆರಳಿನಲ್ಲಿ ಕೂತು ಕೊಂಡಿದ್ದೆವು. ಆದರೆ ನೀನು ದೇವರ ಘನ ಉಳ್ಳ ಕರುಣೆಯಂನು ನಮಗೆ

ದಾರಕಿಸಿ, ಸಮಧಾನವಂನೂ, ಸಂತೋಷವಂನೂ ಈ ಕೀಳ ಲೋಕಕ್ಕೆ ತಂದಿದ್ಧಿ. ನಿಂನ ಸಂಪೂರ್ಣತೆಯೊಳಗಿಂದ ನಾವೆಲ್ಲರು ಕೃಪೆಯ ಮೇಲೆ ಕೃಪೆಯಂನು ಹೊಂದುತ್ತೇವೆ. ಆದದರಿಂದ ನಂಮ ಪ್ರಾಣವು ಹರುಷವಾಗಿ, ಮಹೋಂನತವಾದವುಗಳಲ್ಲಿ ದೇವರಿಗೆ ಮಹಿಮೆಯೂ, ಭೂಮಿಯ ಮೇಲೆ ಸಮಾಧಾನವೂ, ಮನುಷ್ಯರಲ್ಲಿ ವಾಲ್ಮೆಯೂ— ಯೆಂದು ಹೊಗಳುತ್ತದೆ.

ಓ ನಂಮ ಕರ್ತನಾದ ರಕ್ಷಕನೇ! ಈಗ ನಿಂನಂನು ಅಪೇಕ್ಷಿಸುವ ನಂಮ ಹೃದಯಗಳಲ್ಲಿ ಪ್ರವೇಶಿಸು. ನಿಂನ ಪರಲೋಕದವುಗಳಾದ ಯೆಲ್ಲಾ ವರಗಳಿಂದ ನಮ್ಮನ್ನು ತುಂಬಿಸು. ನಿನ್ನ ಆತ್ಮದಿಂದ ನಮ್ಮನ್ನು ಆಳು. ನಿಂನ ಕೃಪೆಯಿಂದ ನಂಮಂನು ಪಾಪದ ಕಡೆಯೊಳಗಿಂದ ರಕ್ಷಿಸು. ನಂಬಿಕೆಯುಳ್ಳ ಕರ್ತನಾದ ವಿಮೋಚಕನೆ! ಯೆಲ್ಲಾ ದುಃಖಗಳಲ್ಲಿ ಆದರಣೆಯಂನೂ, ಯೆಲ್ಲಾ ಉಪದ್ರಗಳಲ್ಲಿ ಸಹಾಯವಂನೂ, ಈ ದುಷ್ಟ ಲೋಕದ ಶೋಧನೆಗಳಲ್ಲಿ ಬಲವಂನೂ, ಕಡೇ ಹೋರಾಟದಲ್ಲಿ ಭಾಗ್ಯವಾದ ಹಾರೈಕೆಯಂನೂ ನಮಗೆ ದಯಪಾಲಿಸು. ನಂಮಂನು ಕರುಣಿಸಿ, ನಮಗೆ ನಿಂನ ಸಮಾಧಾನವಂನು ಕಾಡು. ಓ ಯೇಸುವೇ! ಆಮೆನ್.

---

## Neujahrsgebete. (ಯುಗಾದಿ.)

ಕರ್ತನಾದ ದೇವರೇ! ಪರಲೋಕದ ತಂದೆಯೇ! ನೀನು ನಿಂನ ಮಗನಂನು ಈ ಲೋಕಕ್ಕೆ ಕಳುಹಿಸಿ, ಆತನು ತಂನ ಪ್ರಜೆಯ ಸ್ಥಿತಿಯಲ್ಲಿ

ಸೇರಿಸಿ ಕೊಳ್ಳಲಿಕ್ಕೆ ಛೇದನೆ ಮಾಡಲ್ಪಟ್ಟ ದಿವಸದಲ್ಲಿ ಆತನಿಗೆ ಯೇಸು ಯೆಂಬ ಅಮೂಲ್ಯವಾದ ಹೆಸರಂನು ಇಡಿಸಿದ್ದರಿಂದ, ನಿಂನಂನು ಸ್ತುತಿಸುತ್ತೇವೆ. ನೀನು ಪರಿಶುದ್ಧ ಒಡಂಬಡಿಕೆಯಂನು ನೆನಪಿಗೆ ತಂದು, ಅಬ್ರಹಾಮನ ಸಂತಾನದಿಂದ ಭೂಮಿಯ ಸಕಲ ಜನಾಂಗಗಳಿಗೆ ಆಶೀರ್ವಾದ ಬರುವದೆಂಬ ವಾಗ್ದತ್ತವಂನು ಪೂರೈಸಿದ್ದಿ. ಅದುಕಾರಣ ಉಳಿದ ನಿಂನ ವಾಗ್ದತ್ತಗಳೆಷ್ಟು ಸಹ ಕ್ರಿಸ್ತ ಯೇಸುವಿನಲ್ಲಿ ಹೌದು, ಆತನಲ್ಲಿ ಆಮೆನ್—ಆಗುವವು. ನಾವು ನಿಂನಂನು ಮನಃಪೂರ್ವಕವಾಗಿ ಬೇಡಿ ಕೊಳ್ಳುವದೇನಂದರೆ,—ಮಾಂಸದಲ್ಲಿ ಆದ ಆತನ ಪ್ರತ್ಯಕ್ಷತೆಯಂನೂ, ಯೇಸು ಯೆಂಬ ಆತನ ಅಮೂಲ್ಯವಾದ ಹೆಸರಂನೂ ನಾವು ದೃಢವಿಶ್ವಾಸದಿಂದ ಯಾವಾಗಲೂ ನಂಮ ಆದರಣೆ ಮಾಡಿ ಕೊಂಡು, ಹಳೇ ಮನುಷ್ಯನಂನು ತೆಗದು ಹಾಕ್ಯಾದರಿಂದ, ಹೊಸ ವರುಷವಂನು ಭಕ್ತಿಯಿಂದ ಆರಂಭಿಸಿ, ನಿಂನ ಕೃಪೆಯುಳ್ಳ ಆಶ್ರಯದಲ್ಲಿ ಸಮಾಧಾನದಿಂದ ಮುಗಿಸುವ ಹಾಗೆ ನಿಂನ ಪರಿಶುದ್ಧಾತ್ಮನಿಂದ ನಂಮಲ್ಲಿ ಯತ್ನಿಸು. ನಂಮ ಶರೀರವಂನೂ, ಪ್ರಾಣವಂನೂ ಇಂದಿನಿಂದ ಯೆಂದೆಂದಿಗೂ, ಕಾಪಾಡು. ಆಮೆನ್.

Oder (ಅಥವಾ):

**ಕ**ರ್ತನೇ! ತಲತಲಾಂತರಗಳಲ್ಲಿ ನೀನು ನಂಮ ವಾಸಸ್ಥಾನವಾಗಿದ್ದೀ. ಬೆಟ್ಟಗಳು ಹುಟ್ಟುವದಕ್ಕಿಂತ ಮುಂಚೆಯೂ, ಲೋಕವು ನಿರ್ಮಾಣವಾಗುವದಕ್ಕಿಂತ ಮುಂಚೆಯೂ, ಯುಗದಿಂದ ಯುಗಕ್ಕೂ, ನೀನು ದೇವರಾಗಿದ್ದೀ. ನಾವು ನಿಂನಿನ ಮಂಣೂ, ಬೂದಿಯೂ; ನಂಮ ಆಯು

ಸ್ಪು ನಿಂನ ಮುಂದೆ ಯೇನೂ ಅಲ್ಲದ ಹಾಗೆದೆ. ಆದರೆ ನೀನು ಆತನ್ನೇ, ನಿಂನ ವರುಷಗಳು ಮುಗಿಯವು. ನಾವು ಪಾಪಿಷ್ಟರು; ನಂಮ ಅಪರಾಧವು ನಿಂನ ಮುಖದ ಮುಂದೆ ಪ್ರಕಟವಾಗೆದೆ. ಆದರೆ ನೀನ್ನೇ ಓ ಕರ್ತನ್ನೇ! ನಂಮ ತಂದೆಯೂ, ವಿಮೋಚಕನೂ; ಪೂರ್ವದಿಂದ ನಿಂನ ಹೆಸರು ಇದೇ. ನಿಂನ ಪರಾಕ್ರಮಗಳಂನು ಉಚ್ಚರಿಸಿ, ನಿಂನ ಸ್ತೋತ್ರವಂನೆಲ್ಲಾ ಕೇಳಿಸ ಮಾಡುವವನ್ಯಾರು? ನೀನು ನಮಗೆ ಮಾಡುವ ಉಪಕಾರಗಳಿಗೆ ಈಡು ಕೊಡುವವನ್ಯಾರು? ನಿಂನ ಕೃಪೆಯು ಯೆಷ್ಟೋ ಅಮೂಲವಾದದ್ದು! ಮನುಷ್ಯನ ಮಕ್ಕಳು ನಿಂನ ರೆಕ್ಕೆಗಳ ನೆರಳಂನು ಆಶ್ರೈಸಿ ಕೊಳ್ಳುತ್ತಾರೆ. ನೀನ್ನೇ ನಂಮ ಸಹಾಯವೂ, ನಂಮ ಆದರಣೆಯೂ ಯೆಂದೆಂದಿಗೂ. ಆದದರಿಂದ ಈಹೊತ್ತು ನಿನ್ನ ಕೃಪೆಯು ನಮಗೆ ನೋಡ ಕೊಟ್ಟ ಹೊಸ ವರುಷದ ಆರಂಭದಲ್ಲಿ ನಂಮ ಪ್ರಾಣವು ನಿಂನಂನು ಹುಡುಕುತ್ತದೆ. ಇಂನು ಆಗ ಬೇಕಾದ ನಂಮ ದಿವಸಗಳೆಲ್ಲಾ ನಿಂನ ಪುಸ್ತಕದಲ್ಲಿ ಬರೆಯಲ್ಪಟ್ಟವೆ. ದೇಹ, ಪ್ರಾಣ, ಆತ್ಮಗಳಂನು ನಿಂನ ಕೈಗೆ ಒಪ್ಪಿಸುತ್ತೇವೆ. ನಿಂನ ಒಬ್ಬನಾಗಿ ಹುಟ್ಟಿದ ಮಗನಾದ ಯೇಸು ಕ್ರಿಸ್ತನು, ಉದಯದಿಂದ ಅಸ್ತಮಾನದವರಿಗೂ, ಬೆಳಕು ಜೀವ ಕೊಡುವ, ನಿತ್ಯವಾದ ನೀತಿಯ ಸೂರ್ಯನಾಗಿ, ನಂಮ ಹೃದಯಗಳಲ್ಲಿ ಹೊಸತಾಗಿ ಉದಯವಾಗ ಮಾಡು. ನಂಮ ಅಡಿಗಳು ಕದಲದೆ, ನಂಮ ಪಾದಗಳು ಯೆಡವದೆ ಇರುವ ಹಾಗೆ, ನಂಮಂನು ನಂಮ ಜೀವದ ಹಾದಿಯಲ್ಲಿ ನಡಿಸುವದಕ್ಕೆ, ನಿಂನ ಪರಿಶುದ್ಧಾತ್ಮನಂನು ನಮಗೆ ಕೊಡು. ಇಪ್ರಯೋಲಂನು ಕೊಪಾ

ದುವಾತನೇ! ನೀನು ತೂಕಡಿಸುವದಿಲ್ಲ, ನಿದ್ರೆ ಮಾಡುವದಿಲ್ಲ. ನಂಮಂನು ಹೊಸತಾಗಿ ನಿಂನ ಸರ್ವತ್ರಾಣವುಳ್ಳ ಆಶ್ರಯದಲ್ಲಿ ಸೇರಿಸಿ, ನಂಮ ಸಕಲ ಮಾರ್ಗಗಳಲ್ಲಿ ನಂಮ ಜೀವದ ಬೆಳಕೂ, ಬಲವೂ ಆಗಿರು. ನಿತ್ಯ ದೇವರೇ ನಂಮಿಂದ ನಿಂನ ಕೈ ಹಿಂದೆಗೆಯ ಬೇಡ. ನಂಮಂನು ಬಿಡ ಬೇಡ. ನಾವು ನಿಂನ ರಕ್ಷಣೆಗೆ ಯೆದುರು ನೋಡುತ್ತೇವೆ. ಕರ್ತನೇ! ಸಹಾಯ ಮಾಡು. ಕರ್ತನೇ! ಸಫಲವಾಗ ಮಾಡು. ಆಮೆನ್.

---

## Epiphaniasgebete. (ಪ್ರತ್ಯಕ್ಷತೆಯ ಹಬ್ಬ.)

ಬೆಳಕಿನ ತಂದೆಯೇ! ನಿಂನ ಅಂತಃಕರಣವಂನು ಸ್ತುತಿಸಿ ಕೊಂಡಾಡುತ್ತೇವೆ. ಅದರಿಂದಲೇ ಉಂನತದಿಂದಾಗುವ ಉದಯವು ನಂಮಂನು ದರ್ಶಿಸಿ, ನಂಮ ಪಾದಗಳಂನು ಸಮಾಧಾನದ ಹಾದಿಯಲ್ಲಿ ನೆಟ್ಟಗೆ ಸೇರಿಸುವ ಹಾಗೆ, ಕತ್ತಲೆಯಲ್ಲಿಯೂ, ಮರಣದ ನೆರಳಿನಲ್ಲಿಯೂ ಕೂತು ಕೊಂಡವರಿಗೆ ಬೆಳಗಿ ಅದೆ. ನಿಂನ ಕೃಪೆಯಿಂದ ನಮಗೆ ಕ್ರಿಸ್ತನು ಇದ್ದಾನೆ. ಆತನೇ ನಂಮ ಸಮಾಧಾನವು. ಆತನು, ನಿಂನ ನಾನಾ ವಿಧವಾದ ಜ್ಞಾನ ದಯಗಳ ಐಶ್ವರ್ಯವು ಅದರ ಮೂಲವಾಗಿ ತಿಳಿಯ ಬರುವ ಹಾಗೆ, ತನಗೆ ಭೂಮಿಯ ಜನಾಂಗಗಳೊಳಗಿಂದ ಸಭೆಯಂನು ಕೂಡಿಸಿದ್ದಾನೆ. ನಾವು ಆಗಲೇ ನಿಂನ ಪ್ರಜೆ ಯೆಂದೂ ನಿಂನ ಮಕ್ಕಳೆಂದೂ ಅಂನಿಸುವಂಥಾ, ಹೇಳ ಕೂಡದಂಥಾ, ಉಪಕಾರದ ದೆಸೆಯಿಂದ, ಅಂತಃಕರಣ ಉಳ್ಳ ತಂದೆಯಾದ, ನಿಂನಂನು ಸ್ತುತಿಸುತ್ತೇವೆ.

ನಿಂನ ದಯವಂನು ನಮಗೆ ಪ್ರಸಿದ್ಧ ಮಾಡಿದ, ನಿಂನ ಒಬ್ಬನಾಗಿ ಹುಟ್ಟಿದ ಮಗನಿಗೆ ತಕ್ಕಂಥ ಸ್ತೋತ್ರ, ಆರಾಧನೆಗಳ ಬಲಿಯಂನು ಅರ್ಪಿಸುವದಕ್ಕೆ ನೀನೇ ನಂಮಂನು ಯೋಗ್ಯರಾಗ ಮಾಡು. ನಿಂನಂನು ತಿಳುಕೊಳ್ಳುವದಕ್ಕೆ ಜ್ಞಾನ ಪ್ರಕಟಣೆಗಳ ಆತ್ಮವಂನೂ, ನಂಮ ಕರೆವಿಕೆಯ ಹಾರೈಕೆ ಯೇನೆಂದೂ, ಪರಿಶುದ್ಧರಲ್ಲಿರುವ ನಿಂನ ಬಾಧ್ಯದ ಮಹಿಮೆಯ ಐಶ್ವರ್ಯವೇನೆಂದೂ ಗ್ರಹಿಸುವದಕ್ಕೆ ಬೆಳಕಾದ ಕಂಣುಗಳಂನೂ ನಮಗೆ ಯಾವಾಗಲೂ ದಯಪಾಲಿಸು. ನಿಂನ ರಾಜ್ಯವಂನು ಹೆಚ್ಚು ಹೆಚ್ಚಾಗಿ ವಿಸ್ತರಿಸಿ, ಭೂಮಿಯ ಅಂತ್ಯಗಳಲ್ಲಿರುವ ಜನಾಂಗಗಳು ನಿಂನ ಬೆಳಕಂನು ನೋಡಿ, ತಂಮ ಮೇಲೆ ಉದಯವಾಗುವ ಪ್ರಕಾಶದಿಂದ ಸಂತೋಷವಾಗ ಮಾಡು. ಮತ್ತು ನಿಂನ ಕೃಪೆಯ ಪ್ರಥಮ ಫಲಗಳಂನು ಹೊಂದಿದ ನಾವು ಬೆಳಕಿನ ಮಕ್ಕಳಾಗಿ, ನಿಂನ ಬೆಳಕಿನಲ್ಲಿ ನಡ ಕೊಂಡು, ಕತ್ತಲೆಯ ನಿಷ್ಫಲವಾದ ಕ್ರಿಯೆಗಳಂನು ಹಗೆ ಮಾಡಿ, ದೂರವಾಗಿರುವ ಹಾಗೆ, ನಂಮಂನು ನಿಂನ ಪರಿಶುದ್ಧಾತ್ಮದಿಂದ ಆಳು. ಕಡೇಲಿ ನಾವು ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಲ್ಲಿ ನಿಂನ ಮಹಿಮೆಯಂನು ದೃಷ್ಟಿಸಿ, ನಿಂನಂನು ಯುಗಯುಗಗಳಿಗೂ ಕೊಂಡಾಡುವ ಹಾಗೆ, ನಂಮಂನು ಪರಲೋಕದಲ್ಲಿರುವ ನಿಂನ ಸಿಂಹಾಸನದ ಬೆಳಕಿನಲ್ಲಿ ಸೇರಿಸು. ಆಮೆನ್.

Oder (ಅಥವಾ):

ನಿತ್ಯ ದೇವರೇ! ಬೆಳಕಿನ ತಂದೆಯೇ! ಯೆಲ್ಲಾ ಒಳ್ಳೇ ವರಗಳೂ, ಯೆಲ್ಲಾ ಸಂಪೂರ್ಣ ದಾನಗಳೂ ನಿಂನಿಂದ ಇಳಿದು ಬರುತ್ತವೆ. ನೀನು

ನಿಂನ ಒಬ್ಬನಾಗಿ ಹುಟ್ಟಿದ ಮಗನಾಗಿರುವ, ನಂಮ ಕರ್ತನಾದ, ಯೇಸು ಕ್ರಿಸ್ತನಂನು ಮನುಷ್ಯರ ನಿಜವಾದ ಬೆಳಕಾಗಿ ಈ ಲೋಕಕ್ಕೆ ಕಳುಹಿಸಿ, ಆತನಿಂದ ಸಕಲ ಜನಾಂಗಗಳಲ್ಲಿ ನಿಂನಂನು ಪ್ರಕಟ ಮಾಡಿ ಕೊಂಡು, ನಿಂನ ಪರಿಶುದ್ಧ ಸುವಾರ್ತೆಯಿಂದ ನಂಮಂನು ಸಹ ಕತ್ತಲೆಯೊಳಗಿಂದ ನಿಂನ ಆಶ್ಚರ್ಯವಾದ ಬೆಳಕಿಗೆ ಕರೆದದರಿಂದ, ನಿನಗೆ ಸ್ತುತಿ ಸ್ತೋತ್ರ ಮಾಡುತ್ತೇವೆ. ನಿಂನಂನು ಬೇಡುವದೇನಂದರೆ, — ಪರಲೋಕದ ಈ ಬೆಳಕಂನು ನಿಂನ ಕೃಪೆಯಿಂದ ಯಾವಾಗಲೂ ನಂಮ ಅಂತರಂಗದಲ್ಲಿಯೂ, ನಂಮ ಮಧ್ಯದಲ್ಲಿಯೂ ಪ್ರಕಾಶಿಸ ಮಾಡು. ಮತ್ತು ಯೆಲ್ಲಾ ಕಂಣುಗಳು ನಿಂನಂನೂ, ನೀನು ಕಳುಹಿಸಿದ ನಿಂನ ಮಗನಾದ ಯೇಸು ಕ್ರಿಸ್ತನಂನೂ ತಿಳಕೊಳ್ಳುವ ಹಾಗೆ, ನಂಬಿಕೆಯುಳ್ಳ ಸತ್ಯದ ಸಾಕ್ಷಿಗಳ ಮುಖದಿಂದ ಈ ಲೋಕದ ಕತ್ತಲೆಯಂನು ಬೆಳಕಾಗ ಮಾಡು. ಯೆಲ್ಲಾ ಮಾಂಸದ ಮೇಲೆ ನಿಂನ ಪರಿಶುದ್ಧಾತ್ಮನಂನು ಹೊಯಿ. ನಿಂನ ವಾಕ್ಯಕ್ಕೆ ಹೃದಯಗಳು ತೆರೆ ಕೊಡು, ಅದು ಯೆಲ್ಲೆಲ್ಲಿಯೂ ಪ್ರಾಣಗಳಂನು ಹಾಸ, ಪರಿಶುದ್ಧ ಮಾಡಿ, ಸಂತೈಸಿ, ರಕ್ಷಿಸುವ ಹಾಗೆ, ಅದಕ್ಕೆ ಹಾದಿ ಮಾಡು.

ಅಂತಃಕರಣವುಳ್ಳ ತಂದೆಯೇ! ನಿಂನ ದೊಡ್ಡ ಬೆಳೆಗೆ ಕಳುಹಿಸಲಿಕ್ಕೆ ಕೆಲಸದವರಂನು ಕರೆ. ಜನಾಂಗಗಳಂನು ಕತ್ತಲೆಯೊಳಗಿಂದ ನಿಂನ ಬೆಳಕಿಗೆ ತಿರುಗಿರುವದಕ್ಕೆ ಅವರೊಳಗೆ ಸುವಾರ್ತೆಯ ದೂತರಂನು ಕಳುಹಿಸು. ಇವರಿಗೆ ಯೆಲ್ಲಾ ಹೋರಾಟಗಳಲ್ಲಿ ಧೈರ್ಯ ಕೊಡು. ಯೆಲ್ಲಾ ಗಂಡಾಂತರಗಳಲ್ಲಿ ಅವರಿಗೆ ಆಶ್ರಯವಾಗಿರು. ಅವರ ವಾಕ್ಯಕ್ಕೆ ನಿಂನ ಶಕ್ತಿ ಕೂಡಿಸು. ನೀನು ಅವರ ಸಂಗಡ ಯುದ್ಧಕ್ಕೆ ಹೊರಡು. ಹೀಗಾಗಿ

ವಿಗ್ರಹಾರಾಧನೆ ಬೀಳಲಿ. ಜನಾಂಗಗಳು ನಿನಗೆ ಘನ ಕೊಡಲಿ. ದ್ವೀಪಗಳೂ ದೇಶಗಳೂ ನಿಂನ ಸ್ತೋತ್ರವಂನು ಸಾರಲಿ. ಯೆಲ್ಲಾ ಕರ್ತರ ಕರ್ತನೇ! ನಿಂನ ರಾಜ್ಯವು ಹೆಚ್ಚು ಹೆಚ್ಚಾಗಿ ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ. ಆಮೆನ್.

---

## Charfreitag (ಕ್ರಿಸ್ತನ ಮರಣ).

ಕರ್ತನಾದ ಕ್ರಿಸ್ತನೇ! ದೇವರ ಕುರಿಮರಿಯೇ! ನೀನು ಲೋಕದ ಪಾಪವಂನು ಹೊತ್ತು ಕೊಂಡು, ನಿಂನ ಶ್ರಮೆ ಮರಣದಿಂದ ನಮಗೋಸ್ಕರ ಪ್ರಾಯಶ್ಚಿತ್ತದ ಬಲಿಯಾದ್ದರಿಂದ, ನಿನಗೆ ಪೂರ್ಣ ಹೃದಯದಿಂದ ಸ್ತೋತ್ರ ಮಾಡುತ್ತೇವೆ. ನೀನು ನಿಂನಂನು ಪಾಪಿಷ್ಟರ ಕೈಗಳಲ್ಲಿ ಒಪ್ಪಿಸಿ ಕೊಂಡು, ನಂಮ ದೆಶೆಯಿಂದ ಅಪಹಾಸ್ಯ ಮಾಡಲ್ಪಟ್ಟು, ಬಾರುಗಳಿಂದ ಹೊಡೆಯಲ್ಪಟ್ಟು, ಮುಳ್ಳು ಕಿರೀಟ ಧರಿಸಿ ಕೊಂಡು, ಶಿಲುಬೆಗೆ ಹಾಕಲ್ಪಟ್ಟಿ. ಈ ನಿಂನ ಪರಿಶುದ್ಧ ಶ್ರಮೆ ಮರಣದ ಧ್ಯಾನದಿಂದ ನಾವು ಮನಃಪೂರ್ವಕವಾಗಿ ತಗ್ಗಿಸಿ ಕೊಂಡು, ಜೀವದಲ್ಲಿಯೂ, ಮರಣದಲ್ಲಿಯೂ, ಯೆಲ್ಲಾ ಶೋಧನೆಗಳೊಳಗೆ ಸಮಾಧಾನವಂನೂ, ಪಾಪಕ್ಕೂ, ಲೋಕಕ್ಕೂ ವಿರೋಧವಾದ ಹೋರಾಟದಲ್ಲಿ ಆಯುಧವಾಗಿ ಬೇಕಾದ ಬಲವಂನೂ ಹೊಂದುವ ಹಾಗೆ, ನಮಗೆ ಕೃಪೆ ದಯಪಾಲಿಸು. ಓ ಪ್ರಿಯ ಕರ್ತನೇ! ನಾವು ನಿಂನ ಹೆಜ್ಜೆಗಳಂನು ಹಿಡಿಯುವ ಹಾಗೆ, ನಮಗೆ ಮಾದರಿಯಂನು ತೋರಿಸಿದ್ಧಿ. ನಾವು, ವಿಶ್ವಾಸದ ನಾಯಕನೂ,

ಪೂರೈಸುವವನೂ ಆದಂಥ, ನಿಂನ ಮೇಲೆ ಕಂಣಿಟ್ಟು, ನಂಮ ಮುಂದೆ ಇಟ್ಟಿರುವ ಓಟವನ್ನು ತಾಳ್ಮೆಯಿಂದ ಓಡಿ, ಕಡೇಲಿ ನಂಮ ವಿಶ್ವಾಸಕ್ಕೆ ಅಂತ್ಯವಾದ ಪ್ರಾಣಗಳ ರಕ್ಷಣೆಯಂನು ಸಂಪಾದಿಸಿ ಕೊಂಡು, ನಿಂನ ಹೇಳಲಾರದಷ್ಟು ದೊಡ್ಡ ಪ್ರೀತಿಯ ದೆಸೆಯಿಂದ, ನಿಂನಂನು ಯುಗಯುಗಾಂತರಗಳಿಗೂ ಸ್ತುತಿಸಿ ಕೊಂಡಾಡುವ ಹಾಗೆ, ದಯಮಾಡು. ಆಮೆನ್.

Oder (ಅಥವಾ):

ಕರ್ತನಾದ ಯೇಸುವೇ! ಮರಣದ ಅಧಿಕಾರವುಳ್ಳವನಾದ ಪಿಶಾಚನ ಕಡೆಯಿಂದ ನೀನು ನಿಂನ ಮರಣದಿಂದ ಮರಣದ ಅಧಿಕಾರವಂನು ತೆಗದು, ಬದುಕುವ ಕಾಲವೆಲ್ಲಾ ಮರಣದ ಭಯದಿಂದ ದಾಸತ್ವಕ್ಕೊಳಗಾಗಿದ್ದ ನಂಮಂನು ಬಿಡುಗಡೆ ಮಾಡಿದದರಿಂದ, ನಿನಗೆ ನಂಮ ಹೃದಯಗಳ ನೆಲೆಯಿಂದ ಘನ ಕೊಟ್ಟು, ಸ್ತುತಿ ಸ್ತೋತ್ರ ಮಾಡುತ್ತೇವೆ. ನಿಂನಂನು ವಿನಯವಾಗಿ ಬೇಡುವದೇನಂದರೆ—ನಾವು ನಿಂನ ಮರಣದ ಐಕ್ಯದಲ್ಲಿ ನಮಗೂ ಪಾಪಕ್ಕೂ ಸತ್ತು, ಇಂನು ಮುಂದೆ ಹೊಸ ಜೀವದಿಂದ ನಿನಗೆ ನಡಿಯುವ ಹಾಗೆ, ನಮಗೆ ನಿಂನ ಕೃಪೆ ದಯಪಾಲಿಸು. ನಂಮ ಮರಣದ ಘಳಿಗೆಯಲ್ಲಿ ಸಹಾ ಈ ಅಮೂಲ್ಯವಾದ ಪುಣ್ಯದಿಂದ ನಂಮಂನು ಸಂತೈಸಿ, ನಂಮ ಪ್ರಾಣಗಳಂನು ಆಗಲೇ ನಿಂನ ಕೈಯಲ್ಲಿ ಅಂಗೀಕರಿಸು. ಯಾಕಂದರೆ ನೀನೇ, ಓ ಕರ್ತನಾದ ಯೇಸುವೇ! ನಂಬಿಕೆಯುಳ್ಳ ರಕ್ಷಕನೇ! ನಂಮಂನು ಬಿಡುಗಡೆ ಮಾಡಿದ್ಧಿ. ಆಮೆನ್.

Oder (ಅಥವಾ):

ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ನಿಂನ ಒಬ್ಬನಾಗಿ ಹುಟ್ಟಿದ ಮಗನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವ ಹೊಂದುವ ಹಾಗೆ, ನೀನು ಆತನಂನು ನಮಗೋಸ್ಕರ ಮರಣಕ್ಕೆ ಒಪ್ಪಿಸಿ ಕೊಟ್ಟದರಿಂದ, ನಿಂನಂನು ಮನಃಪೂರ್ವಕವಾಗಿ ಸ್ತುತಿಸುತ್ತೇವೆ. ನಮಗೆ ಸಮಾಧಾನ ಇರುವ ಹಾಗೆ, ನೀನು ನಂಮ ದಂಡವಂನು ಆತನ ಮೇಲೆ ಹಾಕಿದಿ. ಆತನ ಗಾಯಗಳಿಂದ ನಾವು ಗುಣವಾಗಿದ್ದೇವೆ. ಅಂತಃಕರಣವುಳ್ಳ ತಂದೆಯೇ! ಪಾಪದಿಂದ ಅಶುದ್ಧವಾದ ನಂಮ ಸ್ವರೂಪದಲ್ಲಿ ನಂಮಂನು ನೋಡ ಬೇಡ. ನಿಂನ ಪರಿಶುದ್ಧ ಪ್ರಿಯ, ಮಗನಾದ ಯೇಸು ಕ್ರಿಸ್ತನಲ್ಲಿಯೇ ನಂಮಂನು ದೃಷ್ಟಿಸು. ಆತನು ಗೆತ್ಸೇಮನೆ ಗೊಲ್ಗೊಥಾ ಯೆಂಬ ಸ್ಥಳಗಳಲ್ಲಿ ನಮಗೋಸ್ಕರ ಅರ್ಪಿಸಿದ ಸಂಪೂರ್ಣವಾದ ಬಲಿಯ ನಿಮಿತ್ತ, ನಮಗೆ ನಂಮ ದೊಡ್ಡ ಭಾರವಾದ ದೋಷವಂನು ಮನ್ನಿಸು.

ಮತ್ತು ನೀನೇ, ಕರ್ತನಾದ ಯೇಸುವೇ! ನಮಗೆ ಈಹೊತ್ತು ನಿಂನ ಅಶೋಧ್ಯವಾದ ಪ್ರೀತಿಯಂನು ತಕ್ಕ ಹಾಗೆ ಕಣ್ಣುಗಳ ಮುಂದೆ ಇಡು. ಮರಣದ ಪರಿಯಂತರಕ್ಕೂ ನಂಮಂನು ಪ್ರೀತಿ ಮಾಡಿದ ನಿಂನೊಬ್ಬನಂನು, ನಾವು ಯೆಲ್ಲಾಕ್ಕಿಂತ ಹೆಚ್ಚಾಗಿ ಪ್ರೀತಿ ಮಾಡುವ ಹಾಗೆ, ನಂಮ ಹಾಳೆ, ನಿರ್ಜೀವವಾದ ಹೃದಯಗಳಂನು ಪರಿಶುದ್ಧ ಆತುರದಿಂದ ಉರಿಯ ಮಾಡು. ನಿಂನ ಪ್ರೇಮೆಯಂನು ಪಶ್ಚಾತ್ತಾಪವುಳ್ಳ ಹೃದಯದಿಂದಲೂ, ಜೀವವುಳ್ಳ ವಿಶ್ವಾಸದಿಂದಲೂ ದೃಷ್ಟಿಸುವದಕ್ಕೆ ನಮಗೆ ಕೃಪೆ

ಕೊಡು. ಪಾಪದ ಆಜ್ಞೆ ತೀರ್ವಿಕೆಗೂ, ನ್ಯಾಯಪ್ರಮಾಣವೂ, ನಂಮ ಸ್ವಂತ ಮನಸ್ಸಾಕ್ಷಿಯೂ ನಮಗೆ ಇಡುವ ದೂರುಗಳಿಗೂ ತಪ್ಪಿಸುವ ಆಶ್ರಯವಂನು ನಾವು ನಿಂನ ಶಿಲುಬೆಯ ಕೆಳಗೆ ಕಂಡು ಕೊಳ್ಳುವ ಹಾಗೆ ಮಾಡು. ಓ ಪರಲೋಕದಲ್ಲಿರುವ ಪ್ರಧಾನಯಾಜಕನೇ! ನಂಮ ಕಾರ್ಯಕರ್ತನಾಗಿ ನಡುವಿಗೆ ಬಂದು,—ತಂದೆಯೇ ಅವರಿಗೆ ಮಂನಿಸೆಂದು—ನಮಗೋಸ್ಕರ ಬೇಡಿ ಕೊಳ್ಳುವದಂನು ಬಿಡ ಬೇಡ.

ನಂಬಿಕೆಯುಳ್ಳ ರಕ್ಷಕನೇ! ನಾವು ಪಾಪವಂನು ಪಗೆ ಪೇಸಿಗೆ ಮಾಡಿ, ನಂಮ ಮಾಂಸವಂನೂ, ಅದರ ಇಚ್ಛೆಗಳೂ ಆಶೆಗಳೂ ಸಹಿತವಾಗಿ, ಶಿಲುಬೆಗೆ ಹಾಕಿ, ಈ ಲೋಕದಲ್ಲಿ ನಿಂನೊಬ್ಬನಿಗೆ ಬದುಕುವ ಹಾಗೆ, ನಿಂನ ಮರಣದ ಶಕ್ತಿಯಿಂದ ನಂಮಲ್ಲಿ ಯತ್ನೈಸು. ಮತ್ತು ನೀನು ನಂಮಂನು ನಿಂನ ಶ್ರಮೆಗಳ ಸಂಗತಿಯಲ್ಲಿ ಸೇರಿಸ ಮನಸ್ಸಾಗಿದ್ದರೆ, ನಾವು ಕಡೇಲಿ ನಿಂನ ಸಂಗಡ ಮಹಿಮೆಯಲ್ಲಿ ಪಾಲುಗಾರರಾಗುವ ಹಾಗೆ, ಈಗ ನಿಂನ ಸಂಗಡ ಶ್ರಮೆ ಪಡುವದಕ್ಕೆ ಮನಸ್ಸಂನೂ ಸ್ಥಿರತ್ವವಂನೂ ನಮಗೆ ಕೊಡು. ಆಮೆನ್.

---

## Ostergebete (ಕ್ರಿಸ್ತನ ಉತ್ಥಾನ).

ಅತ್ಯಧಿಕವಾಗಿ ಸ್ತುತಿಸ ತಕ್ಕಂಥಾ ರಕ್ಷಕನೂ, ಕರ್ತನೂ ಆಗಿರುವ ಯೇಸು ಕ್ರಿಸ್ತನೇ! ನೀನು ಯೆಲ್ಲಾ ವಿಶ್ವಾಸಿಗಳ ಆದರಣೆಗಾಗಿ, ನಿಂನ ಪೆಸರಿನ ಮಹಿಮೆಗಾಗಿ, ಜಯಶಾಲಿಯಾಗಿ ಸಮಾಧಿಯೊಳಗಿಂದ ಪೊರಟಿ. ನಿಂನ ಘನದ ಈ ದೊಡ್ಡ ಪಬ್ಬದಲ್ಲಿ ನಾವು ನಿಂನಂನು

ಹ್ಯಾಗೆ ಯೋಗ್ಯವಾಗಿ ಕೊಂಡಾಡಲಿ? ನೀನು ಗೆದ್ದದರಿಂದ ನಾವು ವಿಶ್ವಾಸಿಸಿದಾತನಂನು ಬಲ್ಲೆವು. ಮತ್ತು ನಂಮಗೋಸ್ಕರ ಇಡಲ್ಪಟ್ಟದ್ದಂನು ನೀನು ಆ ದಿನದ ಮಟ್ಟಿಗೂ ಕಾಪಾಡ ಶಕ್ತನಾಗಿದ್ಧಿ. ನೀನು ಸಂಕಟಕ್ಕೂ, ನ್ಯಾಯತೀರ್ವಿಕೆಗೂ ಬಿಡುಗಡೆಯಾಗಿದ್ಧಿ. ಆದದರಿಂದ ನಿಂನ ಕೂಡ ಹೊಸ ಜೀವಕ್ಕೆ ಯೇಳುವವರೆಲ್ಲರ ಕಡೆಯಿಂದ ಆಜ್ಞೆತೀರ್ವಿಕೆಯ ಶಾಪವು ಯೆಂದೆಂದಿಗೂ ತೆಗದು ಹೋಗಿ ಅದೆ. ಕರ್ತನಾದ ಯೇಸುವೇ! ನೀನೇ ಪುನರುಥ್ಥಾನವೂ ಜೀವವೂ ಆದದರಿಂದ, ನಿಂನ ಅಶೋಧ್ಯವಾದ ಪ್ರೀತಿ ಅಂತಃಕರಣಗಳ ದೆಸೆಯಿಂದ, ಈಹೊತ್ತು ನಿಂನಂನು ಸ್ತುತಿಸಿ ಕೊಂಡಾಡುವ ನಂಮಲ್ಲಿ ಸಹ ಇಂನು ಮುಂದೆ ಬದುಕು. ನಿಂನ ಪರಿಶುದ್ಧಾತ್ಮನ ಶಕ್ತಿಯಿಂದ ನಂಮಂನು ಪಾಪದ ನಿದ್ರೆಯೊಳಗಿಂದ ಯೆಬ್ಬಿಸು. ನಂಮ ಮರ್ತ್ಯ ಶರೀರಗಳಲ್ಲಿ ಇಂನು ವಾಸ ಮಾಡುವ ದುರಾಶೆಗಳಂನೆಲ್ಲಾ ಕೊಂದು ಹಾಕಿ, ನಾವು ನಿಜವಾದ ಪಶ್ಚಾತ್ತಾಪದಿಂದಲೂ, ವಿಶ್ವಾಸದಿಂದಲೂ ನಿಂನ ಮುಂದೆ ಹೊಸ ಜೀವದಲ್ಲಿ ನಡೆಯುವ ಹಾಗೆ, ದಯ ಮಾಡು! ಪರಾಕ್ರಮಶಾಲಿಯೇ! ನಂಮಲ್ಲಿ ಲೋಕವಂನು ಗೆದ್ದು, ಜಯಿಸು. ನಿಂನ ವಾಗ್ದತ್ತದ ಪ್ರಕಾರ ಯಾವಾಗಲೂ ನಿಂನ ವಿಶ್ವಾಸಿಗಳ ಮಧ್ಯದಲ್ಲಿ ಇರು. ಶಕ್ತಿ, ಆದರಣೆ, ದಯ. ನಿತ್ಯ ಸಂತೋಷ, ಆನಂದವಾದ ಜೀವ, ಮುಂತಾದ ಪರಲೋಕದವುಗಳೆಲ್ಲಾ ಅಡಗಿರುವ ನಿಂನ ಜೀವದ ಅಮೂಲ್ಯವಾದ ಸಮಾಧಾನವನ್ನು ನಮಗೆ ದಯಪಾಲಿಸು.

ಕರ್ತನಾದ ಯೇಸುವೇ! ನೀನೇ ಪರಲೋಕದಲ್ಲಿರುವ ನಂಮ ತಂದೆ.

ನೀನು ಪ್ರತ್ಯಕ್ಷವಾಗಿ ನಿಂನಂನು ತೋರಿಸುವಾಗ, ನಾವು ಸಹಾ ನಿಂನ ಸಂಗಡ, ನಿಂನ ಮಹಿಮೆಯಲ್ಲಿ, ಪ್ರಕಟವಾಗುವೆವು. ಲಯವಾದದ್ದು ನಿರ್ಲಯವಂನೂ, ಮರ್ತ್ಯವಾದದ್ದು ಅಮರತ್ವವಂನೂ ಧರಿಸುವದು. ಈಗಲು ಹೋರಾಟ ಸಂಕಟಗಳಲ್ಲಿ ನಿಂನ ಉತ್ಥಾನವಂನು ತಮಗೆ ಆದರ್ಶನೆ ಮಾಡಿ ಕೊಂಡವರೆಲ್ಲರು, ಆಗಲು ಹರ್ಷಿಸಿ, — ಮರಣವೇ! ನಿಂನ ಕೊಂಡಿಯು ಯೆಲ್ಲಿ? ಪಾತಾಳವೇ! ನಿಂನ ಜಯವು ಯೆಲ್ಲಿ? — ಯೆಂದು ಕೊಂಡಾಡುವರು. ಆದರೆ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ನಮಗೆ ಜಯವಂನು ಕೊಡುವ ದೇವರಿಗೆ ಸ್ತೋತ್ರವು. ಆಮೆನ್.

Oder (ಅಥವಾ):

ನಂಮ ತಂದೆಯಾದ ದೇವರೇ! ನೀನು ನಿಂನ ಮಗನಾದ ಯೇಸು ಕ್ರಿಸ್ತನಂನು ಸತ್ತವರೊಳಗಿಂದ ಯೆಬ್ಬಿಸಿ, ಮಹಿಮೆ ಮಾನಗಳ ಕಿರೀಟವನ್ನು ಆತನ ಮೇಲೆ ಇಟ್ಟು, ಆತನು ಯುಗಾಂತರಗಳಿಗೆ ತನ್ನ ಸಭೆಯ ಜೀವವುಳ್ಳ ತಲೆಯೂ ಕರ್ತನೂ ಆಗಿರುವ ಹಾಗೆ, ಆತನನ್ನು ಪರಲೋಕದಲ್ಲಿ, ನಿಂನ ಬಲಪಾರ್ಶ್ವದಲ್ಲಿ ಕುಂಡ್ರಿಸಿದ್ದರಿಂದ, ನಿನಗೆ ಅತ್ಯಧಿಕವಾದ ಸ್ತುತಿ ಉಂಟಾಗಲಿ. ಕ್ರಿಸ್ತ ಯೇಸುವಿನಲ್ಲಿ ನೀನು ನಮಗೆ ಮಾಡಿದ ನಿಂನ ದೊಡ್ಡ ಪ್ರೀತಿಯಂನು ಹೃದಯದಿಂದ ಕೊಂಡಾಡುತ್ತೇವೆ. ಯಾಕಂದರೆ ನಾವು ಅಕ್ರಮಗಳಲ್ಲಿ ಸತ್ತವರಾಗಿದ್ದಾಗ, ನೀನು ನಂಮಂನು ಆತನ ಸಂಗಡ ಬದುಕಿಸಿ, ಕೂಡಾ ಯೆಬ್ಬಿಸಿ, ಪರಲೋಕದವುಗಳಲ್ಲಿ ಕುಂಡ್ರಿಸಿದ್ದಿ.

ಸತ್ತವನಾಗಿದ್ದು, ಈಗ ಯುಗಯುಗಾಂತರಗಳ ವರೆಗೂ ಬದುಕುವ ಕರ್ತನಾದ ಯೇಸುವೇ! ನಿನಗೆ ಸದಾ ಸ್ತುತಿ ಸ್ತೋತ್ರ ಉಂಟಾಗಲಿ. ನಾನು ಬದುಕುತ್ತೇನೆ, ನೀವು ಸಹಾ ಬದುಕುವಿರಿ—ಯೆಂದು, ಈಹೊತ್ತು ನಮಗೆ ಕೂಗಿ ಹೇಳುವದರಿಂದ, ನೀನು ನಂಮಂನು ನಿಂನ ಕೂಡಾ ನಿಜವಾದ ಜೀವಕ್ಕೆ ಯೆಬ್ಬಿಸಿ, ನಿಂನ ದೊಡ್ಡ ಜಯದಲ್ಲಿಯೂ, ನಿಂನ ಮರಣ ಪುನರುತ್ಥಾನಗಳ ಮಹಿಮೆಯುಳ್ಳ ಯೆಲ್ಲಾ ಫಲಗಳಲ್ಲಿಯೂ ವಿಶ್ವಾಸದಿಂದ ಪಾಲುಗಾರರಾಗ ಮಾಡುತ್ತೀ. ನಾವು ಇಂನು ಮುಂದೆ ನಮಗೆ ನಾವೇ ಬದುಕದೆ ನಮಗೋಸ್ಕರ ಸತ್ತು ಯೆದ್ದ ನಿನಗೂ ಬದಕುವ ಹಾಗೆ, ಕೃಪೆ ಕೊಡು.—ಯೆಚ್ಚರವಾಗು, ನಿದ್ರೆ ಮಾಡುವವನೇ! ಸತ್ತವರೊಳಗಿಂದ ಯೇಳು. ಕ್ರಿಸ್ತನು ನಿನಗೆ ಪ್ರಕಾಶವಾಗುವನೆಂಬ ಕೃಪೆಯ ಕರುವಿಕೆಯಂನು ಸಕಲ ಮನುಷ್ಯರಿಗೆ ಮುಟ್ಟಿಸು.

ಯೇಸು ಕ್ರಿಸ್ತನ ತಂದೆಯೂ, ಆತನಲ್ಲಿ ನಂಮ ತಂದೆಯೂ ಆಗಿರುವಾತನೇ! ನಿತ್ಯ ಒಡಂಬಡಿಕೆಯ ರಕ್ತದಿಂದ ಕುರಿಗಳ ದೊಡ್ಡ ಕುರುಬನಾಗಿರುವ, ನಂಮ ಕರ್ತನಾದ, ಯೇಸುವಂನು ಸತ್ತವರೊಳಗಿಂದ ತಿರುಗಿ ಬರ ಮಾಡಿದ ಸಮಾಧಾನದ ದೇವರೇ! ನಿಂನ ಚಿತ್ತವಂನು ಮಾಡುವ ಹಾಗೆ, ನಂಮಂನು ಸಕಲ ಸತ್ಕ್ರಿಯಗಳಲ್ಲಿ ಸಂಪೂರ್ಣರಾಗ ಮಾಡಿ, ನಿನ್ನ ಸಮ್ಮುಖದಲ್ಲಿ ಸರಿ ಬೀಳುವಂಥಾದನ್ನು ನಂಮಲ್ಲಿ, ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖಾಂತರ, ಉಂಟು ಮಾಡು. ಆತನಿಗೆ ಯುಗಯುಗಾಂತರಗಳ ವರೆಗೂ ಘನ ಉಂಟಾಗಲಿ. ಆಮೆನ್.

## Himmelfahrtsgebete (ಕ್ರಿಸ್ತನ ದಿವಾರೋಹಣ).

ಕರ್ತನಾದ ಕ್ರಿಸ್ತನೇ! ನೀನೇ ಸಕಲ ಮನುಷ್ಯರ ಒಬ್ಬನಾದ ರಕ್ಷಕನು. ನೀನು ನಂಮ ರಕ್ಷಣೆಯ ಕೆಲಸವನ್ನು ತೀರಿಸಿದ ಮೇಲೆ, ಪರಲೋಕಕ್ಕೆ ಯೇರಿ ಹೋಗಿ, ನಿನ್ನ ತಂದೆಯ ಬಲಪಾರ್ಶ್ವದಲ್ಲಿ ಕೂತು ಕೊಂಡಿದ್ದಿ. ನಾವು ವಿಶ್ವಾಸದಿಂದ ನಿನ್ನ ಕಡೆಗೆ ನೋಡಿ, ನಿನ್ನ ಮಹಿಮೆಯ ದೆಶೆಯಿಂದ ಸಂತೋಷ ಪಡುತ್ತೇವೆ. ನಾವು ನಮ್ಮ ಹೃದಯಗಳಂನು ಈ ಲಯವಾಗುವ ಲೋಕದ ಕಡೆಯಿಂದ ತಿರುಗಿಸಿ, ಭೂಮಿಯ ಸಂಬಂಧವಾದದ್ದೆಲ್ಲಾ ಅಲ್ಪವೆಂದೆಣಿಸಿ ಕೊಂಡು, ನಿನ್ನನ್ನೂ ನಿತ್ಯವಾದ ಆಸ್ತಿಯನ್ನೂ ದೊಡ್ಡ ಅಪೇಕ್ಷೆಯಿಂದ ಬಯಿಸುವ ಹಾಗೆ, ನಮಗೆ ನೀನೇ ಕೃಪೆ ಕೊಡು. ನಾವು ನಮ್ಮ ಮನಸ್ಸಿನಿಂದ ಪರಲೋಕದಲ್ಲಿ ವಾಸ ಮಾಡಿ, ಭೂಲೋಕದವುಗಳನ್ನಲ್ಲಾ, ಮೇಲಿನವುಗಳಂನೇ ಚಿಂತಿಸುವ ಹಾಗೆ, ದಯ ಮಾಡು. ಮತ್ತು ಕಡೇಲಿ ಈ ಬಡ ಜೀವ ತೀರಿದ ಮೇಲೆ, ನಾವು ನಮ್ಮ ತಲೆಯೂ, ಅರಸನೂ ಆಗಿರುವ ನಿನ್ನ ಬಳಿಯಲ್ಲಿ ವಾಸ ಮಾಡಿ, ನಿನ್ನ ಮಹಿಮೆಯನ್ನು ಯುಗಯುಗಾಂತರಗಳ ವರೆಗೂ ದೃಷ್ಟಿಸುವ ಹಾಗೆ ನಮ್ಮ ಪ್ರಾಣಗಳನ್ನು ನಿನ್ನ ಬಳಿಗೆ ಯೇರಿಸಿ, ನಿನ್ನ ಪರಲೋಕದ ರಾಜ್ಯದಲ್ಲಿ ಸೇರ ಕೊಡು. ಆಮೆನ್.

Oder (ಅಥವಾ):

ಸರ್ವಶಕ್ತಿವುಳ್ಳ ದೇವರೇ! ಈ ಹೊತ್ತಿನ ದಿವಸದಲ್ಲಿ ನಿಂನ ಒಬ್ಬನಾಗಿ ಹುಟ್ಟಿದ ಮಗನಾದ ನಂಮ ರಕ್ಷಕನು ಪರಲೋಕಕ್ಕೆ ಯೇರಿ ಹೋದನು. ನಾವು ಸಹಾ ಇಂದೂ ಧ್ಯಾನವುಳ್ಳ ಪ್ರಾರ್ಥನೆಯಿಂದಲೂ,

ಜೀವ ಉಳ್ಳ ವಿಶ್ವಾಸದಿಂದಲೂ, ಭಕ್ತಿಯುಳ್ಳ ನಡತೆಯಿಂದಲೂ, ನಿತ್ಯವಾಸ ಸ್ಥಳಕ್ಕೆ ಮಾಡುವ, ಮನಃಪೂರ್ವಕವಾದ, ಬಯಿಕೆಯಿಂದಲೂ, ಅಂದೂ ಭಾಗ್ಯವಾದ ಮರಣದಿಂದಲೂ, ಪುನರುತ್ಥಾನದಿಂದಲೂ, ಯೇಸು ಕ್ರಿಸ್ತನ ನಿಮಿತ್ತ, ಆತನ ಸಂಗಡ ಪರಲೋಕಕ್ಕೆ ಯೇರುವ ಹಾಗೆ, ದಯ ಮಾಡು. ಆಮೆನ್.

Oder (ಅಥವಾ):

ಕರ್ತನಾದ ಯೇಸು ಕ್ರಿಸ್ತನೇ! ನೀನು ಉನ್ನತಕ್ಕೆ ಯೇರಿ, ಪರಲೋಕದವನಾದ ನಿನ್ನ ತಂದೆಯ ಬಲಪಾರ್ಶ್ವದಲ್ಲಿ ಕೂತು ಕೊಂಡಿದ್ದಿ. ಪಾಪ ಮರಣದ ಬಂಧನೆಗಳಿಂದ ನೀನು ನಮ್ಮನ್ನು ಬಿಡುಗಡೆ ಮಾಡಿ, ನಮ್ಮ ರಕ್ಷಣೆಯ ವೈರಿಗಳನ್ನೆಲ್ಲಾ ಜೈಸಿದ್ದರಿಂದ, ನಿನ್ನನ್ನು ಮಹಾ ಸಂತೋಷದಿಂದ ಸ್ತುತಿಸುತ್ತೇವೆ. ನಿನಗೆ ಪರಲೋಕಗಳಲ್ಲಿಯೂ, ಭೂಮಿಯಲ್ಲಿಯೂ ಯೆಲ್ಲಾ ಅಧಿಕಾರ ಕೊಟ್ಟದೆ. ಆದದರಿಂದ ನಿನ್ನ ಸಭೆಗೆ ಆಶ್ರಯವಾಗಿದ್ದು, ಅದನ್ನು ಲೋಕದ ಅಂತ್ಯಗಳ ಪರಿಯಂತರಕ್ಕೂ ವಿಸ್ತರಿಸು. ನಿನ್ನ ವಿಶ್ವಾಸಿಗಳನ್ನು ಸಂತೈಸಿ, ಪರಿಶುದ್ಧ ಮಾಡು. ನಿನ್ನ ವಾಕ್ಯದಿಂದಲೂ, ನಿನ್ನ ಆತ್ಮದಿಂದಲೂ ನಮ್ಮಲ್ಲಿ ನೆಲೆಗೊಂಡು, ನಿನ್ನ ವಾಗ್ದತ್ತದ ಪ್ರಕಾರ, ನೀನು ಇನ್ನು ಮುಂದೆ ನಿನ್ನ ಮಹಿಮೆಯಲ್ಲಿ ತಿರಿಗಿ ಪ್ರತ್ಯಕ್ಷವಾಗಿ, ನಮ್ಮನ್ನು ನಿನ್ನ ನಿತ್ಯ ರಾಜ್ಯದಲ್ಲಿ ಸೇರಿಸಲಿಕ್ಕೆ ಕರಕೊಳ್ಳುವ ತನಕ, ನಮ್ಮ ಸಂಗಡ ಇರು. ಆಮೆನ್.

## Pfingstgebete (ಪಂಚಾಶತಿನ ಹಬ್ಬ).

ಓ ದೇವರೇ! ನೀನು ನಿನ್ನ ವಿಶ್ವಾಸಿಗಳ ಹೃದಯಗಳನ್ನು ಪರಿಶುದ್ಧಾತ್ಮನ ಬೆಳಕಿನಿಂದ ಬೋಧಿಸಿ, ಕ್ರೈಸ್ತಸಭೆಯನ್ನು ಕೂಡಿಸಿದಿ. ನಾವು ಅದೇ ಆತ್ಮನಲ್ಲಿ ಸುಮನಸ್ಸುಳ್ಳವರಾಗಿ, ಆತನ ಆದರಣೆಯಿಂದ ಯಾವಾಗಲು ಸಂತೋಷ ಹೊಂದುವ ಹಾಗೆಯೂ, ಆತನು ಕೃಪೆಯಾಗಿ ತಂನ ಶಕ್ತಿಯಿಂದಲೂ, ಸಹಾಯದಿಂದಲೂ ನಂಮ ಹೃದಯಗಳಂನು ಶುಚಿ ಮಾಡಿ, ಯೆಲ್ಲಾ ಕೇಡಿಗೆ ತಪ್ಪಿಸಿ, ಕಾಪಾಡುವ ಹಾಗೆಯೂ, ನಿಂನ ಸಭೆಯ ವೈರಿಗಳ ಉಪಾಯದಿಂದ ಯಾವ ಪ್ರಕಾರವಾದರೂ ಹಾದಿ ತಪ್ಪದೆ, ಸಕಲ ಸತ್ಯದಲ್ಲಿ ನಡಿಸಲ್ಪಡುವ ಹಾಗೆಯೂ, ನಿನ್ನ ಮಗನಾಗಿರುವ ನಂಮ ಪ್ರಿಯ ಕರ್ತನಾದ ಯೇಸು ಕ್ರಿಸ್ತನು ಕೃಪೆಯಾಗಿ ವಾಗ್ದತ್ತ ಕೊಟ್ಟಂತೆ, ನಮಗೆ ದಯಪಾಲಿಸು. ಆತನು ನಿಂನ ಸಂಗಡ, ಅದೇ ಪರಿಶುದ್ಧಾತ್ಮನ ಐಕ್ಯದಲ್ಲಿ, ನಿಜವಾದ ದೇವರಾಗಿ ಯುಗಯುಗಾಂತರಗಳ ವರೆಗೂ ಬಾಳುತ್ತಾ ಆಳುತ್ತಾ ಇದ್ದಾನೆ. ಆಮೆನ್.

Oder (ಅಥವಾ):

ಅಂತಃಕರಣವುಳ್ಳ ದೇವರೇ! ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ! ವಾಗ್ದತ್ತವಾದ ಆದರಿಕನಂನು ನೀನು ಲೋಕಕ್ಕೆ ಕಳುಹಿಸಿ, ಪರಲೋಕದಲ್ಲಿ ನಮಗಿರುವ ಬಾಧ್ಯದ ಸಂಚಕಾರವಾಗಿ ನಮಗೆ ಕೊಟ್ಟದರಿಂದ, ನಿಂನಂನು ಸ್ತುತಿಸುತ್ತೇವೆ.

ಯೇಸು ಕ್ರಿಸ್ತನಲ್ಲಿರುವ ಸಭೆಯ ಮೇಲೆ ನಿಂನ ಆತ್ಮವಂನು ಇನ್ನು ಹೆಚ್ಚು ಐಶ್ವರ್ಯವಾಗಿ ಹೊಯಿ. ನಿಂನ ರಾಜ್ಯವಂನು ನಂಮ ಹೃದಯ

ಗಳಲ್ಲಿ ಸ್ಥಾಪಿಸು. ನಂಮಂನು ಕತ್ತಲೆಯೊಳಗಿಂದ ಬೆಳಕಿಗೂ, ಪಾಪದ ದಾಸತ್ವದೊಳಗಿಂದ ನಿಂನ ಮಕ್ಕಳ ಮಹಿಮೆಯುಳ್ಳ ಬಿಡುಗಡೆಗೂ ನಡಿಸು.

ಹೌದು, ಪರಿಶುದ್ಧಾತ್ಮನೇ! ಬಾ. ನಂಮೆಲ್ಲರಿಗೆ ಈ ಹೊತ್ತು ನಿಂನ ಸಾಕ್ಷಿ ಕೊಡು. ಯೆಲ್ಲಾ ವಿಶ್ವಾಸಿಗಳಂನು ನಿಂನ ವರಗಳಿಂದ ಐಶ್ವರ್ಯವಾಗಿ ಆಶೀರ್ವದಿಸು. ಯೆಲ್ಲಾ ಖೇದವಾದ ಹೃದಯಗಳಂನು ಪೂರ್ಣ ನಿಶ್ಚಯಕ್ಕೆ ತಾ. ಪಾಪಗಳಲ್ಲಿ ನಿದ್ರೆ ಮಾಡಿ, ಸತ್ತವರಾಗಿರುವವರಂನು ಹೊಸ ಜೀವಕ್ಕೆ ಯೆಬ್ಬಿಸು. ನಂಮ ಅಶಕ್ತಿಗೆ ಬಲವಾದ ಆಧಾರವಾಗಿ, ನಾವು ಶೋಧನೆಯಲ್ಲಿ ಬೀಳದ ಹಾಗೆ, ಯೆಚ್ಚರವಾಗಿದ್ದು, ಪ್ರಾರ್ಥಿಸುವದಕ್ಕೆ ನಮಗೆ ಸಹಾಯ ಮಾಡು. ವಿಶ್ವಾಸ, ಪ್ರೀತಿ, ವಿಧೇಯತ್ವ, ತಾಳ್ಮೆಗಳಲ್ಲಿ ನಮ್ಮನ್ನು ತ್ರಾಣಗೊಳ್ಳಿಸು. ಕ್ರಿಸ್ತನಂನು ನಂಮಲ್ಲಿ ಮಹಿಮೆ ಪಡಿಸು. ನಾವು ಆತನ ಶರೀರದಲ್ಲಿ ಅವಯವಗಳೂ, ದೇವರ ಮಕ್ಕಳೂ ಆಗಿದ್ದೇವೆಂಬ ಸಾಕ್ಷಿಯಂನು ನಂಮ ಆತ್ಮಕ್ಕೆ ಕೊಡು.

ಇಂನು ಕತ್ತಲೆಯಲ್ಲಿಯೂ, ಮರಣದ ನೆರಳಿನಲ್ಲಿಯೂ ಕೂತು ಕೊಳ್ಳುವವರ ಮೇಲೆ ನಿಂನ ಪ್ರಕಾಶವುಳ್ಳ ಬೆಳಕಂನು ಉದಯಿಸ ಮಾಡು. ನಿಂನ ಮಹತ್ವಗಳು ಸಕಲ ಭಾಷೆಗಳಲ್ಲಿ ಸಾರಲ್ಪಡುವ ಪರಿಯಂತರ, ನಿಂನ ಸುವಾರ್ತೆ ದೂರವಾಗಿ ಬಲದಿಂದ ಹೇಳಿಸು. ಅನುದಿನ ಯೇಸು ಕ್ರಿಸ್ತನ ಹೆಸರಿನಲ್ಲಿ ವಿಶ್ವಾಸಿಸುವವರಂನು ಕೂಡಿಸು. ಯೆಲ್ಲಾ ಸಭೆಗಳಲ್ಲಿ ನೀನೇ ಅನ್ಯೋನ್ಯದ ಬಂಧವಾಗಿರು. ನಂಮೆಲ್ಲರಂನು ವಿಶ್ವಾಸದ ಐಕ್ಯವಂನೂ, ದೇವರ ಮಗನ ತಿಳಿಯುವಿಕೆಯ ಐಕ್ಯವಂನೂ, ಮುಟ್ಟ

ನಡಿಸು. ಯಾಕಂದರೆ ನೀನು ನಂಮಂನು ಒಂದೇ ಶರೀರವಾಗಿರುವದಕ್ಕೆ ಕರೆದಿದ್ದಿ. ಈ ಪ್ರಕಾರ ಒಬ್ಬನೇ ಕುರುಬನೂ, ಒಂದೇ ಮಂದೆಯೂ ಯೆಂಬ ವಾಗ್ದತ್ತದ ಮಾತು ಸಂಪೂರ್ಣವಾಗಿ, ದೇವರು ಯೆಲ್ಲವುಗಳಲ್ಲಿ ಯೆಲ್ಲಾವಾಗಿರುವ ಪರಿಯಂತರಕ್ಕೂ ಮಾಡು. ಆಮೆನ್.

---

### Dreieinigkeitsfest (ತ್ರಿಯೇಕತ್ವದ ಹಬ್ಬ).

ಅತ್ಯಧಿಕವಾಗಿ ಸ್ತುತಿಸ ತಕ್ಕ ಪರಿಶುದ್ಧ ದೇವರೇ! ನೀನು ನಿಂನ ಸ್ವಭಾವದ ದೊಡ್ಡ ಮರ್ಮವಂನು ನಮಗೆ ಇಂಥಾ ಕೃಪೆಯಿಂದ ಪ್ರಕಟ ಮಾಡಿ, ನೀನೇ ತಂದೆ, ಮಗ, ಆತ್ಮನೆಂಬ ಒಬ್ಬನೇ ನಿಜವಾದ ದೇವರಾಗಿರುತ್ತಿ; ಮತ್ತು ಇಂಥವನಾಗಿ ಆರಾಧನೆ ಮಾಡಿಸಿಕೊಳ್ಳ ಮೆಚ್ಚುತ್ತಿ—ಯೆಂಬ ಸದ್ವಿಶ್ವಾಸವಂನು ತಿಳಕೊಂಡು, ಅರಿಕೆ ಮಾಡ ಬೋಧಿಸಿದ್ದರಿಂದ, ನಿನಗೆ ಮನಃಪೂರ್ವಕವಾಗಿ ಸ್ತೋತ್ರ ಮಾಡುತ್ತೇವೆ. ನಾವು ಯಾವ ಪ್ರಕಾರವಾದರೂ ತಪ್ಪದ ಹಾಗೆ, ಈ ದಿವ್ಯ ತಿಳುವಿಕೆಯಂನು ನಂಮಲ್ಲಿ ಸ್ಥಿರ ಮಾಡಿ, ಕಾಪಾಡ ಬೇಕೆಂದು—ನಿಂನಂನು ಬೇಡಿ ಕೊಳ್ಳುತ್ತೇವೆ. ಮತ್ತು ಓ ನಿಜವಾದ, ನಿತ್ಯದೇವರೇ! ನಿಂನ ದೊಡ್ಡ ಅಂತಃಕರಣದ ಪ್ರಕಾರ, ನೀನು ಹ್ಯಾಗೆ ನಂಮಂನು ನಿರ್ಮಾಣ ಮಾಡಿ, ರಕ್ಷಿಸಿ, ಪರಿಶುದ್ಧ ಮಾಡಿದ್ದಿಯೋ ಹಾಗೆಯೇ ನಮಗೆ ಇಂನು ಮುಂದೆ ನಿಂನ ಪ್ರೀತಿ, ಕೃಪೆ, ಐಕ್ಯ ಅನುಭವಿಸ ಕೊಡು. ನಾವು ಇಲ್ಲಿ ವಿಶ್ವಾಸಿಸಿದ್ದನ್ನ ಅಲ್ಲಿ ದೃಷ್ಟಿಸಿ, ಯೆಲ್ಲಾ ದೂತರೂ, ಆಯಲ್ಪಟ್ಟವರೂ ಸಹಿತವಾಗಿ ನಿತ್ಯ, ತ್ರಿಯೇಕನಾದ ದೇವರಾಗಿರುವ ನಿಂನಂನು ಯುಗ ಯುಗಾಂತರ

ಗಳ ವರಿಗೂ ಸ್ತುತಿಸಿ ಕೊಂಡಾಡುವ ಹಾಗೆ, ಕಡೇಲಿ ನಂಮಂನು ನಿನ್ನ ಬಳಿಗೆ ನಿಂನ ನಿತ್ಯ ಮಹಿಮೆಯ ರಾಜ್ಯದಲ್ಲಿ ಅಂಗೀಕರಿಸು. ಆಮೆನ್.

---

## Gedenktag der Gründung einer Station.

(ವೊಂದು ಸಭೇಸ್ಥಳದ ಸ್ಥಾಪನೆಯಂನು ನೆನಸುವ ದಿನ.)

(Auf den nächstfolgenden Sonntag zu feiern.)

ಕರ್ತನಾದ ದೇವರೇ! ಪರಲೋಕದ ತಂದೆಯೇ! ನೀನು ನಿಂನ ವಾಕ್ಯದಿಂದಲೂ, ನಿಂನ ಪರಿಶುದ್ಧಾತ್ಮದಿಂದಲೂ ನಂಮೊಳಗೆ—ವರುಷಗಳ ಕೆಳಗೆ ವೊಂದು ಸಭೆಯಂನು ಸ್ಥಾಪಿಸಿ, ಅದಕ್ಕೆ ಈವರಿಗೂ ನಂಬಿಕೆಯಾಗಿ ಆಶ್ರಯ ಕೊಟ್ಟು, ನಿಂನ ಸುವಾರ್ತೆಯಂನೂ, ಸಭೆಯ ದೇವಾರಾಧನೆಯ ಈ ಸ್ಥಳವಂನೂ, ನಮಗೆ ಕೃಪೆಯಾಗಿ ಉಳಿಸಿದ್ದರಿಂದ, ನಿಂನಂನು ಸ್ತುತಿಸುತ್ತೇವೆ. ನಂಮಂನು ನಡಿಸಿ, ನೀರು ಹಾಕಿದ ದಿವಸಗಳು ಯೆಷ್ಟೋ? ಆದರೂ ಫಲಗಳು ಸ್ವಲ್ಪ ಸ್ವಲ್ಪ. ನಾವು ನಿನಗೆ ಯೆರಗಿ—ನಂಮ ಅಲಸ್ಯ ಅಪನಂಬಿಕೆಗಳಂನೆಲ್ಲಾ ನಮಗೆ ಮಂನಿಸಿ, ನಂಮ ನಡತೆಯಂನೂ, ನಂಮ ಪ್ರೀತಿಯಂನೂ, ನಿಂನ ಪ್ರೀತಿಯ ಮಗನಾದ ಯೇಸು ಕ್ರಿಸ್ತನ ರಕ್ತದಿಂದ ಪಾಸ ಮಾಡ ಬೇಕೆಂದು—ಬಿಂನೈಸುತ್ತೇವೆ. ನಂಮಂನೂ ನಂಮ ಮಕ್ಕಳಂನೂ ಸದ್ವಿಶ್ವಾಸದ ಸ್ಥಿರವಾದ ಅಸ್ತಿವಾರದಲ್ಲಿಯೂ, ಪರಿಶುದ್ಧರ ಅನ್ಯೋನ್ಯದಲ್ಲಿಯೂ ಕಾಪಾಡ ಬೇಕೆಂದು ಬೇಡುತ್ತೇವೆ. ನಿನ್ನ ಮಂದೆಯನ್ನು ನೆಟ್ಟಗೆ ಮೇಯಿಸಿ, ನಿನ್ನ ವಾಕ್ಯವಂನು ಸರಿಯಾಗಿ ಹಂಚಿ, ನಿನ್ನ ನಂಬಿಕೆಯುಳ್ಳ ಉಗ್ರಾಣ

ದವರಾಗಿ, ನಂಮ ಪ್ರಾಣಗಳ ರಕ್ಷಣೆಗೆ ಬೇಕಾದವುಗಳಲ್ಲಿ ಯೇನಾದರು ಸಹೆಗೆ ಹಿಂದೆಗೆಯದೆ, ಇರುವ ಶಕ್ತಿಯುಳ್ಳ ಬಾಧಕರನ್ನು ಯಾವಾಗಲು ಕಾದು. ಶಿಷ್ಯರು — ನಿನ್ನ ವಾಕ್ಯವನ್ನು ಸಂತೋಷದಿಂದ ಕೇಳುವವರು ಮಾತ್ರವಲ್ಲಾ, ಅದರ ಪ್ರಕಾರ ಮಾಡುವವರು ಆಗುವ ಹಾಗೆ, ಅವರೆಲ್ಲರ ಹೃದಯಗಳನ್ನು ನಿನ್ನ ಕೃಪೆಯಿಂದ ಆಳು. ನಿನ್ನ ರಾಜ್ಯವನ್ನು ಸಕಲ ಸ್ಥಳಗಳಲ್ಲಿ ಹೆಚ್ಚಿಸು; ಈ ಸ್ಥಳದಲ್ಲಿ ಆಗುವ ನಿನ್ನ ವಾಕ್ಯದ ಪ್ರಸಂಗ ಆಶೀರ್ವದಿಸು. ನಂಮ ಮನೆಗಳಲ್ಲಿ ಸುಧಾ ನಿಂನ ವಾಕ್ಯವು ಐಶ್ವರ್ಯವಾಗಿ ವಾಸ ಮಾಡಲಿ. ಕಡೇಲಿ ನಂಮೆಲ್ಲರಂನು ಪರಲೋಕಗಳಲ್ಲಿರುವ ನಿಂನ ಪರಿಶುದ್ಧ ಸ್ಥಳದಲ್ಲಿ ಶೇರಿಸಿ, ನಾವು ಅಲ್ಲಿ ಪರಿಶುದ್ಧತ್ವದ ಪ್ರಿತೆಯಲ್ಲಿ ನಿನಗೆ ಸೇವೆ ಮಾಡಿ, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ನಿಂನ ಮಹಿಮೆಯಂನು ದೃಷ್ಟಿಸ ಕಾದು. ಆಮೆನ್.

---

## Beilage B.

### 1. Um Ausbreitung des Wortes Gottes.

(ದೇವರ ರಾಜ್ಯದ ಪ್ರಸಿದ್ಧಿಗೋಸ್ಕರ ಮಾಡ ತಕ್ಕಂಥಾ ವಿಜ್ಞಾಪನೆ.)

ಅಂತಃಕರಣವುಳ್ಳ ದೇವರೇ, ನೀನು ಯೆಲ್ಲಾ ಮನುಷ್ಯರಂನು ನಿರ್ಮಾಣ ಮಾಡಿ, ನಿನ್ನ ನಿರ್ಮಾಣಗಳಲ್ಲಿ ವೊಂದಕ್ಕಾದರೂ ಹಾಗೆ ಮಾಡುವದಿಲ್ಲಾ. ಪಾಪಿಷ್ಟನು ಸಾಯುವದು ಅಲ್ಲಾ, ಅವನು ಮನಸಾಂತರ ಪಟ್ಟು ಬದುಕುವದೇ, ನಿಂನ ಮನಸ್ಸು ಉಂಟು. ಯೆಲ್ಲಾ ಯೆಹೂ

ದ್ವರಿಗೂ, ಮುಸಲಮಾನರಿಗೂ, ವಿಗ್ರಹಾರಾಧಕರಿಗೂ, ಅವಿಶ್ವಾಸಿಗಳಿಗೂ, ಅಬದ್ಧ ನಂಬುವವರಿಗೂ, ಕರುಣೆ ಮಾಡಿ, ಅವರಂನು ಯೆಲ್ಲಾ ಅಜ್ಞಾನದಿಂದಲೂ, ಹೃದಯದ ಕಠಿಣತ್ವದಿಂದಲೂ; ನಿಂನ ವಾಕ್ಯಕ್ಕೆ ಮಾಡುವ ಉದಾಸೀನದಿಂದಲೂ, ತಪ್ಪಿಸು. ಕೃಪೆಯುಳ್ಳ ದೇವರೇ ಅವರು ಸತ್ಯವಾದ ಇಸ್ರಾಯೇಲಿನ ಉಳಿದವರ ಸಂಗಡ ರಕ್ಷಣೆ ಹೊಂದಿ, ನಿನ್ನ ಸಂಗಡಲೂ, ಪರಿಶುದ್ಧಾತ್ಮನ ಸಂಗಡಲೂ, ಒಬ್ಬನಾದ ದೇವರಾಗಿ ಯುಗ ಯುಗಾಂತರಕ್ಕೂ ಬಾಳುತ್ತಾ ಇರುವ, ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ, ಒಬ್ಬನೇ ಕುರುಬನ ಕೈಯ ಕೆಳಗೆ, ಒಂದೇ ಮಂದೆ ಆಗುವ ಹಾಗೆ, ಅವರಂನು ನಿಂನ ಮಂದೆಗೆ ತಿರುಗಿಸು. ಆಮೆನ್.

Oder (ಅಥವಾ):

ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ, ನೀನು ನಿನ್ನ ಮಗನ ಮುಖದಿಂದ, ನಾವು ನಿನ್ನ ಮಕ್ಕಳಾಗಿ ಆತನಲ್ಲಿ ಜೀವವಂನೂ ಸಂಪೂರ್ಣತ್ವವಂನೂ ಹೊಂದುವದಕ್ಕೆ, ನಮಗೆ ಅಧಿಕಾರವಂನು ಕೊಟ್ಟ ಕಾರಣ, ನಿಂನಂನು ಸ್ತುತಿಸುತ್ತೇವೆ. ಯೆಲ್ಲಾ ಬುದ್ಧಿಯಂನು ಮೀರುವ ನಿಂನ ಸಮಾಧಾನವು ನಿಂನ ಮಗನ ಸಭೆಯ ಕಡೆಯಿಂದ ಜಗತ್ತಿಗೆಲ್ಲಾ ಹರಡ ಮಾಡು. ಯೆಷ್ಟು ಜನಾಂಗಗಳಿಗೆ ನಿಂನ ಕೃಪೆಯ ಬೆಳಕು ಇನ್ನು ಇಲ್ಲಾ. ಆದದರಿಂದ ನಿಂನ ವಾಕ್ಯ ಪ್ರಸಿದ್ಧಿಸುವ ಕೆಲಸದಲ್ಲಿ ನಾವು ಹೆಚ್ಚು ಹೆಚ್ಚಾಗುವ ಆಸಕ್ತಿಯಿಂದ ಕೈ ಹಾಕಿ, ಮನಃಪೂರ್ವಕವಾದ ವಿಜ್ಞಾಪನೆಗಳಿಂದಲೂ, ನಂಮ ಕೈಗಳಂನು ಹರುಷವಾಗಿ ಬಿಚ್ಚುವದರಿಂದಲೂ, ನಿನಗೆ ನಂಮ ಸ್ತೋತ್ರದ ಕಾಣಿಕೆಗಳಂನು ಅರ್ಪಿಸುವ ಹಾಗೆ,

ನಂಮಂನು ಯೆಬ್ಬಿಸು. ನಿಂನ ರಕ್ಷಣ್ಯದ ಸುವಾರ್ತೆಕರ ಸೇವೆಯಿಂದ ನಿಂನ ರಾಜ್ಯದ ಮೇರೆಗಳು ಹೆಚ್ಚು ಹೆಚ್ಚಾಗಿ ವಿಸ್ತಾರವಾಗುವ ಹಾಗೆ, ಅವರ ಸಂಗಡ ಇರು; ಅವರಂನು ಹೊರಗೆ ಒಳಗೆ ಪರಿಶುದ್ಧ ಮಾಡಿ, ನಿನ್ನ ಮಾನಕ್ಕೆ ಯೋಗ್ಯವಾದ ಸಾಹಿತ್ಯಗಳಾಗ ಮಾಡು. ನಿನ್ನ ಹೆಸರನ್ನು ಇನ್ನು ಅರಿಯದ ಜನಾಂಗಗಳು ನೀನು ಕಳುಹಿಸಿದವರನ್ನು ಸಂತೋಷ ದಿಂದ ಅಂಗೀಕರಿಸುವ ಹಾಗೆ, ಅವುಗಳನ್ನು ಸಿದ್ಧ ಮಾಡು. ನಿನ್ನ ವಾಕ್ಯಕ್ಕೆ ಯೆಲ್ಲೆಲ್ಲಿಯೂ ತೆರದ ಬಾಗಲುಗಳನ್ನು ಕೊಟ್ಟು, ನೇಮಿಸಿದ ಫಲವಂನು ಫಲಿಸ ಮಾಡು. ಯೆಲ್ಲೆಲ್ಲಿಯು ವಿಶ್ವಾಸ ಪ್ರೀತಿ ಜ್ಞಾನ ತ್ರಾಣಗಳಂನು ದಯಪಾಲಿಸು. ಹೀಗೆಯೇ ಸೂರ್ಯೋದಯದಿಂದ ಅಸ್ತಮಾನದ ವರಿಗೂ, ನಿಂನ ನಾಮವು ಮಹಿಮೆ ಪಡಲಿ. ಯೆಲ್ಲಾ ನಾಲಿಗೆಗಳು — ಯೇಸು ಕ್ರಿಸ್ತನೇ ಕರ್ತನೆಂದು, ನಿಂನ ಮಾನಕ್ಕಾಗಿ ಇಂದಿನಿಂದ ಯೆಂದೆಂದಿಗೂ ಅರಿಕೆ ಮಾಡಲಿ. ಆಮೆನ್.

---

## 2. Für die Regierung.

(ಸರಕಾರಕ್ಕೋಸ್ಕರ.)

ಸರ್ವತ್ರಾಣವುಳ್ಳ ನಿರಂತರವಾದ ದೇವರೇ, ಅರಸರು ಅಧಿಪತಿಗಳು ಇವರ ಹೃದಯಗಳು ನಿಂನ ಕೈಯಲ್ಲಿ ಇರುತ್ತವೆಂದು, ನೀನು ಅವನಂನು ನೀರಿನ ಕಾಲುವೆಗಳ ಹಾಗೆ ತಿರಿಗಿಸಿ ನಡಿಸುತ್ತಿಯೆಂದು, ನಿಂನ ಪರಿಶುದ್ಧ ವಾಕ್ಯದಿಂದ ಕಲಿತಿದ್ದೇವೆ. ನಾವು ವಿನಯವಾಗಿ ನಿಂನಂನು ಬೇಡುವದೇನಂದರೆ — ನಿಂನ ಸೇವಕಳಾದ ನಂಮ ರಾಣಿಯ ಹೃದಯ

ವಂನೂ, ನಂಮ ಯೆಲ್ಲಾ ಅಧಿಕಾರಿಗಳ ಹಿರಿಯರ ಹೃದಯಗಳಂನೂ, ನೀನೇ ಆಳುತ್ತಿ; ಅವರು ತಂಮ ಸಕಲ ಆಲೋಚನೆ ಮಾತು ಕ್ರಿಯೆಗಳಲ್ಲಿ ಯಾವಾಗಲು ನಿಂನ ಮಾನ ನಿಂನ ಸ್ತೋತ್ರ ಹುಡುಕಿ, ತಂಮ ಜೋಕೆಗೆ ಒಪ್ಪಿಸಿದ ನಿಂನ ಪ್ರಜೆಯಂನು ಪರಿಣಾಮ ಸಮಾಧಾನ ದೇವಭಕ್ತಿಯಲ್ಲಿ ಕಾಪಾಡಲಿಕ್ಕೆ ಪ್ರಯತ್ನ ಮಾಡುವ ಹಾಗೆ, ಅವರನ್ನು ನಡಿಸ ಬೇಕು. ಇದನ್ನು ಓ ಅಂತಃಕರಣ ಉಳ್ಳ ತಂದೆಯೇ, ನಿನ್ನ ಪ್ರಿಯ ಮಗನಾದ ನಂಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತ್ಯ ದಯಪಾಲಿಸು. ಆಮೆನ್.

---

### 3. Für die Gewächse der Erde.

(ಭೂಮಿಯ ಫಲಗಳಿಗೋಸ್ಕರ.)

ಸರ್ವತ್ರಾಣ ಉಳ್ಳ ದೇವರೇ, ಅಂತಃಕರಣ ಉಳ್ಳ ತಂದೆಯೇ, ನೀನು ನಿಂನ ದಿವ್ಯ ತ್ರಾಣದಿಂದ ಯೆಲ್ಲಾವಂನು ನಿರ್ಮಾಣ ಮಾಡಿದ್ಧಿ; ಬದುಕಿ ಮಿಸುಕ್ವಾಡುವಂಥಾದೆಲ್ಲಾವಂನು ನೀನು ದಯದಿಂದ ತೃಪ್ತಿಪಡಿಸುತ್ತಿ. ನಾವು ವಿನಯವಾಗಿ ನಿಂನಂನು ಬೇಡಿ ಕೊಳ್ಳುವದೇನಂದರೆ — ನಂಮ ಹೊಲಗಳಂನು ನಿಂನ ಆಶೀರ್ವಾದದಿಂದ ಆಶೀರ್ವದಿಸು; ಪೈರು ಫಲಾದಿಗಳಿಗೆ ಹಿತವಾದ ಬಿಸಲು ಮಳೆಗಳಂನೂ, ಸುಗ್ಗಿ ಕಾಲಕ್ಕೆ ತಕ್ಕ ಹೊಳೆಯಂನೂ, ನಮಗೆ ದಯ ಮಾಡಿ; ಮನುಷ್ಯರ ಆಹಾರ ಆಧಾರಕ್ಕಾಗಿ ನೀನು ದಾನವಾಗಿ ಕೊಟ್ಟದೆಲ್ಲಾ ಕೃಪೆಯಾಗಿ ನಿಂನ ಪರಾಮರಿಕೆಯಿಂದ ಬೆಳಸಿ, ಸಲಹ ಬೇಕು. ಆದರೆ ಯೆಲ್ಲಾಕ್ಕಿಂತ ಮುಂದಾಗಿ, ನಂಮ

ರಕ್ಷಕನಾದ ಯೇಸು ಕ್ರಿಸ್ತನ ಮುಖದಿಂದ ನಾವೇ ಬಹಳ ನೀತಿ ಫಲಗಳಂನು ಫಲಿಸಿ, ನಿಂನ ದಾನಗಳಂನೆಲ್ಲಾ ನಿಂನ ಉಪಕಾರಗಳಂನು ನೆನಿಸುವಂಥ, ನಿಂನ ಕಡೆಗೆ ನೋಡುವಂಥ ಮನಸ್ಸಿನಿಂದ ಹೊಂದಿ, ಅನುಭೋಗಿಸುವ ಹಾಗೆ, ನಿಂನ ವಾಕ್ಯವಂನು ನಂಮ ಹೃದಯಗಳಲ್ಲಿ ನಾಟಿಸ ಬೇಕು. ಆಮೆನ್.

---

## 4. Um Hülfe in der Noth.

(ಆಪತ್ತಿನಲ್ಲಿ ಸಹಾಯಕ್ಕೋಸ್ಕರ.)

ಕರ್ತನೇ, ನಂಮ ದೇವರೇ, ತಂದೆಯೇ, ಅಗಾಧದಾಳಗಿಂದ ನಿಂನ ಕಡೆಗೆ ಕೂಗುತ್ತೇವೆ. ನಂಮ ಶಬ್ದವಂನು ಆಲೈಸು; ನಂಮ ವಿಜ್ಞಾಪನೆಗೆ ಕಿವಿ ಕೊಡು; ನಮಗೆ ಹತ್ತಿರುವ ಆಪತ್ತುಗಳಲ್ಲಿ ನಮಗೆ ಕೃಪೆಯಾಗಿರು. ಕರ್ತನೇ, ನೀನು ಅಕ್ರಮಗಳಂನು ಲೆಕ್ಕಕ್ಕೆ ತಂದರೆ, ಯಾರು ನಿಲ್ಲುವರು? ಆದರೆ ನಾವು ನಿಂನ ಮೇಲೆ ಭರವಸ ಇಡುತ್ತೇವೆ. ಯಾಕಂದರೆ ನಿಂನಲ್ಲಿ ಕೃಪೆ ಕ್ಷಮೆ ಬಹಳ ಉಂಟು. ಆದದರಿಂದ ನಂಮ ಮೇಲೆ ಅಂತಃಕರಣವಿಡು; ನಮಗೆ ಕಳುಹಿಸಿದ ಆಪತ್ತನ್ನು ಹಗುರಾಗ ಮಾಡು; ಕೃಪೆಯಿಂದ ಹೊಟ್ಟಿನ ನಷ್ಟ ನಮಗೆ ತಪ್ಪಿಸು; ಸಂಕಟ ಪಡುವವರಂನು ಆದರಿಸಿ, ಬಲಗೊಳಿಸಿ, ರಕ್ಷಿಸು. ಮತ್ತು ಈಗ ಕಂಣೀರಿನಿಂದ ಬಿತ್ತುವವರು ಆಗ ಉತ್ಸಾಹ ಧ್ವನಿಯಿಂದ ನಿಶ್ಚವಾಗಿ ಕೊಯ್ಯುವ ಹಾಗೆ, ಈ ಆಪತ್ತು ಉಪದ್ರಗಳಿಂದ ನಂಮ ಹೃದಯಗಳ

ನ್ನು ನಿನ ಕಡೆಗೆ ಯೆಳಕೊ. ಯೇಸು ಕ್ರಿಸ್ತನ ನಿಮಿತ್ತ ನಂಮಂನು ಆಲೈಸು. ಆಮೆನ್.

---

## 5. Im Krieg (ಯುದ್ಧ ಕಾಲದಲ್ಲಿ).

ಸರ್ವಶಕ್ತಿಯುಳ್ಳ ದೇವರೇ, ಯೆಲ್ಲಾ ಅರಸರ ಅರಸನೇ, ಯೆಲ್ಲಾ ವಂನು ನಡಿಸುವಾತನೇ, ನಿಂನ ಬಲಕ್ಕೆ ಯೆದುರಾಡುವದು ನಿರ್ಮಾಣವಾದವುಗಳಲ್ಲಿ ಶಾಂದರಿಂದಾಗದು. ಪಾಪವಂನು ಶಿಕ್ಷಿಸುವದೂ, ಮನಸಾಂತರ ಪಡುವವರಿಗೆ ಅಂತಃಕರಣ ಮಾಡುವದೂ, ನಿಂನ ಕೈಯಲ್ಲಿ ಅದೆ. ನಂಮ ವೈರಿಗಳ ಕೈಯೊಳಗಿಂದ ನಂಮಂನು ತಪ್ಪಿಸ ಬೇಕೆಂದು, ನಿಂನಂನು ವಿನಯವಾಗಿ ಬೇಡಿ ಕೊಳ್ಳುತ್ತೇವೆ. ಅವರ ಗರ್ವವನ್ನು ಮರ್ಣಿಸು; ಅವರ ಕೆಟ್ಟತನ ಮುರಿಸಿ, ಅವರ ಹೊಂಚಿಕೆಗಳಂನು ವ್ಯರ್ಥವಾಗ ಮಾಡು. ನಾವು ನಿಂನ ಆಯುಧಗಳಂನು ಧರಿಸುವವರಾಗಿ, ಯೆಲ್ಲಾ ಗಂಡಾಂತರಕ್ಕೆ ಭದ್ರವಾದ ಆಶ್ರಯ ಹೊಂದಿ, ಪ್ರಭುವೇ ಜಯವಂನು ದಯಪಾಲಿಸುವವನಾದ ನಿಂನಂನು ಯೆಂದೆಂದಿಗೂ ಕೊಂಡಾಡುವ ಹಾಗೆ, ಮಾಡು. ನಿಂನ ಪ್ರಭುವಾದ ಮಗನಾದ ನಂಮ ರಕ್ಷಕನಾದ ಯೇಸು ಕ್ರಿಸ್ತನ ಪುಣ್ಯದ ನಿಮಿತ್ತ, ನಂಮಂನು ಕೇಳು. ಆಮೆನ್.

---

## 6. Gegen Seuchen.

(ದೇಶದ ಮೇಲೆ ಸಾಂಗು ರೋಗ ಬಂದ ಕಾಲಕ್ಕೆ.)

ಓ ಸರ್ವತ್ರಾಣವುಳ್ಳ ದೇವರೇ, ನಿಂನ ಸ್ವಂತ ಪ್ರಜೆಯು ಅರಣ್ಯದಲ್ಲಿ ಮೋಶೆಗೂ ಆರೋನನಿಗೂ ತಿರಿಗಿ ಬೀಳುವಾಗ, ನೀನು ನಿಂನ ಕೋಪದಿಂದ ಅವರೊಳಗೆ ರೋಗವಂನು ಕಳುಹಿಸಿದಿ. ಮತ್ತು ಅರಸನಾದ ದಾವೀದನ ಕಾಲದಲ್ಲಿ ಜಾಡ್ಯದ ಶಿಕ್ಷೆಯಿಂದ ಯೆಪ್ಪತ್ತು ಸಾವಿರ ಜನರಂನು ಸಂಹರಿಸಿದಿ. ಆದಾಗ್ಯೂ ನಿಂನ ಅಂತಃಕರಣವಂನು ನೆನಪಿಗೆ ತಂದು, ಮಿಕ್ಕಾದವರಂನು ಉಳಿಸಿದಿ. ಈಗ ಘೋರವಾದ ರೋಗಗಳಿಗೂ, ದೊಡ್ಡ ಸಾವಿಗೂ ಪಾಳಗಾದ ಬಡ ಪಾಪಿಷ್ಠರಾದ ನಂಮ ಮೇಲೆ ಅಂತಃಕರಣ ಪಡು; ನಂಮ ಅಕ್ರಮಗಳಂನು ನೆನಸದೆ, ನಿಂನ ದಯದ ದೆಸೆಯಿಂದ, ನಿಂನ ಅಂತಃಕರಣದ ಪ್ರಕಾರವೇ, ನಂಮಂನು ನೆನಸಿಕೋ. ಮತ್ತು ಅಂದು ನೀನು ಶಾಂತಕರವಾದ ಬಲಿಯಂನು ಅಂಗೀಕರಿಸಿ, ಸಂಹಾರವಂನು ನಿಲ್ಲಿಸ ಬೇಕೆಂದು ಸಾವಿನ ದೂತನಿಗೆ ಅಪ್ಪಣೆ ಮಾಡಿದಂತೆ, ಇಂದು ನಂಮ ಕಡೆಯಿಂದ ಸಹಾ ಈ ವ್ಯಾಧಿಯಂನೂ, ಘೋರವಾದ ರೋಗವಂನೂ ತೆಗಿಯ ಬೇಕೆಂದು, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ಬೇಡಿ ಕೊಳ್ಳುತ್ತೇವೆ. ಆಮೆನ್.

## 7. Für einen Kranken (ಒಬ್ಬ ರೋಗಿಷ್ಠನಿಗೋಸ್ಕರ).

ಅಂತಃಕರಣ ಉಳ್ಳ ದೇವರೇ! ಒಬ್ಬರಿಗೋಸ್ಕರ ಒಬ್ಬರು ವಿಜ್ಞಾಪನೆ ಮಾಡಿರಿ ಯೆಂದು, ನಿನ್ನ ವಾಕ್ಯವು ನಮಗೆ ಅಪ್ಪಣೆ ಮಾಡುವ ಕಾರಣ, ನಾವು ನಮ್ಮ ಸಭೆಯಲ್ಲಿರುವ ರೋಗ ಹತ್ತಿದ ಒಬ್ಬನಿ (ಳಿ) ಗೋಸ್ಕರ ಬಿಂನಹ ಮಾಡುತ್ತೇವೆ. ಅವನು (ಆಕೆ) ತನ್ನ ಶ್ರಮೆಗಳನ್ನು ಕ್ರಿಸ್ತನ ಸದ್ಭಕ್ತರಿಗೆ ತಕ್ಕಂಥ ಸೈರಣೆ ಸಾತ್ವಿಕತ್ವಗಳಿಂದ ಘಟ್ಟಿಯಾಗಿ ತಾಳುವ ಹಾಗೆ, ತಂದೆ ಮಾಡುವ ಪ್ರಕಾರವಾದ ನಿನ್ನ ದಯವೂ, ಪರಾಮರಿಕೆಯೂ, ಯೇಸು ಕ್ರಿಸ್ತನಲ್ಲಿರುವ ನಿನ್ನ ರಕ್ಷಣೆಯೂ, ಅವನಿಗೆ (ಆಕೆಗೆ) ಬಹಳ ಆದರಣೆ ಬಲ ಕೊಡುವಂಥ ಬುಗ್ಗೆಯಾಗಿರಲಿ. ರೋಗದಲ್ಲಿ ಬಿದ್ದು, ಶ್ರಮೆ ಪಡುವ ನಿನ್ನ ಮಕ್ಕಳಿಗೆ ಜೋಕೆಯನ್ನು ತಂದೆಯಾಗಿ ಮಾಡಿ, ತಕ್ಕ ಸಮಯದಲ್ಲಿ ಅವರನ್ನು ನಿನ್ನ ಸಹಾಯದಿಂದ ಸಂತೋಷ ಪಡಿಸಿ, ಅವರ ಸಮಸ್ತ ಕಾರ್ಯಗಳಂನೆಲ್ಲಾ ಉತ್ತಮವಾಗಿ ಮಾಡುವಿ ಯೆಂಬ, ನಿನ್ನ ವಾಗ್ದತ್ತದ ವಾಕ್ಯದಿಂದ ಅವನ (ಆಕೆಯ) ದಣಿ ಕೊಂಡ ಪ್ರಾಣವನ್ನು ಉಪಶಮನ ಮಾಡು. ಆಮೆನ್.

---

## 8. Dank für Errettung.

(ಆಪತ್ತಿನೊಳಗಿಂದ ಬಿಡುಗಡೆ ಆದದ್ದಕ್ಕೆ ಮಾಡ ತಕ್ಕ ಸ್ತೋತ್ರ.)

ಕರ್ತನೇ, ನಂಮ ದೇವರೇ, ನಿನ್ನ ಕೃಪೆಯು ಯೆಷ್ಟೋ ಅಮೂಲ್ಯವಾದದ್ದು! ಮನುಷ್ಯನ ಮಕ್ಕಳು ನಿನ್ನ ರೆಕ್ಕೆಗಳ ನೆರಳಂನು ಆಶ್ರಯಿಸಿ

ಕೊಳ್ಳುತ್ತಾರೆ. ನೀನು ನಮಗೆ ಬಹು ದೊಡ್ಡ ಭಯ ಪಡ ಕೊಟ್ಟಿ. ನಮಗೆ ಹುತ್ತಿದ ದೊಡ್ಡ ಇಕ್ಕಟ್ಟುಗಳಲ್ಲಿ ನೀನು ನಮ್ಮ ಸಹಾಯಕನಾಗಿರದಿದ್ದರೆ ನಾವು ನಾಶನವಾಗಿ ಹೋಗುತ್ತಿದ್ದೆವು. ನಿನಗೆ—ಕರ್ತನೇ, ಮಾನವೂ ಸ್ತುತಿಯೂ ತಕ್ಕದ್ದು. ನಿನ್ನ ಬಲವಾದ ಡಾಲು ನಮ್ಮನ್ನು ಆಶ್ರಯಿಸಿತು. ನಿನ್ನ ತ್ರಾಣ ಉಳ್ಳ ಕೈ ನಮ್ಮನ್ನು ತಪ್ಪಿಸಿತು. ನಮ್ಮ ಸಹಾಯವು ಪರಲೋಕ ಭೂಲೋಕವಂನು ನಿರ್ಮಾಣ ಮಾಡಿದ ಕರ್ತನ ಹೆಸರಿನಲ್ಲಿ ಅದೆ. ನಮ್ಮದೇವರಾದ ಕರ್ತನೇ, ನಿನಗೆ ಸ್ತೋತ್ರ ಆಗಲಿ! ನೀನೊಬ್ಬನೇ ಅದ್ಭುತಗಳಂನು ಮಾಡುವಾತನೇ, ನಿನ್ನ ಪರಿಶುದ್ಧ ಹೆಸರಿಗೆ ಯೆಂದೆಂದಿಗೂ ಸ್ತೋತ್ರ ಉಂಟಾಗಲಿ. ಆಮೆನ್.

---

## C. Litanei für Betstunden.

(ಪ್ರಾರ್ಥನೆ ತಾಸುಗಳಲ್ಲಿ ಮಾಡ ತಕ್ಕ ಸರ್ವ ವಿಜ್ಞಾಪನೆ.)

ಕರ್ತನೇ ಕರುಣಿಸು.

ಕ್ರಿಸ್ತನೇ ಕರುಣಿಸು.

ಕರ್ತನೇ ಕರುಣಿಸು.

ಕರ್ತನೇ, ಪರಲೋಕದಲ್ಲಿರುವ ತಂದೆಯಾದ ದೇವರೇ;
ಕರ್ತನೇ, ಜಗದ್ರಕ್ಷಕನಾದ ಮಗನಾದ ದೇವರೇ;
ಕರ್ತನೇ, ಪರಿಶುದ್ಧಾತ್ಮನಾದ ದೇವರೇ;
ನಂಮ ಮೇಲೆ ಕರುಣಾವಿಡು.
ನಮಗೆ ಕೃಪೆಯಾಗಿರು, ನಂಮಂನು ಉಳಿಸು.

ಪ್ರಿಯ ಕರ್ತನಾದ ದೇವರೇ,
ಯೆಲ್ಲಾ ಪಾಪಕ್ಕೂ
ಯೆಲ್ಲಾ ಮೋಸಕ್ಕೂ
ಯೆಲ್ಲಾ ಕೇಡಿಗೂ
ನಮ್ಮನ್ನು ತಪ್ಪಿಸು. ಪ್ರಿಯ ಕರ್ತನಾದ ದೇವರೇ,
ಸೈತಾನನ ಮೋಸ ಕುಯುಕ್ತಿಗಳಿಗೂ
ಕೆಟ್ಟ ತೀವ್ರವಾದ ಮರಣಕ್ಕೂ
ಜಾಡ್ಯ ಬರಗಳಿಗೂ
ಯುದ್ಧ ರಕ್ತ ಚೆಲ್ಲುವಿಕೆಗೂ
ಕಾಟಕಾಯಿ ಭೇದಗಳಿಗೂ
ಕಲ್ಮಳೆ ಭಿರುಘಾಳಿಗೂ
ಬೆಂಕಿ ನೀರಿನ ಗಂಡಾಂತರಗಳಿಗೂ
ನಮ್ಮನ್ನು ತಪ್ಪಿಸು. ಪ್ರಿಯ ಕರ್ತನಾದ ದೇವರೇ,
ಪಾಪದ ಮೋಸಕ್ಕೂ
ನಿತ್ಯ ಮರಣಕ್ಕೂ
ನಮ್ಮನ್ನು ತಪ್ಪಿಸು. ಪ್ರಿಯ ಕರ್ತನಾದ ದೇವರೇ,
ನಿನ್ನ ಪರಿಶುದ್ಧ ಜನ್ಮದಿಂದಲೂ,
ನಿನ್ನ ಬಲಹೀನತ್ವ ಬೇನೆಗಳಿಂದಲೂ,
ನಿನ್ನ ಶೋಧನೆಗಳಿಂದಲೂ,
ನಿನ್ನ ಪ್ರಾಣದ ಯೆಲ್ಲಾ ದುಃಖ ಭಯಗಳಿಂದಲೂ

ನಿಂನ ಸಾಯುವ ಹೋರಾಟದಿಂದಲೂ,

ರಕ್ತವಾದ ಬೆವರಿನಿಂದಲೂ,

ನಿಂನ ಬಂಧನೆ ಹೊಡ್ಡು ಪೆಟ್ಟುಗಳಿಂದಲೂ,

ನಿಂನ ಶಿಲುಬೆ ಶ್ರಮೆಗಳಿಂದಲೂ,

ನಿಂನ ಅಮೂಲ್ಯವಾದ ಮರಣದಿಂದಲೂ,

ನಿಂನ ಹೂಳಿಡುವಿಕೆಯಿಂದಲೂ,

ನಿಂನ ಮಹಿಮೆಯುಳ್ಳ ಪುನರುತ್ಥಾನದಿಂದಲೂ

ದಿವಾರೋಹಣದಿಂದಲೂ,

ಮತ್ತು ಪರಿಶುದ್ಧಾತ್ಮನ ಬರುವಿಕೆಯಿಂದಲೂ,

ನಂಮ ಕಡೇ ಸಂಕಟದಲ್ಲಿಯೂ,

ಕಡೇ ನ್ಯಾಯತೀರ್ವಿಕೆಯಲ್ಲಿಯೂ,

ನಮಗೆ ಸಹಾಯ ಮಾಡು. ಪ್ರಿಯ ಕರ್ತನಾದ ದೇವರೇ,

ಬಡ ಪಾಪಿಷ್ಟರಾದ ನಾವು ಬೇಡುವದೇನಂದರೆ — ನಮ್ಮನ್ನು ಕೇಳ

ಬೇಕು. ಪ್ರಿಯ ಕರ್ತನಾದ ದೇವರೇ,

ನಿಂನ ಪರಿಶುದ್ಧ ಕ್ರೈಸ್ತ ಸಭೆಯಂನು ಆಳುತ್ತಾ ನಡಿಸ ಬೇಕು.

ನಿಂನ ಹೆಸರಂನು ಧರಿಸಿದವರೆಲ್ಲರಿಗೆ ನಿಂನ ಶಿಲುಬೆಯ ಮರ್ಮವಂನು ಪ್ರಕಟ ಮಾಡ ಬೇಕು.

ದೇವರ ಮಕ್ಕಳೆಲ್ಲರಂನು ಒಂದೇ ಆತ್ಮದಲ್ಲಿ ಕೂಡಿಸ ಬೇಕು.

ನಿಂನ ಸಭೆಯ ಕುರುಬರೆಲ್ಲರಂನೂ ಸೇವಕರೆಲ್ಲರಂನೂ ಸ್ವಸ್ಥ ವಾಕ್ಯದಲ್ಲಿಯೂ ಪರಿಶುದ್ಧ ನಡತೆಯಲ್ಲಿಯೂ ಕಾಪಾಡ ಬೇಕು.

ಯೆಲ್ಲಾ ಮತಭೇದಗಳಿಗೂ ಆತಂಕಗಳಿಗೂ ಅಡ್ಡಿ ಮಾಡ ಬೇಕು.

ಯೆಲ್ಲಾ ತಪ್ಪಿ ಹೋದವರಂನೂ ಮೋಸ ಹೋದವರಂನೂ ತಿರುಗಿ ತರ ಬೇಕು.

ಸೈತಾನನಂನು ನಂಮ ಪಾದಗಳ ಕೆಳಗೆ ತುಳಿಯ ಬೇಕು.

ನಿಂನ ಬೆಳಿಗೆ ನಂಬಿಗೆಯುಳ್ಳ ಕೆಲಸದವರಂನು ಕಳುಹಿಸ ಬೇಕು.

ವಾಕ್ಯಕ್ಕೆ ನಿಂನ ಆತ್ಮವಂನೂ ಶಕ್ತಿಯಂನೂ ಕೊಡ ಬೇಕು.

ಯೆಲ್ಲಾ ದುಃಖಾಕ್ರಾಂತರಿಗೂ ಅಧೈರ್ಯಸ್ಥರಿಗೂ ಸಹಾಯ ಮಾಡಿ, ಅವರಂನು ಸಂತೈಸ ಬೇಕು.

ನಂಮಂನು ಕೇಳು; ಪ್ರಿಯ ಕರ್ತನಾದ ದೇವರೇ,

ಯೆಲ್ಲಾ ಜನಾಂಗಗಳ ಬೆಳಕೂ ಆದರ್ಣೆಯೂ ನೀನೇ.

ಭೂಮಿಯ ಮೇಲೆಯೂ, ಸಮುದ್ರದ ಮೇಲೆಯೂ ಇರುವ ನಿಂನ ಸುವಾರ್ತಿಕರ ಮೇಲೆ ನಿಂನ ಕೈ ಚಾಚು.

ಅವರು ಸಾರುವ ವಾಕ್ಯದ ಮೇಲೆ ಆತ್ಮವಂನೂ ಬೆಂಕಿಯಂನೂ ಹಾಕು.

ಜನಾಂಗಗಳೊಳಗಿಂದ ನಿನಗೆ ಕೂಡಿಸಿದವರಂನು ಕಾಯು.

ಉಳಿದ ವಿಗ್ರಾರಾಧಕರಂನು ದರ್ಶಿಸು.

ನಿಂನ ಪ್ರಜೆಯಾದ ಇಸ್ರಾಯೇಲಂನು ತಂನ ಕುರುಡತನದೊಳಗಿಂದ ಬಿಡಿಸು.

ಇಸ್ರಾಯೇಲನು ಸಹ ನಿಂನ ಮುಂದೆ ಬದುಕಲಿ.

ನಂಮಂನು ಕೇಳು, ಪ್ರಿಯ ಕರ್ತನಾದ ದೇವರೇ,

ಯೆಲ್ಲಾ ಅರಸರಿಗೂ, ರಾಜರಿಗೂ, ನೀನು ಸಮಾಧಾನವಂನು ಕೊಡ ಬೇಕು.

ನಂಮ ರಾಣಿಯಂನೂ, ಆಕೆಯ ಮನೆಯಂನೂ, ಆಕೆಯ ಪ್ರಧಾನಿ ಸೇವಕರೆಲ್ಲರಂನೂ, ನಡಿಸಿ ಕಾಯ ಬೇಕು.

ನಂಮ ದೇಶ, ನಂಮ ಊರು, ನಂಮ ಸಭೆಯಂನೂ, ನಂಮ ದೇವಸ್ಥಾನ ಶಾಲೆಯಂನೂ, ಮದುವೇ ಸ್ಥಿತಿ, ಮನೆತನದ ಸ್ಥಿತಿಯಂನೂ, ಆಶೀರ್ವಾದಿಸಿ ಕಾಯ ಬೇಕು.

ನಂಮಂನು ಕೇಳು, ಪ್ರಿಯ ಕರ್ತನಾದ ದೇವರೇ,

ಉಪದ್ರ ಗಂಡಾಂತರಕ್ಕೆ ಒಳಗಾದವರೆಲ್ಲರಿಗೆ ನೀನು ಸಹಾಯದಿಂದ ಕಾಣಿಸ ಬೇಕು.

ಯೆಲ್ಲಾ ಗರ್ಭಿಣಿಯರಿಗೂ, ಮೊಲೆ ಕೊಡುವವರಿಗೂ, ಸಂತೋಷವಾದ ಫಲವಂನು ಕೊಟ್ಟು, ಬೆಳಿಸ ಬೇಕು.

ಯೆಲ್ಲಾ ಕೂಸುಗಳಿಗೂ, ರೋಗಿಷ್ಟರಿಗೂ, ಜೋಪಾನ ಪರಾಮರಿಕೆ ಮಾಡ ಬೇಕು.

ಯೆಲ್ಲಾ ಬಲಹೀನರಂನೂ, ಮುಪ್ಪಿನವರಂನೂ, ಯೆತ್ತಿ ಕೊಂಡು, ಹೊತ್ತು ಕೊಳ್ಳ ಬೇಕು.

ನಿರ್ದೋಷಿಗಳಾಗಿ ಸೆರೆಯಲ್ಲಿ ಬಿದ್ದವರೆಲ್ಲರಂನು ಬಿಡುಗಡೆ ಮಾಡ ಬೇಕು.

ಯೆಲ್ಲಾ ವಿಧವೆಯರಂನೂ, ತಂದೆ ತಾಯಿ ಇಲ್ಲದ ಮಕ್ಕಳಂನೂ, ಯೆಲ್ಲಾ ಬಡವರಂನೂ, ದಿಕ್ಕಿಲ್ಲದವರಂನೂ, ಕಾಪಾಡುತ್ತಾ, ಸಂರಕ್ಷಿಸ ಬೇಕು.

ಪ್ರಯಾಣಸ್ಥರಂನು ಯೆಲ್ಲಾ ಕೇಡಿಗೆ ತಪ್ಪಿಸ ಬೇಕು.
ಯೆಲ್ಲಾ ಮನುಷ್ಯರಿಗೆ ಅಂತಃಕರಣ ಮಾಡ ಬೇಕು.

ನಂಮಂನು ಕೇಳು, ಪ್ರಿಯ ಕರ್ತನಾದ ದೇವರೇ,

ನಂಮ ವೈರಿಗಳಿಗೂ, ಹಿಂಸಿಸುವವರಿಗೂ, ದೂಷಿಸುವವರಿಗೂ,
ನೀನು ಕ್ಷಮಿಸಿ, ಅವರ ಮನಸ್ಸಂನು ತಿರುಗಿಸ ಬೇಕು.
ಭೂಮಿಗೆ ಅದರ ಫಲ ಕೊಟ್ಟು ಕಾಯ ಬೇಕು.
ನಂಮ ಕೈಗಳ ಕೆಲಸವಂನು ನಂಮಲ್ಲಿ ಸಾಗಿಸ ಬೇಕು.
ಮತ್ತು ನಂಮಂನು ಕೃಪೆಯಾಗಿ ಆಲೈಸ ಬೇಕು.

ನಂಮಂನು ಕೇಳು, ಪ್ರಿಯ ಕರ್ತನಾದ ದೇವರೇ,

ಓ ದೇವರ ಮಗನಾದ ಯೇಸು ಕ್ರಿಸ್ತನೇ,

ನಂಮ ಮೇಲೆ ಕರುಣವಿಡು.

ಲೋಕದ ಪಾಪ ಹೊತ್ತು ಕೊಳ್ಳುವ ಓ ದೇವರ ಕುರಿಮರಿಯೇ,

ನಂಮ ಮೇಲೆ ಕರುಣವಿಡು.

ಲೋಕದ ಪಾಪ ಹೊತ್ತು ಕೊಳ್ಳುವ ಓ ದೇವರ ಕುರಿಮರಿಯೇ,

ನಮಗೆ ನಿರಂತರವಾದ ಸಮಾಧಾನ ದಯಪಾಲಿಸು.

ಕ್ರಿಸ್ತನೇ, ನಂಮಂನು ಕೇಳು.

ಕರ್ತನೇ, ಕರುಣಿಸು.

ಕ್ರಿಸ್ತನೇ, ನಂಮಂನು ಕೇಳು.

ಕರ್ತನೇ, ನಂಮಂನು ಕರುಣಿಸು.

ಆಮೆನ್.

ಪರಲೋಕಗಳಲ್ಲಿರುವ ನಂಮ ತಂದೆಯೇ, ನಿಂನ ನಾಮವು ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯಂನು ಈಹೊತ್ತು ನಮಗೆ ಕೊಡು. ನಾವೇ ನಂಮ ಸಾಲಗಾರರಿಗೆ ಬಿಡುವ ಪ್ರಕಾರ, ನಂಮ ಸಾಲಗಳಂನು ನಮಗೆ ಬಿಡು. ನಂಮಂನು ಶೋಧನೆಯಲ್ಲಿ ಸೇರಿಸದೆ, ಕೇಡಿನೊಳಗಿಂದ ನಂಮಂನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳ ವರೆಗೂ ನಿಂನವಾಗಿವೆ. ಆಮೆನ್.

ಸರ್ವತ್ರಾಣವುಳ್ಳ ದೇವರೇ, ನಂಮ ವಿಜ್ಞಾಪನೆಗಳನ್ನು ಯೇಕ ಮನಸ್ಸಿನಿಂದ ನಿಂನ ಮುಂದೆ ತರುವದಕ್ಕೆ ನೀನು ನಮಗೆ ಈಗ ಕೃಪೆ ಕೊಟ್ಟ ಮೇಲೆ, ಇಬ್ಬರಾದರೂ ಮೂವರಾದರೂ ನಿನ್ನ ಹೆಸರಿನಲ್ಲಿ ಕೂಡಿರುವಲ್ಲಿ ನೀನು ಅವರ ಪ್ರಾರ್ಥನೆ ಕೇಳುವಿ ಯೆಂಬ, ನಿನ್ನ ವಾಗ್ದತ್ತದ ಪ್ರಕಾರ, ಈಗ ಓ ಕರ್ತನೇ, ನಿನ್ನ ಸೇವಕರ ಅಪೇಕ್ಷೆ ಬಿನ್ನಹಗಳಂನು ಅವರಿಗೆ ಉತ್ತಮವಾಗುವ ಬಗೆ ಪೂರೈಸು. ಇಹದಲ್ಲಿ ನಮಗೆ ನಿನ್ನ ಸತ್ಯದ ತಿಳುವಿಕೆಯಂನೂ, ಪರದಲ್ಲಿ ನಿತ್ಯಜೀವವನ್ನೂ ಕೊಡು. ಆಮೆನ್.

ನಂಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ ಪರಿಶುದ್ಧಾತ್ಮನ ಐಕ್ಯವೂ, ನಿಂಮೆಲ್ಲರ ಸಂಗಡ ಇರಲಿ. ಆಮೆನ್.

---

Oder (Gebet für Betstunden:)

(ಪ್ರಾರ್ಥನೇ ತಾಸುಗಳಿಗೆ ನೇಮಿಸಿದ ಪ್ರಾರ್ಥನೆ).

ಕರ್ತನೇ, ದೇವರಾದ ಕರ್ತನೇ, ಕೃಪೆ ಅಂತಃಕರಣ ಸೈರಣೆಯುಳ್ಳಾತನೇ, ಬಹಳ ದಯ ನಂಬಿಗೆಯುಳ್ಳಾತನೇ, ನೀನು ಕೃಪೆಯಂನು ಸಹಸ್ರಗಳಿಗೆ ಕೈ ಕೊಂಡು, ಅಪರಾಧ ಅಕ್ರಮ ಪಾಪವಂನು ಕ್ಷಮಿಸುತ್ತಿ. ನಿಂನ ಮುಂದೆ ಯಾರಾದರೂ ನಿರ್ದೋಷಿ ಅಲ್ಲ. ನಾವು ನಿಂನ ಪರಿಶುದ್ಧ ಮುಖದ ಮುಂದೆ ಬಂದು, ನಿನಗೆ ಸ್ತುತಿ ಘನ ಸ್ತೋತ್ರ ಅರ್ಪಿಸುತ್ತೇವೆ. ಯಾಕಂದರೆ, ನೀನು ಇಂದಿನವರೆಗೂ ಆತ್ಮ ದೇಹ ಸಮಂದವಾದ ಆಶೀರ್ವಾದವಂನು ಪುಷ್ಕಳವಾಗಿ ನಂಮ ಮೇಲೆ ಸುರಿಸಿದ್ದಿ. ಮತ್ತು ನಾನಾಪ್ರಕಾರವಾದ ಉಪದ್ರಗಳಲ್ಲಿ ನಮಗೆ ಬಹಳ ಉಪಕಾರ ಮಾಡಿದ್ದಿ. ಓ ಕರ್ತನೇ, ನೀನು ಅನುದಿನ ನಮಗೆ ಮಾಡುವ ಯೆಲ್ಲಾ ಅಂತಃಕರಣಕ್ಕೂ, ನಂಬಿಗೆಗೂ ನಾವು ಅಗದಿ ಯೋಗ್ಯರಲ್ಲ. ನಾವು ಇಂನು ನಾಶವಾಗದೆ ಇರುವದು ನಿಂನ ದಯವಾಗಿದೆ. ನಿಂನ ಅಂತಃಕರಣವು ಇಂನು ತೀರಲಿಲ್ಲ; ಒಂದೊಂದು ಮುಂಜಾನೆಗೆ ಹೊಸತಾಗಿದೆ. ನಿಂನ ನಂಬಿಕೆಯು, ಓ ತಂದೆಯೇ, ದೊಡ್ಡದಾಗಿದೆ. ಹ್ಯಾಗಂದರೆ, ನಾವು ಇಂದಿನ ತನಕ ಗುಣವಾಗುವದಕ್ಕೆ ಬದಲಾಗಿ, ನಿನಗೆ ಓ ನೀತಿಯುಳ್ಳ ದೇವರೇ, ಪೂರ್ಣವಾಗಿ ತಿಳಿದಿರುವಂಥ, ನಾವು ಅಲ್ಲ ಕಳಿಯಲಾರದಂಥ, ಹೆಚ್ಚು ಹೆಚ್ಚಾದ ಪಾಪಗಳಿಂದ ಯೆಲ್ಲಾ ಉದ್ಯೋಗಸ್ಥಿತಿಗಳಲ್ಲಿ ನಿಂನ ಕೋಪವಂನು ಯೆಬ್ಬಿಸಿದ್ದೇವೆ; ಇಂನು ಯೆಬ್ಬಿಸುತ್ತಾ ಇದ್ದೇವೆ. ಆದಾಗ್ಯೂ ನೀನು ತಂದೆ ತಾಳ್ಮೆಗಿಂತ ಹೆಚ್ಚಾದ ತಾಳ್ಮೆಯಿಂದ

ನಂಮುಂನು ಸೈರಿಸಿ ಉಳಿಸುತ್ತಾ ಇರುತ್ತಿ. ಫಲ ಫಲಿಸದ ಮರಗಳ ಬುಡಕ್ಕೆ ನೀನು ಆಗಲೇ ಕೊಡಲಿ ಇಟ್ಟಾಗ್ಯೂ, ನಾವು ಒಂದು ವೇಳೆ ನಿಂನ ದಯ ದೀರ್ಘಶಾಂತಿಯಿಂದ ಇಂನು ಮನಸಾಂತರಕ್ಕೆ ನಡಿಸಿ ಕೊಂಡು, ಬದಲಾದ ಹೃದಯದಿಂದಲೂ, ನಡತೆಯಿಂದಲೂ, ತಕ್ಕ ಫಲಗಳಂನು ಫಲಿಸೇವು ಯೆಂದು, ನಂಮುಂನು ಯೇಸು ಕ್ರಿಸ್ತನ ವಿಜ್ಞಾಪನೆಯ ನಿಮಿತ್ತ ಇಂನು ಇರ ಗೊಡಿಸುತ್ತೀ.

ಆದದರಿಂದ, ಓ ಪರಲೋಕದಲ್ಲಿರುವ ಪ್ರಿಯ ತಂದೆಯೇ, ನಾವು ಇಂಥ ಉಚಿತವಾದ ಉಪಕಾರವಂನು ನೆನಸಿ ತಿಳಕೊಂಡು, ನಿಂನ ಅಂತಃಕರಣದ ಐಶ್ವರ್ಯವಂನು ತಳ್ಳದೆ, ಇಂನು ಮುಂದೆ ನಿಂನ ಆಶೀರ್ವಾದಕ್ಕೆ ಅಯೋಗ್ಯರಾಗದೆ, ಸದ್ವಿಶ್ವಾಸದಿಂದಲೂ, ಘಾಯವಿಲ್ಲದ ಮನೋಸಾಕ್ಷಿಯಿಂದಲೂ, ಶುದ್ಧಿಕರಣದ ಜಾಗ್ರತೆಯಲ್ಲಿ, ಕಡೇ ತನಕ ನಿಂನ ಕೃಪೆಯಲ್ಲಿ ನಿಲ್ಲುವ ಹಾಗೆ ಮಾಡು, ನಂಮಲ್ಲಿ ಯಾರಾದರೂ ತಿಳಿದು ಬೇಕೆಂದು, ಪಾಪ ಮಾಡಿ, ನಿನಗೆ ವಿರೋಧವಾಗಿ ನಡಿಯದೆ, ನಿನಗೆ, ಓ ಪರಿಶುದ್ಧ ದೇವರೇ, ನಂಮಲ್ಲಿ ಸರಿ ಬೀಳದಂಥದೆಲ್ಲಾ ನಾವು ಮನಃಪೂರ್ವಕವಾಗಿ ತೆಗದು ಹಾಕಿ, ನಿಂನ ಸಂಗಡ ನಮಗೆ ಉಂಟಾದ ಅನ್ಯೋನ್ಯದ ಸಮಾಧಾನದ ಸಾಕ್ಷಿಯಂನು ನಂಮ ಮನಸ್ಸುಗಳಲ್ಲಿ ಹೊಂದಿ, ಕಾಯುವ ಹಾಗೆ, ನಂಮೆಲ್ಲರಲ್ಲಿ ನಿಜವಾದ ಪಶ್ಚಾತ್ತಾಪ ಮನಸಾಂತರ ಹುಟ್ಟಿಸು. ಇದಕ್ಕಾಗಿ, ಓ ಸರ್ವತ್ರಾಣವುಳ್ಳ ದೇವರೇ, ನಿಂನ ಕೃಪೆಯಂನೂ, ಅದರಿಂದ ಆತ್ಮ ದೇಹಗಳಿಗೆ ಬರುವಂಥ ವರಗಳಂನೂ ನಮಗೆ ತಪ್ಪಿಸಲಿಕ್ಕಿರುವ ಯೆಲ್ಲಾ ಆತಂಕಗಳಿಗೆ ಅಡ್ಡಿ ಮಾಡು.

## ನಂಮ ಅಧಿಕಾರಿಗಳನ್ನು ಆಶೀರ್ವದಿಸು (**Fürbitte für die Königin**).

ನಂಮ ಸಭೆಗಳಿಗೆ, ಸಮಾಧಾನದ ನಿನ್ನ ಸುವರ್ತಮಾನವನ್ನು ದಿವ್ಯ ಶಕ್ತಿಯಿಂದ ಅಚ್ಚವಾಗಿ ಸಾರುವಂಥ, ನಿನ್ನ ಹೃದಯಕ್ಕೆ ಅನುಸಾರವಾದ ಕುರುಬರು ಆಗಿರುವಂಥ, ಯೋಗ್ಯರಾದ ಸತ್ಯ ವಾಕ್ಯದ ಸೇವಕರನ್ನು ದಯಪಾಲಿಸಿ ಕಾಪಾಡು. ಸಾಲೆಗಳಲ್ಲಿಯೂ ಮನೆಗಳಲ್ಲಿಯೂ ಬಾಲಕರಂನು ಸಾಕುವದಂನು ಆಶೀರ್ವದಿಸು. ಇಂಥ ಭಾರವಾದ ಜೋಪಾನ ಮಾಡುವವರೆಲ್ಲರಿಗೆ ವಿವೇಕ ನಂಬಿಕೆ ತಾಳ್ಮೆಯಂನು ದಯಪಾಲಿಸು. ನೀನೇ ಚಿಕ್ಕವರ ಆತ್ಮಗಳನ್ನು ಇಷ್ಟು ಆತಂಕ ಶೋಧನೆಗಳಿಗೆ ತಪ್ಪಿಸಿ ಕಾಪಾಡು.

ಯೆಲ್ಲೆಲ್ಲಿಯೂ, ಸಕಲ ವಿಷಯದಲ್ಲಿಯೂ, ರಾಜ್ಯಕಾರ್ಯದಲ್ಲಿಯೂ ಮನೆಗಳಲ್ಲಿಯೂ ನಮಗೆ ಸಮಾಧಾನ ಕೊಡು. ಕರ್ತನೇ, ಸಭೆಯಲ್ಲಿ ಯೆಲ್ಲಾ ಭೇದಗಳಿಗೆ ಅಡ್ಡಿ ಮಾಡಿ, ನಿನ್ನ ಸಭೆಯು ದಿವಸಗಳ ಅಂತ್ಯದ ಪರಿಯಂತರ ಕಟ್ಟಿಸಿ ಕೊಂಡು, ವಿಸ್ತಾರವಾಗ ಮಾಡು. ಅದರ ವೈರಿಗಳ ಮೋಸ ಕುಯುಕ್ತಿಯುಳ್ಳ ಆಲೋಚನೆಗಳಂನು ಹಿಂದಕ್ಕೆ ತಿರುಗಿಸು. ಅದಕ್ಕೆ ಒಪ್ಪಿಸಿರುವ ಸುವರ್ತಮಾನದ ಸತ್ಯವಂನು ತೆಗದು ಹಾಕ ಬೇಡ. ಹೀಗೆ ಮಾಡುವದು ನಂಮ ಅಲಕ್ಷ್ಯ ಆಲಸ್ಯಕ್ಕೆ ತಕ್ಕದ್ದಾಗಿದ್ದಾಗ್ಯೂ ನಂಮ ಮಕ್ಕಳು ಸಹಾ ನಿನ್ನ ಒಡಂಬಡಿಕೆ ಹೊಂದಿ, ನಿನ್ನ ಹೆಸರಿನ ವಾಸಸ್ಥಾನವು ಯೆಂದೆಂದಿಗೂ ನಂಮಲ್ಲಿ ನಿಲ್ಲುವ ಹಾಗೆ, ನಿಂನ ವಾಕ್ಯವಂನು ನಮಗೆ ಉಳಿಸು. ನಂಮ ಸಂಗಡ ಅದೇ ಅಮೂಲ್ಯವಾದ ವಿಶ್ವಾಸವನ್ನು ಹೊಂದಿದವರಾಗಿ, ಈಗ ಅದರ ನಿಮಿತ್ತ ಗಂಡಾಂತರದ

ಲ್ಲಿಯೂ ಸಂಕಟದಲ್ಲಿಯೂ ಇರುವವರ ಮೇಲೆ ಕರುಣವಿಟ್ಟು, ನೀನೇ ಅವರ ಉಪಾಯ ಆಶ್ರಯ ಸಹಾಯವಾಗಿರು. ಮತ್ತು ನಾವು ಅವರಂನು, ಒಂದೇ ಶರೀರದ ಅವಯವಗಳೆಂದು, ಯಾವಾಗಲು ಪ್ರಾರ್ಥನೆಯಲ್ಲಿ ನೆನಪು ಮಾಡಿ, ನಂಮನ್ನು ನಾವೇ ಶೋಧನೆಯ ಘಳಿಗೆ ಒಳ್ಳೆದಾಗಿ ಸಿದ್ಧ ಮಾಡಿ ಕೊಂಡು, ಯೆಲ್ಲಾಕ್ಕಿಂತ ಮೊದಲು ನಂಮ ಸ್ನಾನದ ಒಡಂಬಡಿಕೆಯಂನು, ನಿಂನ ಸಂಗಡಲಿರುವ ಸಮಾಧಾನದ ಒಡಂಬಡಿಕೆ ಯೆಂದು, ಜಾಗ್ರತೆಯಾಗಿ ಕೈಕೊಂಡು, ನಿಂನ ಕೃಪೆ ಸಾಹಿತ್ಯಗಳಾದ ವಾಕ್ಯ ಸ್ನಾನ ರಾತ್ರಿಭೋಜನಗಳಂನು ಕಪಟದಿಂದ ಪ್ರಯೋಗಿಸಿ, ನಿನಗೆ ವಿರೋಧವಾಗಿ ಪಾಪ ಮಾಡದ ಹಾಗೆ, ನಿಂನ ಕೃಪೆಯಿಂದ ನಂಮಂನು ಯೆಬ್ಬಿಸು.

ನಂಮ ದೇಹದ ಆಧಾರಕ್ಕಾಗಿ ನಿನ್ನ ಆಶೀರ್ವಾದವನ್ನು ಸಮಸ್ತ ದೇಶದ ಮೇಲೆ ಹೊಯ್ಯು. ಒಬ್ಬೊಬ್ಬನು ತನ್ನ ಉದ್ಯೋಗದಲ್ಲಿ ನಂಬಿಕೆಯುಳ್ಳವನಾಗಿ ಕೆಲಸ ಮಾಡಿ, ಬಡವರಿಗೆ ಕೊಡಲಿಕ್ಕೆ ಶಕ್ತನಾಗಿರುವ ಹಾಗೆ, ಹೊಲದ ಬೆಳೆಯಂನೂ ಭೂಮಿಯ ಯೆಲ್ಲಾ ಫಲಗಳನ್ನೂ ಬೆಳಿಸಿ, ನಿವಾಸಿಗಳ ವ್ಯಾಪಾರಗಳನ್ನೂ ಆಶೀರ್ವದಿಸು. ಇಂದಿನವರಿಗೂ ನಿನ್ನ ದೊಡ್ಡ ಅಂತಃಕರಣದ ಪ್ರಕಾರ ಮಾಡಿದಂತ್ತೆ, ದುರ್ಭಿಕ್ಷ ಬರಕ್ಕೂ, ಯುದ್ಧ ಕಲಹಕ್ಕೂ, ಬೆಂಕಿ ನೀರಿನ ಗಂಡಾಂತರಕ್ಕೂ, ಮನುಷ್ಯರಿಗೆ ದನಕ್ಕೆ ಸೋಂಗು ವ ರೋಗ ವ್ಯಾಧಿಗಳಿಗೂ, ನಮ್ಮನ್ನು ತಪ್ಪಿಸು. ನಿನ್ನ ನ್ಯಾಯತೀರ್ವಿಕೆ ದಂಡಗಳಿಗೆ ನಮ್ಮನ್ನು ಗುರಿಯಾಗ ಮಾಡುವ, ನಮ್ಮ ಪಾಪ ಅಪರಾಧಗಳನ್ನೆಲ್ಲಾ, ನಿನ್ನ ಮಗನಾದ ಯೇಸು ಕ್ರಿಸ್ತನ

ನಿಮಿತ್ತ, ನಮಗೆ ಕ್ಷಮಿಸಿ, ನೀನು ನಮಗೆ ಕಳುಹಿಸುವ ಯೆಲ್ಲಾ ಶಿಕ್ಷೆ ಶ್ರಮೆಗಳು ನಮ್ಮನ್ನು ಬಲವಾಗಿ ಪಶ್ಚಾತ್ತಾಪ ಮನಸಾಂತರಕ್ಕೆ ಯೆಬ್ಬಿಸ ಮಾಡು.

ನಮ್ಮ ವೈರಿಗಳಿಗೂ, ನಮಗೆ ಕೇಡು ಮಾಡುವವರೆಲ್ಲರಿಗೂ, ಕ್ಷಮಿಸು. ಇನ್ನು ಇಷ್ಟು ಬಡ ಪ್ರಾಣಗಳನ್ನು ಸೆರೆ ಹಿಡಿದಿರುವ ಅಂಧಕಾರದ ಬಂಧನೆಗಳನ್ನು ಬಿಚ್ಚು. ದುಷ್ಟರ ಕೆಟ್ಟತನಕ್ಕೆ ಅಂತ್ಯ ಮಾಡಿ, ನೀತಿವಂತರನ್ನು ಸಫಲವಾಗ ಮಾಡು. ಓ ಕರ್ತನೇ, ನೆಟ್ಟನೆಯ ಹೃದಯದವರೆಲ್ಲರಿಗೆ ಪಾಳ್ಯೇದನ್ನು ಮಾಡು. ಆದರೆ ಸೊಟ್ಟ ಹಾದಿಗಳಿಗೆ ಹಿಂಜರಿಯುವವರನ್ನು ತಿರಿಗಿಸಿ, ಅವರಿಗೂ, ನಂಮೆಲ್ಲರಿಗೂ, ನಿನ್ನ ಸಮಾಧಾನವನ್ನು ಕೊಡು. ಸ್ಥಳದವರಿಗೂ ಹಾದಿಕಾರರಿಗೂ ನಿನ್ನ ಆಶ್ರಯದಿಂದ ಸಮೀಪವಾಗಿರು. ಯೆಲ್ಲಾ ಕಷ್ಟ ಪಡುವವರಂನೂ, ದಿಕ್ಕಿಲ್ಲದವರಂನೂ, ವಿಧವೆಯರಂನೂ, ತಂದೆ ತಾಯಿ ಇಲ್ಲದ ಮಕ್ಕಳಂನೂ, ಬಡವರಂನೂ, ರೋಗಿಷ್ಟರಂನೂ, ಬಲಹೀನರಂನೂ, ಸಾಯುವವರನ್ನೂ, ಶೋಧನೆಯಲ್ಲಿರುವವರೆಲ್ಲರಂನೂ, ಕರುಣಿಸಿ, ಅವರಂನೂ, ನಂಮೆಲ್ಲರಂನೂ, ಮನಸಾಂತರಕ್ಕೆ ಸಿದ್ಧರೂ, ವಿಶ್ವಾಸದಲ್ಲಿ ದೃಢರೂ, ಪ್ರೀತಿಯಲ್ಲಿ ಚುರುಕಾದವರೂ, ಹಾರೈಕೆಯಲ್ಲಿ ಅಚಂಚಲರೂ, ಪ್ರಾರ್ಥನೆಯಲ್ಲಿ ಭಕ್ತಿ ಆಸಕ್ತಿಯುಳ್ಳವರೂ, ಶ್ರಮೆಯಲ್ಲಿ ಭರವಸವುಳ್ಳವರೂ, ಶೋಧನೆಯಲ್ಲಿ ಸ್ಥಿರರೂ, ಪಾಪಕ್ಕೆ ವಿರೋಧವಾದ ಹೋರಾಟದಲ್ಲಿ ಬಲಿಷ್ಟರೂ, ವಿಶೇಷವಾಗಿ ಪರಲೋಕದ ಕಿರೀಟಕ್ಕೆ ಪ್ರಯತ್ನ ಮಾಡುವದರಲ್ಲಿ ಆತುರವುಳ್ಳವರೂ, ವಿಶ್ವಾಸದ ಭಕ್ತಿಯ ಸಾಧನೆಗಳಲ್ಲಿ ಘಟ್ಟಿ ಮನಸ್ಸು ನಂಬಿಕೆಯುಳ್ಳವರೂ, ಆಗ ಮಾಡು.

ಯೆಲ್ಲಾ ಮನುಷ್ಯರಿಗೆ ಅಂತಃಕರಣ ಮಾಡು. ಮತ್ತು ದೇವರ ಪ್ರಜೆಗೆ ವಿಶ್ರಾಂತಿಯಂನು ಇಡಲು; ನಾವು ಆ ವಿಶ್ರಾಂತಿಯಲ್ಲಿ ಪ್ರವೇಶಿಸ ಜಾಗ್ರತೆ ಪಟ್ಟು, ನಂಮಲ್ಲಿ ಯಾವನಾದರೂ ಹಿಂದಾಗದೆ, ನಾವು ಯೆಚ್ಚತ್ತರೂ, ನಿದ್ರೆಗೈದರೂ, ಬದುಕಿದರೂ, ಸತ್ತರೂ, ನಿನ್ನವರಾಗಿರುವ ಹಾಗೆ ನಮಗೆ ನಿಂನ ಪರಿಶುದ್ಧಾತ್ಮನಂನು ಕೊಡು—ಯೆಂದು, ನಂಮ ಒಬ್ಬನೇ ರಕ್ಷಕನೂ, ಮಧ್ಯಸ್ತನೂ ಕಾರ್ಯಕರ್ತನೂ, ಸಮಾಧಾನದ ರಾಜನೂ, ಆಗಿರುವ ಯೇಸು ಕ್ರಿಸ್ತನ ನಿಮಿತ್ತ ಬೇಡಿ ಕೊಳ್ಳುತ್ತೇವೆ. ಆಮೆನ್.

---

# II. Handlungen.

## Taufe ಸ್ನಾನ.

### 1. Kindertaufe in der Gemeinde.

(ಸಭೆಯಲ್ಲಿ ಆಗುವ ಬಾಲಸ್ನಾನ.)

ನಂಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮದ ಸಂಗತಿಯೂ, ನಂಮೆಲ್ಲರ ಸಂಗಡ ಇರಲಿ. ಆಮೆನ್.

ಕರ್ತನಲ್ಲಿ ಪ್ರಿಯರೇ! ಇಲ್ಲಿಗೆ ತಂದ ಕೂಸು, ನಂಮೆಲ್ಲರ ಪ್ರಾರ್ಥನೆಯಿಂದ ದೇವರಿಗೆ ಅರ್ಪಿತವಾಗಿ, ನಂಮ ಕರ್ತನಾದ ಯೇಸು ಕ್ರಿಸ್ತನ ನೇಮಕದ ಪ್ರಕಾರ, ಸ್ನಾನ ಹೊಂದುವ ಹಾಗೆ, ನಂಮ ಮುಂದೆ ಬಂತು.

ಆದದರಿಂದ ನಂಮ ಕರ್ತನಾದ ಕ್ರಿಸ್ತನು ಸ್ನಾನದ ವಿಷಯವಾಗಿ ತಂನ ಅಪೊಸ್ತಲರಿಗೆ ಕೊಟ್ಟ ಆಜ್ಞೆ ವಾಗ್ದತ್ತ ಕೇಳ್ಯಾಣ.

ಮಥ್ಥಾಯನ ಸುವಾರ್ತೆಯ ೨೮ನೆ ಸಂಧಿಯಲ್ಲಿ ಆತನು ಹೇಳಿದ್ದೇನಂದರೆ—ಪರಲೋಕದಲ್ಲಿಯೂ, ಭೂಮಿಯಲ್ಲಿಯೂ ಸಮಸ್ತ ಅಧಿಕಾರ ನನಗೆ ಕೊಡಲ್ಪಟ್ಟಿದೆ. ಆದದರಿಂದ ನೀವು ಹೊರಟು ಹೋಗಿ, ಯೆಲ್ಲಾ ಜನಾಂಗಗಳಂನು ಶಿಷ್ಯರಾಗ ಮಾಡಿ, ತಂದೆ ಮಗನ ಪರಿಶುದ್ಧಾತ್ಮನ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಗ್ಞಾಪಿಸಿದವುಗಳಂನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ. ಇಗೋ ನಾನು ಯುಗದ ಅಂತ್ಯದ ವರಿಗೂ ಯೆಲ್ಲಾ ದಿವಸಗಳಲ್ಲಿ ನಿಂಮ ಸಂಗಡ ಇದ್ದೇನೆ.

ಮತ್ತು ಮಾರ್ಕನ ೧೬ ನೇ ಸಂಧಿಯಲ್ಲಿ ನಾವು ಓದುವದೇನಂದರೆ—ವಿಶ್ವಾಸಿಸಿ, ಸ್ನಾನ ಹೊಂದುವವನು ರಕ್ಷಿಸಲ್ಪಡುವನು; ಆದರೆ ವಿಶ್ವಾಸಿಸದವನು ಆಗ್ಞನಿರ್ಣಯ ಪಡುವನು.

ಆದರೆ ನಾವು ಈ ಕೂಸಂನು ದೇವರ ಮುಂದೆ ತಂದು, ಅದಕ್ಕೋಸರ ಸ್ನಾನದ ಕೃಪೆಯ ವರವಂನು ಬೇಡಿಕೊಳ್ಳುವ ಕಾರಣವೇನೆಂದು, ನಾವು ಪರಿಶುದ್ಧ ಬರಹದಿಂದ ಇಂನು ಹೆಚ್ಚು ಉಪದೇಶ ಹೊಂದಿ ತಿಳಿಕೊಳ್ಳುವ ಹಾಗೆ; ಕ್ರಿಸ್ತನು ಚಿಕ್ಕವರಿಗೆ ಮಾಡುವ ಪ್ರೀತಿಯಂನೂ, ದೇವರ ರಾಜ್ಯದಲ್ಲಿ ಅವರಿಗೆ ಇರುವ ಪಾಲಂನೂ, ತಿಳಿಸುವ ಸುವಾರ್ತೆಯಂನು ಕೇಳೋಣ. ಅದು ಮಾರ್ಕನ ೧೦ ನೆ ಸಂಧಿಯಲ್ಲಿ ಬರದದ್ದು; ಹ್ಯಾಗಂದರೆ—

ಆಗಲು ಕೂಸುಗಳಂನು, ಆತನು ಅವುಗಳಂನು ಮುಟ್ಟುವ ಹಾಗೆ, ಯೇಸುವಿನ ಬಳಿಗೆ ತಕ್ಕೊಂಡು ಬಂದರು ಆದರೆ ಶಿಷ್ಯರು ತಕ್ಕೊಂಡು

ಬಂದವರಂನು ಗದರಿಸಿದರು. ಯೇಸು ಅದಂನು ನೋಡಿ, ಕೋಪಿಸಿ, ಅವರಿಗೆ ಹೇಳಿದ್ದೇನಂದರೆ—ಕೂಸುಗಳಂನು ತಡಿಯದೆ ನಂನ ಬಳಿಗೆ ಬರ ಗೊಡಿಸಿರಿ. ಯಾಕಂದರೆ ದೇವರ ರಾಜ್ಯವು ಇಂಥವರದೇ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ—ಕೂಸಿನ ಹಾಗೆ ದೇವರ ರಾಜ್ಯವಂನು ಹೊಂದದವನು ಅದರಲ್ಲಿ ಪ್ರವೇಶಿಸುವದೇ ಇಲ್ಲ. ತರುವಾಯ ಅವುಗಳಂನು ಅಪ್ಪಿ ಕೊಂಡು, ಅವುಗಳ ಮೇಲೆ ಕೈಗಳಂನಿಟ್ಟು, ಅವುಗಳಂನು ಆಶೀರ್ವದಿಸಿದನು. ಈ ವಾಕ್ಯವಂನು ಆಧಾರ ಮಾಡಿ, ನಾವು ಇಲ್ಲಿ ಕೂಡಿ ಬಂದು, ಈ ಕೂಸನ್ನು ದೇವರ ಮುಂದೆ ತಂದು, ಆತನು ಅದಂನು ಯೇಸು ಕ್ರಿಸ್ತನ ಮುಖದಿಂದ ತಂನ ಕೃಪೆ ಒಡಂಬಡಿಕೆಯಲ್ಲಿ ಸೇರಿಸ ಬೇಕೆಂದು ಬೇಡುತ್ತೇವೆ. ಯಾಕಂದರೆ ಮನುಷ್ಯರ ಮಕ್ಕಳೆಲ್ಲರು ಹುಟ್ಟು ಸ್ವಭಾವದಿಂದ ಪಾಪಕ್ಕೂ, ಅದರಿಂದ ಹುಟ್ಟುವ ಯೆಲ್ಲ ಕೇಡಿಗೂ, ಒಳಗಾಗಿದ್ಧಾರೆ. ಪೌಲನು ಹೇಳುವ ಪ್ರಕಾರ, ಒಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ, ಲೋಕದಲ್ಲಿ ಪ್ರವೇಶಿಸಿ, ಈ ಪ್ರಕಾರ ಯೆಲ್ಲರು ಪಾಪ ಮಾಡಿದ್ದಲ್ಲಿ ಮರಣವು ಯೆಲ್ಲರ ಮೇಲೆ ವ್ಯಾಪಿಸಿದ ಹಾಗಿರುವದು. ಆದರೆ ಯೇಸು ಕ್ರಿಸ್ತನಲ್ಲಿ ರಕ್ಷಣೆಗಾಗಿರುವ ದೇವರ ಕೃಪೆಯು ಯೆಲ್ಲಾ ಮನುಷ್ಯರಿಗೆ ಕಾಣಬಂತು. ಆತನ ಮುಖದಿಂದ ಜೀವವೂ ರಕ್ಷಣೆಯೂ ತಿರಿಗಿ ಪ್ರಾಪ್ತಿಯಾದವು. ಮತ್ತು ಆತನ ವಿಮೋಚನೆಯಲ್ಲಿ ನಾವು ಪಾಲು ಹೊಂದಿದ್ದಕ್ಕೆ ಗುರುತಿಗಾಗಿ ಮುದ್ರೆಗಾಗಿ ಆತನು ಪರಿಶುದ್ಧ ಸ್ನಾನವಂನು ಸ್ಥಾಪಿಸಿದನು. ಅದನ್ನು ಆತನ ವಾಕ್ಯದ ಆಜ್ಞೆಯ ಪ್ರಕಾರ ಹೊಂ

ದುವವರೆಲ್ಲರು ಆತನ ಹೆಸರಿನಿಂದಲೂ, ನಂಮ ದೇವರ ಆತ್ಮದಿಂದಲೂ, ತೊಳೆಯಲ್ಪಟ್ಟು ಪರಿಶುದ್ಧರೂ, ನೀತಿವಂತರೂ, ರಕ್ಷಿತರೂ, ಆಗಬೇಕೆಂಬುವ ಹಾಗೆ, ಆತನ ಮನಸ್ಸುಂಟು. ಆದದರಿಂದ ನಂಮ ಪ್ರಾಣವು ಕರ್ತನಂನು ಮಹಿಮೆ ಪಡಿಸಲಿ; ನಂಮ ಆತ್ಮವು ನಂಮ ರಕ್ಷಕನಾದ ದೇವರಲ್ಲಿ ಆನಂದ ಪಡಲಿ. ಆತನು ನಮಗೆ ದೊಡ್ಡದಂನು ಮಾಡಿ, ನಂಮ ಬಾಲತ್ವದಲ್ಲಿಯೇ ಪೂರ್ಣ ಅಂತಃಕರಣದಿಂದ ನಮ್ಮನ್ನು ಅಂಗೀಕರಿಸಿದನು. ಮತ್ತು ನಂಮ ಮಕ್ಕಳಂನು ಸಹಾ ನಾವು ಸಂತೋಷದಿಂದ ಆತನ ಮುಖದ ಮುಂದೆ ತರ ಬಹುದು. ಯಾಕಂದರೆ ಅವರೇ ಸಹಾ ನೀರಿನಿಂದಲೂ, ಆತ್ಮನಿಂದಲೂ, ಮೇಲಿನಿಂದ ಹುಟ್ಟಿ, ನಿತ್ಯಜೀವಕ್ಕೆ ಕೃಪೆ ಹೊಂದ ಬೇಕು.

ಹೀಗಿರಲಾಗಿ ಇಲ್ಲಿರುವ ಕೂಸು ಸಹಾ ಪರಿಶುದ್ಧಾತ್ಮದ ಶಕ್ತಿಯಿಂದ ಪಾಪಕ್ಕೂ, ಲೋಕಕ್ಕೂ ವಿರೋಧವಾಗಿ ಒಳ್ಳೆ ಹೋರಾಟ ಆಡಿ, ಕಡೇಲಿ ತನ್ನ ಓಡಾಟವನ್ನು ವಿಶ್ವಾಸದಲ್ಲಿ ಮುಗಿಸಿ, ಪರಲೋಕದಲ್ಲಿ ನೀತಿಯ ಕಿರೀಟವನ್ನು ಹೊಂದುವ ಹಾಗೆ, ನಾವು ಅದನ್ನು ತನ್ನ ನಮ್ಮ ರಕ್ಷಕನ ಕೃಪೆಗೆ ಒಪ್ಪಿಸಿ, ಅದಕ್ಕೋಸರ ಇಹಕ್ಕೂ ಪರಕ್ಕೂ ಜ್ಞಾನದ ಆಶೀರ್ವಾದವಂನೆಲ್ಲಾ ಬೇಡಿ ಕೊಳ್ಳೋಣ.

ಪ್ರಾರ್ಥನೆ ಮಾಡೋಣ.

ಓ ಸರ್ವತ್ರಾಣವುಳ್ಳ ದೇವರೇ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ, ಪರಲೋಕ ಭೂಲೋಕಗಳಲ್ಲಿ ಇರುವ ಎಲ್ಲಾ ಕುಟುಂಬಕ್ಕೆ ಹೆಸರಿಡುವಂಥ ತಂದೆಯು ನೀನೇ. ನಾವು ಸ್ನಾನಕ್ಕೆ ತರುವ ಈ

ಕೂಸಿನ ಮೇಲೆ ನಿನಗೆ ಮೊರೆ ಇಡುತ್ತೇವೆ. ಓ ತಂದೆಯೇ, ಅದನ್ನು ಅಂಗೀಕರಿಸು. ನಿಂನ ಪ್ರಿಯ ಮಗನು ನಮಗೆ ಹೇಳಿದನಲ್ಲಾ—ಬೇಡಿ ಕೊಳ್ಳಿರಿ, ಆಗಲು ನಿಮಗೆ ಕೊಡಲ್ಪಡುವದು. ಹುಡುಕಿರಿ, ಆಗಲು ನಿಮಗೆ ಸಿಕ್ಕುವದು. ತಟ್ಟಿರಿ, ಆಗಲು ನಿಮಗೆ ತೆರೆಯಲ್ಪಡುವದು. ಅದರಂತೆ ಈಗ, ಅನಾದಿಯಾದ ದೇವರೇ, ನಾವು ಬೇಡಿ ಕೊಳ್ಳುವ ಈ ಕೂಸಿಗೆ ನಿಂನ ಕೃಪೆಯಂನು ಕೊಡು. ನಾವು ತಟ್ಟುವ ಬಾಗಲಂನು ಅದಕ್ಕೆ ತೆರೆ. ಅದು ಪರಲೋಕಭಾವವಾದ ಈ ತೊಳೆವಿಕೆಯ ಆಶೀರ್ವಾದ ಹೊಂದಿ, ವಾಗ್ದತ್ತವಾದ ನಿತ್ಯಜೀವದ ರಾಜ್ಯದಲ್ಲಿ ಸೇರುವ ಹಾಗೆ ನಂಮ ಕರ್ತ ರಕ್ಷಕನಾದ ಕ್ರಿಸ್ತನ ಮುಖದಿಂದ ದಯ ಮಾಡು. ಆಮೆನ್.

Oder (ಅಥವಾ):

ಸರ್ವತ್ರಾಣವುಳ್ಳ ದೇವರೇ, ಪರಲೋಕದವನಾದ ಪ್ರೀತಿಯುಳ್ಳ ತಂದೆಯೇ, ನೀನು ನಮಗೂ ನಂಮ ಮಕ್ಕಳಿಗೂ ದೇವರೂ ತಂದೆಯೂ ಆಗಿರುವಿ ಯೆಂದು, ವಾಗ್ದತ್ತ ಕೊಟ್ಟಿ. ಈ ಕೃಪೆಯುಳ್ಳ ವಚನವಂನು ಈಗ ಇಲ್ಲಿರುವ ಕೂಸಿಗೆ ಸಹ ಪೂರೈಸ ಬೇಕೆಂದು, ನಿನ್ನನ್ನು ವಿನಯವಾಗಿ ಬೇಡಿಕೊಳ್ಳುತ್ತೇವೆ, ನಿಂನ ಮಗನ ಮರಣಕ್ಕಾಗುವ ಸ್ನಾನದಿಂದ ಅದಂನು ಆತನ ಸಭೆಯಲ್ಲಿ ಸೇರಿಸು. ಆತನ ವಿಮೋಚನೆಯ ಫಲಗಳಲ್ಲಿ ಅದಂನು ಪಾಲಗಾರನಾಗ ಮಾಡು. ಅದು ನಿಂನ ಮಗನಾಗಿ (ಳಾಗಿ) ಕಡೇಲಿ ನಿಂನ ಪರಲೋಕದ ರಾಜ್ಯದಲ್ಲಿ ಸಹ ಬಾಧ್ಯಸ್ಥನಾಗುವ ಹಾಗೆ, ಅದಕ್ಕೆ ಜೀವವಿರುವ ವರೆಗೂ, ಅದಂನು

ನಿಂನ ಆತ್ಮದಿಂದ ಪರಿಶುದ್ಧ ಮಾಡು. ನಿಂನ ಕೃಪೆಯು, ಓ ದೇವರೇ ಅದರ ಸಂಗಡ ಇದ್ದು ನೆಲೆಯಾಗಿರಲಿ. ಆಮೆನ್.

Oder (ಅಥವಾ):

ಪರಲೋಕದಲ್ಲಿರುವ ತಂದೆಯೇ, ನೀನು ಈ ಕೂಸಿಗೆ ಜೀವ ಕೊಟ್ಟು ಅಂತಃಕರಣ ಮಾಡಿದ್ದೀ. ನಿಂನ ಸಂರಕ್ಷಣೆಯು ಅದರ ಉಸುರಂನು ಕಾಯುತ್ತದೆ. ಆದರೆ ಈಗ ನೀನು ಅದಂನು ಯೇಸು ಕ್ರಿಸ್ತನಲ್ಲಿ ನಿಂನ ಮಗುವಾಗುವ ಆನಂದವಾದ ಕೃಪೆಗೆ ಕರೆಯುತ್ತೀ ಅದುಕಾರಣ ನಾವು ಅದಂನು ಭರವಸದಿಂದ ನಿಂನ ಪರಿಶುದ್ಧ ಜೋಕೆಗೆ ಒಪ್ಪಿಸಿ ದೇಹಾತ್ಮಕ್ಕೆ ಹತ್ತುವ ಯೆಲ್ಲಾ ಗಂಡಾಂತರಗಳಲ್ಲಿ ನೀನು ಅದಕ್ಕೆ ಆಶ್ರಯವಾಗಿದ್ದು, ತಂನ ಯೆಲ್ಲಾ ಮಾರ್ಗಗಳಲ್ಲಿ ಅದರ ಮೇಲೆ ನಿಂನ ಮುಖವಂನು ಪ್ರಕಾಶಿಸ ಮಾಡ ಬೇಕೆಂದು, ಬೇಡುತ್ತೇವೆ, ಕರ್ತನಾದ ಯೇಸು ಕ್ರಿಸ್ತನೇ, ನಂಮ ರಕ್ಷಕನೇ, ನೀನು ಈ ಕೂಸಿಗೆ ಪ್ರೀತಿ ಮಾಡಿ, ಅದು ನಿಂನದಾಗುವದಕ್ಕೆ ಅದಂನು ಅಮೂಲ್ಯವಾದ ಕ್ರಯಕ್ಕೆ ಕೊಂಡು ಕೊಂಡಿದ್ದೀ. ಆದದರಿಂದ ಅದು ಸ್ನಾನದ ಸಂಪೂರ್ಣವಾದ ಆಶೀರ್ವಾದ ಹೊಂದಿ, ಕಡೇಲಿ ಪರಲೋಕದಲ್ಲಿರುವ ನಿರ್ಲಯವಾದ ಬಾಧ್ಯತೆಯಂನು ಹೊಂದುವ ಹಾಗೆ, ಈಗ ಅದಂನು ನಿಂನ ಸಂಗತಿಯಲ್ಲಿ ಸೇರಿಸಿ, ನಾವು ಅದರ ಸ್ಥಳದಲ್ಲಿ ಬೇಡುವಂಥಾದಂನು ಅದಕ್ಕೆ ಕೊಡು. ಓ ತಂದೆಯ ಮಗನ ಆತ್ಮನೇ, ಈ ಕೂಸಿನ ಆತ್ಮದಲ್ಲಿ ಇಳಿದು ಬಂದು ಅದರಲ್ಲಿ ನಿನಗೆ ನಿರಂತರವಾದ ವಾಸಸ್ಥಳ ಸಿದ್ಧ ಮಾಡಿಕೊ. ಅದಂನು ನಿಂನ ವರಗಳಿಂದ ತುಂಬಿಸಿ, ಸದ್ವಿಶ್ವಾಸದಲ್ಲಿ ಪರಿಶುದ್ಧ ಮಾಡಿ ಕಾಪಾಡಿ

ಜೀವ ಕ್ರಮ ಮರಣದಲ್ಲಿ ತ್ರಾಣ ಬಲಗೊಳಿಸಿ, ಸಂಪೂರ್ಣ ಮಾಡು ತ್ರಿಯೇಕನಾದ ಕರ್ತನೇ, ದೇವರೇ, ಅದಕ್ಕೆ ಸಹಾಯ ಮಾಡು. ನಾವೆಲ್ಲರು ಮರಣದ ತನಕ, ನಿನಗೆ ನಂಬಿಕೆಯುಳ್ಳವರಾಗಿದ್ದು, ವಿಶ್ವಾಸದ ಅಂತ್ಯವಂನು — ಅಂದರೆ, ನಂಮ ಪ್ರಾಣಗಳ ರಕ್ಷಣೆಯಂನು, ಸಂಪಾದಿಸಿ ಕೊಳ್ಳುವ ಹಾಗೆ, ನಮಗೆ ಸಹಾಯ ಮಾಡು. ಆಮೆನ್.

ಪರಲೋಕಗಳಲ್ಲಿರುವ ನಂಮ ತಂದೆಯೇ, ನಿಂನ ನಾಮವು ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯಂನು ಈಹೊತ್ತು ನಮಗೆ ಕೊಡು. ನಾವು ನಂಮ ಸಾಲಗಾರರಿಗೆ ಬಿಡುವ ಪ್ರಕಾರ, ನಂಮ ಸಾಲಗಳಂನು ನಮಗೆ ಬಿಡು. ನಂಮಂನು ಶೋಧನೆಯಲ್ಲಿ ಶೇರಿಸದೆ; ಕೇಡಿನೊಳಗಿಂದ ನಂಮಂನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳ ವರೆಗೂ ನಿನ್ನವಾಗಿವೆ. ಆಮೆನ್.

ಕರ್ತನು ನಿನ್ನ ಹೋಗೋಣವಂನೂ, ನಿನ್ನ ಬರೋಣವಂನೂ, ಇಂದಿನಿಂದ ಯೆಂದೆಂದಿಗೂ ಕಾಪಾಡಲಿ. ಆಮೆನ್.

(Ansprache an die Eltern und Taufzeugen.)

ಕರ್ತನಲ್ಲಿ ಪ್ರಿಯರೇ, ಯೇಸು ಕ್ರಿಸ್ತನು ಇಷ್ಟು ಪ್ರೀತಿ ಮಾಡಿ, ತನ್ನ ರಕ್ತದಿಂದ ಕೊಂಡುಕೊಂಡ ಕೂಸುಗಳ ವಿಷಯ ಆತನಲ್ಲಿ ಸ್ನಾನ ಹೊಂದಿದವರಾದ ನಂಮೆಲ್ಲರಿಗೆ ಇರುವ ಭಾರವಾದ ಹಂಗಂನು ನೆನಪಿಗೆ ತರೋಣ. ಇಂಥ ಚಿಕ್ಕವರಲ್ಲಿ ಒಬ್ಬನನ್ನು ಆತಂಕ ಪಡಿಸುವ

ಮನುಷ್ಯನಿಗೆ ಅಯ್ಯೋ! ಸಾಕುವದಕ್ಕೆ ಕರ್ತನು ಒಪ್ಪಿಸಿದ ಕೂಸಿನ ರಕ್ಷಣೆಯ ವಿಷಯದಲ್ಲಿ ಅದನ್ನು ಸಾಕುವವರ ದೋಷದಿಂದ ಆಗುವ ನಷ್ಟವನ್ನು ಆತನು ಅವರ ಪ್ರಾಣಗಳ ಕಡೆಯಿಂದ ಕೇಳುವನು. ಆದರೆ ಕ್ರಿಸ್ತನ ಶಿಷ್ಯರ ಪ್ರೀತಿಯೂ ನಂಬಿಕೆಯೂ ಈ ಚಿಕ್ಕವರಲ್ಲಿ ಒಬ್ಬನಿಗೆ ಮಾಡುವಂಥಾದನ್ನು ತನಗೆ ಮಾಡಿದ್ದೆಂದೆಣಿಸುವನು. ಅದುಕಾರಣ ದೇವರ ಸರ್ವತ್ರಾಣವುಳ್ಳ ದಯವು ಈ ಕೂಸಿನ ಜನ್ಮದಿಂದ ಸಂತೋಷ ಪಡಿಸಿದ ತಂದೆ ತಾಯಿಗಳಾದ ನಿಮಗೆ—ಅದು ತನ್ನ ಪ್ರಾಣದಲ್ಲಿ ನಷ್ಟ ಪಡದೆ, ಪರಿಶುದ್ಧಾತ್ಮನ ಕೆಲಸಕ್ಕೆ ಅದರಲ್ಲಿ ಅಡ್ಡಿ ಆಗದೆ, ಇರುವ ಹಾಗೆ, ಅದನ್ನು ಕರ್ತನ ಶಿಕ್ಷೆಯಲ್ಲಿಯೂ ಉಪದೇಶದಲ್ಲಿಯೂ ಬೆಳಿಸುವದೇ ನಿಂಮ ಮುಖ್ಯವಾದ ಚಿಂತೆ ಇರ ತಕ್ಕದ್ದು. ಮತ್ತು ಸಭೆಯ ಸ್ಥಳದಲ್ಲಿ ಈ ಸ್ನಾನದ ಸಾಕ್ಷಿಗಳಾಗಿ, ಇಂಥ ಕೂಸನ್ನು ಯೇಸುವಿನ ಹೆಸರಿನಲ್ಲಿ ಅಂಗೀಕರಿಸುವದಕ್ಕೆ ವಿಶೇಷವಾದ ಹಂಗಿನಲ್ಲಿರುವ, ಪ್ರಿಯವಾದ ಸಭೆಯ ಹಿರಿಯರೇ, (ಸ್ನಾನದ ಸಾಕ್ಷಿಗಳೇ) ನಿಂಮಂನು ಸಹ ನಾವು ಬೇಡಿಕೊಂಡು ಯೆಚ್ಚರಿಸುವದೇನಂದರೆ—ಈ ಕೂಸಂನು ಮನಃಪೂರ್ವಕವಾದ ವಿಜ್ಞಾಪನೆಯಿಂದ ದೇವರ ಮುಂದೆ ಬಹಳ ಸರ್ತಿ ನೆನಪು ಮಾಡಿರಿ; ಮತ್ತು ಅದರ ಇಹದ ಹಿತಕ್ಕೂ ಪರದ ರಕ್ಷಣೆಗೂ ಬೇಕಾದವುಗಳ ವಿಷಯದಲ್ಲಿ ನಿಂಮಿಂದಾಗುವಷ್ಟು ಕೈಕೊಟ್ಟು, ನಂಬಿಕೆಯುಳ್ಳವರಾಗಿ ಅದಕ್ಕೆ ಸಹಾಯ ಮಾಡಿರಿ.

* * *

ಆದರೆ ಈ ಕೂಸು ಯಾವ ವಿಶ್ವಾಸದ ಮೇಲೆ ಸ್ನಾನ ಹೊಂದುವದೆಂದು, ಯೆಲ್ಲರ ಮುಂದೆ ಸ್ಪಷ್ಟವಾಗಿ ಅರಿಕೆ ಆಗುವ ಹಾಗೆ, ಈಗ ಮಾಡುವ ಪ್ರಶ್ನೆಗಳಿಗೆ ಉತ್ತರ ಕೊಡಿರಿ.

ಪರಲೋಕ ಭೂಲೋಕಗಳ ಸರ್ವತ್ರಾಣವುಳ್ಳ ಸೃಷ್ಟಿ ಕರ್ತನಾಗಿರುವ ತಂದೆಯಾದ ದೇವರಲ್ಲಿ ನಂಬುತ್ತೀರಾ?

ದೇವರ ವಾಬ್ಬನಾಗಿ ಪುಟ್ಟಿದ ನಂಮ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ; ಆತನು ಪರಿಶುದ್ಧಾತ್ಮದಿಂದ ಗರ್ಭದಲ್ಲಿ ಬಂದು, ಮರಿಯಳೆಂಬ ಕನ್ಯಸ್ತ್ರೀಯಿಂದ ಪುಟ್ಟಿ, ಪೊಂತಿಯ ಪಿಲಾತನ ಕಾಲದಲ್ಲಿ ಶ್ರಮೆಪಟ್ಟು, ಶಿಲುಬೆಗೆ ಪಾಕಲ್ಪಟ್ಟು, ಸತ್ತು, ಪೂಳಲ್ಪಟ್ಟು, ಪಾತಾಳಕ್ಕೆ ಇಳಿದು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಯೆದ್ದು, ಪರಲೋಕಕ್ಕೆ ಯೇರಿ, ಅಲ್ಲಿ ತಂನ ಸರ್ವತ್ರಾಣವುಳ್ಳ ತಂದೆಯ ಬಲಪಾರ್ಶ್ವದಲ್ಲಿ ಕೂತು ಕೊಂಡು, ಅಲ್ಲಿಂದ ಇಂನು ಮುಂದೆ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯತೀರಿಸುವನೆಂದು, ನಂಬುತ್ತೀರಾ?

ಪರಿಶುದ್ಧಾತ್ಮನಲ್ಲಿಯೂ; ವೊಂದೇ ಪರಿಶುದ್ಧ ಕ್ರೈಸ್ತ ಸಭೆಯೂ, ಪರಿಶುದ್ಧರ ಅನ್ಯೋನ್ಯವೂ, ಪಾಪಗಳ ಪರಿಪಾರವೂ, ದೇಪದ ಪುನರುತ್ಥಾನವೂ, ನಿತ್ಯಜೀವವು, ಉಂಟೆಂದು, ನಂಬುತ್ತೀರಾ?

ಪೀಗಾದರೆ—ಹೌದು ನಂಬುತ್ತೇವೆ—ಅಂನಿರಿ.

ಸೈತಾನನಂನೂ, ಅವನ ಯೆಲ್ಲಾ ಕ್ರಿಯೆಗಳಂನೂ, ಲೋಕದ ವ್ಯರ್ಥವಾದ ಡಂಭಾಚಾರ ಮಪಿಮೆಯಂನೂ, ಮಾಂಸದ ಯೆಲ್ಲಾ ಆಶೆಗಳಂನೂ, ಬಿಟ್ಟು ಯೆದುರಿಸುತ್ತೀರಾ?

ಮೀಗಾದರೆ—ಪೌದು ಬಿಟ್ಟು ಯದುರುಸುತ್ತೇವೆ—ಅಂನಿರಿ.

ತಂದೆ ಮಗ ಪರಿಶುದ್ಧಾತ್ಮನೆಂಬ, ಪರಿಶುದ್ಧ ದೇವರಿಗೆ ಯೆಂದೆಂದಿಗೂ ನಂಬಿಕೆಯುಳ್ಳವರಾಗಿ, ನಿಂಮ ನಡತೆಯಂನೆಲ್ಲಾ ಆತನ ವಾಕ್ಯಕ್ಕೆ ಸರಿ ಬೀಳ ಮಾಡ ಬೇಕೆಂಬ, ಪಾಂಗಂನು ನಿಂಮ ಮೇಲೆ ತಕ್ಕೊಳ್ಳುತ್ತೀರಾ?

ಮೀಗಾದರೆ—ಹೌದು ಪೂರ್ಣ ಮನಸ್ಸಿನಿಂದ—ಅಂನಿರಿ.

(Zu den Eltern.)

ನಿಂಮ ಮಗು (ನು—ಳು) ಈ ವಿಶ್ವಾಸದಲ್ಲಿ ಸ್ನಾನ ಹೊಂದಿ, ಕ್ರಿಸ್ತನ ಸದ್ಭಕ್ತರಿಗೆ ತಕ್ಕ ರೀತಿಯಿಂದ ಅದರಲ್ಲಿ ಸಾಕಲ್ಪಡ ಬೇಕೆಂಬು ವದು, ನಿಂಮ ಮನಸ್ಸುಂಟಾ?

ಮೀಗಾದರೆ—ಪೌದು—ಅಂನಿರಿ.

(Zu den Aeltesten als Taufzeugen.)

ಈ ಸ್ನಾನದ ಸಾಕ್ಷಿಗಳಾದ ಹಿರಿಯರೇ, ಈ ಕೂಸು ಕರ್ತನ ಶಿಕ್ಷೆ ಉಪದೇಶದಲ್ಲಿ ಸಾಕಲ್ಪಡುವ ಹಾಗೆ, ನೀವು ಸಭೆಯ ಹೆಸರಿನಲ್ಲಿ ನ್ಯಾಡಿ ಕಾಂಡು, ಸಹಾಯ ಮಾಡಲಿಕ್ಕೆ ಮನಸ್ಸಾಗಿದ್ಧೀರಾ?

ಹೀಗಿದ್ದರೆ—ಹೌದು—ಅಂನಿರಿ.

(Der Geistliche benetzt die Stirne des Kindes dreimal mit Wasser und spricht:)

(N.) ನಾನು ನಿನಗೆ ತಂದೆ, ಮಗ, ಪರಿಶುದ್ಧಾತ್ಮನೆಂಬ, ದೇವರ ಹೆಸ ರಿನಲ್ಲಿ ಸ್ನಾನ ಕಾಡುತ್ತೇನೆ.

(Er legt seine rechte Hand auf des Kindes Stirne und spricht:)

(N.) ಪುನರ್ಜನ್ಮದ ತೊಳೆವಿಕೆಯಲ್ಲಿ, ನಿನಗೆ ತಂನ ಸಮಸ್ತ ಕೃಪೆ ಯಂನು, ಯೇಸು ಕ್ರಿಸ್ತನ ಮುಖದಿಂದ, ದಯ ಮಾಡುವ ಸರ್ವತ್ರ,

ಣವುಳ್ಳ ದೇವರೂ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ, ನಿಂನಂನು ತಂನ ಪರಿಶುದ್ಧಾತ್ಮನಿಂದ ನಿತ್ಯಜೀವಕ್ಕೆ ಬಲಗೊಳಿಸಲಿ. ಆಮೆನ್.

Oder (ಅಥವಾ):

(N.) ನಿಂನಂನು ಪರಿಶುದ್ಧ ಸ್ನಾನದಿಂದ ತಂನ ಮಗನಾದ ಯೇಸು ಕ್ರಿಸ್ತನ ಸಂಗತಿಯಲ್ಲಿ ಅಂಗೀಕರಿಸಿದ ಅಂತಃಕರಣ ಉಳ್ಳ ದೇವರೂ ತಂದೆಯೂ, ನಿಂನಂನು ಕಡೇ ತನಕ ತಂನ ಕೃಪೆಯಲ್ಲಿ ಕಾಪಾಡಿ, ತಂನ ಆತ್ಮದಿಂದ ನಿತ್ಯಜೀವಕ್ಕೆ ಪರಿಶುದ್ಧ ಮಾಡಲಿ. ಆಮೆನ್.

Oder (ಅಥವಾ):

(N.) ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರು — ನೀನು ವಿಶ್ವಾಸದಲ್ಲಿ ಸ್ಥಿರನಾಗಿ, ಲೋಕವಂನು ಜಯಿಸಿ, ಆತನ ತ್ರಾಣದಿಂದ ನಿತ್ಯಜೀವಕ್ಕೆ ಕಾಪಾಡುವ ಹಾಗೆ, ನಿನಗೆ ಪರಿಶುದ್ಧಾತ್ಮನ ಕೃಪೆಯಂನು ದಯ ಪಾಲಿಸಲಿ. ಆಮೆನ್.

ಪ್ರಾರ್ಥನೆ ಮಾಡೋಣ.

ಸರ್ವತ್ರಾಣ ಅಂತಃಕರಣ ಉಳ್ಳ ದೇವರೇ, ತಂದೆಯೇ, ನೀನು ನಿಂನ ಸಭೆಯಂನು ಕೃಪೆಯಾಗಿ ಸಲುಹಿ ಬೆಳಿಸುತ್ತಾ; ಈ ಕೂಸಿಗೆ, ಅದು ಪರಿಶುದ್ಧ ಸ್ನಾನದಿಂದ ನಿಂನ ಪ್ರಿಯ ಮಗನಾದ, ನಂಮ ಹಾಬ್ಬನಾಗಿರುವ ಕರ್ತನೂ ರಕ್ಷಕನೂ ಆದ, ಯೇಸು ಕ್ರಿಸ್ತನಿಗೂ, ಆತನ ಸಭೆಗೂ ಅವಯವಾಗಿ ಕೂಡಿ ಕೊಂಡು, ನಿಂನ ಮಗೂ (ನು—ಳು) ನಿಂನ ಪರಲೋಕದವುಗಳ ಬಾಧ್ಯಸ್ತನೂ ಆಗುವದಕ್ಕೆ, ದಯ ಮಾಡಿದ ಕಾರಣ, ನಿನಗೆ ಸ್ತುತಿ ಸ್ತೋತ್ರ ಹೇಳುತ್ತೇವೆ. ಈಗ ನಿಂನ ಮಗನಾದ ಈ

ಕೂಸು, ನಿಂನ ಸಮಸ್ತ ಸುಚಿತ್ತದ ಪ್ರಕಾರ, ನಿಂನ ಪರಿಶುದ್ಧ ಹೆಸರಿನ ಸ್ತುತಿ ಘನಕ್ಕಾಗಿ ಬಹಳ ನಂಬಿಕೆ ಭಕ್ತಿಯಿಂದ ಸಾಕಲ್ಪಟ್ಟು, ಈ ಲೋಕದ ಶೋಧನೆಗಳಲ್ಲಿ ನಿನಗೆ ಒಳಗಾಗಿದ್ದು, ಕಡೇಲಿ ವಾಗ್ದತ್ತದ ಬಾಧ್ಯತೆಯಂನು ಪರಲೋಕದಲ್ಲಿ, ಯೆಲ್ಲಾ ಪರಿಶುದ್ಧರ ಸಂಗಡ, ಹೊಂದುವ ಹಾಗೆ, ದಾರ್ಶಿದ ಉಪಕಾರದಲ್ಲಿ ನೆಲೆಗೊಳಿಸಿ ಕಾಯ ಬೇಕೆಂದು; ಯೇಸು ಕ್ರಿಸ್ತನ ಮುಖದಿಂದ ನಿಂನಂನು ಬಹಳವಾಗಿ ಬೇಡಿ ಕೊಳ್ಳುತ್ತೇವೆ. ಆಮೆನ್.

Oder (ಅಥವಾ):

ಅಂತಃಕರಣ ಉಳ್ಳ ತಂದೆಯೇ, ನೀನು ಈ ಕೂಸಂನು ಕೃಪೆಯಿಂದ ದರ್ಶಿಸಿ, ನಿಂನ ಸ್ವಂತ ಮಗುವಾಗಿ ಅಂಗೀಕರಿಸಿ, ನಿಂನ ಪರಿಶುದ್ಧ ಸಭೆಗೆ ಅವಯವಾಗಿ ಕೂಡಿಸಿದ ಕಾರಣ, ನಿಂನಂನು ಬಹಳವಾಗಿ ಸ್ತುತಿಸುತ್ತೇವೆ. ಅದು ಪಾಪಕ್ಕೆ ಸತ್ತು, ನೀತಿಗೆ ಬದುಕಿ, ಕ್ರಿಸ್ತನ ಸಂಗಡ ಹೂಣಲ್ಪಟ್ಟು, ಹಳೆ ಮನುಷ್ಯನಂನು ಶಿಲುಬೆಗೆ ಹಾಕೋಣದರಿಂದ, ಪಾಪ ಶರೀರವು ನಾಶವಾಗುವ ಹಾಗೆ, ಅದಕ್ಕೆ ದಯ ಮಾಡ ಬೇಕೆಂದು, ನಿಂನಂನು ವಿನಯವಾಗಿ ಬೇಡುತ್ತೇವೆ. ಅದು ನಿಂನ ಮಗನ ಮರಣದ ಹೋಲಿಕೆಯಾಗಿ, ಕೂಡ ನೆಡಲ್ಪಟ್ಟಿರಲಾಗಿ; ಆತನ ಪುನರುತ್ಥಾನದ ಹೋಲಿಕೆ ಸಹ ಆಗಿರ ಮಾಡು. ಕಡೇಲಿ ಅದು ನಿನ್ನ ಸಮಸ್ತ ಪರಿಶುದ್ಧ ಸಭೆಯ ಸಂಗಡ ನಿಂನ ನಿತ್ಯರಾಜ್ಯವಂನು ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ಸ್ವತಂತ್ರಿಸಿ ಕೊಳ್ಳಲಿ. ಆಮೆನ್.

ಕರ್ತನು ನಿಂಮಂನು ಆಶೀರ್ವದಿಸಿ ಕಾಯಲಿ· ಕರ್ತನು ತಂನ

ಮುಖವಂನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮಂನು ಕರುಣಿಸಲಿ. ಕರ್ತನು ತಂನ ಮುಖ ನಿಂಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ. ಆಮೆನ್.

---

## 2. Heidentaufe (ಜನಾಂಗಗಳವರ ಸ್ನಾನ).

ಕರ್ತನಲ್ಲಿ ಪ್ರಿಯರೇ, ಯೆಲ್ಲಾ ಮನುಷ್ಯರು ಪಾಪದಲ್ಲಿ ಗರ್ಭಕ್ಕೆ ಬಂದು, ಹುಟ್ಟಿದ್ದಾರೆಂದೂ, ಮಾಂಸದಿಂದ ಹುಟ್ಟಿದ್ದು ಮಾಂಸವೆಯೆಂದೂ, ಮಾಂಸಭಾವಿಗಳು ದೇವರಿಗೆ ಸರಿ ಬೀಳಲಾರದೆ ಪಾಪ ಅಕ್ರಮಗಳಲ್ಲಿ ಸತ್ತವರಾಗಿದ್ದಾರೆಂದೂ, ತಿಳಕೊಳ್ಳುತ್ತೇವೆ. ಆದರೆ ನಂಮ ರಕ್ಷಕನಾದ ಯೇಸು ಕ್ರಿಸ್ತನು ಹೇಳುವದೇನಂದರೆ — ಒಬ್ಬನು ಮೇಲಿನಿಂದ ಹುಟ್ಟದಿದ್ದರೆ — ಅಂದರೆ ನೀರಿನಿಂದಲೂ ಆತ್ಮದಿಂದಲೂ ಹೊಸತಾಗಿ ಹುಟ್ಟದಿದ್ದರೆ, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು. ಅದು ಕಾರಣ ನಾನು ನಿಂಮಂನು ಬೇಡುವದೇನಂದರೆ — ಇಲ್ಲಿ ನಿಂತಿರುವವನಿಗೆ (ಳಿಗೆ — ರಿಗೆ) ಅವನು (ಳು — ರು) ನೀರಿನಿಂದಲೂ ಪರಿಶುದ್ಧಾತ್ಮನಿಂದಲೂ ಸ್ನಾನ ಹೊಂದಿ, ಕ್ರಿಸ್ತನ ಪರಿಶುದ್ಧ ಸಭೆಯಲ್ಲಿ ಸೇರಿ, ಅದರಲ್ಲಿ ಜೀವವುಳ್ಳ ಅವಯವ (ಗಳು) ಆಗಲಿಕ್ಕೆ, ಅವನಿಗೆ (ಳಿಗೆ — ರಿಗೆ) ತಂದೆಯಾದ ದೇವರು, ತಂನ ದೊಡ್ಡ ಅಂತಃಕರಣದ ಪ್ರಕಾರ, ಕೃಪೆಯಂನು ದಯಪಾಲಿಸ ಬೇಕೆಂದು, ಆತನಂನು ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ಬೇಡಿಕೊಳ್ಳಿರಿ.

---

ಅದರ ದೆಶೆಯಿಂದ ಪ್ರಾರ್ಥನೆ ಮಾಡ್ಯೋಣ.

ಅಂತಃಕರಣ ಕೃಪೆಯುಳ್ಳ ದೇವರೇ, ತಂದೆಯೇ, ನಿಂನ ದಯವು ದೊಡ್ಡದು; ನಿಂನ ಜ್ಞಾನವು ವಿಚಾರಿಸಲಾಗದಂಥಾದ್ದು; ನಿಂನ ತ್ರಾಣವು ಅಳತೆ ಇಲ್ಲದಂಥಾದ್ದು. ನೀನು ನಮಗೆ ಮಾಡಿದ, ಇಂನು ಮಾಡುವ, ನಿಂನ ಯೆಲ್ಲಾ ದಯ ಅದ್ಭುತಗಳ ನಿಮಿತ್ತ, ನಿಂನಂನು ಸ್ತುತಿಸಿ ಕೊಂಡಾಡುತ್ತೇವೆ. ನೀನು ಮನುಷ್ಯನಂನು ನಿಂನ ಸ್ವರೂಪದ ಪ್ರಕಾರ ಮಹಿಮೆಯುಳ್ಳವನಾಗಿ ನಿರ್ಮಾಣ ಮಾಡಿದಿ; ಮತ್ತು ಅವನು ಪಾಪದಲ್ಲಿ ಬಿದ್ದು, ತಂನ ಮಹಿಮೆಯಂನು ಕಳಕೊಂಡ ಮೇಲೆ, ನೀನು ನಿಂನ ಪ್ರೀತಿಯ ಅತಿಶಯವಾದ ಐಶ್ವರ್ಯದ ಪ್ರಕಾರ, ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನಂನು ಯೆಲ್ಲಾ ಮನುಷ್ಯರಿಗೆ ಆತನಿಂದ ಸಹಾಯವಾಗುವ ಹಾಗೆಯೇ ವಿಮೋಚಕ ರಕ್ಷಕನಾಗಿ ಕೊಟ್ಟಿದ್ದಿ. ಮತ್ತು ಅವರೆಲ್ಲರು ಪರಲೋಕದ ಸತ್ಯದ ತಿಳುವಿಕೆಗೆ ಬರುವ ಹಾಗೆ, ನಿಂನ ಮುಖದ ಆತ್ಮವು ಸುವಾರ್ತೆಯಿಂದ ಯೆಲ್ಲಾ ಜನಾಂಗಗಳಂನು ಕರೆದದೆ. ಆದದರಿಂದ ಯೆಳಿಸಿಕೊಂಡು, ನಿಂನ ಬಳಿಗೆ ಬರುವ, ಯಾವನಂನಾದರು ನೀನು ಹೊರಗೆ ಹಾಕುವದಿಲ್ಲ. ಇದಲ್ಲದೆ ನೀನು ಸ್ನಾನವಂನೂ ರಾತ್ರಿ ಭೋಜನವಂನೂ ನಂಮ ರಕ್ಷಣೆಗೆ ಹಿತವಾದ ಕೃಪೆ ಸಾಹಿತ್ಯಗಳಾಗಿ ನೇಮಿಸಿದ್ದಿ. ಓ ಕರ್ತನೇ, ಕೆಟ್ಟ ಬಡ ಮನುಷ್ಯರಾದ ನಮಗೆ ನೀನು ತೋರಿಸುವ ಕೃಪೆಯು, ನಾವು ಅದರ ದೆಶೆಯಿಂದ ನಿನಗೆ ತಕ್ಕಂಥ ಸ್ತೋತ್ರ, ಹೊಗಳಲಾರದಷ್ಟು, ದೊಡ್ಡದಾಗಿದೆ. ಉಚಿತವಾದ ಈ ನಿಂನ ಕೃಪೆಯೂ, ನೆಲೆಯಿಲ್ಲದ ಅಂತಃಕರಣವೂ ಮಾತ್ರ, ತಂನ ಪ್ರಾಣವಂನು

ನಾಶನದಿಂದ ಬಿಡುಗಡೆ ಮಾಡಿದ್ದಕ್ಕೆ ಕಾರಣವೆಂದು, ವಿಗ್ರಹಾರಾಧಕರಾದ (ಮುಸಲಮಾನರಾದ) ತಂದೆ ತಾಯಿಗಳಿಂದ ಹುಟ್ಟಿದಂಥ, ಇಲ್ಲಿ ನಿಂತಿರುವಂಥ, ನಿಂನ ಭಕ್ತನು (ಳು—ರೂ) ಕೊಂಡಾಡ ತಕ್ಕದ್ದು. ಮುಂಚೆ ಅವನು (ಳು—ರು) ಕ್ರಿಸ್ತನಿಲ್ಲದವನೂ, (ಳು—ರೂ) ಅನ್ಯನೂ, ಇಸ್ರಾಯೇಲಿನ ಆತ್ಮಭಾವವಾದ ಪಟ್ಣವಾಸದ ಹೊರಗಾಗಿರುವವನೂ ಇದ್ದನು; ಆದರೆ ಈಗ ನಿಂನ ಕೃಪೆಯಿಂದ ಮನಪಾಂತರ ಪಟ್ಟು, ವಿಶ್ವಾಸದಿಂದ ಕ್ರಿಸ್ತನಿಗೆ ಕೂಡಿಕೊಂಡ ಮೇಲೆ, ಅವನು (ಳು—ರು) ಸಮೀಪವಾದನು. ಮುಂಚೆ ಅವನು ನೋಡದೆ, ಸ್ವಂತ ಶಕ್ತಿಯಿಂದ ನೋಡಲಾರದೆ ಇದ್ದಂಥದಂನು, ಈಗ ನೋಡುವ ಹಾಗೆ, ಒಳ್ಳೇದಾಗಿರುವ ನಿಂನ ಆತ್ಮವು ಸುವಾರ್ತೆಯಿಂದ ಅವನಂನು ಬೆಳಕಾಗ ಮಾಡಿ, ಪಾಪ ಪರಿಹಾರದಲ್ಲಿರುವ ರಕ್ಷಣೆಯ ತಿಳುವಿಕೆಯಂನು ಅವನಿಗೆ ಕೊಟ್ಟಿದೆ. ನಿಂನ ವಾಕ್ಯವು ಈಗಲೇ ಅವನಲ್ಲಿ ಹುಟ್ಟಿದ ವಿಶ್ವಾಸದಿಂದ, ಅವನು ತಂನ ರಕ್ಷಕನಲ್ಲಿಯೂ, ಆತನಲ್ಲಿ ತನಗೆ ಇರುವ ಮಹಿಮೆಯಲ್ಲಿಯೂ, ಆನಂದ ಪಟ್ಟು, ನಿಂನ ದಯವಂನು ಮನಃಪೂರ್ವಕವಾಗಿ ಸ್ತುತಿಸುತ್ತಾನೆ. ಆದರೆ ವಿಶ್ವಾಸಿಸಿ ಸ್ನಾನ ಹೊಂದುವವನೇ ರಕ್ಷಣೆ ಹೊಂದುವನೆಂದು, ನೀನು ಹೇಳಿದ ಕಾರಣ, ಇಲ್ಲಿ ನಿಂತಿರುವ ನಿಂನ ಭಕ್ತನು, (ಳು—ರು) ಇಲ್ಲಿ ಕೂಡಿ ಬಂದ ನಾವೆಲ್ಲರು ಸಹಿತವಾಗಿ, ಓ ಕರ್ತನೇ, ನಿಂನ ನೆಲೆಯಿಲ್ಲದ ದಯ ಅಂತಃಕರಣವಂನು ಬೇಡುವದೇನಂದರೆ—ಅವನಲ್ಲಿ ಆರಂಭಿಸಿದ ಒಳ್ಳೆ ಕೆಲಸಕ್ಕೆ ನೀನು ನೇಮಿಸಿದ ಸ್ನಾನದಿಂದ ಮುದ್ರೆ ಹಾಕ ಬೇಕು. ಓ ದೇವರೇ, ಅವನಲ್ಲಿ ವಿಶ್ವಾಸವಂನು ದೃಢ

ಪಡಿಸು. ಅವನ ಹಾರೈಕೆಯಂನು ಹೆಚ್ಚಿಸು. ಅವನ ಪ್ರೀತಿಯಂನು ಚುರುಕಾಗ ಮಾಡು. ಅವನು ಒಂಮೆ ಕ್ರಿಸ್ತನಲ್ಲಿ ಪಾಲಗಾರನಾದ ಮೇಲೆ, ತಾನು ಯೇಸುವಿನಲ್ಲಿ ಹಿಡಿದ ಸತ್ಯವಂನು ಕೈಕೊಂಡು, ಮಾಂಸ ರಕ್ತಕ್ಕೂ, ಸೈತಾನ ಲೋಕಕ್ಕೂ, ವಿರೋಧವಾಗಿ ಹೋರಾಡಿ, ಕಡೇ ತನಕ ಒಳ್ಳೆ ಯುದ್ಧವಂನು ನಡಿಸುವದಕ್ಕೆ, ನಿಂನ ಆತ್ಮದ ವರಗಳಂನು ಅವನ ಮೇಲೆ ಪುಷ್ಕಳವಾಗಿ ಸುರಿಸು. ನಿಂನ ಒಡಂಬಡಿಕೆಯಲ್ಲಿ ಅವನಂನು ಸ್ಥಿರವಾಗಿ ನಿಲ್ಲ ಮಾಡು. ಯೆಲ್ಲಾ ಬುದ್ಧಿಯಂನು ಮೀರುವ ನಿಂನ ಸಮಾಧಾನವು ಅವನ ಹೃದಯವಂನೂ ಆಲೋಚನೆಗಳಂನೂ, ಯೇಸು ಕ್ರಿಸ್ತನಲ್ಲಿ ಕಾಪಾಡಲಿ. ಅವನು ಯೆಂದಿಗಾದರೂ ವಿಶ್ವಾಸವಂನೂ ಒಳ್ಳೆ ಮನೋಸಾಕ್ಷಿಯಂನೂ, ಕೆಲವರು ಮಾಡಿದಂತೆ, ಅಲಕ್ಷ ಮಾಡಿ, ವಿಶ್ವಾಸದ ವಿಷಯದಲ್ಲಿ ಹಡಗ ನಷ್ಟ ಪಡದೆ, ನಿಂನ ಶಕ್ತಿಯಿಂದ ವಿಶ್ವಾಸದ ಮೂಲವಾಗಿ ರಕ್ಷಣೆಗಾಗಿ ಕಾಪಾಡಲ್ಪಡುವ ಹಾಗೆ, ಅವನಿಗೆ ಕೃಪೆ ಕೊಡು. ಇದಂನು ನಾವು ನಿಂನ ಪ್ರೀತಿಯ ಮಗನ ನಿಮಿತ್ತ, ನಿಂನಂನು ಬೇಡಿಕೊಳ್ಳುತ್ತೇವೆ. ಆತನು ಹೇಳಿದನಲ್ಲಾ —ಬೇಡಿ ಕೊಳ್ಳಿರಿ, ಆಗಲು ತೆಗದು ಕೊಳ್ಳುವಿರಿ. ಹುಡಿಕಿರಿ, ಆಗಲು ಹೊಂದುವಿರಿ. ತಟ್ಟಿರಿ, ಆಗಲು ನಿಮಗೆ ತೆರೆಯಲ್ಪಡುವದು. ಅದುಕಾರಣ ಈ ನಿಂನ ಭಕ್ತನು (ಳು—ರು), ಸಹ ತಾನು ಬೇಡುವಂಥಾದಂನು ತೆಗದು ಕೊಂಡು, ತಾನು ಹುಡುಕುವಂಥಾದಂನು ಹೊಂದ ಕೊಡು. ಮತ್ತು ನೀನು ಉಚಿತವಾದ ದಯದಿಂದ ಅವನಿಗೆ ಕೃಪೇ ರಾಜ್ಯದ ಬಾಗಲಂನು ತೆರದ ಮೇಲೆ, ಅವನಿಗೂ ನಂಮೆಲ್ಲರಿಗೂ ಕಡೇಲಿ ನಿತ್ಯ ಘನ ಮಹಿಮೆಗಳ ಬಾಗಲಂನು ತೆರೆ. ಆಮೆನ್.

ಪರಲೋಕದಲ್ಲಿರುವ ನಂಮ ತಂದೆಯೇ, ನಿಂನ ನಾಮವು ಪರಿಶುದ್ಧವಾಗಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯನ್ನು ಈಹೊತ್ತು ನಮಗೆ ಕೊಡು. ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ, ನಂಮ ಸಾಲಗಳಂನು ನಮಗೆ ಬಿಡು. ನಂಮಂನು ಶೋಧನೆಯಲ್ಲಿ ಸೇರಿಸದೆ; ಕೇಡಿನಿಂದ ನಂಮಂನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳ ವರೆಗೂ ನಿಂನವಾಗಿವೆ. ಆಮೆನ್.

(Ansprache an den Täufling.)

ಕರ್ತನಲ್ಲಿ ಪ್ರಿಯವಾದವನೇ, (—ಳೇ—ರೇ) ಸತ್ತವರೊಳಗಿಂದ ಯೆದ್ದ ನಂಮ ಕರ್ತನು ತಂನ ಶಿಷ್ಯರಿಗೆ ಸ್ನಾನವಂನು ಆಜ್ಞಾಪಿಸಿ ಸ್ಥಾಪಿಸಿದ ಮಾತುಗಳಂನು ಈಗ ಕೇಳು—

ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಮಸ್ತ ಅಧಿಕಾರವು ನನಗೆ ಕೊಡಲ್ಪಟ್ಟದೆ; ಆದದರಿಂದ ನೀವು ಹೊರಟು ಹೋಗಿ, ಯೆಲ್ಲಾ ಜನಾಂಗಗಳನ್ನು ಶಿಷ್ಯರಾಗ ಮಾಡಿ, ತಂದೆಯ ಮಗನ ಪರಿಶುದ್ಧಾತ್ಮನ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದವುಗಳಂನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ. ಇಗೋ ನಾನು ಯುಗದ ಅಂತ್ಯದ ವರೆಗೂ, ಯೆಲ್ಲಾ ದಿವಸಗಳಲ್ಲಿ, ನಿಂಮ ಸಂಗಡ ಇದ್ದೇನೆ.

ನೀನು ಈ ತ್ರಿಯೇಕನಾದ ದೇವರ ಮಾರ್ಗದಲ್ಲಿ ಉಪದೇಶ ಹೊಂದಿ, ಆತನ ಶಿಷ್ಯನಾಗಲಿಕ್ಕೆ ಮನಸ್ಸು ತೋರಿಸಿದ ಕಾರಣ, ಈಗ ಹೃದಯ

ದಿಂದ ವಿಶ್ವಾಸಿಸುವಂಥಾದಂನು ಬಾಯಿಂದ ಈ ಸಭೆಯ ಮುಂದೆ ಅರಿಕೆ ಮಾಡಿ, ಈ ಪ್ರಕಾರ ಆತನ ಕೃಪೆ ಒಡಂಬಡಿಕೆಯಲ್ಲಿ ಸೇರ ಬೇಕೆಂದು ನಿನಗೆ ಹೇಳುತ್ತೇನೆ.

ಪರಲೋಕ ಭೂಲೋಕಗಳ ಸರ್ವಶಕ್ತಿ ಉಳ್ಳ ಸೃಷ್ಟಿ ಕರ್ತನಾದ, ತಂದೆಯಾದ ದೇವರಲ್ಲಿ ನಂಬುತ್ತಿಯಾ?

ದೇವರ ಒಬ್ಬನಾಗಿ ಹುಟ್ಟಿದ, ನಂಮ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ; ಆತನು ಪರಿಶುದ್ಧಾತ್ಮದಿಂದ ಗರ್ಭದಲ್ಲಿ ಬಂದು, ಮರಿಯಳೆಂಬ ಕನ್ಯಾಸ್ತ್ರೀಯಿಂದ ಹುಟ್ಟಿ, ಪೊಂತಿಯ ಪಿಲಾತನ ಕಾಲದಲ್ಲಿ ಶ್ರಮೆ ಪಟ್ಟು, ಶಿಲುಬೆಗೆ ಹಾಕಲ್ಪಟ್ಟು, ಸತ್ತು, ಹೂಣಲ್ಪಟ್ಟು, ಪಾತಾಳಕ್ಕೆ ಇಳಿದು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಯೆದ್ದು, ಪರಲೋಕಕ್ಕೆ ಯೇರಿ, ಅಲ್ಲಿ ತನ್ನ ಸರ್ವಶಕ್ತಿಯಾದ ತಂದೆಯ ಬಲಪಾರ್ಶ್ವದಲ್ಲಿ ಕೂತು ಕೊಂಡು, ಅಲ್ಲಿಂದ ಇಂನು ಮುಂದೆ ಬಂದು ಬದುಕುವವರಿಗೂ ಸತ್ತ ವರಿಗೂ ನ್ಯಾಯತೀರಿಸುವನೆಂದು ನಂಬುತ್ತೀಯಾ?

ಪರಿಶುದ್ಧಾತ್ಮದಲ್ಲಿಯೂ; ಒಂದೇ ಪರಿಶುದ್ಧ ಕ್ರೈಸ್ತ ಸಭೆಯೂ, ಪರಿಶುದ್ಧರ ಅನ್ಯೋನ್ಯವೂ, ಪಾಪಗಳ ಪರಿಹಾರವೂ, ದೇಹದ ಪುನರುತ್ಥಾನವೂ, ನಿತ್ಯಜೀವವೂ, ಉಂಟೆಂದು ನಂಬುತ್ತೀಯಾ?

ಹೀಗಾದರೆ — ಹೌದು ನಂಬುತ್ತೇನೆ — ಅನ್ನು

ಸೈತಾನನಂನೂ, ಅವನ ಯೆಲ್ಲಾ ಕ್ರಿಯೆಗಳಂನೂ ಲೋಕದ ವ್ಯರ್ಥವಾದ ಡಂಭಾಚಾರ ಮಹಿಮೆಯಂನೂ ಮಾಂಸದ ಯೆಲ್ಲಾ ಆಶೆಗಳಂನೂ ಬಿಟ್ಟು, ಯೆದುರಿಸುತ್ತೀಯಾ?

ಹೀಗಾದರೆ—ಹೌದು ಬಿಟ್ಟು ಯೆದುರಿಸುತ್ತೇನೆ—ಅಂನು.

ತಂದೆ ಮಗ ಪರಿಶುದ್ಧಾತ್ಮನೆಂಬ ಪರಿಶುದ್ಧ ದೇವರಿಗೆ ನಿರಂತರವಾಗಿ ನಂಬಿಕೆಯುಳ್ಳವನಾಗಿ, ನಿಂನ ನಡತೆಯಂನೆಲ್ಲಾ ಆತನ ವಾಕ್ಯಕ್ಕೆ ಸರಿ ಬೀಳ ಮಾಡ ಬೇಕೆಂಬ, ಪಾಂಗಂನು ನಿಂನ ಮೇಲೆ ತಕ್ಕೊಳ್ಳುತ್ತೀಯಾ?

ಹೀಗಾದರೆ—ಹೌದು ಪೂರ್ಣ ಮನಸ್ಸಿನಿಂದ—ಅನ್ನು.

ವಿಶ್ವಾಸದಲ್ಲಿ ಸ್ನಾನ ಪಾಂದ ಬೇಕೆಂದು ಮನಸ್ಸಾಗಿದ್ಧೀಯಾ?

ಹೀಗಾದರೆ—ಹೌದು ಮನಸ್ಸಾಗಿದ್ಧೇನೆ—ಅಂನು.

(N) ನಾನು ನಿನಗೆ ತಂದೆ ಮಗ ಪರಿಶುದ್ಧಾತ್ಮನೆಂಬ ದೇವರ ಪೆಸರಿನಲ್ಲಿ ಸ್ನಾನ ಕೊಡುತ್ತೇನೆ.

(N) ನಿಂನಂನು ನೀರಿನಿಂದಲೂ ಆತ್ಮದಿಂದಲೂ ತಿರಿಗಿ ಪುಟ್ಟಿಸಿದ ಸರ್ವತ್ರಾಣ ಉಳ್ಳ ದೇವರೂ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ, ನಿಂನಂನು ಪರಿಶುದ್ಧಾತ್ಮನಿಂದ ನಿತ್ಯಜೀವಕ್ಕೆ ಬಲಗೊಳಿಸಲಿ. ಆಮೆನ್.

ಸಮಾಧಾನವು ನಿಂನ ಸಂಗಡ ಇರಲಿ.

ಪ್ರಾರ್ಥನೆ ಮಾಡೋಣ.

ಸರ್ವತ್ರಾಣ ಉಳ್ಳ ದೇವರೇ, ಪರಲೋಕದವನಾದ ಪ್ರಿಯ ತಂದೆಯೇ, ನೀನು ನಿಂನ ಸಭೆಯಂನು ಕೃಪೆಯಾಗಿ ಸಲುಹಿ ಬೆಳಿಸುತ್ತಾ; ಅದಕ್ಕೆ ಈ ನಿಂನ ಭಕ್ತನಂನು (—ಳಂನು—ರಂನು) ದಯಪಾಲಿಸಿ, ನಿಂನ ಪರಿಶುದ್ಧ ಸ್ನಾನದಿಂದ ನಿಂನ ಪ್ರಿಯ ಮಗನಾದ ನಂಮ ಕರ್ತನಾದ ರಕ್ಷಕನಲ್ಲಿ ಕೂಡಿಸಿ, ಅವನಂನು ನಿಂನ ಮಗನಂನೂ, ಪರಲೋಕದ ಯೆಲ್ಲಾ

ವರಗಳ ಬಾಧ್ಯಸ್ತನಂನೂ, ಮಾಡಿದ್ದಕ್ಕೆ ನಿಂನಂನು ಸ್ತುತಿಸಿ ಕೊಂಡಾಡು ತ್ತೇವೆ. ಅವನಿಗೋಸ್ಕರ ನಿಂನಂನು ಮನಃಪೂರ್ವಕವಾಗಿ ಬೇಡಿಕೊಳ್ಳುವ ದೇನಂದರೆ—ಅವನು ಈಗ ಹೊಂದಿದ ಕರುಣೆಯಲ್ಲಿ ಅವನಂನು ತಂದೆಯ ಪ್ರೀತಿಯಿಂದ ಕಾಪಾಡು, ಅವನು ಸದ್ವಿಶ್ವಾಸದಲ್ಲಿಯೂ, ಭಕ್ತಿ ಯಾದ ಸದಾಚಾರದಲ್ಲಿಯೂ, ಒಳ್ಳೇದಾಗಿ ತ್ರಾಣಗೊಂಡು, ನಂಮೆಲ್ಲರ ತಲೆಯಾಗಿರುವ ಕ್ರಿಸ್ತನಲ್ಲಿ ಹೆಚ್ಚು ಹೆಚ್ಚಾಗಿ ಬೆಳದು, ಯೆಲ್ಲಾ ಜ್ಞಾನ ಪರಿಶುದ್ಧತ್ವ ನೀತಿಯಲ್ಲಿ, ಆತನ ಸಂಪೂರ್ಣವಾದ ಪುರುಷ ಪ್ರಾಯದ ಪ್ರಮಾಣವಂನು ಮುಟ್ಟಿ, ಯಾವ ಅಬದ್ಧ ಬೋಧನೆಯಿಂದಲೂ, ಲೋಕದ ಮಾಂಸದ ಆಶೆಗಳಿಂದಲೂ, ತಾನು ತಿಳ ಕೊಂಡ ಸತ್ಯಕ್ಕೆ ತಪ್ಪಿಸಿ ಕೊಳ್ಳದೆ, ಯೆಲ್ಲಾ ಪರಿಶುದ್ಧರ ಸಂಗಡ ವಾಗ್ದತ್ತದ ಬಾಧ್ಯತೆಯಂನು ಹೊಂದುವ ಹಾಗೆ, ಅವನಿಗೆ ನಿಂನ ಪ್ರಿಯ ಮಗನಾದ ನಂಮ ರಕ್ಷಕನಾದ ಯೇಸು ಕ್ರಿಸ್ತನ ಮುಖದಿಂದ ದಯ ಮಾಡು. ಆಮೆನ್.

Oder (ಅಥವಾ):

ಓ ಕರ್ತನಾದ ಯೇಸು ಕ್ರಿಸ್ತನೇ, ದೇವರ ಮಗನೇ, ನೀನು ಹೇಳಿ ದಿಯಲ್ಲಾ—ನೀವು ಕೆಟ್ಟವರಾದಾಗ್ಯೂ, ನಿಂಮ ಮಕ್ಕಳಿಗೆ ಒಳ್ಳೇ ದಾನ ಗಳನ್ನು ಕೊಡ ತಿಳಿದರೆ; ಯೆಷ್ಟು ಹೆಚ್ಚಾಗಿ ಪರಲೋಕಗಳಲ್ಲಿರುವ ನಿಂಮ ತಂದೆಯು ತಂನಂನು ಬೇಡಿ ಕೊಳ್ಳುವವರಿಗೆ ಪರಿಶುದ್ಧಾತ್ಮನಂನು ಕೊಡು ವನು. ಮತ್ತು ನಿಂಮೊಳಗೆ ಇಬ್ಬರು, ತಾವು ಬೇಡುವ ಯಾವ ಕಾರ್ಯದ ವಿಷಯ ಭೂಮಿಯ ಮೇಲೆ, ಸಂಮತಿ ಪಟ್ಟರೆ, ಅದು ಪರಲೋಕ ಗಳಲ್ಲಿರುವ ನಂನ ತಂದೆಯ ಕಡೆಯಿಂದ ಅವರಿಗೆ ಉಂಟಾಗುವದು.

ನಾವು ನಿಂನಂನು ಬೇಡುವದೇನಂದರೆ—ಹೊಸತಾಗಿ ಸ್ನಾನ ಹೊಂದಿದ ಈ ಪ್ರಿಯವಾದವನು ನಿಂನ ಪರಿಶುದ್ಧ ಸುವಾರ್ತೆಯ ವಿಧೇಯತ್ವದಲ್ಲಿ ನೆಲೆಯಾಗಿದ್ದು, ಸೈತಾನನಿಗೂ ತಂನ ಸ್ವಂತ ಬಲಹೀನತ್ವಕ್ಕೂ ವಿರೋಧವಾಗಿ ಹೋರಾಡುವ ಹಾಗೆಯೂ, ಪರಿಶುದ್ಧಾತ್ಮವಂನು ದುಃಖ ಪಡಿಸದೆ, ಯಾವ ಆತಂಕದಿಂದ ನಿಂನ ಸಭೆಗೆ ಕೇಡು ಮಾಡದೆ, ಅವನ ನಡತೆಯು, ನೀನು ಆಜ್ಞಾಪಿಸಿ ನಮಗೆ ವಚನ ಕೊಟ್ಟ ಪ್ರಕಾರ, ನಿಂನ ಸ್ತುತಿಗೂ ತಂನ ರಕ್ಷಣೆಗೂ, ಯೆರಡನೆಯವರ ಕಟ್ಟುವಿಕೆಗೂ, ಹಿತವಾಗುವ ಹಾಗೆಯೂ, ಅವನನ್ನು ನಿಂನ ಪರಿಶುದ್ಧಾತ್ಮದಿಂದ ಬಲಕೊಳ್ಳಿಸು. ಆಮೆನ್.

ಕರ್ತನು ನಿಂಮಂನು ಆಶೀರ್ವದಿಸಿ ಕಾಯಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮಂನು ಕರುಣಿಸಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ. ಆಮೆನ್.

---

## 3. Jäh Taufe (ಅವಸರವಾದ ಸ್ನಾನ).

ಕರ್ತನಾದ ಯೇಸು ಕ್ರಿಸ್ತನೇ, ನಾವು ನಿನಗೆ ಈ ಕೂಸಂನು ಅರ್ಪಿಸುತ್ತೇವೆ—ಕೂಸುಗಳಂನು ನನ್ನ ಬಳಿಗೆ ಬರಗೊಡಿಸಿರಿ; ಯಾಕಂದರೆ ದೇವರ ರಾಜ್ಯವು ಇಂಥವರದೇ—ಯೆಂದು, ನೀನು ಹೇಳಿದ ಪ್ರಕಾರ, ಅದನು ನಿಂನ ಸ್ವಂತ ಬದುಕಾಗಿ ಅಂಗೀಕರಿಸು.

Hierauf die Taufhandlung.

---

## Confirmation (ದೃಢೀಕರಣ).

ನಂಮ ಆರಂಭವು ಪರಲೋಕ ಭೂಲೋಕಗಳಂನು ಉಂಟು ಮಾಡಿದ ಕರ್ತನ ಹೆಸರಿನಲ್ಲಿ ಆಗಲಿ!

ಯೇಸು ಕ್ರಿಸ್ತನಲ್ಲಿ ಪ್ರಿಯರೇ, ನಂಮ ಸಂಗಡ ಸ್ನಾನದಿಂದ ದೇವರ ಕೃಪೆಯಲ್ಲಿ ಪಾಲುಗಾರರಾದ ಈ ಚಿಕ್ಕವರು, ತಂಮಂನು ತಾವೇ ತಂಮ ಕರ್ತನೂ ರಕ್ಷಕನೂ ಆದಾತನಿಗೆ ಬಹಿರಂಗವಾಗಿ ಒಪ್ಪಿಸಿ ಕೊಂಡು, ಈ ಕ್ರೈಸ್ತ ಸಭೆಯ ಸಮುಖದಲ್ಲಿ ತಂಮ ಸ್ನಾನದ ಒಡಂಬಡಿಕೆಯಂನು ಹೊಸದು ಮಾಡುವದಕ್ಕೆ, ಇಲ್ಲಿಗೆ ಬಂದಿದ್ದಾರೆ. ದೇವರ ವಾಕ್ಯದ ಸತ್ಯದಲ್ಲಿ ಅವರಿಗೆ ಆದ ಜಾಗ್ರತೆಯುಳ್ಳ ಬೋಧನೆಯಿಂದ ರಕ್ಷಣೆಯಂನು ತಿಳಿಯಲಿಕ್ಕೆ ಅವರಿಗೆ ಸಹಾಯವಾಗಿದೆ. ಈಗ ಕರ್ತನು ತಂನ ಸಭೆಗೆ ದಯಪಾಲಿಸುವ ಯೆಲ್ಲಾ ಆಶೀರ್ವಾದದಲ್ಲಿ ತಾವು ಪಾಲುಗಾರರಾಗಿ, ಕೃಪೆಭರಿತವಾದ ರಾತ್ರಿಭೋಜನವನ್ನು ತಕ್ಕೊಳ್ಳುವದರಿಂದ ತಂಮ ರಕ್ಷಕನಂನು ಹೆಚ್ಚಾಗಿ ಕೂಡಿ ಕೊಳ್ಳ ಬೇಕೆಂದು, ಅವರ ಅಪೇಕ್ಷೆ ಮನಸ್ಸು ಉಂಟು. ಆದರೆ ತಾವು ಮಾಡ ಅಪೇಕ್ಷಿಸುವ ಕಾರ್ಯದ ಒಳ್ಳೆ ಕಾರಣದ ವಿಷಯ ಲೆಕ್ಕ ಒಪ್ಪಿಸುವದಕ್ಕೆ, ಅವರು ನಂಮ ಸಭೆಯ ವಿಶ್ವಾಸವಂನು ಇಲ್ಲಿ, ದೇವರ ಮುಂದೆಯೂ, ಈ ಕ್ರೈಸ್ತರ ಕೂಟದ ಯೆದುರಿನಲ್ಲಿಯೂ, ಬಹಿರಂಗವಾಗಿ ಅರಿಕೆ ಮಾಡಿ, ತಂಮ ಸ್ನಾನವ್ರತವಂನು ಈ ದೃಢೀಕರಣದ ಆಚಾರದಿಂದ ಘಟ್ಟಿ ಮಾಡಲಿಕ್ಕೆ ಮನಸ್ಸಾಗಿದ್ದಾರೆ. ಅದುಕಾರಣ ನಾನು ದೇವರ ಹೆಸರಿನಲ್ಲಿ ನಿಂಮೆಲ್ಲರಂನು ಯೆಚ್ಚರಿಸುವದೇನಂದರೆ—ಈ ಪ್ರಿಯ ಚಿಕ್ಕವರು ಮಾಡುವ

ಅರಿಕೆಯಂನೂ, ಕೊಡುವ ವಚನವಂನೂ, ಕ್ರಿಸ್ತನವರಿಗೆ ತಕ್ಕ ಪ್ರೀತಿಯಿಂದ ಕೇಳಿರಿ. ಅವರಲ್ಲಿ ಆರಂಭವಾದ ಒಳ್ಳೇ ಕೆಲಸವಂನು ದೇವರು ತಂನ ಪರಿಶುದ್ಧಾತ್ಮದಿಂದ ಅವರಲ್ಲಿ ಘಟ್ಟಿ ಮಾಡಿ ಪೂರೈಸುವ ಹಾಗೆ, ಅವರಿಗೋಸ್ಕರ ಮನಃಪೂರ್ವಕವಾದ ಭಕ್ತಿಯಿಂದ ಬೇಡಿಕೊಳ್ಳಿರಿ.

### ಪ್ರಾರ್ಥನೆ ಮಾಡೋಣ.

ಪರಲೋಕದವನಾದ ಪ್ರಿಯ ತಂದೆಯೇ, ನೀನು ಈ ಚಿಕ್ಕವರಂನು ಪರಿಶುದ್ಧ ಸ್ನಾನದಿಂದ ಆಗಲೇ ಕ್ರಿಸ್ತನ ಮುಖದಿಂದ ನಿಂನ ಪರಿಶುದ್ಧ ಸಂಗತಿಯಲ್ಲಿ ಅಂಗೀಕರಿಸಿ, ಇಂದಿನ ಪರಿಯಂತರ ಅವರಂನು ಕೃಪೆಯಾಗಿ ಸಲಹುತ್ತಾ, ನಿಂನಂನೂ ನಿಂನ ಪ್ರಿಯ ಮಗನಂನೂ ತಿಳುಕೊಳ್ಳುವ ಜ್ಞಾನಕ್ಕೆ ನಡಿಸಿದಿ.

ಓ ಪ್ರಿಯ ತಂದೆಯೇ, ನಿಂನ ಮಗನಾದ ಯೇಸುವಿನ ನಿಮಿತ್ತ, ಈಗ ಈ ಚಿಕ್ಕವರಂನು ಹೊಸತಾಗಿ ಕೃಪೆ ಕಂಣುಗಳಿಂದ ದೃಷ್ಟಿಸು. ನಿಂನ ಜೀವವುಳ್ಳ ತಿಳುವಿಕೆಯಿಂದ ಅವರಂನು ಬೆಳಕಾಗ ಮಾಡು. ಅವರು ತಿಳುಕೊಂಡಂಥ, ದೇವ ಭಕ್ತಿಗಾಗಿರುವಂಥ, ಸತ್ಯದಲ್ಲಿ ನಂಬಿಕೆಯುಳ್ಳವರಾಗಿ, ತಂಮ ಭಾಗ್ಯವಾದ ಅಂತ್ಯದ ಪರಿಯಂತರ ನಿಲ್ಲುವ ಹಾಗೆ, ಅವರಲ್ಲಿ ನಿಂನ ಪರಿಶುದ್ಧಾತ್ಮದ ವರಗಳಂನು ಹೆಚ್ಚಿಸು. ಆಮೆನ್.

ಎಲ್ಲಾ ಬುದ್ಧಿಯಂನು ಮೀರುವ ದೇವರ ಸಮಾಧಾನವು ನಿಂಮ ಹೃದಯಗಳಂನು ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ. ಆಮೆನ್.

* * *

ಈಗ ನಿಂಮ ವಿಶ್ವಾಸದ ಅರಿಕೆಯಂನು ಪೇಳಿರಿ.

(Nachdem die Kinder einzeln auf die Fragen des Confirmationsbüchleins geantwortet haben, sind folgende Fragen an sie gemeinschaftlich zu richten.)

ಪ್ರಶ್ನೆ.—ಪ್ರಿಯ ಹುಡುಗರೇ, ಹೀಗಿರಲಾಗಿ ನೀವು ಬಾಯಿಂದಲೂ ಹೃದಯದಿಂದಲೂ ಈ ಸುವಾರ್ತೆಯಾದ ವಿಶ್ವಾಸದ ಬೋಧನೆಯಂನು ಅರಿಕೆ ಮಾಡಿ, ಅದರಲ್ಲಿ ನೆಲೆಗೊಂಡು, ನಿಂಮ ನಡತೆಯಂನೆಲ್ಲಾ ಅದರ ಪ್ರಕಾರ ತಿದ್ದು ಕೊಳ್ಳ ಬೇಕೆಂದು, ಮನಸ್ಸಾಗಿದ್ದೀರಾ?

ಉತ್ತರ.—ಹೌದು ಹೃದಯದಿಂದ!

ಪ್ರ.—ಸೈತಾನನಂನೂ, ಅವನ ಯೆಲ್ಲಾ ಕ್ರಿಯೆಗಳಂನೂ, ಲೋಕವಂನೂ ಮಾಂಸದ ಯೆಲ್ಲಾ ಇಚ್ಛೆಗಳಂನೂ, ಬಿಟ್ಟು ಯೆದುರಿಸುತ್ತೀರಾ?

ಉ.—ಹೌದು ಬಿಟ್ಟು ಯೆದುರಿಸುತ್ತೇವೆ.

ಪ್ರ.—ತಂದೆ ಮಗ ಪರಿಶುದ್ಧಾತ್ಮಕ್ಕೆ ಯೆಂದೆಂದಿಗೂ ನಂಬಿಕೆಯುಳ್ಳವರಾಗಿದ್ದು, ಆತನ ಚಿತ್ತಕ್ಕೂ ವಾಕ್ಯಕ್ಕೂ ಅನುಸಾರವಾಗಿ ವಿಶ್ವಾಸಿಸಲಿಕ್ಕೂ, ಬದುಕಲಿಕ್ಕೂ, ಶ್ರಮೆ ಪಡಲಿಕ್ಕೂ, ಸಾಯಲಿಕ್ಕೂ, ಹಂಗಂನು ಹೊಸತಾಗಿ ನಿಂಮ ಮೇಲೆ ತಕ್ಕೊಳ್ಳುತ್ತೀರಾ?

ಉ.—ಹೌದು ಪೂರ್ಣ ಹೃದಯದಿಂದ ಇದರ ಹಂಗಂನು ನಂಮ ಮೇಲೆ ತಕ್ಕೊಳ್ಳುತ್ತೇವೆ. ದೇವರು ತಾನೇ ಅದಕ್ಕೆ ತಂನ ಆತ್ಮದ ಕೃಪೆಯಂನೂ ಶಕ್ತಿಯಂನೂ ನಮಗೆ ದಯಪಾಲಿಸಲಿ. ಆಮೆನ್.

Die Confirmanden knien einzeln vor den Altar, der Geistliche legt jedem seine rechte Hand auf das Haupt und spricht:

1.

ಪರಲೋಕದ ತಂದೆಯು, ಯೇಸು ಕ್ರಿಸ್ತನ ನಿಮಿತ್ತ, ನಿಂನ ವಿಶ್ವಾಸದ ಆಧಾರಕ್ಕೂ, ಭಕ್ತಿಯ ತ್ರಾಣಕ್ಕೂ, ಪ್ರೇಮೆಯ ತಾಳ್ಮೆಗೂ, ನಿತ್ಯಜೀವದ ಭಾಗ್ಯವಾದ ಹಾರೈಕೆಗೂ, ನಿಂನಲ್ಲಿ ಪರಿಶುದ್ಧಾತ್ಮನ ವರವಂನು ಹೆಚ್ಚಿಸಲಿ. ಆಮೆನ್.

2. Oder (ಅಥವಾ):

ನೀನು ಪರಿಶುದ್ಧಾತ್ಮನ ಮುಖದಿಂದ ಒಳಮನುಷ್ಯನಲ್ಲಿ ಶಕ್ತಿಯಿಂದ ಬಲಗೊಳ್ಳುವ ಹಾಗೆಯೂ, ಕ್ರಿಸ್ತನು ವಿಶ್ವಾಸದಿಂದ ನಿಂನ ಹೃದಯದಲ್ಲಿ ನಿವಾಸಿಸುವ ಹಾಗೆಯೂ, ನೀನು ದೇವರ ಸಮಸ್ತ ಸಂಪೂರ್ಣತೆಯಿಂದ ತುಂಬುವ ಹಾಗೆಯೂ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯು, ತಂನ ಮಹಿಮೆಯ ಐಶ್ವರ್ಯದ ಪ್ರಕಾರ, ನಿನಗೆ ದಯ ಮಾಡಲಿ. ಆಮೆನ್.

3. Oder (ಅಥವಾ):

ಕ್ರಿಸ್ತ ಯೇಸುವಿನಲ್ಲಿರುವ ತಂನ ನಿತ್ಯವಾದ ಮಹಿಮೆಗೆ ನಿನ್ನನ್ನು ಕರೆದ ಸರ್ವಕೃಪೆಯುಳ್ಳ ದೇವರು ನಿಂನಂನು ನೆಟ್ಟಗೆ ಮಾಡಿ, ಸ್ಥಿರ ಪಡಿಸಿ, ಬಲ ಪಡಿಸಿ, ನೆಲೆಗೊಳ್ಳಿಸಿ, ತಂನ ತ್ರಾಣದಿಂದ ನಿತ್ಯಜೀವಕ್ಕಾಗಿ ಕಾಪಾಡಲಿ. ಆಮೆನ್.

4. Oder (ಅಥವಾ):

ಸಮಾಧಾನದ ದೇವರು ತಾನೇ ನಿಂನಂನು ಸಂಪೂರ್ಣವಾಗಿ ಪರಿಶುದ್ಧ ಮಾಡಲಿ. ಮತ್ತು ನಿಂನ ಪೂರ್ಣ ಆತ್ಮ ಪ್ರಾಣ ದೇಹಗಳು

ನಂಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯಲ್ಲಿ ತಪ್ಪಿಲ್ಲದ ಹಾಗೆ, ಕಾಪಾಡಲಿ. ಆಮೆನ್.

5. Oder (ಅಥವಾ):

ಸಮಾಧಾನದ ದೇವರು ತಾನೇ ನಿಂನಂನು ಸಕಲ ಸತ್‌ಕ್ರಿಯೆಗಳಲ್ಲಿ ಸಂಪೂರ್ಣನಾಗ ಮಾಡಿ, ತಂನ ಸಮುಖದಲ್ಲಿ ಸರಿ ಬೀಳುವಂಥಾದ್ದಂನು ನಿಂನಲ್ಲಿ ಯೇಸು ಕ್ರಿಸ್ತನ ಮುಖದಿಂದ ಉಂಟು ಮಾಡಲಿ. ಆಮೆನ್.

ಪ್ರಾರ್ಥನೆ ಮಾಡೋಣ.

ಸರ್ವತ್ರಾಣವುಳ್ಳ ದೇವರೇ, ಅಂತಃಕರಣ ಉಳ್ಳ ತಂದೆಯೇ, ನೀನೊಬ್ಬನೇ ಒಳ್ಳೇದಂನೆಲ್ಲಾ ನಂಮಲ್ಲಿ ಆರಂಭಿಸಿ ಪುಷ್ಟಿ ಮಾಡಿ ಪೂರೈಸುತ್ತೀ. ನಾವು ನಿಂನಂನು ಈ ಹುಡುಗರಿಗೋಸ್ಕರ ಬೇಡಿಕೊಳ್ಳುವದೇನಂದರೆ—ಅವರಂನು ಕ್ರಿಸ್ತನ ಜೀವವುಳ್ಳ ಅವಯವಗಳಾಗಿ, ಸದ್ವಿಶ್ವಾಸದಲ್ಲಿಯೂ, ನಿಂನ ಪರಿಶುದ್ಧ ಸುವಾರ್ತೆಯ ವಿಧೇಯತ್ವದಲ್ಲಿಯೂ, ಸ್ಥಿರವಾಗಿ ಕಾಪಾಡು. ಅವರು ಈಹೊತ್ತು ಅರಿಕೆ ಮಾಡಿದ ಸತ್ಯ ಬಿಟ್ಟು, ಯಾವ ಅಬದ್ಧವಾದ ಬೋಧನೆಯಿಂದಾಗಲಿ, ಮಾಂಸದ ಇಚ್ಛೆಯಿಂದಾಗಲಿ, ತಪ್ಪಿ ಹೋಗದ ಹಾಗೆ, ಅವರಂನು ನಿಂನ ಆತ್ಮದಿಂದ ಬಲಗೊಳಿಸು. ಅವರು ಸಕಲ ವಿಷಯದಲ್ಲಿ, ನಂಮೆಲ್ಲರ ತಲೆಯಾಗಿರುವ, ಕ್ರಿಸ್ತನಲ್ಲಿ ಬೆಳೆದು, ಯೆಲ್ಲಾ ಜ್ಞಾನ ಪರಿಶುದ್ಧತ್ವ ನೀತಿಯಲ್ಲಿ ಆತನ ಸಂಪೂರ್ಣ ಪುರುಷನ ಪ್ರಾಯಕ್ಕೆ ಮುಟ್ಟುವ ಹಾಗೆ, ಅವರಿಗೆ ಕೃಪೆ ಕೊಡು. ಅವರು ನಿಂನಂನೂ, ನಂಮ ಕರ್ತನಾದ ನಿಂನ ಪ್ರಿಯ ಮಗನಂನೂ ಪರಿಶುದ್ಧಾತ್ಮನಂನೂ ಸಹಾವಾಗಿ, ಒಬ್ಬನಾದ ಸತ್ಯ ದೇವರೆಂದು, ಹೆಚ್ಚು ಹೆಚ್ಚಾಗಿ

ತಿಳುಕೊಂಡು, ನಿನ್ನ ಸಭೆಯಲ್ಲಿ ಹೆಚ್ಚುವ ಧೈರ್ಯದಿಂದ ನುಡಿ ನಡೆಯಿಂದ ಅರಿಕೆ ಮಾಡಿ, ತಾವು ಫಲಿಸುವ ಸತ್ಕ್ರಿಯೆಗಳಿಂದ ನಿನ್ನ ಕೃಪೆಯನ್ನುಸ್ತುತಿಸುವ ಹಾಗೆ, ಅವರಿಗೆ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ದಯ ಮಾಡು. ಆಮೆನ್.

ಸಮಾಧಾನದಿಂದ ಹೋಗಿರಿ. ನೀವು ಪರಲೋಕ ಭೂಲೋಕ ನಿರ್ಮಾಣ ಮಾಡಿದ ಕರ್ತನ ಆಶೀರ್ವಾದ ಹೊಂದಿದವರಾಗಿದ್ದೀರಿ. ಆಮೆನ್.

Oder (ಅಥವಾ):

ಕರ್ತನಾದ ದೇವರೇ, ಪರಲೋಕದವನಾದ ತಂದೆಯೇ, ಹೇಳಲಾರದಂಥ ನಿನ್ನ ಜ್ಞಾನ ನೀತಿಯಿಂದ, ನೀನು ನಿನ್ನ ರಾಜ್ಯದ ಮರ್ಮಗಳನ್ನು ಈ ಲೋಕದ ಜ್ಞಾನಿಗಳಿಗೆ ಮರೆ ಮಾಡಿ, ಅವುಗಳನ್ನು ಬಾಲಕರಿಗೆ ಪ್ರಕಟ ಮಾಡುತ್ತಿ. ನೀನು ಈ ನಂಮ ಮಕ್ಕಳನ್ನು ಈಂಥಾ ತಿಳುವಿಕೆಗೆ ತರಿಸಿದ, ನಿನ್ನ ದೊಡ್ಡ ದಯಕ್ಕೆ ನಾವು ಸ್ತೋತ್ರ ಹೇಳುತ್ತೇವೆ. ಈ ತಿಳುವಿಕೆಯಿಂದ ಅವರು ನಿನ್ನ ಮಗನಾದ ಯೇಸು ಕ್ರಿಸ್ತನಂನೂ, ಆತನ ಸುವಾರ್ತೆಯ ಸತ್ಯವಂನೂ, ಹೃದಯದಿಂದ ವಿಶ್ವಾಸಿಸುತ್ತಾರೆ; ಮತ್ತು ಬಾಯಿಂದ ಅರಿಕೆ ಮಾಡುತ್ತಾರೆ. ನಾವು ಅವರಿಗೋಸ್ಕರ ನಿಂನಂನು ವಿನಯವಾಗಿ ಬೇಡಿ ಕೊಳ್ಳುವದೇನಂದರೆ—ನಿನ್ನ ಪರಿಶುದ್ಧಾತ್ಮದಿಂದ ಅವರ ಹೃದಯ ಮನಸ್ಸುಗಳಂನು ಇಂನು ಹೆಚ್ಚು ಬೆಳಕಾಗ ಮಾಡಿ, ಬಲಗೊಳಿಸು. ಅದರಿಂದ ಅವರು ಜೀವ ಉಳ್ಳ ವಿಶ್ವಾಸವಂನೂ, ದೇವರ ಭಕ್ತಿಯಂನೂ, ಸ್ಥಿರತ್ವವಂನೂ, ಆತ್ಮಭಾವವಾದ ಸಕಲ ಕಾರ್ಯಗಳ ವಿವೇ

ತವಂನೂ, ಹೊಂದಿದವರಾಗಿ, ತಂಮ ಪ್ರಾಣಗಳ ರಕ್ಷಣೆಗೆ ಹಿತವಾದಂಥಾದೆಲ್ಲಾದರಲ್ಲಿ ದಿನ ದಿನಕ್ಕೆ ಬೆಳೆದು, ನಿಂನ ಪರಿಶುದ್ಧ ಹೆಸರಿನ ಮಾನಕ್ಕಾಗಿ ವಿಶ್ವಾಸ ಪ್ರೀತಿಗಳ ಸತ್ಫಲಗಳನ್ನು ಫಲಿಸಿ, ಅವುಗಳಲ್ಲಿ ನಿನ್ನ ದಿವಸದ ವರೆಗೂ ಸ್ಥಿರರಾಗಿ ನೆಲೆಗೊಳ್ಳಲಿ. ಆ ದಿನದಲ್ಲಿ ನೆಟ್ಟಗೆ ಯುದ್ಧ ಮಾಡಿದವರು ನೀತಿಯ ಕಿರೀಟವಂನು, ನಿಂನ ಮಗನಾದ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ, ಹೊಂದುವರು. ಆತನೇ ನಿಂನ ಸಂಗಡಲೂ, ಪರಿಶುದ್ಧಾತ್ಮನ ಸಂಗಡಲೂ, ಸತ್ಯ ದೇವರಾಗಿ, ಯುಗಯುಗಾಂತರಕ್ಕೂ ಬಾಳುತ್ತಾ, ಆಳುತ್ತಾ ಇರುವನು. ಆಮೆನ್.

ಕರ್ತನು ನಿಂಮಂನು ಆಶೀರ್ವದಿಸಿ ಕಾಯಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮಂನು ಕರುಣಿಸಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ. ಆಮೆನ್.

---

## Abendmahl (ರಾತ್ರಿಭೋಜನ).

(Wenn das Abendmahl gehalten wird, so soll immer am vorhergehenden Tag, wo möglich Abends, ein besonderer Vorbereitungs- oder Beicht-Gottesdienst stattfinden. Die Beichte findet als besonderer Akt nach der Predigt statt. Der Prediger steht hiebei im Altar.)

### 1. Beichtformular (ಪಾಪ ಅರಿಕೆ ಮಾಡುವ ವಿಧಿ).

ಯೇಸು ಕ್ರಿಸ್ತನಲ್ಲಿ ಪ್ರಿಯರೇ, ಕರ್ತನ ರಾತ್ರಿಭೋಜನ ತಕ್ಕೊಳ್ಳಲಿಕ್ಕೆ ಮನಸ್ಸುಳ್ಳವರೆಲ್ಲರು ಅಪೊಸ್ತಲನಾದ ಪೌಲನ ಮಾತುಗಳಂನು ನೆನಪಿಗೆ

ತರ ಬೇಕು. ಅವು ಯಾವವಂದರೆ—ಮನುಷ್ಯನು ತಂನಂನು ಪರೀಕ್ಷಿಸಿ ಕೊಳ್ಳಲಿ; ಮತ್ತು ಹೀಗೆ ಆ ರೊಟ್ಟಿಯಲ್ಲಿ ತಿಂದು, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ ಅಯೋಗ್ಯವಾಗಿ ತಿಂದು ಕುಡಿಯುವವನು, ಕರ್ತನ ಶರೀರಕ್ಕೂ ರಕ್ತಕ್ಕೂ ಅಪರಾಧಿಯಾಗಿದ್ದು, ತನಗೆ ಆಗ್ಞಾ ನಿರ್ಣಯವಂನು ತಿಂದು ಕುಡಿಯುತ್ತಾನೆ. ಅದುಕಾರಣ ನಾವು ನ್ಯಾಯತೀರಿಸಲ್ಪಡದ ಹಾಗೆ, ನಂಮಂನು ನಾವೇ ವಿಚಾರಿಸಿ ಕೊಳ್ಳುವಾ—

ನಮಗೆ ಪಾಪವಿಲ್ಲವೆಂದು ಹೇಳಿದರೆ, ನಂಮಂನು ನಾವೇ ಮೋಸಗೊಳಿಸುತ್ತೇವೆ. ಮತ್ತು ಸತ್ಯವು ನಂಮಲ್ಲಿ ಇಲ್ಲ. ಮನುಷ್ಯನ ಹೃದಯದ ಕಲ್ಪನೆ ಅವನ ಚಿಕ್ಕತನದಿಂದ ಕೆಟ್ಟದ್ದು. ಮಾಂಸದಿಂದ ಹುಟ್ಟಿದ್ದು ಮಾಂಸವೇ. ಭೇದವಿಲ್ಲ; ನಾವೆಲ್ಲರು ಪಾಪ ಮಾಡಿ, ದೇವರ ಮಹಿಮೆಗೆ ತಪ್ಪಿ ಹೋದೆವು. ಆದರೆ ಕರ್ತನು ಅಂತರಿಂದ್ರಿಯಗಳಂನೂ ಹೃದಯಗಳಂನೂ ಶೋಧಿಸುತ್ತಾನೆ. ಆತನ ಕಂಣುಗಳಿಗೆ ಸಮಸ್ತವು ಬತ್ತಲೆಯಾಗಿಯೂ ತೆರದದ್ದಾಗಿಯೂ ಇದೆ. ದುಷ್ಟತ್ವದಲ್ಲಿ ಆತನು ಸಂತೋಷಿಸುವಾತನಲ್ಲ; ಕೆಟ್ಟವನು ಆತನ ಬಳಿಯಲ್ಲಿ ತಂಗನು. ನಾವು ಪಾಪದಲ್ಲಿ ನಿಂತು, ಮನಸಾಂತರ ಪಡದೆ, ಕಠಿಣ್ಯರಾಗಿ ಹೋದರೆ, ದೇವರ ನೀತಿಯಾದ ತೀರ್ಪಿಕೆ ಪ್ರಕಟವಾಗುವಂಥ ಕೋಪದ ದಿವಸಕ್ಕೆ ನಮಗೆ ನಾವೆ ಕೋಪವಂನು ಕೂಡಿಟ್ಟು ಕೊಳ್ಳುತ್ತೇವೆ. ಯಾಕಂದರೆ ಆತನು ವೊಬ್ಬೊಬ್ಬನಿಗೆ ಅವನವನ ಕ್ರಿಯೆಗಳ ಪ್ರಕಾರ ಬದಲು ಕೊಡುವನು; ಮತ್ತು ಆತನ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ.—ಹೀಗಿರಲಾಗಿ ನಿಂಮ ಪಾಪಗಳು ಅಳಿಸಲ್ಪಡುವದಕ್ಕೆ ಮನಸಾಂತರ ಪಟ್ಟು, ತಿರಿಗಿ

ಕೊಳ್ಳಿರಿ. ದುಷ್ಟನು ತಂನ ಮಾರ್ಗಗಳನ್ನೂ, ಅಪರಾಧಸ್ಥನು ತಂನ ಆಲೋಚನೆಗಳಂನೂ ಬಿಟ್ಟು ಬಿಡಲಿ. ನಿಂಮ ಅಪರಾಧ ತಿಳಕೊಳ್ಳಿರಿ; ನಿಂಮ ದ್ರೋಹಕ್ಕೆ ದುಃಖ ಪಟ್ಟು, ದೇವರ ಮುಂದೆ ನಿಂಮಂನು ತಗ್ಗಿಸಿಕೊಳ್ಳಿರಿ. ಅವಿಶ್ವಾಸವುಳ್ಳ ಕೆಟ್ಟ ಹೃದಯವು ನಿಂಮೊಳಗೆ ಒಬ್ಬನಿಗೂ ಇರದ ಹಾಗೆ, ನೋಡಿ ಕೊಳ್ಳಿರಿ. ಈ ಹೊತ್ತು ದೇವರ ಶಬ್ದವಂನು ಕೇಳಿದರೆ, ನಿಂಮ ಹೃದಯಗಳಂನು ಕಠಿಣ ಪಡಿಸ ಬೇಡಿರಿ. ನಿಂಮ ಸಮಾಧಾನಕ್ಕೆ ಬೇಕಾದವುಗಳಂನು ತಿಳಕೊಂಡು, ನಿಂಮ ಪ್ರಾಣಗಳಂನು ರಕ್ಷಿಸುವದಕ್ಕೆ ತ್ವರೆ ಪಡಿರಿ.

ಇಂಥಾ ಯೆಚ್ಚರಿಕೆ ಮಾತುಗಳಿಂದ ದೇವರ ವಾಕ್ಯವು ನಮಗೆ ನಂಮ ಅಯೋಗ್ಯತನವಂನು ನೆನಪಿಗೆ ತಂದು, ಇಷ್ಟು ಬಲವಾಗಿ ನಂಮಂನು ಮನಸಾಂತರಕ್ಕೆ ಕರೆಯುತ್ತದೆ. ಆದರೆ ಅದು ನಮಗೆ ದೇವರ ಅಂತಃಕರಣದ ಅಶೋಧ್ಯವಾದ ಐಶ್ವರ್ಯವಂನು ಸಹಾ ಸಾರಿ ಹೇಳುತ್ತದೆ. ಹ್ಯಾಗಂದರೆ. —

ಕರ್ತನಾದ ದೇವರು ಹೇಳುವದು — ನಂನ ಜೀವದ ಆಣೆ — ಪಾಪಿಷ್ಟನು ಮರಣದಲ್ಲಿ ಅಲ್ಲಾ, ಅವನು ತಂನ ಮಾರ್ಗ ಬಿಟ್ಟು ತಿರಿಗಿ ಕೊಂಡು ಬದುಕುವದರಲ್ಲಿಯೇ ನಂನ ಸಂತೋಷವು ಅದೆ. ತಂದೆಯು ಮಕ್ಕಳ ಮೇಲೆ ಅಂತಃಕರಣ ಪಡುವ ಪ್ರಕಾರ ಕರ್ತನು ತನಗೆ ಭಯ ಪಡುವವರ ಮೇಲೆ ಅಂತಃಕರಣ ಪಡುತ್ತಾನೆ. ಮನಸಾಂತರ ಪಡುವ ಒಬ್ಬ ಪಾಪಿಯ ಮೇಲೆ ಪರಲೋಕದಲ್ಲಿ ಸಂತೋಷವು ಇರುವದು. ಆತನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವವಂನು ಹೊಂದು

ವ ಬಗ್ಗೆ, ದೇವರು ಒಬ್ಬನಾಗಿ ಹುಟ್ಟಿದ ತಂನ ಮಗನಂನು ಕೊಡುವ ಹಾಗೆ, ಲೋಕಕ್ಕೆ ಅಷ್ಟು ಪ್ರೀತಿ ಮಾಡಿದನು. ದೇವರಿಗೆ ಅನ್ಯೋನ್ಯವಾಗಿರಿ. ಯಾಕಂದರೆ ನಾವು ಆತನಲ್ಲಿ ದೇವರ ನೀತಿಯಾಗುವ ಹಾಗೆ, ಪಾಪವಂನರಿಯದವನಂನು ನಮಗೋಸ್ಕರ ಪಾಪವಾಗ ಮಾಡಿದನು.

ಇಂಥಾ ಎಚ್ಚರಿಕೆಯಂನೂ ವಾಗ್ದತ್ತವಂನೂ ನೀವು ಈಗ ಸತ್ಯದ ವಾಕ್ಯದಿಂದ ಕೇಳಿದ ಮೇಲೆ; ನಾವು ನಂಮ ಪಾಪಗಳಂನು ಅರಿಕೆ ಮಾಡಲಿಕ್ಕೂ, ಕೃಪೆಯಂನು ಹುಡುಕಲಿಕ್ಕೂ, ನಂಮಂನು ದೇವರ ಮುಂದೆ ತಗ್ಗಿಸಿ ಕೊಂಡು, ಹೇಳುವದೇನಂದರೆ.

---

## Sündenbekenntniss (ಪಾಪದ ಅರಿಕೆ).

(Alle knien.)

ಬಡಪಾಪವುಳ್ಳ ಮನುಷ್ಯನಾದ ನಾನು ಪರಲೋಕದ ನಂನ ತಂದೆಯಾದ ದೇವರ ಮುಂದೆ ಅರಿಕೆ ಮಾಡುವದೇನಂದರೆ—ಘೋರವಾದ, ನಾನಾತರವಾದ ಪಾಪ ಮಾಡಿದ್ದೇನೆ. ಆತನ ಆಜ್ಞೆಗಳಂನು ಬಹಿರಂಗವಾಗಿ ಮೀರುವದರಿಂದ ಮಾತ್ರವಲ್ಲ, ಇಂನು ಬಹು ಹೆಚ್ಚಾಗಿ ಅಂತರಂಗವಾದ ಕೆಟ್ಟತನದಿಂದಲೂ, ಆತ್ಮದ ಕಲ್ಮಷದಿಂದಲೂ, ಅಂದರೆ ಅವಿಶ್ವಾಸ ಅಲ್ಪ ನಂಬಿಗೆ ತಾಳ್ಮೆ ಹೀನತ್ವಗಳಿಂದಲೂ, ಆಲಸ್ಯದಿಂದಲೂ, ಒಳ್ಳೇದಂನು ಮಾಡುವದರಲ್ಲಿ ಬಹಳವಾಗಿ ಹಿಂದಾದದರಿಂದಲೂ, ಸೊಕ್ಕು ಗರ್ವಗಳಿಂದಲೂ, ಹೊಟ್ಟೆಕಿಚ್ಚು ಹಗೆ ದ್ವೇಷಗಳಿಂದಲೂ, ಸಿಟ್ಟು ಕಹಿ ಮನಸ್ಸಿನಿಂದಲೂ, ಹಂಮು ಲೋಕ ಪ್ರೀತಿಯಿಂ

ದಲೂ, ಮಾಂಸದ ಇಚ್ಛೆ ಆಶೆಗಳಿಂದಲೂ, ಲೋಭ ದ್ರವ್ಯಾಶೆ ಮೊದಲಾದ, ಹೃದಯದ ನಾನಾ ಕುಯುಕ್ತಿಗಳಿಂದಲೂ, ನಾನು ದೇವರ ಕೋಪಕ್ಕೂ, ನ್ಯಾಯತೀರ್ವಿಕೆಗೂ, ಹಾಗೂ ನಾನಾ ವಿಧವಾದ ಇಹದ ಪರದ ದಂಡನೆಗಳಿಗೂ, ನಿತ್ಯನರಕದ ಆಜ್ಞೆತೀರ್ವಿಕೆಗೂ ಸುಧಾ, ಬಹಳವಾಗಿ ಗುರಿಯಾದೆನು. ಈ ನಂನ ಪಾಪಗಳಂನು ನಂನ ಕರ್ತನಾದ ದೇವರು ನಂನಲ್ಲಿ ತಿಳಿಯುವ ಪ್ರಕಾರ, ನಾನು ಅವುಗಳಂನು ಪೂರ್ಣವಾಗಿ ತಿಳಿ ಕೊಳ್ಳಲಾರೆನು. ಆದರು ಅವುಗಳಿಗೆ ಪಶ್ಚಾತ್ತಾಪ ದುಖ್ಖ ಪಟ್ಟು, ಮನಃಪೂರ್ವಕವಾಗಿ ದೇವರ ಕಡೆಯಿಂದ ಕೃಪೆಯಂನೂ, ಆತನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖದಿಂದ, ಬೇಡಿ ಕೊಳ್ಳುತ್ತೇನೆ. ಆಮೆನ್.

Oder (ಅಥವ): Insbesondere bei Privat-Beichte mit Handauflegung.

ಲೋಕಕ್ಕೆ ಆಜ್ಞೆನಿರ್ಣಯಿಸುವದಕ್ಕಲ್ಲ, ಲೋಕವು ತಂನಿಂದ ರಕ್ಷಣೆ ಹೊಂದುವ ಹಾಗೆ, ಈ ಲೋಕಕ್ಕೆ ಬಂದಾತನೂ —

ಕಷ್ಟ ಪಟ್ಟು ಭಾರ ಹೊರುವವರೆಲ್ಲರಂನು ಅವರಿಗೆ ವಿಶ್ರಾಂತಿ ಕೊಡುವದಕ್ಕೆ ತಂನ ಬಳಿಗೆ ಕರೆಯುವಾತನೂ—ಆತನೇ ನನಗೆ ಒಪ್ಪಿಸಿದ ಸೇವೆಯಿಂದ ನಿನಗೆ (ನಿಮಗೆ) ಹೇಳುವದ್ದೇನಂದರೆ—ಧೈರ್ಯವಾಗಿರು (ಇರ್ರಿ); ನಿಂನ (ನಿಂಮ) ಪಾಪಗಳು ನಿನಗೆ (ನಿಮಗೆ) ಮಂನಿಸಲ್ಪಟ್ಟವೆ.

* * *

## ಪ್ರಾರ್ಥನೆ ಮಾಡೋಣ.

ಸರ್ವತ್ರಾಣಿಯಾದ, ಪರಲೋಕದವನಾದ, ತಂದೆಯೇ, ನೀನು ನಿಂನ ದೊಡ್ಡ ಅಂತಃಕರಣದ ಪ್ರಕಾರ, ನಿಂನ ಒಬ್ಬನಾಗಿ ಹುಟ್ಟಿದ ಮಗನಾದ ಯೇಸು ಕ್ರಿಸ್ತನಂನು, ಆತನು ನಂಮ ವಿಮೋಚನೆಗಾಗಿ ಶಿಲುಬೆಯಲ್ಲಿ ಮರಣವಂನು ಅನುಭವಿಸುವದಕ್ಕೆ, ಒಪ್ಪಿಸಿ ಕೊಟ್ಟ ಕಾರಣ, ನಿಂನಂನು ಸ್ತುತಿಸುತ್ತೇವೆ. ಆತನು ತಂನಂನು ತಾನೇ ಅರ್ಪಿಸಿದ ಒಂದೇ ಬಲಿಯಿಂದ ಸಂಪೂರ್ಣವಾದಂಥ, ನಿರಂತರಕ್ಕೆ ಸಾಕಾಗುವಂಥ ಅರ್ಪಣೆಯಂನೂ, ಸಮಸ್ತ ಲೋಕದ ಪಾಪಗಳಿಗೋಸ್ಕರವಾದ ಪ್ರಾಯಶ್ಚಿತ್ತವಂನೂ ತಂದು, ಅನ್ಯೋನ್ಯದ ಮಾತಂನು ಸಾರುವ ಸೇವೆಯಿಂದ ನಮಗೆ ನಂಮ ಪಾಪಗಳ ಪರಿಹಾರವಂನು ಸಹಾ ಸಾರಿ ತಿಳಿಸಿದದರಿಂದ, ನಿನಗೆ ಸ್ತೋತ್ರ ಮಾಡುತ್ತೇವೆ. ನಾವು ಆತನ ಅಮೂಲ್ಯವಾದ ಮರಣವಂನು, ಆತನ ಆಜ್ಞೆಯ ಪ್ರಕಾರ, ಆತನು ಬರುವ ಮಟ್ಟಿಗೂ ಸಾರುವದಕ್ಕೆ ದಯ ಮಾಡು ಯೆಂದು,—ಓ ಅಂತಃಕರಣ ಉಳ್ಳ ತಂದೆಯೇ, ನಿಂನಂನು ಬೇಡಿ ಕೊಳ್ಳುತ್ತೇವೆ. ನಂಮ ಸ್ವಂತ ನೀತಿಯಂನು ಭರವಸ ಮಾಡಿ, ನಾವು ನಿಂನ ಮೇಜಿನ ಬಳಿಗೆ ಬರಲಿಕ್ಕೆ ಧೈರ್ಯ ಮಾಡದೆ ನಿಂನ ದೊಡ್ಡ ಅಂತಃಕರಣದ ಮೇಲೆ ಇಡುವ ಭರವಸದಿಂದ ಮಾತ್ರ ಬರುತ್ತೇವೆ. ನಿಂನ ಮೇಜಿನಿಂದ ಬೀಳುವ ತುಂಡುಗಳಂನು ಕೂಡಿಸುವದಕ್ಕೆ ಸಹಾ ನಾವು ಯೋಗ್ಯರಲ್ಲಾ. ಆದರೆ ನೀನು, ಓ ಕರ್ತನೇ, ಯೆಂದೆಂದಿಗೂ ಅದೇ ಪ್ರಕಾರವಾಗಿರುವಾತನೇ, ನಿಂನ ಅಂತಃಕರಣಕ್ಕೆ ಅಂತ್ಯವಿಲ್ಲಾ. ಆದದರಿಂದ ನಾವು ನಿಂನ ಮಗನಾದ ಯೇಸು ಕ್ರಿಸ್ತನ

ಮಾಂಸವಂನು ತಿಂದು, ಆತನ ರಕ್ತವಂನು ಕುಡಿಯುವದರಿಂದ, ದೇಹ ಪ್ರಾಣದಲ್ಲಿ ಕ್ಷೇಮ ಹೊಂದಿ, ನಿತ್ಯಜೀವಕ್ಕೆ ತೃಪ್ತಿಯಾಗಿ, ಯೆಂದೆಂದಿಗೂ ನಾವು ಆತನಲ್ಲಿಯೂ ಆತನು ನಂಮಲ್ಲಿಯೂ ವಾಸ ಮಾಡುವ ಹಾಗೆ, ದಯ ಮಾಡು. ಆಮೆನ್.

Oder (ಅಥವಾ):

ಅಂತಃಕರಣ ಉಳ್ಳ ದೇವರೇ, ತಂದೆಯೇ, ನೀನು ನಂಮಂನು ಇಂಥಾ ಕೃಪೆಯಿಂದ ಅಂಗೀಕರಿಸಿ, ನಿಂನ ಮಗನಾದ ಯೇಸು ಕ್ರಿಸ್ತನ ನಿಮಿತ್ತ, ನಮಗೆ ನಂಮ ಪಾಪಗಳಂನೆಲ್ಲಾ ಮಂನಿಸಿದ ಕಾರಣ, ನಿನಗೆ ಸ್ತುತಿ ಸ್ತೋತ್ರ ಹೇಳುತ್ತೇವೆ. ಓ ನಂಬಿಕೆಯುಳ್ಳ ದೇವರೇ, ನಂಮಂನು ನಿಂನ ಕೃಪೆಯಲ್ಲಿ ಕಾಪಾಡಿ, ನಾವು ಇಂದಿನಿಂದ ಪಾಪವಂನು ಹಗೆ ಮಾಡಿ, ಬಿಟ್ಟು, ಸೈತಾನನ ಶೋಧನೆಗಳಂನೆಲ್ಲಾ ವಿಶ್ವಾಸದಿಂದ ದೃಢವಾಗಿ ಯೆದುರಿಸಿ, ನೀತಿಯಲ್ಲಿಯೂ ಸತ್ಯದ ಪರಿಶುದ್ಧಾತ್ಮದಲ್ಲಿಯೂ ನಿನಗೆ ಸೇವೆ ಮಾಡುವದಕ್ಕೆ, ನಮಗೆ ಶಕ್ತಿ ಬಲ ಕೊಡು. ನೀನು ಮೆಚ್ಚುವಂಥಾದಂನು ಮಾಡ ನಮಗೆ ಬೋಧಿಸು. ಒಳ್ಳೇದಾಗಿರುವ ನಿಂನ ಆತ್ಮದಿಂದ ನಂಮಂನು ನೆಟ್ಟಗಾದ ಹಾದಿಯಲ್ಲಿ ನಡಿಸು. ಆಮೆನ್.

ಯೆಲ್ಲಾ ಬುದ್ಧಿಯಂನು ಮೀರುವ ದೇವರ ಸಮಾಧಾನವು ನಿಂಮ ಹೃದಯಗಳಂನೂ ಮನಸುಗಳಂನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ. ಆಮೆನ್.

---

## 2. Abendmahlshandlung (ರಾತ್ರಿಭೋಜನದ ಆಚಾರಣೆ).

(Der Geistliche tritt zum Tisch des Herrn, auf welchem Wein und Brod in genügender Quantität, in passenden Gefässen und in schicklicher Form [das Brod in längern Stücken, welche leicht gebrochen werden können und erst bei der Darreichung selbst zu brechen sind] aufgestellt ist und spricht zu der sitzenden Gemeinde das Folgende:)

ಯೇಸು ಕ್ರಿಸ್ತನಲ್ಲಿ ಪ್ರಿಯರೇ,

ನಾವು ಈಗ ನಂಮ ಪ್ರಿಯ ರಕ್ಷಕನ ಕೃಪೆ ತೋರಿತವಾದ ರಾತ್ರಿಭೋಜನವಂನು ತಕ್ಕೊಳ್ಳಲಿಕ್ಕೆ ಮನಸ್ಸಾಗಿದ್ದೇವೆ. ಅದರಲ್ಲಿ ಆತನು ನಂಮ ವಿಶ್ವಾಸವಂನು ಬಲಗೊಳ್ಳಿಸುವದಕ್ಕೆ, ನಮಗೆ ನಿಶ್ಚಯವಾಗಿ ತನ್ನ ಶರೀರವನ್ನು ಆಹಾರಕ್ಕಾಗಿಯೂ, ತನ್ನ ರಕ್ತವನ್ನು ಪಾನಕ್ಕಾಗಿಯೂ, ಕೊಟ್ಟಿದ್ದಾನೆ. ಅದುಕಾರಣ ನಾವು ಆತನ ಶರೀರ ರಕ್ತಕ್ಕೆ ಅಪರಾಧಸ್ತರಾಗದ ಹಾಗೆ, ಕರ್ತನ ಮೇಜಿನ ಮರ್ಮವು ನಮಗೆ ತಿಳಿಯುವದೇನೋ? ನಮಗೆ ಉಂಟೇನೋ? ಯೆಂದು, ನಂಮನ್ನು ಪರೀಕ್ಷಿಸಿಕೊಳ್ಳ ಬೇಕು. ಆದರೆ ಆ ಮರ್ಮವು ಯೇನಂದರೆ—ದೇವರ ಮಗನಾದ ಯೇಸು ಕ್ರಿಸ್ತನು ನಂಮಗೋಸ್ಕರ ಮಾಂಸದಲ್ಲಿ ಬಂದು, ತಂನ ಮರಣದಿಂದ ನಂಮ ಪಾಪದ ಸಾಲವಂನೆಲ್ಲಾ ಸಲ್ಲಿಸಿ, ಪರಲೋಕದ ತಂದೆಯಾದ ದೇವರಂನು ಅನ್ಯೋನ್ಯ ಮಾಡಿ, ಈ ಪ್ರಕಾರ ತಾನೇ ನಿತ್ಯಜೀವಕ್ಕಾದ ನಂಮ ಆಹಾರ ಪಾನವಾದನು. ಇದಂನೇ ನಾವು ಈ ಭೋಜನದಲ್ಲಿ ಜ್ಞಾಪಕ ಮಾಡಿ ಕೊಂಡು, ಈಗ ಸ್ತೋತ್ರದಿಂದ ಕರ್ತನ ರೊಟ್ಟಿ ದ್ರಾಕ್ಷೇರಸ ತಕ್ಕೊಳ್ಳುವದರಿಂದ ಸಾಕ್ಷಿಕೊಟ್ಟು, ಸಾರುತ್ತೇವೆ.

ಯಾಕಂದರೆ ರಾತ್ರಿಭೋಜನದ ಪಾಲುಗಾರನಾದ ಒಬ್ಬೊಬ್ಬನು, ಯೆಲ್ಲಾ

ಕ್ಕಿಂತ ಮುಂದಾಗಿ, ತಿಳಿಯ ತಕ್ಕದ್ದೇನಂದರೆ—ತನ್ನ ಪಾಪಗಳು ತನಗೆ, ನಂಮ ಕರ್ತನಾದ ಯೇಸು ಕ್ರಿಸ್ತನು ಒಪ್ಪಿಸಿ ಕೊಟ್ಟ ಶರೀರದಿಂದಲೂ, ಶಿಲುಬೆಯಲ್ಲಿ ಚೆಲ್ಲಿದ ರಕ್ತದಿಂದಲೂ, ಮಂನಿಸಲ್ಪಟ್ಟವೆ. ಈ ಪ್ರಕಾರ ಆತನಿಂದ ವಿಶ್ವಾಸಿಗಳೆಲ್ಲರಿಗೆ ನಿತ್ಯಜೀವವು ಸಂಪಾದನೆ ಆಯಿತು. ಇದಂನು ನಾವು ಇಲ್ಲಿ ಮನಕೊಟ್ಟು, ಸದ್ವಿಶ್ವಾಸದಿಂದ ಧ್ಯಾನಕ್ಕೆ ತಂದು, ಅಂಗೀಕರಿಸಿ, ತನ್ನ ಒಬ್ಬನಾಗಿ ಹುಟ್ಟಿದ ಮಗನನ್ನು ನಮಗೆ ದಾನವಾಗಿ ಕೊಟ್ಟು, ನಿತ್ಯ ವಿಮೋಚನೆಯಿಂದ ನಂಮಂನು ಪಾಪ ಸೈತಾನ ಮರಣ ನರಕ ಇವುಗಳಿಂದ ಬಿಡುಗಡೆ ಮಾಡಿದ, ದೇವರ ಹೇಳಲಾರದಂಥಾ ಪ್ರೀತಿಯಂನು, ಮನಃಪೂರ್ವಕವಾದ ಕೃತಜ್ಞತೆಯಿಂದ ತಿಳಕೊಳ್ಳ ತಕ್ಕದ್ದು. ಅದರ ದೆಸೆಯಿಂದ ನೀವು ಯೆಚ್ಚರಿಕೆ ತಕ್ಕೊಂಡು, ಧ್ಯಾನಿಸಬೇಕಾದದ್ದೇನಂದರೆ—ನಿಜವಾದ ಕುರುಬನು ಕುರಿಗಳಿಗೋಸ್ಕರವೂ, ನಿರಾಪರಾಧಸ್ಥನು ಪಾಪಿಗಳಿಗೋಸ್ಕರವೂ, ತಲೆಯು ತನ್ನ ಅವಯವಗಳಾದ ನಮಗೋಸ್ಕರವೂ, ಮದಮಗನಾದ ಪತಿಯು ತನ್ನ ಮದಮಗಳಾದ ಸಭೆಯಗೋಸ್ಕರವೂ, ಸತ್ತನು. ಪ್ರಧಾನಯಾಜಕನಾದ ಕ್ರಿಸ್ತನು ತಂದೆಗೆ ಮಾಡಿದ ವಿಧೇಯತ್ವದಿಂದಲೂ, ಬಡ ಮನುಷ್ಯರಾದ ನಮಗೆ ಮಾಡಿದ ಅಳತೆ ಇಲ್ಲದ ಪ್ರೀತಿಯಿಂದಲೂ, ತಂನಂನು ತಾನೇ ಉರಿಯುವ ದಹನದ ಬಲಿಯಾಗಿ ಅರ್ಪಿಸಿ ಕೊಟ್ಟು, ಈ ಮೇರೆಗೆ ದೇವರ ಕೃಪೆ ಒಡಂಬಡಿಕೆಯಂನು ನಮಗೆ ಬೇಕಾದಷ್ಟು ದೃಢ ಮಾಡಿ, ಮುದ್ರೆ ಹಾಕಿದನು.

ಮತ್ತು ನಾವು ತಂನ ಹೆಸರಿನಲ್ಲಿ ನಂಮ ಪರಲೋಕದ ತಂದೆಯ ಕಡೆಯಿಂದ ಬೇಡಿ ಕೊಳ್ಳುವಂಥಾದಂನೆಲ್ಲಾ ಹೊಂದುವೆವೆಂದು, ನಂಮ

ಕರ್ತನಾದ ಯೇಸು ಕ್ರಿಸ್ತನು ವಾಗ್ದತ್ತ ಕೊಟ್ಟ ಕಾರಣ; ನಾವು ಈ ನಂಮ ಕಡೆಗೆ ಇರುವಂಥ ಆತನ ಪ್ರೀತಿಯಂನು ತಕ್ಕ ಹಾಗೆ ಮನಸ್ಸಿಗೆ ತಂದು, ಸದ್ವಿಶ್ವಾಸದಲ್ಲಿಯೂ ದೇವರ ಕಡೆಗೆ ಇರುವ ಭರವಸದಲ್ಲಿಯೂ, ಬಲಗೊಂಡು, ನಂಮ ಕರ್ತನಾದ ರಕ್ಷಕನು ತಂನ ಶರೀರ ರಕ್ತವಂನು ನಂಮ ಪಾಪಗಳಿಗೋಸ್ಕರ ಸುಧಾ ಮಾಮೃಗೆ ಅರ್ಪಿಸಿ ಕೊಟ್ಟು, ಅದರಿಂದಲೇ ನಿತ್ಯವಿಮೋಚನೆಯಂನು ಸಂಪಾದಿಸಿ ಕೊಂಡು, ಯೆಲ್ಲಾ ವಿಶ್ವಾಸಿಗಳಂನು ಯುಗಯುಗಾಂತರಕ್ಕೆ ಸಂಪೂರ್ಣರಾಗ ಮಾಡಿದ್ಧಾನೆಂಬುವದಕ್ಕೆ, ಇಂನು ಮುಂದೆ ಅನುಮಾನ ಮಾಡದ ಹಾಗೆ, ನಮಗೆ ದಯ ಮಾಡಲೆಂದು, ನಾವು ಆತನಂನು ಬೇಡಿ ಕೊಳ್ಳ ಬೇಕು. ಇದಲ್ಲದೆ ನಾವು ನಂಮೊಳಗೆ ಒಬ್ಬನಿಗೊಬ್ಬನೂ, ಯೆಲ್ಲಾ ಮನುಷ್ಯರಿಗೂ, ನಂಮ ವೈರಿಗಳಿಗೂ ಸುಧಾ, ನಿಜವಾದ ಪ್ರೀತಿ ಮಾಡುವ ಹಾಗೆಯೂ; ಹಳೇ ಆದಾಮನಂನು ಅವನ ದುರಿಚ್ಛೆ ಆಶೆಗಳಂನೆಲ್ಲಾ ಸಹಾವಾಗಿ ಬಹು ಜಾಗ್ರತೆಯಾಗಿ ಕೊಂದು ಹಾಕಿ, ದೇವರಿಗೆ ಸರಿ ಬೀಳುವಂಥ ಹೊಸ ಜೀವದಲ್ಲಿ ಬೆಳೆದು ನಡೆಯುವ ಹಾಗೆಯೂ; ಮತ್ತು ನಂಮ ತಲೆಯಾದ ಕರ್ತನ ಕೂಡ ನಾವು ಶ್ರಮೆ ಪಟ್ಟರೆ, ಆತನ ಕೂಡ ಆತನ ಮಹಿಮೆಯಲ್ಲಿಯೂ ರಾಜ್ಯದಲ್ಲಿಯೂ ಸಹಾ ಪಾಲು ಹೊಂದುವೆವೆಂಬುವ, ನಿಶ್ಚಯವಾದ ಭರವಸದಿಂದ ಯೆಲ್ಲಾ ಶಿಲುಬೆ ಶ್ರಮೆ ಶೋಧನೆಗಳಿಗೆ ಘಟ್ಟಿಯಾಗಿ ನಿಲ್ಲುವ ತಾಳ್ಮೆ ಹೊಂದಿ, ತ್ರಾಣಗೊಳ್ಳುವ ಹಾಗೆಯೂ; ಬೇಡಿ ಕೊಳ್ಳ ತಕ್ಕದ್ದು. ನಾವು ಆತ್ಮದಿಂದಲೂ, ಸತ್ಯದಿಂದಲೂ, ದೇವರಂನು ಆರಾಧಿಸಿ, ಸನ್ಮಾನಿಸುವಂಥ, ದೇವರ ನಿಜವಾ

ದಂಥ, ಮಕ್ಕಳೆಂದು ಕರೆಸಿ ಕೊಳ್ಳುವ ಹಾಗೆ, ದೇವರು ತಾನೇ ನಂಮೆ
ಲ್ಲರಿಗೆ ಇಂಥ ವಿಶ್ವಾಸ ಭರವಸ ಪ್ರೀತಿ ತಾಳ್ಮೆ ಶಿಕ್ಷೆ ಪರಿಶುದ್ಧ ನಡತೆಯಂ
ನು ಬಲಗೊಳ್ಳಿಸಲಿ.

ಕಡೇಲಿ ಪೌಲನು ನಂಮಂನು ಯೆಚ್ಚರಿಸುವ ಪ್ರಕಾರ, ಅಯೋಗ್ಯ
ವಾಗಿ ಈ ರೊಟ್ಟಿಯಲ್ಲಿ ತಿಂದು, ಈ ಪಾತ್ರೆಯಲ್ಲಿ ಕುಡಿಯುವವನು
ಕರ್ತನ ಶರೀರ ರಕ್ತಕ್ಕೆ ಅಪರಾಧಿಯಾಗಿರುವದರಿಂದ; ಈಗ ಒಬ್ಬೊಬ್ಬನು
ತಂನಂನು ತಾನೇ ಪರಿಕ್ಷಿಸಿ ಕೊಂಡು ಕ್ರಿಸ್ತನ ಮರಣದಿಂದ ತಂನ ಪಾಪ
ಗಳೆಲ್ಲಾ ತನಗೆ ಪರಿಹಾರವಾದವೆಂಬುವದಂನು, ತಾನು ಸ್ಥಿರವಾಗಿ ನಂ
ಬುವ ಹಾಗಷ್ಟು, ರಕ್ಷಣೆಗಾಗಿರುವ, ಕ್ರಿಸ್ತನ ಮರಣವು ತಂನ ಮನ
ಸ್ಸಿಗೆ ಬಂತೇನೋ? ಯೆಂದೂ, ಯೆಲ್ಲರಿಂದ ತನಗೆ ಆಗ ಬೇಕೆಂದು,
ತಾನು ಇಚ್ಛೈಸುವಂತೆ, ತಾನೇ ಕ್ರಿಸ್ತನ ನಿಮಿತ್ತ ಯೆಲ್ಲಾ ಮನುಷ್ಯರಿಗೆ
ಪ್ರೀತಿ ಮಾಡಲಿಕ್ಕೆ ಸಿದ್ಧನಾಗಿದ್ದಾನೇನೋ? ಯೆಂದೂ, ದೇವರ ಕೃಪೆಯ
ಆತ್ಮದ ಸಹಾಯದಿಂದ, ತಾನು ಇಂನು ಮುಂದೆ ಮನಗೊಟ್ಟು ಪಾಪಕ್ಕೆ
ಸಾಯಲಿಕ್ಕೂ, ದೇವರಿಗೆ ಸರಿ ಬೀಳುವಂಥ ಹೊಸ ಜೀವದಲ್ಲಿ ನಡೆವು,
ಕರ್ತನಾದ ಕ್ರಿಸ್ತನು ತಂನ ಬೋಧನೆ ನಡತೆ ಮರಣದಿಂದ ಮಾದರಿ
ಯಾಗಿ ತೋರಿಸಿದ ಸದ್ಗುಣಗಳಂನು ಅನುಸರಿಸಲಿಕ್ಕೂ, ಅಪೇಕ್ಷೆ ಮಾಡು
ತ್ತಾನೇನೋ? ಯೆಂದೂ, ನೆನಸಿ ಕೊಳ್ಳಲಿ.

ಮತ್ತು ಯಾರು ಇದಂನು ತಿಳಿದು ಕೊಳ್ಳದೆ, ಇಂಥಾ ಯೆಚ್ಚರಿಕೆಯ
ಮಾತಿಗೆ ಮಣಿಯದೆ, ಆತಂಕ ಕೊಟ್ಟು, ಶಿಕ್ಷೆ ತಕ್ಕೊಳ್ಳದ ಧೈರ್ಯದಿಂದ
ಬಹಿರಂಗವಾದ ಪಾಪ ದುರಾಚಾರಗಳಲ್ಲಿ ನಿಂತು ಕೊಂಡು, ಅವುಗಳಂನು

ಮುಂದೆ ನಡಿಸಲಿಕ್ಕೆ ಮನಸ್ಸಾಗಿರುತ್ತಾರೋ — ಇಂಥವರು ಕರ್ತನ ಶರೀರ
ವಾದ ದೇವರ ಸತ್ತೆಗೆ ಸಿದ್ಧ ಮಾಡಿದ ಕರ್ತನ ಮೇಜಿಗೆ ಸಮೀಪಿಸ
ಬಾರದು.

## ಪ್ರಾರ್ಥನೆ ಮಾಡೋಣ.

ಪ್ರಿಯ ಪರಲೋಕದ ತಂದೆಯೇ, ನಾವು ಬಹಳ ಪಾಪ ಮಾಡಿ,
ಕೆಟ್ಟ ಆಲೋಚನೆ ಮಾತು ಕ್ರಿಯೆಗಳಿಂದಲೂ, ಪ್ರೀತಿ ಇಲ್ಲದ ನಡತೆ
ಯಿಂದಲೂ, ನಿಂನ ಪರಿಶುದ್ಧ ಆಜ್ಞೆಗಳನ್ನು ಯೆಡೆಬಿಡದೆ ಮೀರಿದ್ದೇ
ವೆಂದು, ನಿನ್ನ ಮುಂದೆ ಅರಿಕೆ ಮಾಡುತ್ತೇವೆ. ನಾವು ಇದನ್ನು ತಿಳಿ
ದು ಕೊಳ್ಳುವದಕ್ಕಿಂತ ಪೂರ್ಣವಾಗಿ, ನೀನು ಹೃದಯ ಅಂತರಿಂದ್ರಿಯ
ಗಳನ್ನು ಶೋಧಿಸುವಾತನಾಗಿ, ನಂಮ ಕೆಟ್ಟತನವಂನೆಲ್ಲಾ ನೋಡುತ್ತಿ. ನಿ
ನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ನಿಮಿತ್ತ, ನಾವು ಕೃಪೆಯನ್ನೂ
ಕ್ಷಮೆಯನ್ನೂ ಬೇಡಿ ಕೊಳ್ಳುತ್ತೇವೆ. ಆತನೇ ನಂಮ ಪಾಪಕ್ಕೋಸ್ಕರವೂ
ಲೋಕದ ಪಾಪಕ್ಕೋಸ್ಕರವೂ ಶಾಂತಕರ ಬಲಿಯಾಗಿದ್ದಾನೆ. ಹೌದು! ಆ
ತನು ನಂಮ ಪಾಪಗಳಂನು ತಂನ ರಕ್ತದಿಂದ ತೆಗದು ಹಾಕಿ, ನಂಮಂ
ನು ಈಗ ತಂನ ಕೃಪೆ ಭರಿತವಾದ ಭೋಜನಕ್ಕೆ ಕರೆಯುವದರ ದೆಸೆಯಿಂ
ದ, ನಿನಗೆ ಸ್ತೋತ್ರ ಮಾಡುತ್ತೇವೆ. ನಾವು ಈ ಪರಿಶುದ್ಧ ಭೋಜನವಂ
ನು ತಕ್ಕ ಹಾಗೆ ತೆಗಿಯುವದರಿಂದ, ನಮಗೋಸ್ಕರ ಮರಣಕ್ಕೆ ಒಪ್ಪಿಸಿ
ಕೊಟ್ಟ ಕ್ರಿಸ್ತನ ಪರಿಶುದ್ಧ ಶರೀರವಂನೂ, ನಂಮ ಪಾಪಗಳಿಗೋಸ್ಕರ ಚೆ
ಲ್ಲಿದ ಆತನ ಪರಿಶುದ್ಧ ರಕ್ತವಂನೂ,—ಅಂದರೆ ನಂಮ ಜೀವದ ರೊಟ್ಟಿ
ಜೀವದ ನೀರು ಆಗಿರುವ ಯೇಸು ಕ್ರಿಸ್ತನಂನು, ಸದ್ವಿಶ್ವಾಸದಿಂದ ನಿಶ್ಚ

ಜೀವಕ್ಕಾಗಿ ಪೊಂದಿ, ಈ ಪ್ರಕಾರ ನಂಮ ತಲೆಯಾದ ಕ್ರಿಸ್ತನ ಅವಯವಾಗಿ ಕೂಡಿ ಕೊಂಡು, ದೇವರ ಕಡೆಗಾದ ನಿಜವಾದ ಕೃತಜ್ಞತೆ ವಿಧೇಯತ್ವಗಳಿಗೂ, ನಂಮ ನೆರೆಯವರ ಕಡೆಗಾದ ಯೆಲ್ಲಾ ದೈವ ಭಕ್ತಿ ಸಹಿತವಾದ ಚುರುಕಾದ ಪ್ರೀತಿಗೂ, ವಿಶ್ರಮ ಪ್ರಾಣಗೊಳ್ಳುವ ಪಾಗೆ, ನಮಗೆ ನಿಂನ ಪರಿಶುದ್ಧಾತ್ಮನನ್ನು ಕೊಡು. ಆಮೆನ್.

Oder (ಅಥವಾ):

ಕರ್ತನಲ್ಲಿ ಪ್ರಿಯರೇ, ನೀವು ನಂಮ ಕರ್ತನಾದ ಯೇಸು ಕ್ರಿಸ್ತನ ಪೆಸರಿನಲ್ಲಿ, ಆತನ ಶಾಂತಕರ ಬಲಿಯಾಗಿರುವ ಮರಣದ ನೆನಪಂನು ಆಚರಿಸಿ, ಪರಿಶುದ್ಧ ರಾತ್ರಿಭೋಜನದಲ್ಲಿ ಆತನ ಶರೀರ ರಕ್ತವಂನು ಪೊಂದ ಬೇಕೆಂದು, ಮನಸ್ಸಾಗಿರಲಾಗಿ, ಅಪಾಸ್ತಲನು ಇದಂನು ಮಾಡಲಿಕ್ಕೆ ಮನಸ್ಸುಳ್ಳವರೆಲ್ಲರಂನು ಯೆಚ್ಚರಿಸಿ, ಅವರು, ಈ ರೊಟ್ಟಿಯಲ್ಲಿ ತಿಂದು ಈ ಪಾತ್ರೆಯಲ್ಲಿ ಕುಡಿಯುವದಕ್ಕೆ ಮುಂಚೆ, ತಂಮಂನು ಒಳ್ಳೇದಾಗಿ ವಿಚಾರಿಸಿ ಕೊಳ್ಳ ಬೇಕೆಂದು ಪೇಳುವದನ್ನು ನೆನಸಿ ಕೊಳ್ಳಿರಿ. ಯಾಕಂದರೆ ಈ ಆಚಾರವು, ತಂಮ ಪಾಪಗಳಿಗೆ ದುಃಖ ಪಟ್ಟು, ಅವುಗಳಂನು ಅರಿಕೆ ಮಾಡಿ, ದೇವರ ಕೋಪಕ್ಕೂ ಮರಣಕ್ಕೂ ಅಂಜಿ ಕೊಂಡು, ನೀತಿಗೆ ಪಸಿವೆ ದಾಪ ಪಡುವ, ಬಡ ದುಃಖವುಳ್ಳ ಆತ್ಮಗಳಿಗೆ, ವಿಶೇಷವಾದ ಆದರಣೆಗಾಗಿ ಕೊಟ್ಟದೆ. ಆದರೆ ನಾವು, ನಂಮಂನು ನಾವೇ ವಿಚಾರಿಸಿ ಕೊಂಡು, ಒಬ್ಬೊಬ್ಬನು ತಂನ ಸ್ವಂತ ಮನೋಸಾಕ್ಷಿಯಲ್ಲಿ ಪುಡಿಕಿದರೆ, ನಿಶ್ಚಯವಾಗಿ ನಾವೆಲ್ಲರು ಪಾಪದ ಅಸಪ್ಯವಂನೂ, ಪಾಪದಿಂದ ನಾವು ಸಂಪಾದಿಸಿದ ನಿತ್ಯಮರಣವಂನೂ ಕಂಡು ಕೊಳ್ಳುವೆವು.

ಯಾಕಂದರೆ ಪಾಪದ ಸಂಬಳವು ಮರಣವೇ. ಅದರೊಳಗಿಂದ ಬಿಡುಗಡೆಯಾಗಲಿಕ್ಕೆ ನಂಮಲ್ಲಿ ಉಪಾಯವಿಲ್ಲ. ಅದೇ ಕಾರಣದಿಂದ ನಂಮ ಕರ್ತನಾದ ಯೇಸು ಕ್ರಿಸ್ತನು ನಂಮ ಮೇಲೆ ಅಂತಃಕರಣ ಪಟ್ಟು, ನಂಮ ಪಾಪಗಳ ನಿಮಿತ್ತ ಮನುಷ್ಯನಾಗಿ, ನಮಗೋಸ್ಕರ ನ್ಯಾಯಪ್ರಮಾಣವಂನೂ ದೇವರ ಚಿತ್ತವೆಲ್ಲಾವಂನೂ ಪೂರೈಸಿ, ನಾವು ನಂಮ ಪಾಪಗಳಿಂದ ಸಂಪಾದಿಸಿದ ಮರಣ ಮುಂತಾದದ್ದೆಲ್ಲಾವಂನು, ನಂಮಗೋಸ್ಕರ, ನಂಮ ವಿಮೋಚನೆಗಾಗಿ, ತಂನ ಮೇಲೆ ತಕ್ಕೊಂಡು, ತಾಳಿ ಕೊಂಡನು. ಮತ್ತು ಇದಂನು ನಾವು ದೃಢವಾಗಿ ನಂಬಿ ಕೊಂಡು, ಸಂತೋಷದಿಂದ ಆತನ ಚಿತ್ತದಲ್ಲಿ ನಡಿಯುವ ಹಾಗೆ; ಆತನು ರಾತ್ರಿಭೋಜನದಲ್ಲಿ ರೊಟ್ಟಿಯಂನು ತೆಗದು ಕೊಂಡು, ಸ್ತೋತ್ರ ಮಾಡಿ, ಅದಂನು ಮುರಿದು ಶಿಷ್ಯರಿಗೆ ಕೊಟ್ಟು,—ತಕ್ಕೊಳ್ಳಿರಿ! ಉಣ್ಣಿರಿ! ಇದು ನಿಂಮಗೋಸ್ಕರ ಕೊಡಲ್ಪಡುವ ನಂನ ಶರೀರವಾಗೆದೆ, ಅಂದನು. ಅದರಿಂದ ಆತನು—ನಾನು ಮನುಷ್ಯನಾದದ್ದೂ, ನಾನು ಪಡುವಂಥಾದ್ದೂ, ಮಾಡುವಂಥಾದ್ದೂ, ಯೆಲ್ಲಾ ನಿಂಮದಾಗೆದೆ; ನಿಂಮಗೋಸ್ಕರ, ನಿಂಮ ಹಿತಕ್ಕಾಗಿ ಆಯಿತು. ಇದಕ್ಕೆ ನಿಶ್ಚಯವಾದ ಗುರುತು ಸಾಕ್ಷಿಗಾಗಿಯೂ, ನಾನು ನಿಂಮಲ್ಲಿ, ನೀವು ನಂನಲ್ಲಿ ಯೆಂದಿಗೂ ನೆಲೆಗೊಂಡು ಬದುಕುವ ಹಾಗೆಯೂ; ನಿಮಗೆ ನಂನ ಶರೀರವಂನು ಆಹಾರಕ್ಕಾಗಿ ಕೊಡುತ್ತೇನೆಂದು, ನಮಗೆ ಹೇಳಿದ ಹಾಗಾಯಿತು. ಅದೇ ಪ್ರಕಾರ ಆತನು ಪಾತ್ರೆಯಂನು ತೆಗದು ಕೊಂಡು, ಸ್ತೋತ್ರ ಮಾಡಿ, ಅದಂನು ಅವರಿಗೆ ಕೊಟ್ಟು,— ತಕ್ಕೊಂಡು ಯೆಲ್ಲರು ಇದರಲ್ಲಿ ಕುಡಿಯಿರಿ! ಇದು ನಿಂಮಗೋಸ್ಕರವೂ, ಅನೇಕರಿಗೋಸ್ಕ

ರವು, ಪಾಪಪರಿಹಾರಕ್ಕಾಗಿ ಚೆಲ್ಲಲ್ಪಡುವ ನಂನ ರಕ್ತದಲ್ಲಿ ಆಗುವ ಹೊಸ ಮಾಡಂಬಡಿಕೆಯ ಪಾತ್ರೆಯಾಗಿದೆ,—ಅಂದನು. ಅದರಿಂದ ಆತನು—ನಾನು ನಿಮಗೆ ಅಂತಃಕರಣ ಮಾಡಿ, ನಿಂಮ ಪಾಪಗಳಂನು ನನ್ನ ಮೇಲೆ ಹೊತ್ತು ಕೊಂಡ ಕಾರಣ, ನಂನಂನು ನಾನೇ ಪಾಪಕ್ಕೋಸ್ಕರ ಬಲಿಯಾಗಿ ಮರಣದಲ್ಲಿ ಅರ್ಪಿಸಿ ಕೊಂಡು, ನಂನ ರಕ್ತ ಚೆಲ್ಲಿ, ನಿಮಗೆ ಕೃಪೆಯಂನೂ ಪಾಪಪರಿಹಾರವಂನೂ ಸಂಪಾದಿಸಿ, ಈ ಪ್ರಕಾರ ಹೊಸ ಮಾಡಂಬಡಿಕೆಯಂನು ಸ್ಥಾಪಿಸುವೆನು; ಅದರಲ್ಲಿ ಪಾಪವು ಪರಿಹಾರವಾಗಿ, ಯೆಂದೆಂದಿಗೂ ತಿರಿಗಿ ನೆನಪಿಗೆ ಬರುವದಿಲ್ಲ. ಇದಕ್ಕೆ ನಿಶ್ಚಯವಾದ ಗುರುತು ಸಾಕ್ಷಿಗಾಗಿ, ನಿಂಮಲ್ಲಿ ನಂನ ಜೀವವಂನು ಬಲಗೊಳ್ಳಿಸಿ ಬೆಳಿಸುವದಕ್ಕೆ, ನಾನು ನಿಮಗೆ ನಂನ ರಕ್ತವಂನು ಕುಡಿಯ ಕೊಡುತ್ತೇನೆಂದು, ನಮಗೆ ಹೇಳಿದ ಹಾಗಾಯಿತು. ಹೀಗಿರಲಾಗಿ ಯಾರು ಈ ರೊಟ್ಟಿಯಲ್ಲಿ ತಿಂದು, ಈ ಪಾತ್ರೆಯಲ್ಲಿ ಕುಡಿದು, ಕ್ರಿಸ್ತನಿಂದ ಕೇಳಿದ ಈ ಮಾತುಗಳಂನು ದೃಢವಾಗಿ ನಂಬಿ ಕೊಂಡು, ಈ ಕೃಪೆ ಸಾಹಿತ್ಯವನ್ನು ನೆನಪಿಗಾಗಿಯೂ, ತಂನ ವಿಶ್ವಾಸದ ದೃಢೀಕರಣಕ್ಕಾಗಿಯೂ, ತಕ್ಕೊಳ್ಳುತ್ತಾನೋ,—ಅವನು ಕರ್ತನಾದ ಕ್ರಿಸ್ತನಲ್ಲಿಯೂ, ಕ್ರಿಸ್ತನು ಅವನಲ್ಲಿ ನೆಲೆಗೊಂಡು, ಯೆಂದೆಂದಿಗೂ ಬದುಕುವನು. ಆದದರಿಂದ ನಾವು ರಾತ್ರಿಭೋಜನ ತಕ್ಕೊಳ್ಳುವದರಲ್ಲಿ ಆತನಂನು ಜ್ಞಾಪಕ ಮಾಡಿ ಕೊಂಡು, ಆತನ ಮರಣವಂನು,—ಅಂದರೆ ಆತನು ನಂಮ ಅಕ್ರಮಗಳಿಗೋಸ್ಕರ ಸತ್ತು, ನಂಮ ನೀತಿನಿರ್ಣಯಕ್ಕೋಸ್ಕರ ತಿರಿಗಿ ಯೆದ್ದದಂನು ಸಾರಿ, ಆತನಿಗೆ ಅದರ ದೆಶೆಯಿಂದ ಯೆಂದೆಂದಿಗೂ ಸ್ತುತಿ ಸ್ತೋತ್ರ ಹೇಳ ಬೇಕು.

ಇದಲ್ಲದೆ ಒಬ್ಬೊಬ್ಬನು ತಂನ ಶಿಲುಬೆ ಹೊತ್ತು ಕೊಂಡು, ಆತನನ್ನು ಹಿಂಬಾಲಿಸ ಬೇಕು. ಮತ್ತು ಆತನ ಆಜ್ಞೆಯ ಪ್ರಕಾರ ನಾವು, ಆತನು ನಂಮಂನು ಪ್ರೀತಿಸಿದಂತೆ, ಒಬ್ಬರಂನೊಬ್ಬರು ಪ್ರೀತಿಸಿ, ಆತನು ನಮಗೆ ಮಂನಿಸಿದಂತೆ, ಒಬ್ಬರಿಗೊಬ್ಬರು ಮಂನಿಸ ಬೇಕು. ಯಾಕಂದರೆ ನಾವೆಲ್ಲರು ಒಂದೇ ರೊಟ್ಟಿಯಲ್ಲಿ ಪಾಲುಗಾರರಾಗಿದ್ದು, ಒಂದೇ ಪಾತ್ರೆಯಲ್ಲಿ ಕುಡಿಯುವ ಕಾರಣ; ಯೆಲ್ಲರು ಒಂದೇ ರೊಟ್ಟಿ, ಒಂದೇ ಶರೀರವಾಗಿದ್ದೇವೆ. ಹ್ಯಾಗಂದರೆ, ಅನೇಕ ದ್ರಾಕ್ಷೆ ಹಂಣುಗಳಿಂದ ಒಂದೇ ದ್ರಾಕ್ಷೇ ರಸವೂ, ಅನೇಕ ಕಾಳುಗಳಿಂದ ಒಂದೇ ರೊಟ್ಟಿ ಹುಟ್ಟುವ ಪ್ರಕಾರ, ವಿಶ್ವಾಸದಿಂದ ಕ್ರಿಸ್ತನಲ್ಲಿ ಅವಯವಗಳಾದ ನಾವೆಲ್ಲರು, ನಮಗೆ ಮೊದಲು ಇಂಥ ದೊಡ್ಡ ಪ್ರೀತಿ ಮಾಡಿದ ರಕ್ಷಕನಾದ ಕ್ರಿಸ್ತನ ನಿಮಿತ್ತ, ಸಹೋದರ ಸ್ನೇಹದಿಂದ ಒಂದೇ ಶರೀರ ಪಾನ ರೊಟ್ಟಿಯ ಹಾಗೆ ಆಗಿದ್ದೇವೆ. ಇದಂನು ಬರೆ ಮಾತುಗಳಿಂದಲ್ಲಾ, ಕ್ರಿಯದಿಂದಲೂ, ಸತ್ಯದಿಂದಲೂ, ಕಪಟವಿಲ್ಲದೆ, ನಂಬಿಗೆಯುಳ್ಳವರಾಗಿ ಒಬ್ಬರಿಗೊಬ್ಬರು ತೋರಿಸ ಬೇಕು. ಇದಕ್ಕೆ ಸರ್ವತ್ರಾಣಿಯಾದ, ಅಂತಃಕರಣವುಳ್ಳ ದೇವರು, ನಂಮ ಪ್ರಿಯ ಕರ್ತನಾದ ಯೇಸು ಕ್ರಿಸ್ತನ ತಂದೆಯು, ತಂನ ಪರಿಶುದ್ಧಾತ್ಮನಿಂದ ನಮಗೆ ಸಹಾಯ ಮಾಡಲಿ. ಆಮೆನ್.

---

## Beichtgebet (ಪ್ರಾರ್ಥನೆ ಮಾಡೋಣ).

ಸರ್ವತ್ರಾಣ ಉಳ್ಳ ದೇವರೇ, ನಂಮ ಕರ್ತನಾದ ಯೇಸು ಕ್ರಿಸ್ತನ ತಂದೆಯೇ, ಯೆಲ್ಲವುಗಳ ನಿರ್ಮಾಣ ಮಾಡಿದಾತನೇ, ಸಕಲ ಮನುಷ್ಯರ ನ್ಯಾಯಾಧಿಪತಿಯೇ, ನಂಮ ಆಲೋಚನೆ ವಾಕ್ಯ ಕ್ರಿಯೆಗಳಿಂದ, ನಾವು ನಿಂನ ಪರಿಶುದ್ಧ ಮಹಿಮೆಗೆ ವಿರೋಧವಾಗಿ ಬಹಳ ಸರ್ತಿ ಮಾಡಿದಂಥಾ, ನಿಂನ ನ್ಯಾಯವಾದ ಕೋಪವಂನು ನಂಮ ಮೇಲೆ ಯೆಬ್ಬಿಸಿದಂಥಾ, ನಂಮ ನಾನಾತರದ ಪಾಪ ಅಪರಾಧಗಳಂನು ದುಃಖದಿಂದ ಅರಿಕೆ ಮಾಡುತ್ತೇವೆ. ಈ ನಂಮ ಅಕ್ರಮಗಳಿಗೆ ನಾವು ಪೂರ್ಣ ಪಶ್ಚಾತ್ತಾಪ ಪಡುತ್ತೇವೆ. ಅವುಗಳ ದೆಶೆಯಿಂದ ಮನಃಪೂರ್ವಕವಾಗಿ ದುಃಖಗೊಳ್ಳುತ್ತೇವೆ. ಅವುಗಳ ನೆನಪು ನಂಮಂನು ನೋಯಿಸುತ್ತದೆ. ಅವುಗಳ ಭಾರ ತಾಳಲಾಗದು. ನಂಮಂನು ಕರುಣಿಸು. ಅಂತಃಕರಣ ಉಳ್ಳ ತಂದೆಯೇ, ಯೇಸುವಿನ ನಿಮಿತ್ತ, ನಮಗೆ ನಂಮ ಯೆಲ್ಲಾ ಪಾಪಗಳಂನು ಮಂನಿಸಿ ಬಿಟ್ಟು, ನಾವು ಇಂನು ಮುಂದೆ ಹೊಸ ನಡತೆಯಿಂದ ನಡೆದು, ನಿಂನಂನು ಮೆಚ್ಚಿಸುವದಕ್ಕೆ ನಿಂನ ಹೆಸರಿನ ಮಾನಕ್ಕಾಗಿ ನಿನಗೆ ಯೆಡೆಬಿಡದೆ ಸೇವೆ ಮಾಡುವ ಹಾಗೆ, ದಯ ಮಾಡು.

ದೇಹಾತ್ಮಗಳಲ್ಲಿ ನಂಮಂನು ಪರಿಶುದ್ಧ ಮಾಡಿ, ನಿಂನ ಪ್ರಿಯ ಮಗನ ಮಂಗಳವಾದ ಐಕ್ಯವಂನು ನಮಗೆ ಆತನ ಪರಿಶುದ್ಧ ಭೋಜನದಲ್ಲಿ ವಿಶ್ವಾಸದ ಆಶೆಯಿಂದಲೂ, ಉಪಕಾರ ನೆನಸುವ ಮನಸ್ಸಿನಿಂದಲೂ, ಹೊಂದ ಕೊಡು. ನಾವು ಅದರಿಂದ ತಿರಿಗಿ ನಂಮ ಕಡೆಗಿರುವ ನಿಂನ ನಿತ್ಯ ದಯ ಪ್ರೀತಿಗಳ ಅಭಯವಂನು ಹೊಂದಿ, ಹೊಸ

ನಡತೆಯಲ್ಲಿ ಬಲಗೊಂಡು, ಇಂನು ಮುಂದೆ ನಿಂನ ದಿವ್ಯ ಹೆಸರಿನ ಸ್ತುತಿಗಾಗಿ ಹೆಚ್ಚು ಯೆಚ್ಚರಿಕೆ ಅಂಜಿಕೆಯಿಂದ ನಿನಗೆ ಬದುಕಿ ಕೊಂಡು, ಸೇವಿಸುವ ಹಾಗೆ, ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ, ದಯ ಮಾಡು. ಆಮೆನ್.

ಪ್ರಿಯರೇ ಪರಿಶುದ್ಧ ರಾತ್ರಿ ಭೋಜನದ ಸ್ಥಾಪನೇ ಮಾತುಗಳಂನು ವಿಶ್ವಾಸದಿಂದ ಕೇಳಿರಿ.—

(೧ ಕೊರಿಂಥ್ ೧೧, ೨೩—೨೬.)

[Es erscheint schicklich, dass der Geistliche bei den Worten: "Nahm er das Brod"— "nahm er den Kelch" die betreffenden Gefässe erfasst und ein wenig erhebt.]

ಕರ್ತನಾದ ಯೇಸು ಒಪ್ಪಿಸಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯಂನು ತೆಗದು ಕೊಂಡು, ಸ್ತೋತ್ರ ಮಾಡಿ, ಮುರಿದು, ಹೇಳಿದ್ದೇನಂದರೆ—ತಕ್ಕೊಳ್ಳಿರಿ! ತಿಂನಿರಿ! ಇದು ನಿಮಗೋಸ್ಕರ ಮುರಿಯಲ್ಪಡುವ ನಂನ ಶರೀರವಾಗಿದೆ. ನಂನಂನು ನೆನಸುವದಕ್ಕೆ ಇದಂನು ಮಾಡಿರಿ. ಅದೇ ಪ್ರಕಾರ ಭೋಜಿಸಿದ ಮೇಲೆ, ಪಾತ್ರೆಯಂನು ತೆಗದು ಕೊಂಡು, ಹೇಳಿದ್ದೇನಂದರೆ—ಈ ಪಾತ್ರೆಯು ನಂನ ರಕ್ತದಲ್ಲಿರುವ ಹೊಸ ಒಡಂಬಡಿಕೆಯಾಗಿದೆ; ನೀವು ಕುಡಿಯುವಷ್ಟು ಸಾರಿ ನಂನಂನು ನೆನಸುವದಕ್ಕೆ ಇದನ್ನು ಮಾಡಿರಿ. ಯಾಕಂದರೆ ಯೆಷ್ಟು ಸಾರಿ ಈ ರೊಟ್ಟಿಯಂನು ತಿಂದು, ಈ ಪಾತ್ರೆಯಲ್ಲಿ ಕುಡಿಯುವಿರೋ, ಕರ್ತನ ಮರಣವಂನು, ಆತನು ಬರುವ ಮಟ್ಟಿಗೂ, ತೋರಿಸುತ್ತೀರಿ.

[Hierauf die Austheilung des Abendmahls. Zuerst geniesst es der Geistliche, oder wo mehrere sind, reichen sie es einer dem andern, etwa in *der* Weise, dass *Ein* Bruder die Einsetzungsworte spricht, sodann das Brod und den Wein gleich-

zeitig selbst nimmt und den andern gibt; sodann kommen je zwei oder auch mehrere Gemeindeglieder an den Communionstisch, knien nieder (wenn nämlich eine schickliche Vorrichtung hiezu besteht oder leicht getroffen werden kann) und empfangen das h. Mahl unter Begleitung folgender Worte, welche — wo grössere Gemeinden sind, zugleich, bei kleinern Gemeinden aber zu jedem Einzelnen (oder jedem einzelnen Paar) zu sprechen sind:]

1.

ತಕ್ಕೊಳ್ಳಿರಿ! ತಿಂನಿರಿ! ಇದು ನಿಮಗೋಸ್ಕರ ಮುರಿಯಲ್ಪಡುವ ನಂನ ಶರೀರವಾಗಿದೆ. ನಂನಂನು ನೆನಸುವದಕ್ಕೆ ಇದಂನು ಮಾಡಿರಿ.

ತಕ್ಕೊಂಡು, ನೀವೆಲ್ಲರು ಇದರಲ್ಲಿ ಕುಡಿಯಿರಿ! ಇದು ಅನೇಕರಿಗೋಸ್ಕರ ಪಾಪಪರಿಹಾರಕ್ಕಾಗಿ ಹೊಯ್ಯಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನಂನ ರಕ್ತವಾಗಿದೆ. (ನೀವು ಕುಡಿಯುವಷ್ಟು ಸಾರಿ ನಂನಂನು ನೆನಸುವದಕ್ಕೆ ಇದಂನು ಮಾಡಿರಿ.)

2.

ತಕ್ಕೊಂಡು ತಿಂನಿರಿ! ಇದು ನಿಮಗೋಸ್ಕರ (ನಿಂಮ ಪಾಪಗಳಿಗೋಸ್ಕರ) ಮರಣಕ್ಕೆ ಒಪ್ಪಿಸಿ ಕೊಟ್ಟ ಯೇಸು ಕ್ರಿಸ್ತನ ಶರೀರವಾಗಿದೆ. ಆತನನ್ನು ನೆನಸುವದಕ್ಕೆ ಇದಂನು ಮಾಡಿರಿ.

ತಕ್ಕೊಂಡು ಕುಡಿಯಿರಿ! ಇದು ನಿಮಗೋಸ್ಕರ (ನಿಂಮ ಪಾಪಗಳಿಗೋಸ್ಕರ) ಚೆಲ್ಲಿದ ಯೇಸು ಕ್ರಿಸ್ತನ ರಕ್ತವಾಗಿದೆ. ಆತನಂನು ನೆನಸುವದಕ್ಕೆ ಇದಂನು ಮಾಡಿರಿ.

3.

ನಾವು ಮುರಿಯುವ ರೊಟ್ಟಿಯು ಯೇಸು ಕ್ರಿಸ್ತನ ಶರೀರದ ಅನ್ಯೋನ್ಯವಾಗಿದೆ. ನಾವು ಆಶೀರ್ವದಿಸುವ ಆಶೀರ್ವಾದದ ಪಾತ್ರೆಯು ಯೇಸು ಕ್ರಿಸ್ತನ ರಕ್ತದ ಅನ್ಯೋನ್ಯವಾಗಿದೆ.

(Nach dem Abendmahl folgendes Gebet:)

ನಂಮ ಪ್ರಿಯ ರಕ್ಷಕನಿಗೆ, ಆತನ ಕೃಪೆ ಭರಿತವಾದ ರಾತ್ರಿಭೋಜನದ ನಿಮಿತ್ತ, ಹೃದಯದಿಂದ ಸ್ತೋತ್ರ ಮಾಡಲಿಕ್ಕೆ ಪ್ರಾರ್ಥನೆ ಮಾಡೋಣ. ಯೇನಂದರೆ —

1.

ನಂನ ಪ್ರಾಣವೇ, ಕರ್ತನಂನು,—ನಂನ ಯೆಲ್ಲಾ ಅಂತರಂಗವೇ, ಆತನ ಪರಿಶುದ್ಧವಾದ ಹೆಸರಂನು—ಸ್ತುತಿಸು. ನಂನ ಪ್ರಾಣವೇ ಕರ್ತನನ್ನು ಸ್ತುತಿಸು. ಆತನ ಉಪಕಾರಗಳಂನೆಲ್ಲಾ ಮರೆತು ಬಿಡ ಬೇಡ. ಆತನು ನಿಂನ ಅಕ್ರಮಗಳಂನೆಲ್ಲಾ ಮನ್ನಿಸಿ, ನಿಂನ ರೋಗಗಳಂನೆಲ್ಲಾ ಸ್ವಸ್ಥ ಮಾಡಿ, ನಿಂನ ಜೀವವಂನು ನಾಶನದೊಳಗಿಂದ ಬಿಡಿಸಿ, ಕೃಪೆ ಅಂತಃಕರಣಗಳಂನು ನಿನಗೆ ಕಿರೀಟವಾಗಿ ಇಟ್ಟಿದ್ದಾನೆ. ಕರ್ತನಾದ ಯೇಸುವೇ, ನೀನು ಇಂಥಾ ಕೃಪೆಯಿಂದ ನಂಮಂನು ಅಂಗೀಕರಿಸಿ, ಪಾಪ ಮರಣದೊಳಗಿಂದ ನಂಮಂನು ತಪ್ಪಿಸಿ, ನಿಂನ ನಂಮ ತಂದೆಯ ಮಂಗಳವಾದ ಸ್ವೀಕಾರಕ್ಕೆ ನಂಮಂನು ಕರೆದದರಿಂದ, ನಿಂನಂನು ಸ್ತುತಿಸುತ್ತೇವೆ. ನಿಂನ ಪರಿಶುದ್ಧ ರಾತ್ರಿಭೋಜನದಲ್ಲಿ ನಿಂನ ಪ್ರೀತಿಯ ನೆನಪು ಸ್ಥಾಪಿಸಿ, ಈ ದಿವ್ಯ ಕೃಪೆ ಸಾಹಿತ್ಯದಿಂದ ನಂಮ ವಿಶ್ವಾಸ ಪೂರ್ತಿಕೆಯಂನು ಹೊಸತಾಗಿ ಬಲಗೊಳಿಸಿದದರಿಂದ, ನಿನಗೆ ಸ್ತೋತ್ರ ಮಾಡುತ್ತೇವೆ. ನಾವು ಈಗ ದೃಢವಾಗಿ ನಿಂನಲ್ಲಿಯೂ, ನಿನ್ನ ಕೃಪೆಯಲ್ಲಿಯೂ, ನೆಲೆಗೊಂಡು, ಸತ್‌ಕ್ರಿಯೆಗಳಿಂದ ನಿಂನ ಹೆಸರಂನು ಅರಿಕೆ ಮಾಡಿ, ಪರಿಶುದ್ಧ ಮನಸ್ಸು ನಡತೆಯಿಂದ ನಿಂನಂನು ಸ್ತುತಿಸಿ, ಕಡೇಲಿ ಸಂಪೂರ್ಣರಾದ ನೀತಿವಂತರ ಸಭೆಯ ಕೂಡ ನಿಂನಂನು ನಿನ್ನ ಪರಲೋಕದ ಮಹಿಮೆಯಲ್ಲಿ ದೃಷ್ಟಿಸ ಕೊಡು. ಆಮೆನ್.

Oder (ಅಥವಾ):

ಕರ್ತನಾದ ಯೇಸು ಕ್ರಿಸ್ತನೇ, ನೀನು ನಿಂನ ಶರೀರ ರಕ್ತಗಳೆಂಬ ರಕ್ಷಣೆಗಾಗಿರುವ ಈ ವರಗಳಿಂದ ನಮಗೆ ವಿಶ್ರಾಂತಿ ಕೊಟ್ಟದರಿಂದ, ನಿನಗೆ ಸ್ತೋತ್ರ ಮಾಡುತ್ತೇವೆ. ಅದರಿಂದ ನಿಂನಲ್ಲಿ ಇಡುವ ವಿಶ್ವಾಸವು ಬಲವಾದದ್ದು, ನಿಂನ ಕಡೆಗೂ ಯೆಲ್ಲಾ ಮನುಷ್ಯರ ಕಡೆಗೂ ಇರುವ ಪ್ರೀತಿಯು ಸ್ಥಿರವಾದದ್ದೂ, ಆಗುವಂತೆ, ದಯ ಮಾಡ ಬೇಕೆಂದು, ತಂದೆಯಾದ ದೇವರ ಸಂಗಡ, ಪರಿಶುದ್ಧಾತ್ಮನ ಐಕ್ಯದಲ್ಲಿ, ಯುಗಯುಗಾಂತರಗಳಿಗೂ ಬಾಳುವ ಆಳುವ ನಿಂನಂನು ಬೇಡಿ ಕೊಳ್ಳುತ್ತೇವೆ. ಆಮೆನ್.

ಕಡೆಗೆ ದೇವರ ಆಶೀರ್ವಾದ ತಕ್ಕೊಳ್ಳಿರಿ! ಕರ್ತನು ನಿಂಮಂನು ಆಶೀರ್ವದಿಸಿ ಕಾಯಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮಂನು ಕರುಣಿಸಲಿ. ಕರ್ತನು ತಂನ ಮುಖವನ್ನು ನಿಂಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ. ಆಮೆನ್.

---

## Trauung (ಮದುವೆ).

### 1. **Aufgebot** (ಸಾರುವಿಕೆ).

ಮದುವೆ ಸ್ಥಿತಿಯಲ್ಲಿ ಶೇರಲಿಕ್ಕೆ ಮನಸ್ಸುಳ್ಳವರು ನಂಮಲ್ಲಿ ಇದ್ದಾರೆ. ಆದುಕಾರಣ ಅವರು ತಂಮ ಮದುವೇ ಸ್ಥಿತಿಯಂನು ಚಂನಾಗಿ ಆರಂಭಿಸಿ, ಕ್ರೈಸ್ತರಿಗೆ ತಕ್ಕ ಹಾಗೆ ನಡಿಸಿ, ನಿತ್ಯಜೀವಕ್ಕೆ ಯೋಗ್ಯರಾಗಿ ತೀರಿಸುವ ಹಾಗೆ; ಅವರ ದೆಶೆಯಿಂದ ಭಕ್ತಿಯುಳ್ಳ ಪ್ರಾರ್ಥನೆ ವಿಜ್ಞಾಪನೆ ಮಾಡ

ಬೇಕೆಂದು, ಈ ಕ್ರೈಸ್ತಸಭೆಯಂನು ಯೆಚ್ಚರಿಸುತ್ತೇನೆ. ಈ ಪ್ರಕಾರ ಈಹೊತ್ತು (X) ನೇ ಸರ್ತಿ ಸಾರಲ್ಪಡುವವರು ಯಾರಂದರೆ—

(Aufgebot.)

ಸದರಿ ನಿಶ್ಚಯವಾದವರಂನು ಮದುವೆಯಲ್ಲಿ ಕೂಡಿಸುವದಕ್ಕೆ ಅಡ್ಡಿ ಮಾಡುವ ಹಾಗೆ, ಯಾರೊಬ್ಬನಿಗೆ ವಿಶೇಷವಾದದ್ದು ಯೇನಾದರು ತಿಳಿದರೆ, ಅದಂನು ಸಮಯ ಇರುವಷ್ಟರಲ್ಲಿ ತಿಳಿಸಲಿ; ಇಲ್ಲವೇ ಆ ಮೇಲೆ ಯೆದುರಾಡುವದಂನೆಲ್ಲಾ ಬಿಡಲಿ. ಆದರೆ ಮದುವೆ ಸ್ಥಿತಿಯಂನು ಸ್ಥಾಪಿಸಿದ ದೇವರು ಈ ನಿಶ್ಚಯವಾದವರಿಗೆ ತಂನ ಕೃಪೆಯಂನೂ ಆಶೀರ್ವಾದವಂನೂ ಅವರ ಕಾರ್ಯಕ್ಕೆ ಕ್ರಿಸ್ತನ ನಿಮಿತ್ತವಾಗಿ ಕೊಡಲಿ.

---

## 2. **Trauungshandlung** (ಮದುವೆ ಆಚರಣೆ).

ಯೆದುರಿರುವ ನಿಶ್ಚಯವಾದ ಇಬ್ಬರು ಇಲ್ಲಿಗೆ ಬಂದು, ದೇವರ ಹೆಸರಿನಲ್ಲಿ, ಕ್ರೈಸ್ತಸಭೆಯ ಮುಂದೆ, ವೊಬ್ಬರಿಗೊಬ್ಬರು ಪರಿಶುದ್ಧ ಮದುವೆ ಸ್ಥಿತಿಯಲ್ಲಿ ಕೂಡಿ ಕೊಂಡು, ದೇವರ ವಾಕ್ಯದ ಆಶೀರ್ವಾದವಂನು ಹೊಂದ ಇಚ್ಛೈಸುತ್ತಾರೆ.

ಅವರು ಪರಿಶುದ್ಧ ಮದುವೇ ಸ್ಥಿತಿಯಂನು, ಕ್ರಿಸ್ತನ ಭಕ್ತರಿಗೆ ತಕ್ಕ ಹಾಗೆ, ದೇವರ ವಾಕ್ಯದಿಂದ ಉಪದೇಶ ಹೊಂದಿದವರಾಗಿ ಆರಂಭ ಮಾಡುವ ಹಾಗೆ; ನಾವು ಮೊದಲು—ಮದುವೆಯು ದೇವರಿಂದ ಹ್ಯಾಗೆ ಸ್ಥಾಪನೆ ಆಯಿತೆಂದು ಕೇಳೋಣ—

ಕರ್ತನಾದ ದೇವರು ಹೇಳಿದ್ದು—ಮನುಷ್ಯನು ವೊಂಟಿಗನಾಗಿರುವದು ವೊಳ್ಳೇದಲ್ಲ; ಅವನಿಗೆ ತಕ್ಕ ಸಹಾಯವಂನು ಉಂಟು ಮಾಡುವೆನು,

ಅಂದನು. ಆಗಲು ಕರ್ತನಾದ ದೇವರು ಆದಾಮನ ಮೇಲೆ ಗಾಢ
ನಿದ್ರೆ ಬೀಳ ಮಾಡಿದದರಿಂದ, ಅವನು ನಿದ್ರೆ ಮಾಡಿದನು. ಆಗ
ಆತನು ಅವನ ಪಕ್ಕೆಯ ಯೆಲುವುಗಳಲ್ಲಿ ಒಂದಂನು ತಕ್ಕೊಂಡು,
ಅದರ ಸ್ಥಳದಲ್ಲಿ ಮಾಂಸವಂನು ಮುಚ್ಚಿದನು. ಮತ್ತು ಕರ್ತನಾದ
ದೇವರು ಆದಾಮನಿಂದ ತಕ್ಕೊಂಡ ಪಕ್ಕೆ ಯೆಲುವಂನು ಸ್ತ್ರೀಯಾಗ
ಮಾಡಿ, ಅವಳಂನು ಆದಾಮನ ಬಳಿಗೆ ತಂದನು. ಆಗಲು ಆದಾ
ಮನು ಇವಳೀಗ ನಂನ ಯೆಲುವುಗಳಿಂದ ತಕ್ಕೊಂಡ ಯೆಲುವೂ, ನಂನ
ಮಾಂಸದಿಂದ ತಕ್ಕೊಂಡ ಮಾಂಸವೂ ಆಗಿದ್ದಾಳೆ; ಇವಳು ಗಂಡನಿಂದ
ತಕ್ಕೊಳಲ್ಪಟ್ಟ ಕಾರಣ, ಹೆಂಡತಿ ಅಂನಿಸಿ ಕೊಳ್ಳುವಳು, ಅಂದನು. ಅದ
ಕ್ಕೋಸ್ಕರ ಮನುಷ್ಯನು ತಂನ ತಂದೆ ತಾಯಿಗಳಂನು ಬಿಟ್ಟು, ತಂನ ಹೆಂಡ
ತಿಗೆ ಕೂಡಿ ಕೊಳ್ಳುವನು; ಅವರು ಒಂದೇ ಮಾಂಸವಾಗುವರು.—

೨ ನೇದು. ಸುವಾರ್ತೆ ಪ್ರಕಾರ, ಗಂಡ ಹೆಂಡತಿ ಒಬ್ಬರಿಗೊಬ್ಬರು
ಯಾವ ಹಾಂಗಿನಲ್ಲಿಯೂ, ಯಾವ ಸಂಗತಿಯಲ್ಲಿಯೂ, ಇದ್ದಾರೆಂದು ಕೇ
ಳ್ರಿ. ಮತ್ಥ್. ೧೯ ನೇ ಸಂಧಿಯಲ್ಲಿ ಬರದದ್ದೇನಂದರೆ—ಆಗ ಫರಿ
ಸಾಯರು ಆತನ ಬಳಿಗೆ ಬಂದು, ಆತನಂನು ಶೋಧಿಸಿ, ಒಬ್ಬ ಮ
ನುಷ್ಯನು ತಂನ ಹೆಂಡತಿಯಂನು ಯಾವ ಕಾರಣದಿಂದಾದರೂ ಬಿಟ್ಟು
ಬಿಡ ಬಹುದೋ? ಯೆಂದು ಕೇಳಿದಾಗ; ಆತನು ಅವರಿಗೆ ಪ್ರತ್ಯುತ್ತರ
ವಾಗಿ—ಆದಿಯಲ್ಲಿ ನಿರ್ಮಿಸಿದವನು ಅವರಂನು ಗಂಡು ಹೆಂಣಾಗಿ
ನಿರ್ಮಿಸಿದನು; ಇದರ ದೆಸೆಯಿಂದ ಮನುಷ್ಯನು ತಂದೆ ತಾಯಿಗಳಂ
ನು ಬಿಟ್ಟು, ತಂನ ಹೆಂಡತಿಗೆ ಕೂಡಿ ಕೊಳ್ಳುವನು. ಅವರಿಬ್ಬರು ಒಂ

ದೇ ಮಾಂಸವಾಗಿರುವರು, ಯೆಂದು, ಹೇಳಿದನೆಂಬದಾಗಿ ನೀವು ಓದಲಿಲ್ಲವೋ? ಆದದರಿಂದ ಇಂನು ಇಬ್ಬರಲ್ಲ, ಒಂದೇ ಮಾಂಸವಾಗಿದ್ಧಾರೆ. ಹಾಗಾದರೆ ದೇವರು ಕೂಡಿಸಿದ್ದಂನು ಮನುಷ್ಯನು ಅಗಲಿಸದೆ ಇರಲಿ, ಅಂದನು. ಅವರು ಆತನಿಗೆ—ಹಾಗಿದ್ದರೆ ಮೋಶೆಯು ಯಾಕೆ ತ್ಯಾಗಪತ್ರವಂನು ಕೊಟ್ಟು, ಅವಳಂನು ಬಿಟ್ಟು ಬಿಡ ಅಪ್ಪಣೆ ಕೊಟ್ಟನು? ಅಂನಲು; ಆತನು ಅವರಿಗೆ—ಮೋಶೆಯು, ನಿಂಮ ಹೃದಯದ ಕಠಿಣತ್ವದ ನಿಮಿತ್ತ, ನಿಂಮ ಹೆಂಡತಿಯರಂನು ಬಿಟ್ಟು ಬಿಡ ನಿಮಗೆ ಅಪ್ಪಣೆ ಕೊಟ್ಟನು; ಆದರೆ ಆದಿಯಿಂದ ಹಾಗೆ ಇರಲಿಲ್ಲ. ಮತ್ತು ನಿಮಗೆ ಹೇಳುತ್ತೇನೆ—ಯಾವನಾದರೂ ಜಾರತ್ವದ ಕಾರಣದಿಂದಲ್ಲದೆ, ತಂನ ಹೆಂಡತಿಯಂನು ಬಿಟ್ಟು ಬೇರೊಬ್ಬಳಂನು ಮದುವೆ ಮಾಡಿಕೊಂಡರೆ, ವ್ಯಭಿಚಾರ ಮಾಡುತ್ತಾನೆ. ಮತ್ತು ಬಿಡಲ್ಪಟ್ಟವಳಂನು ಮದುವೆ ಮಾಡಿ ಕೊಳ್ಳುವವನು ವ್ಯಭಿಚಾರ ಮಾಡುತ್ತಾನೆ.

೨ ನೇದು. ಗಂಡ ಹೆಂಡತಿ ಒಬ್ಬರಿಗೊಬ್ಬರು ಮಾಡತಕ್ಕದ್ದೇನೆಂದು ತಿಳಿಸುವ ದೇವರ ಆಜ್ಞೆಯಂನು ಕೇಳೋಣ. ಅಪೊಸ್ತಲನಾದ ಪೌಲನು ಬರೆಯುವದೇನಂದರೆ—ಪುರುಷರೇ, ನಿಂಮ ಹೆಂಡತಿಯರಂನು ಪ್ರೀತಿ ಮಾಡಿರಿ. ಕ್ರಿಸ್ತನು ಸಭೆಯಂನು ಪ್ರೀತಿ ಮಾಡಿ, ಅದಂನು ವಾಕ್ಯದಲ್ಲಿ ನೀರಿನ ತೊಳಿವಿಕೆಯಿಂದ ಶುಚಿಸಿ, ಪರಿಶುದ್ಧ ಮಾಡುವದಕ್ಕೂ, ಅದನ್ನು ಕಳಂಕವೂ ಸುಕ್ಕೂ ಮೊದಲಾದವುಗಳಿಲ್ಲದ, ಪರಿಶುದ್ಧ, ನಿರ್ಮಲ ಸಭೆಯನ್ನು ತನ್ನ ಮುಂದೆ ಮಹಿಮೆಯುಳ್ಳದ್ದಾಗಿ ನಿಲ್ಲಿಸುವದಕ್ಕೂ, ಅದಕ್ಕೋಸ್ಕರ ತನ್ನನ್ನು ಕೊಟ್ಟ ಹಾಗೆಯೇ, ಗಂಡಂದಿರು ತಂಮ

ಹೆಂಡತಿಯರನ್ನು ಸ್ವಂತ ಶರೀರಗಳ ಹಾಗೆ ಪ್ರೀತಿ ಮಾಡ ತಕ್ಕದ್ದು.—ತನ್ನ ಹೆಂಡತಿಯಂನು ಪ್ರೀತಿ ಮಾಡುವವನು ತಂನಂನು ಪ್ರೀತಿ ಮಾಡುತ್ತಾನೆ; ಯಾಕಂದರೆ ಯಾವನಾದರು ತನ್ನ ಮಾಂಸವನ್ನು ಯೆಂದೂ ಹಗೆ ಮಾಡಿದ್ದು ಇಲ್ಲ; ಆದರೆ ಅದನ್ನು ಪೋಷಿಸಿ, ಕಾಪಾಡುತ್ತಾನೆ, ಕರ್ತನು ಸಭೆಗೆ ಮಾಡುವ ಪ್ರಕಾರವೇ—ಸ್ತ್ರೀಯರೇ, ಸ್ವಂತ ಗಂಡಂದಿರಿಗೆ, ಕರ್ತನಿಗಾದ ಹಾಗೆ, ಆಧೀನವಾಗಿರ್ರಿ; ಯಾಕಂದರೆ ಗಂಡನು ಹೆಂಡತಿಯ ತಲೆಯಾಗಿದ್ದಾನೆ; ಕ್ರಿಸ್ತನು ಸಭೆಯ ತಲೆಯಾಗಿರುವ ಪ್ರಕಾರವೇ. ಮತ್ತು ಆತನೇ ಶರೀರದ ರಕ್ಷಕನು. ಆದರೆ ಸಭೆಯು ಕ್ರಿಸ್ತನಿಗೆ ಹ್ಯಾಗೋ, ಹಾಗೆಯೇ ಹೆಂಡತಿಯರು ಸ್ವಂತ ಗಂಡಂದಿರಿಗೆ ಯೆಲ್ಲಾದರಲ್ಲಿ ವಿಧೇಯರಾಗಿರಲಿ.

೪ ನೇದು. ನಂಮ ಕರ್ತನಾದ ದೇವರು ಮದುವೇ ಸ್ಥಿತಿಗೆ ಕೊಟ್ಟ ಆಶೀರ್ವಾದವನ್ನು ಕೇಳೋಣ. ಯಾಕಂದರೆ ಬರದದ್ದೇನಂದರೆ—ದೇವರು ಮನುಷ್ಯನಂನು ತಂನ ಪ್ರತಿರೂಪವಾಗಿ ನಿರ್ಮಿಸಿದನು; ದೇವರ ಪ್ರತಿರೂಪವಾಗಿ ಅವನಂನು ನಿರ್ಮಿಸಿದನು; ಅವರಂನು ಗಂಡು ಹೆಂಣಾಗಿ ನಿರ್ಮಿಸಿದನು. ಮತ್ತು ದೇವರು ಅವರಂನು ಆಶೀರ್ವಾದಿಸಿದನು, ಅವರಿಗೆ ದೇವರು ಹೇಳಿದ್ದೇನಂದರೆ—ಅಭಿವೃದ್ಧಿಯಾಗಿ ಹೆಚ್ಚಿರಿ, ಭೂಮಿಯಂನು ತುಂಬಿಸಿ, ವಶ ಮಾಡಿ ಕೊಳ್ಳಿರಿ, ಅಂದನು. ಇದರಂತೆ ಸಲೊಮೋನನು ಸಹಾ ಹೇಳುತ್ತಾನೆ—ಹೆಂಡತಿಯಂನು ಕಂಡು ಕೊಳ್ಳುವವನು ಒಳ್ಳೇದಂನು ಕಂಡು ಕೊಂಡಿದ್ದಾನೆ; ಕರ್ತನಿಂದ ಕಟಾಕ್ಷವಂನು ಸಂಪಾದಿಸಿದ್ದಾನೆ.—

೫ನೇದು. ದೇವರು ಮದುವೆ ಸ್ಥಿತಿಯ ಮೇಲೆ ಹಾಕಿದ ಶಿಲುಬೆಯಂನು ಸಹಾ ಕೇಳೋಣ. ದೇವರು ಸ್ತ್ರೀಗೆ ಹೇಳಿದ್ದೇನಂದರೆ—ನಿನ್ನ ಬೇನೆಯಂನೂ ನಿಂನ ಬಸರಾಗುವಿಕೆಯಂನು ಹೆಚ್ಚಿಸೇ ಹೆಚ್ಚಿಸುವೆನು. ಕಷ್ಟದಿಂದ ಮಕ್ಕಳಂನು ಹೆರುವಿ; ನಿಂನ ಗಂಡನ ಮೇಲೆ ನಿಂನ ಇಚ್ಛೆ ಇರುವದು; ಅವನು ನಿಂನಂನು ಆಳುವನು.—

ಮತ್ತು ಆದಾಮನಿಗೆ ಹೇಳಿದ್ದೇನಂದರೆ—ನೀನು ನಿಂನ ಹೆಂಡತಿಯ ಮಾತು ಕೇಳಿ, ತಿಂನ ಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದಲ್ಲಿ ತಿಂದ ಕಾರಣ, ನಿಂನ ನಿಮಿತ್ತ ಭೂಮಿ ಶಪಿಸಲ್ಪಟ್ಟದಾಗಲಿ. ನಿಂನ ಜೀವದ ದಿನಗಳೆಲ್ಲಾ ಸಂಕಟಪಟ್ಟು, ಅದರಲ್ಲಿ ಫಲ ತಿಂನುವಿ. ಮತ್ತು ಮುಳ್ಳುಗಳಂನು ದತ್ತೂರಿಗಳಂನು ನಿನಗೆ ಮೊಳಿಸುವದು. ಹೊಲದ ಪಲ್ಯಗಳಂನು ತಿಂನುವಿ. ಮಣ್ಣಿಗೆ ತಿರುಗುವ ತನಕಾ, ನಿಂನ ಮುಖದ ಬೆವರಿನಿಂದ ರೊಟ್ಟಿ ತಿಂನುವಿ. ಯಾಕಂದರೆ ಅದರೊಳಗಿಂದ ತೆಗಿಯಲ್ಪಟ್ಟಿ. ಯಾಕಂದರೆ—ನೀನು ಮಂಣು; ಮಂಣಿಗೆ ತಿರುಗುವಿ.

೬ನೇದು. ಶಿಲುಬೆಯ ಕೂಡಾ ಅದಕ್ಕೆ ಇರುವ ಆದರಣೆಯೂ ಸಂರಕ್ಷಣೆಯೂ ಸಹಾ ತಿಳಿಯ ತಕ್ಕದ್ದು. ಯಾಕಂದರೆ ಮನುಷ್ಯನ ಶಿಲುಬೆಗೆ ಕಾರಣವಾದ ಪಾಪವಂನು ನಂಮ ಕರ್ತನಾದ ಕ್ರಿಸ್ತನು ತಂನ ಮೇಲೆ ಹೊತ್ತು ಕೊಂಡು, ಅದರ ಪ್ರಾಯಶ್ಚಿತ್ತವಂನು ಅನುಭವಿಸಿ, ತಾನು ಹೊತ್ತು ಕೊಂಡ ಶಿಲುಬೆಯಿಂದ, ತಂನಲ್ಲಿ ವಿಶ್ವಾಸಿಸುವವರ ಶಿಲುಬೆಯಂನೆಲ್ಲಾ ಆಶೀರ್ವದಿಸಿ, ಪರಿಶುದ್ಧ ಮಾಡಿದನು. ಅದುಕಾರಣ ಕೀರ್ತನೆಯಲ್ಲಿ ಪುರುಷನ ವಿಷಯವಾಗಿ ಹೇಳಿದ್ದೇನಂದರೆ—ಕರ್ತನಿಗೆ ಭಯ

ಪಟ್ಟು ಆತನ ಮಾರ್ಗಗಳಲ್ಲಿ ನಡದು ಕೊಳ್ಳುವವರೆಲ್ಲರು ಭಾಗ್ಯವಂತರು. ನಿಂನ ಕೈಗಳ ಕಷ್ಟಾರ್ಜಿತವಂನು ನೀನು ಉಂಣುವಿ. ನೀನು ಭಾಗ್ಯವಂತನು; ನಿನಗೆ ಒಳ್ಳೆದಾಗುವದು. ಇದರಂತೆ ಪೌಲನು ಸ್ತ್ರೀಯ ವಿಷಯವಾಗಿ ಬರೆದದ್ದು — ಸ್ತ್ರೀಯು ವಿಶ್ವಾಸದಲ್ಲಿಯೂ ಪ್ರೀತಿಯಲ್ಲಿಯೂ ಶುದ್ಧತ್ವದಲ್ಲಿಯೂ ಮನೋಸ್ವಸ್ಥ ಸಹಿತವಾಗಿ ನೆಲೆಯಾಗಿದ್ದರೆ; ಮಕ್ಕಳಂನು ಹೆರುವದರಿಂದ ರಕ್ಷಿಸಲ್ಪಡುವಳು, ಹೀಗಿರಲಿಕ್ಕಾಗಿ ನಿಶ್ಚಯವಾದವರಾದ ನೀವ್ಯೇ, ದೇವರ ವಾಕ್ಯಗಳ ಆಧಾರದ ಮೇಲೆ ನಿಂಮ ಮದುವೆಯ ಪಾಂಗಂನು ದೃಢ ಮಾಡಿಸ ಬೇಕೆಂದು, ಮನಸ್ಸಾಗಿದ್ದರೆ, ಇಲ್ಲಿಗೆ ಬರ್ರಿ.

(N.) ಇಲ್ಲಿರುವ (N.) ನೀವು ನಿಮಗೆ ಹೆಂಡತಿಯಾಗಿ (ಗಂಡನಾಗಿ) ತಕ್ಕೊಳ್ಳಲಿಕ್ಕೂ, ಬಾಳುವ ದಿನಗಳೆಲ್ಲಾ ಆಕೆಯಂನು (ಅವನಂನು) ಸುಖ ದುಃಖಗಳಲ್ಲಿ ಬಿಡದೆ ಇರಲಿಕ್ಕೂ ಮನಸ್ಸಾಗಿದ್ದರೆ,—ಹೌದು—ಅಂನಿರಿ.

(Ebenso zur Braut zu sprechen.)

Oder (ಅಥವಾ):

(N.) ನಾವು ನಿಂಮಂನು ಕೇಳುವದೇನಂದರೆ—ಇಲ್ಲಿ ಯೆದುರಿರುವ (N.) ನಿಮಗೆ ಹೆಂಡತಿಯಾಗಿ, (ಗಂಡನಾಗಿ) ತಕ್ಕೊಳ್ಳಲಿಕ್ಕೂ, ಆಕೆಗೆ (ಅವನಿಗೆ) ನಂಬಿಕೆಯುಳ್ಳ ಮನಃಪೂರ್ವಕವಾದ ಪ್ರೀತಿ ಮಾಡಲಿಕ್ಕೂ, ಸುಖ ದುಃಖದಲ್ಲಿ ಆಕೆಯಂನು (ಅವನಂನು) ಬಿಡದೆ, ಮರಣವು ನಿಂಮಂನು ಅಗಲಿಸುವ ತನಕ, ಮದುವೆಯ ಒಡಂಬಡಿಕೆಯಂನು ಆಕೆಯ (ಅವನ) ಸಂಗಡ ಪರಿಶುದ್ಧವಾಗಿ ಭಿನ್ನವಿಲ್ಲದೆ ಕೈಕೊಳ್ಳಲಿಕ್ಕೂ,

ಮನಸ್ಸಾಗಿದ್ದೀರಾ? ಇದು ನಿಂಮ ದೃಢ ನಿಜವಾದ ಮನಸ್ಸು ಇದ್ದರೆ, ದೇವರ ಮುಂದೆಯೂ ಈ ಕ್ರೈಸ್ತಸಭೆಯ ಮುಂದೆಯೂ ಯಥಾರ್ಥವಾಗಿ—ಹೌದು ಅಂನುವದರಿಂದ ಅದಂನು ಸ್ಥಿರ ಮಾಡಿರಿ.—ಹೌದು.

(dasselbe zur Braut zu sprechen: ಶರುವಾಯ N.)

ಹಾಗಾದರೆ ಒಬ್ಬರಿಗೊಬ್ಬರು ಬಲ ಕೈ ಕೊಡಿರಿ.

(Der Geistliche legt seine rechte Hand auf die Hände der Verlobten und spricht:)

ನೀವು ಈಗ ಒಬ್ಬರಿಗೊಬ್ಬರು ಗಂಡ ಹೆಂಡತಿಯ ಪ್ರೀತಿಗೂ ನಂಬಿಕೆಗೂ ಮಾತು ಕೊಟ್ಟದರಿಂದ; ಕ್ರೈಸ್ತಸಭೆಯ ನೇಮಿಸಲ್ಪಟ್ಟ ಸೇವಕನಾದ ನಾನು—ಈ ನಿಂಮ ಮದುವೆ ಕೂಟವು ದೇವರ ಕ್ರಮದ ಪ್ರಕಾರ ಬಿಚ್ಚಲಾರದಂಥಾ ಕೂಟವೆಂದು—ತಂದೆ ಮಗ ಪರಿಶುದ್ಧಾತ್ಮನೆಂಬ ದೇವರ ಹೆಸರಿನಲ್ಲಿ ದೃಢ ಮಾಡುತ್ತೇನೆ. ದೇವರು ಕೂಡಿಸಿದಂನು ಮನುಷ್ಯನು ಅಗಲಿಸದೆ ಇರಲಿ. ಆಮೆನ್.

(Die Neuverheyratheten knien nieder und der Geistliche spricht):

ಕರ್ತನಾದ ದೇವರೇ, ಪರಲೋಕದ ತಂದೆಯೇ, ನೀನು ಪುರುಷನಂನೂ ಸ್ತ್ರೀಯಂನೂ ನಿರ್ಮಾಣ ಮಾಡಿ, ಅವರು ಜಾರತ್ವದಲ್ಲಿ ಬೀಳದ ಹಾಗೆ, ಅವರಂನು ಮದುವೇ ಸ್ಥಿತಿಗೆ ನೇಮಿಸಿ, ಶರೀರದ ಫಲಗಳಿಂದ ಆಶೀರ್ವದಿಸುತ್ತಿ.

ನೀನೇ ಇದರಲ್ಲಿ, ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನಿಗೂ, ಆತನ ಮದಲಗಿತ್ತಿಯಾದ ಪರಿಶುದ್ಧ ಸಭೆಗೂ, ಇರುವ ಐಕ್ಯದ ಮರ್ಮವಂನು, ಸೂಚಿಸಿದಿ. ಓ ದಯಾಪರನೇ, ನಿಂನ ಕೃಪೆ ಕ್ರಮ ಆ

ಶೀರ್ವಾದವಂನು ಹೊಸತಾಗಿ ಮದುವೆಯಾದವರಾದ ಇವರಲ್ಲಿ ತಪ್ಪಿ ಹೋಗಗೊಡದೆ, ಕೃಪೆಯಾಗಿ ಕಾಪಾಡು. ಅವರು ಈ ಸ್ಥಿತಿಯಲ್ಲಿ ಕಡೇ ತನಕ, ನಿಂನ ಸ್ತುತಿ ಘನಕ್ಕಾಗಿಯೂ; ನೆರೆಯವರ ತಿದ್ದುವಿಕೆಗಾಗಿಯೂ, ಭಕ್ತಿಯಿಂದ ಒಬ್ಬರ ಕೂಡಾ ಒಬ್ಬರು ಬಾಳುವ ಹಾಗೆ, ಅವರ ಮೇಲೆ ನಿಂನ ಕೃಪೆಯ ಐಶ್ವರ್ಯವಂನು ಹೊಯ್ಯು—ಯೆಂದು, ನಿಂನ ಪ್ರಿಯ ಮಗನಾಗಿರುವ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ, ಬೇಡುತ್ತೇವೆ. ಆಮೆನ್.

Oder (ಅಥವಾ):

ಕರ್ತನೇ, ನಂಮ ದೇವರೇ, ಯೆಂದೆಂದಿಗೂ ನಂಮ ಸಹಾಯ ಆಶ್ರಯವಾಗಿರುವಾತನೇ, ಈಗ ನಿಂನ ಪರಿಶುದ್ಧ ಕ್ರಮದ ಪ್ರಕಾರ ಗಂಡ ಹೆಂಡತಿಯ ಪ್ರೀತಿ ನಂಬಿಕೆಗಳ ಒಡಂಬಡಿಕೆ ಮಾಡಿ ಕೊಂಡು, ಹೊಸತಾಗಿ ಮದುವೆಯಾದವರಾದ ಇವರ ಮೇಲೆ ಕೃಪೆಯಿಂದ ನೋಡು. ಅವರ ಸೇರೋಣವಂನು ಹೊರಡೋಣವಂನು ಆಶೀರ್ವದಿಸು. ನಿಂನ ಉತ್ತಮವಾದ ಕೃಪೆಯುಳ್ಳ ಚಿತ್ತವು ಸಕಲ ವಿಷಯದಲ್ಲಿ ಅವರಲ್ಲಿ ಆಗುವ ಹಾಗೆ, ಅವರಂನು ನಿಂನ ಪರಿಶುದ್ಧಾತ್ಮದಿಂದ ನಡಿಸು. ಸಂಪೂರ್ಣತೆಯ ಬಂಧವಾದ ಪ್ರೀತಿಯಿಂದ ಅವರ ಆತ್ಮಗಳು ಕ್ರಿಸ್ತ ಯೇಸುವಿನಲ್ಲಿ ಕೂಡಿ ಕೊಂಡು, ಒಂದೇ ಮನಸ್ಸಾಗುವ ಹಾಗೆ, ದಯ ಮಾಡು. ಅವರು ಕ್ರಿಸ್ತನ ವಾಕ್ಯವಂನು ಐಶ್ವರ್ಯವಾಗಿ ತಂಮಲ್ಲಿ ವಾಸ ಮಾಡ ಕೊಟ್ಟು, ಸಕಲ ಕಾರ್ಯಗಳಲ್ಲಿ ತಂಮ ಚಿಂತೆಯಂನು, ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ, ಸ್ತೋತ್ರ ಸಹಿತವಾಗಿ, ನಿಂನ

ಮುಂದೆ ತರುವ ಹಾಗೆ, ಅವರಂನು ನಿಂನ ಆತ್ಮದಿಂದ ಯೆಬ್ಬಿಸು.
ಭೇದ ಜಗಳದ ದುರಾತ್ಮಕ್ಕೆ ಅಡ್ಡಿ ಮಾಡಿ, ಒಬ್ಬರಂನೊಬ್ಬರು ಸೈರಣೆ
ಯಿಂದ ತಾಳಿ ಕೊಳ್ಳುವದಕ್ಕೆ ಅವರಿಗೆ ಮೇಲಿನಿಂದ ವಿವೇಕವಂನೂ ದ
ಯಾಳತ್ವವಂನೂ ಕೊಡು. ಅವರ ಕೈಗಳ ಕೆಲಸ ಬೆಳಸಿ, ಅವರು ನಂಬಿ
ಕೆಯುಳ್ಳ ಜಾಗ್ರತೆಯಿಂದ ತಂಮ ಉದ್ಯೋಗ ನಡಿಸುವದರಲ್ಲಿ ಅವರ
ಬದುಕಂನು ಆಶೀರ್ವದಿಸು. ಅವರಿಗೆ ಹೊತ್ತುವ ಶಿಲುಬೆಯೂ ಉಪ
ದ್ರವೂ ಸಹಾ ಪಶ್ಚಾತ್ತಾಪ ವಿಶ್ವಾಸ ತಾಳ್ಮೆಯಿಂದ ಅವರಿಗೆ ನಿರಂತರವಾ
ದ ಆಶೀರ್ವಾದ ಆಗುವ ಹಾಗೆ, ಸಹಾಯ ಮಾಡು. ಅವರ ಮ
ನೆ ಅವರ ಮನಸ್ಸು ನಿಂನ ಸ್ಥಾನವಾಗ ಮಾಡು. ಒಬ್ಬರಂನೊಬ್ಬರು
ಹೊನ್ನಗೆ ಪರಲೋಕಕ್ಕೆ ಕರ ಕೊಂಡು ಬರಲೆಂದು, ಇಬ್ಬರು ಚಿಂತಿಸುವ
ಹಾಗೆ, ಕೃಪೆ ಕೊಡು. ಮತ್ತು ಅವರು ತಂಮ ಕೆಲಸವಂನು ತೀರಿಸಿ,
ಅಂತ್ಯದ ಪರಿಯಂತರ ವಿಶ್ವಾಸವಂನು ಕೈಕೊಂಡ ಮೇಲೆ, ಕಡೇಲಿ ಅ
ವರಂನು ಈ ಭೂಲೋಕದ ಪರವಾಸದಿಂದ ತಪ್ಪಿಸಿ, ಪರಲೋಕದ ನಿಂ
ನ ಮನೆಯಲ್ಲಿ, ನಿತ್ಯಜೀವಕ್ಕಾಗಿ, ಯೇಸು ಕ್ರಿಸ್ತನ ನಿಮಿತ್ತ ಸೇರಿಸು.
ಆಮೆನ್.

ಪರಲೋಕದಲ್ಲಿರುವ ನಂಮ ತಂದೆಯೇ, ನಿಂನ ನಾಮವು ಪರಿಶು
ದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ
ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂ
ಮ ರೊಟ್ಟಿಯಂನು ಈ ಹೊತ್ತು ನಮಗೆ ಕೊಡು. ನಾವು ನಂಮ ಸಾ
ಲಗಾರರಿಗೆ ಬಿಡುವ ಪ್ರಕಾರ, ನಂಮ ಸಾಲಗಳಂನು ನಮಗೆ ಬಿಡು.

ನಂಮಂನು ಶೋಧನೆಯಲ್ಲಿ ಸೇರಿಸದೇ, ಕೇಡಿನೊಳಗಿಂದ ನಂಮಂನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ, ಯುಗಯುಗಾಂತರಗಳ ವರಿಗೂ, ನಿಂನವಾಗಿವೆ. ಆಮೆನ್.

ಕರ್ತನು ನಿಂಮಂನು ಆಶೀರ್ವದಿಸಿ, ನಿಂಮಂನು ಕಾಯಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಪ್ರಕಾಶಿಸ ಮಾಡಿ, ನಿಂಮಂನು ಕರುಣಿಸಲಿ. ಕರ್ತನು ತಂನ ಮುಖವಂನು ನಿಂಮ ಮೇಲೆ ಯೆತ್ತಿ, ನಿಮಗೆ ಸಮಾಧಾನ ಕೊಡಲಿ. ಆಮೆನ್.

---

## Begräbniss (ಹೂಳಿಕೆ).

### 1. Erwachsene.

(Am Grabe zu sprechen:)

ಒಬ್ಬನೇ ಅಮರತ್ವವುಳ್ಳ ನಂಮ ದೇವರಿಗೆ, ಯುಗಯುಗಾಂತರಗಳ ವರಿಗೂ, ಮಹಿಮೆ ಆಗಲಿ. ಆಮೆನ್.

Oder (ಅಥವಾ):

ಸತ್ತಿದ್ದು, ಈಗ ಯುಗಯುಗಾಂತರಗಳ ವರಿಗೂ ಬದುಕುವ ಯೇಸು ಕ್ರಿಸ್ತನು, ಇಂದೂ, ಯೆಂದೆಂದಿಗೂ, ಸ್ತುತಿಸಲ್ಪಡಲಿ. ಆಮೆನ್.

Lesung von Psalm XC und 1 Corinther 15, 20—58.

(೯೦ನೇ ಕೀರ್ತ. ಮತ್ತು ೧ ಕೊರ್. ೧೫, ೨೦—೫೮. ಓದುವದು).

Oder (ಅಥವಾ):

ಕರ್ತನಲ್ಲಿ ಪ್ರಿಯರೇ, ಸರ್ವತ್ರಾಣ ಸರ್ವಜ್ಞಾನ ಉಳ್ಳ ದೇವರಿಗೆ ಈ ನಂಮ ಸಹೋದರರಂನು( — )ಈ ಲೋಕದೊಳಗಿಂದ ಕರೆದು

ಪ್ಪೆಯ ಬೇಕೆಂಬುವದು ಸರಿ ಬಿದ್ದ ಮೇಲೆ, ನಾವು ಅವನ (ಳ. ರ.) ದೇಹವನ್ನು ಭೂಮಿಯಲ್ಲಿ ಹೂಳಿಟ್ಟು, ಧೂಳನ್ನು ಧೂಳಿಗೆ ಒಪ್ಪಿಸುತ್ತೇವೆ. ಯಾಕಂದರೆ ಕರ್ತನ ಮುಖವು ಮನುಷ್ಯ ಮಕ್ಕಳ ಹಾಬ್ಬಾಬನಿಗೆ ಹೇಳುವದೇನಂದರೆ—ನೀನು ಮಣ್ಣು; ಮಣ್ಣಿಗೆ ತಿರುಗುವಿ. ಹಾಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ, ಲೋಕದಲ್ಲಿ ಪ್ರವೇಶಿಸಿ; ಈ ಪ್ರಕಾರ ಯೆಲ್ಲರು ಪಾಪ ಮಾಡಿದ್ದಲ್ಲಿ, ಮರಣವು ಯೆಲ್ಲರ ಮೇಲೆ ವ್ಯಾಪಿಸಿದ ಹಾಗಿರುವದಲ್ಲಾ. ಆದದರಿಂಧ ಮಾಂಸವೆಲ್ಲಾ ಲಯವಾಗುವದು; ಮುಖದಾಕ್ಷಿಣ್ಯ ಇದರಲ್ಲಿ ನಡೆಯುವದಿಲ್ಲ. ಹೀಗಿರುವ ಕಾರಣದಿಂದ, ದೀನ ಮನಸ್ಸಿನಿಂದ ನಂಮ ಪಾಪಗಳ ದೋಷವನ್ನು ಅರಿಕೆ ಮಾಡುವವರಾಗಿ, ಇಲ್ಲಿ ನಿಂತು, ದೇವರ ಬಲವಾದ ಕೈಕೆಳಗೆ ನಂಮನ್ನು ತಗ್ಗಿಸಿ ಕೊಂಡು, ಆತನ ಮುಂದೆ ಧೂಳಾಗಿರುವ ನಾವು ಸ್ಥಿರರಲ್ಲವೆಂದೂ, ನಂಮ ದಿವಸಗಳು ಓಡಿಹೋಗುತ್ತವೆ ಯೆಂದೂ, ಜಾಗ್ರತೆಯಾಗಿ ನೆನಪು ಮಾಡಿ ಕೊಳ್ಳೋಣ.

ಸ್ತ್ರೀಯಿಂದ ಹುಟ್ಟಿದ ಮನುಷ್ಯನು ಸ್ವಲ್ಪ ದಿವಸದವನು; ಉಪದ್ರದಿಂದ ತುಂಬಿದವನು; ಹೂವಿನಂತೆ ಅರಳಿ ಬಾಡಿ ಹೋಗುತ್ತಾನೆ; ನೆರಳಿನಂತೆ ಓಡುತ್ತಾನೆ; ನಿಲ್ಲುವದಿಲ್ಲ. ಕರ್ತನೇ, ನಂಮ ದಿವಸಗಳನ್ನು ಗೇಣುದ್ದವಾಗಿ ಕೊಟ್ಟಿದ್ದೀ. ನಂಮ ಆಯುಸ್ಸು ನಿನ್ನ ಮುಂದೆ ಯೇನು ಇಲ್ಲದ ಹಾಗಿದೆ. ನಿಶ್ಚಯವಾಗಿ ನಿಂತಿರುವ ಪ್ರತಿ ಮನುಷ್ಯನು ಶುದ್ಧ ಹಾಳೆಯೇ.

ಆದರೆ ನಂಮ ಕರ್ತನಾದ ಯೇಸು ಕ್ರಿಸ್ತನಿಗೂ, ನಂಮ ತಂದೆ

ಯಾದ ದೇವರಿಗೂ, ಸ್ತುತಿ ಉಂಟಾಗಲಿ. ಆತನೇ ನಮಗೆ ಪ್ರೀತಿ ಮಾಡಿ, ನಿತ್ಯವಾದ ಆದರಣೆಯನ್ನೂ ಒಳ್ಳೇ ಹಾರೈಕೆಯನ್ನೂ ಕೃಪೆಯಾಗಿ ಕೊಟ್ಟಿದ್ದಾನೆ. ಆತನು, ತನ್ನ ಅಧಿಕವಾದ ಕರುಣೆಯ ಪ್ರಕಾರ, ಯೇಸು ಕ್ರಿಸ್ತನು ಸತ್ತವರೊಳಗಿಂದ ಹೊಂದಿದ ಪುನರುತ್ಥಾನದ ಮೂಲವಾಗಿ, ನಮ್ಮನ್ನು ಜೀವವುಳ್ಳ ಹಾರೈಕೆಗೆ ತಿರಿಗಿ ಹುಟ್ಟಿಸಿದ್ದಾನೆ. ಹ್ಯಾಗಂದರೆ ಯಾವ ಪ್ರಕಾರ ಆದಾಮನಲ್ಲಿ ಯೆಲ್ಲರು ಸಾಯುತ್ತಾರೋ, ಅದೇ ಪ್ರಕಾರ ಕ್ರಿಸ್ತನಲ್ಲಿ ಯೆಲ್ಲರು ಬದುಕಿಸಲ್ಪಡುವರು. ಯಾಕಂದರೆ ಆತನು ತನ್ನ ಮರಣದಿಂದ ನಮ್ಮ ಪಾಪಗಳನ್ನು ಪರಿಹಾರ ಮಾಡಿ, ತನ್ನ ಪುನರುತ್ಥಾನದಿಂದ ಜೀವವನ್ನೂ ನಿರ್ಲಯವನ್ನೂ ಬೈಲಿಗೆ ತಂದನು. ಆತನು ಸತ್ತವರೊಳಗಿಂದ ಚೊಚ್ಚಲನಾಗಿದ್ದು, ಹೇಳುವದೇನಂದರೆ — ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ, ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು; ಮತ್ತು ಬದುಕಿ ನನ್ನಲ್ಲಿ ವಿಶ್ವಾಸವಿಡುವವನು ಯೆಂದೆಂದಿಗೂ ಸಾಯುವದಿಲ್ಲ. — ಅದುಕಾರಣ ನಾವು ಜೀವದಲ್ಲಿಯೂ ಮರಣದಲ್ಲಿಯೂ ಆತನನ್ನು ನಮಗೆ ಆಶ್ರಯ ಮಾಡಿಕೊಳ್ಳುತ್ತೇವೆ. ಯಾಕಂದರೆ ಆತನ ಮುಖದಿಂದ ಮರಣವು ಜಯದಲ್ಲಿ ನುಂಗಲ್ಪಟ್ಟದೆ. ಆತನಲ್ಲಿಡುವ ವಿಶ್ವಾಸದಿಂದ ದೇವರ ಪ್ರಜೆಗೆ ನಿತ್ಯಜೀವದ ವಾಗ್ದತ್ತದಲ್ಲಿ ಪಾಲು ಉಂಟು. ಯೇನಂದರೆ ಈ ಲಯವಾದದ್ದು ನಿರ್ಲಯವನ್ನೂ, ಈ ಮರ್ತ್ಯವಾದದ್ದು ಅಮರತ್ವವನ್ನೂ ಧರಿಸುವದು. ಲಯವಾಗಿ ಬಿತ್ತಲ್ಪಡುವದು, ನಿರ್ಲಯವಾಗಿ ಯೆಬ್ಬಿಸಲ್ಪಡುವದು. ಅಪಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯ

ಲ್ಲಿ ಯೆಬ್ಬಿಸಲ್ಪಡುವದು. ಮತ್ತು ಮಣ್ಣಿನವನ ಹೋಲಿಕೆಯನ್ನು ಧರಿಸಿದ ಹಾಗೆ, ಪರಲೋಕದವನ ಹೋಲಿಕೆಯಂನು ಸಹಾ ಧರಿಸುವೆವು, ಅಂದರೆ ನಂಮ ಕರ್ತನಾದ ಯೇಸು ಕ್ರಿಸ್ತನ ಪ್ರತಿ ರೂಪವಂನೇ. ಆತನು, ತನಗೆ ಯೆಲ್ಲವಂನು ಆಧೀನ ಮಾಡ ಶಕ್ತವಾದ ಯತ್ನದ ಪ್ರಕಾರ, ನಂಮ ನೀಚತನದ ಶರೀರವಂನು, ತಂನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಹಾಗೆ, ಮಾರ್ಪಡಿಸುವನು.

(Nach dieser Ermahnung oder nach obigen Lectionen das Folgende:)

ಹೀಗಿರಲಾಗಿ ನಾವು ಈ ಸಮಾಧಿ ಮುಂದೆ ದುಃಖ ಪಡುತ್ತೇವೆ, ಸರಿ. ಪರಂತು ಭರವಸವಿಲ್ಲದವರಂತೆ ಅಲ್ಲಾ; ನಂಮ ತಲೆಗಳಂನು ಯೆತ್ತುತ್ತೇವೆ. ಯಾಕಂದರೆ ನಂಮ ರಕ್ಷಕನು ಬಾಳುತ್ತಾನೆಂದು ಬಲ್ಲೆವು. ಕರ್ತನಲ್ಲಿ ನಿದ್ರೆ ಹೋದವರು ದೇವರ ಕೈಯಲ್ಲಿ ವಿಶ್ರಾಂತಿ ಹೊಂದಿದ್ದಾರೆ; ಅಲ್ಲಿ ಯಾವ ಬಾಧೆಯಾದರೂ ಅವರಂನು ಮುಟ್ಟುವದಿಲ್ಲ. ಯಾಕಂದರೆ ಕರ್ತನಲ್ಲಿ ಸಾಯುವ ಮರಣಸ್ಥನು ಭಾಗ್ಯವಂತನು. ಹೌದು! ಅವರು ತಂಮ ಕಷ್ಟಗಳಿಂದ ವಿಶ್ರಾಂತಿಯಾಗುವರೆಂದು, ಆತ್ಮವು ಹೇಳುತ್ತದೆ. ಮತ್ತು ಅವರ ಕ್ರಿಯೆಗಳು ಅವರಂನು ಹಿಂಬಾಲಿಸುತ್ತವೆ.

ಆದರೆ ಇಂಥಾ ಭರವಸ ಇದ್ದವನು, ತಾನು ನೀತಿವಂತರ ಪುನರುತ್ಥಾನಕ್ಕೆ ಮುಟ್ಟುವ ಹಾಗೆ, ಕ್ರಿಸ್ತನು ಪವಿತ್ರವಿರುವ ಪ್ರಕಾರವೇ, ತಂನಂನು ಪವಿತ್ರ ಮಾಡಿ ಕೊಳ್ಳುತ್ತಾನೆ. ಯಾಕಂದರೆ ಒಬ್ಬೊಬ್ಬನು ಶರೀರದಲ್ಲಿ ಆದವುಗಳಂನು, ಒಳ್ಳೇದಾಗಲಿ ಕೆಟ್ಟದಾಗಲಿ, ಮಾಡಿದ ಪ್ರಕಾರ, ಹೊಂದುವ ಹಾಗೆ, ನಾವೆಲ್ಲರು ಕ್ರಿಸ್ತನ ನ್ಯಾಯಾಸನದ ಮುಂದೆ

ಕಾಣಿಸಿ ಕೊಳ್ಳ ಬೇಕು. ಅದುಕಾರಣ ನಂಮ ಪ್ರಿಯವಾದವರೇ, ಲೋಕದಲ್ಲಿ ಆಶೆಯಿಂದ ಇರುವ ನಷ್ಟಕ್ಕೆ ತಪ್ಪಿಸಿ ಕೊಳ್ಳುವವರಾಗಿ, ಯೆಂದಿಗೂ ನಂಮ ಕಡೆಯಿಂದ ತೆಗೆಯಲ್ಪಡದ ಒಂದೇ ಅಗತ್ಯವಾದಂಥಾದಕ್ಕೆ ಪ್ರಯತ್ನ ಮಾಡೋಣ. ವಿಶ್ವಾಸದ ಒಳ್ಳೇ ಹೋರಾಟ ಹೋರಾಡಿ, ನಾವು ಕರೆಯಲ್ಪಟ್ಟಿರುವ ನಿತ್ಯಜೀವವಂನು ಹಿಡಿಯೋಣ. ವಿವೇಕಿಗಳಾದವರು, ತಂಮ ಕರ್ತನ ಹಾದಿ ನೋಡುವ ನಂಬಿಕೆಯುಳ್ಳ ಸೇವಕರಂತೆ, ಯಾವಾಗಲು ಸಿದ್ಧರಾಗಿ, ಸತ್ಯದ ವಿಧೇಯತ್ವದಿಂದ ತಂಮ ಪ್ರಾಣವಂನು ಪವಿತ್ರ ಮಾಡಿ ಕೊಳ್ಳಲಿ. ಇಂಥವನಾಗಿರುವ ಒಬ್ಬೊಬ್ಬನಿಗೆ ಕರ್ತನು ಕರೆದು ಹೇಳುವದೇನಂದರೆ.—ಮರಣದ ಪರಿಯಂತರ ನಂಬಿಕೆಯಾಗಿರು; ಆಗಲು ಜೀವದ ಕಿರೀಟವಂನು ನಿನಗೆ ಕೊಡುವೆನು.—

(Oder eine Rede über einen der obigen Texte.)

**Gebet** (ಪ್ರಾರ್ಥನೆ ಮಾಡೋಣ).

ಕರ್ತನಾದ ಯೇಸು ಕ್ರಿಸ್ತನೇ, ನೀನು ಮರಣದ ಅಧಿಕಾರವಂನು ತೆಗದು, ನಿಂನ ಸುವಾರ್ತೆಯಿಂದ ಜೀವವನ್ನು ನಿರ್ಲಯವನ್ನು ಬೈಲಿಗೆ ತಂದದರಿಂದ ನಿಂನಂನು ಸ್ತುತಿಸುತ್ತೇವೆ. ನಿಂನ ಮೇಲೆ ನಂಮ ಭಾರವನಿಡುತ್ತೇವೆ. ಓ ಮರಣವನ್ನು ಜೈಸಿದಾತನೇ, ನೀನೇ, ಪುನರುತ್ಥಾನವೂ ಜೀವವೂ ಯೆಂದು, ನಿಂನಂನು ಆರಾಧಿಸುತ್ತೇವೆ. ನಿನ್ನ ಐಕ್ಯದಲ್ಲಿ ಮಾತ್ರ ನಾವು ನಿತ್ಯಜೀವವನ್ನು ಹುಡುಕುತ್ತೇವೆ. ಯಾವ ಮರಣವು ನಂಮಂನು ನಿನಗೆ ಅಗಲಿಸದ ಹಾಗೆ ನಿನಗೂ ನಮಗೂ ಇರುವ ಪ್ರೀತಿಯ ಬಂಧವನ್ನು ಘಟ್ಟಿಮಾಡು. ನಾವು ತಕ್ಕ ವೇಳೆಯಲ್ಲಿ

ನಿಂನಲ್ಲಿ ಸಾಯುವ ಹಾಗೆ, ನಿಂನಲ್ಲಿಯೇ ಮಾತ್ರ ನಂಮಂನು ಬದುಕ ಮಾಡು. ನಿಂನ ಮರಣದ ಆನಂದಕರವಾದ ಫಲಗಳಂನು, ನಂಮ ಮರಣದ ಘಳಿಗೆಯಲ್ಲಿ, ನಮಗೆ ಅತಿಶಯವಾದ ಸಮಾಧಾನದಿಂದ ಅನುಭವಿಸ ಗೊಡು, ನಿಂನ ಶಕ್ತಿಯಿಂದ ನಾವು ಯೆಲ್ಲಾ ವೈರಿಗಳನ್ನು ಜಯಿಸಿ, ನಿರಂತರತ್ವಕ್ಕೆ ಯೆಲ್ಲಾ ಶೇರಿಸುವ ಹಾಗೆ, ಓ ಮಹಾ ಜಯಶಾಲಿಯೇ,—ನಮ್ಮ ಕಡೇ ಹೋರಾಟದಲ್ಲಿ ನಂಮ ಸಂಗಡ ಇರು. ಮತ್ತು ನಾವು ಆಗಲು ಪ್ರಾರ್ಥನೆ ಮಾಡಲಾರದೆ ಇದ್ದರೆ, ನಿಂನ ಪರಿಶುದ್ಧಾತ್ಮವು ಉಚ್ಚರಿಸಲಾರದಂಥ ನಳುವಿಕೆಗಳಿಂದ ನಮ್ಮಗೋಸ್ಕರ ನಡುವೆ ಬರಿಸು. ಪರಲೋಕದ ಬೆಳಕಿನಿಂದಲೂ, ದಿವ್ಯ ಶಕ್ತಿಯಿಂದಲೂ, ನಂಮಂನ ಕತ್ತಲೆಯಾದ ಮರಣದ ತಗ್ಗಂನು ಭದ್ರವಾಗಿ ದಾಟಿಸಿ, ಆನಂದ ಭರಿತವಾದ ನಿತ್ಯಜೀವದಲ್ಲಿ ಶೇರಿಸು. ಹೌದು! ಕರ್ತನೆ, ನಂಮ ಸುತ್ತಲು ಕೇವಲ ಕತ್ತಲೆ ಇದ್ದು, ನಂಮ ಹೃದಯಕ್ಕೆ ಹೊಚ್ಚಿನ ಸಂಕಟ ಹೆಚ್ಚುವಾಗಲೇ, ನೀನು ಅತ್ಯಧಿಕವಾಗಿ, ನಿಂನ ಮರಣದ ಸಮಾಧಾನದಿಂದಲೂ, ನಿಂನ ಜೀವದ ಬೆಳಕಿನಿಂದಲೂ, ನಿಂನ ಆತ್ಮದ ತ್ರಾಣದಿಂದಲೂ, ನಿಂನ ರಾಜ್ಯದ ನಿರ್ಭಯವಾದ ಬಾಧ್ಯತೆಯಿಂದಲೂ, ನಂಮನ್ನು ಆಶೀರ್ವದಿಸು. ಆಮೆನ್.

Oder (ಅಥವಾ):

ಸರ್ವತ್ರಾಣಿಯಾದ, ಅಮರತ್ವ ಉಳ್ಳ ದೇವರೇ, ಪರಲೋಕದ ತಂದೆಯೇ, ನಿಂನ ವರುಷಗಳು ತಲತಲಾಂತರಗಳಿಗೂ ಅವೆ. ಆದರೆ ನಾವು ಕಾಲಾಂತರದಲ್ಲಿ ಕಳೆದು ಹೋಗುತ್ತೇವೆ. ಯಾಕಂದರೆ ಮಾಂಸವೆಲ್ಲಾ

ಹುಲ್ಲಿನ ಹಾಗಿದೆ; ಮನುಷ್ಯನ ಮಹಿಮೆ ಯೆಲ್ಲಾ ಹುಲ್ಲಿನ ಹೂವಿನ ಹಾಗಿದೆ. ಹುಲ್ಲು ಬಾಡಿ ಹೋಗುವದು, ಅದರ ಹೂವು ಉದರಿ ಹೋಗುವದು. ಕರ್ತನೇ, ನಾವು ಯೆಷ್ಟು ಅಸ್ಥಿರರೆಂದು ತಿಳಿಯುವ ಹಾಗೆ, ನಂಮ ಅಂತ್ಯವಂನೂ, ನಂಮ ದಿವಸಗಳ ಅಳತೆ ಇಷ್ಟೆಂಬುವದಂನೂ, ನಮಗೆ ತಿಳಿಸು. ಮೃತ್ಯುವಿನ ದರ್ಶನಕ್ಕೆ ನಾವು ಹೆದರಿಕೊಳ್ಳದೆ, ವಿಶ್ವಾಸದಿಂದ ಮಂಗಳವಾದ ಅಂತ್ಯಕ್ಕೆ ಯೆದುರು ನೋಡುವ ಹಾಗೆ, ದಿನ ದಿನಕ್ಕೆ ಪಶ್ಚಾತ್ತಾಪವುಳ್ಳ ನಡತೆಯಿಂದ ನಂಮಂನು ಮರಣಕ್ಕೆ ಸಿದ್ಧ ಮಾಡಿ ಕೊಳ್ಳುವದಕ್ಕೆ ಕೃಪೆ ಕೊಡು.

ಕರ್ತನಾದ ಯೇಸು ಕ್ರಿಸ್ತನೇ, ನಂಮ ಘಳಿಗೆ ಬಂದಿರುವಾಗ, ಕೃಪೆಯಿಂದ ನಂಮಂನು ಸಹ ಈ ಲೋಕದೊಳಗಿಂದ ತೆಗದು, ನಿಂನ ಬಳಿಗೆ ಪರಲೋಕದಲ್ಲಿ ಶೇರಿಸು. ಅಷ್ಟರಲ್ಲಿ ನಂಮಂನು ವಿಶ್ವಾಸದಲ್ಲಿಯೂ ಸದ್ಭಕ್ತಿಯಲ್ಲಿಯೂ, ನಾವು ಈ ಕಷ್ಟ ಬಿಟ್ಟು ಹೋಗುವ ತನಕ, ಕಾಪಾಡು. ನೀನೇ ಪುನರುತ್ಥಾನವೂ ಜೀವವೂ ಆಗಿದ್ದಿ; ನಿಂನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು; ಮತ್ತು ಬದುಕಿ ನಿಂನಲ್ಲಿ ವಿಶ್ವಾಸವಿಡುವವನು ಯೆಂದೆಂದಿಗೂ ಸಾಯುವದಿಲ್ಲ. ನಂಮ ನಿದ್ರೆಯಿಂದ ನಂಮನು-ಸಂತೋಷವಾಗಿ ಜೀವಕ್ಕೆ ಯೆಬ್ಬಿಸಿ ಪರಲೋಕದ ಆನಂದದಲ್ಲಿ ಶೇರಿಸು — ಯೆಂದು, ನಿಂನ ಪ್ರೀತಿಯ ನಿಮಿತ್ತ, ಬೇಡಿ ಕೊಳ್ಳುತ್ತೇವೆ. ಆಮೆನ್.

Oder (ಅಥವಾ):

ಸರ್ವತ್ರಾಣಿಯಾದ, ನಿತ್ಯವಾದ, ಜೀವ ಉಳ್ಳ ದೇವರೇ, ನೀನು ನಿಂನ ಪ್ರಿಯ ಮಗನ ಮರಣದಿಂದ ಪಾಪವಂನೂ ಮರಣವಂನೂ

ನಾಶನ ಮಾಡಿ, ಆತನ ಪುನರುತ್ಥಾನದಿಂದ ನೀತಿಯನ್ನೂ ನಿತ್ಯಜೀವವನ್ನೂ ತಿರಿಗಿ ಉಂಟು ಮಾಡಿದ್ದಿ. ಈ ರಕ್ಷಣೆಯಿಂದ ನಾವು ಸೈತಾನನ ಅಧಿಕಾರಕ್ಕೆ ಬಿಡುಗಡೆಯಾದೆವು. ಈ ಪುನರುತ್ಥಾನದ ಶಕ್ತಿಯಿಂದ ನಂಮ ಮರ್ತ್ಯ ಶರೀರಗಳು ಸಹ ಸತ್ತವರೊಳಗಿಂದ ಯೆಬ್ಬಿಸಲ್ಪಡುವವು. ನಾವು ಇದನ್ನು ದೃಢವಾಗಿ ಪೂರ್ಣ ಹೃದಯದಿಂದ ನಂಬಿಕೊಂಡು ಭಾಗ್ಯವಂತರೆಲ್ಲರ ಸಂಗಡ, ನಂಮ ಶರೀರದ ಸಂತೋಷಕರವಾದ ಪುನರುತ್ಥಾನ ಹೊಂದುವ ಹಾಗೆ, ನಿಂನ ಒಬ್ಬನಾಗಿ ಹುಟ್ಟಿದ ಮಗನಾಗಿರುವ ನಂಮ ರಕ್ಷಕನಾದ ಯೇಸು ಕ್ರಿಸ್ತನ ಮುಖದಿಂದ, ನಮಗೆ ದಯ ಮಾಡು. ಆಮೆನ್.

Oder (ಅಥವಾ):

ಕರ್ತನಾದ ದೇವರೇ, ನೀನು ಯುಗಯುಗಾಂತರಗಳಿಗೂ ಬಾಳುತ್ತೀ. ನೀನು ಮನುಷ್ಯರನ್ನು ಧೂಳು ಬೂದಿ ಆಗ ಮಾಡಿ, ಮನುಷ್ಯನ ಮಕ್ಕಳೇ ತಿರಿಗಿರಿ—ಯೆಂದು ಹೇಳುತ್ತೀ. ಮನುಷ್ಯನ ಉತ್ತಮವಾದದ್ದು ಬಾಡಿ ಹೋಗುವ ಹೂವಿನ ಹಾಗಿದೆ. ಬಹಳ ವ್ಯರ್ಥವಾದ ಕಷ್ಟಗಳಲ್ಲಿ ದಣಿದು ಕೊಂಡ ಮೇಲೆ, ನೆರಳಿನಂತೆ ಕಾಣದೆ ಹೋಗುತ್ತಾನೆ. ಆದರೆ ನಿಜವಾದ ಜೀವ ಯೇನಂದರೆ—ಪರಮ ವರವೂ ಸಹಜ ಜೀವವೂ ಆಗಿರುವ ನೀನೇ, ನಿಂನ ಪ್ರಿಯ ಮಗನಾದ ಯೇಸುಕ್ರಿಸ್ತನಲ್ಲಿ ಪರಿಶುದ್ಧಾತ್ಮದ ಕೃಪೆಭರಿತವಾದ ಬೆಳಕಿನಿಂದಲೂ, ಪುನರ್ಜನ್ಮದಿಂದಲೂ, ವಿಶ್ವಾಸವುಳ್ಳ ಹೃದಯಗಳಲ್ಲಿ ವಾಸ ಮಾಡಿ ಬದುಕುವದೇ. ಮತ್ತು ನಾವು ಆತ್ಮಭಾವವಾದ ಜೀವವೃಕ್ಷವಾದ ಕ್ರಿಸ್ತನಲ್ಲಿ ಅಂಟಿಕ

ಲ್ಪಟ್ಟವರಾಗಿ, ಪುನರ್ಜನ್ಮದಿಂದ ಆತನ ಪ್ರತಿರೂಪವಾಗುವದಕ್ಕೆ ಬೆಳೆದು, ಆತ್ಮದ ಪ್ರಥಮ ಫಲವಂನು ಆತನಿಂದ ಹೊಂದಿ, ಈ ಯುಗದ ಮೇಲೆ ನಿತ್ಯ ಆನಂದದಲ್ಲಿ, ಸಂಪೂರ್ಣತೆಯು ಬರುವ ತನಕ, ಆತನ ರಾಜ್ಯದ ಫಲಗಳಂನು ಫಲಿಸುವದೇ.

ನಂಬಿಕೆಯುಳ್ಳ ದೇವರೇ, ತಂದೆಯೇ, ನಾವು ನಿಂನಂನು ಬೇಡುವದೇನಂದರೆ—ನಾವು ನಂಮ ದಿವಸಗಳಂನು ಯೆಣಿಸಿಕೊಂಡು, ಹೊಂದೇ ಹಾರಿ ಹಾಯುವದೂ ಇದರ ತರುವಾಯ ನ್ಯಾಯತೀರ್ವಿಕೆಯೂ ಮನುಷ್ಯರಿಗೆ ನೇಮಕವಾಗಿದೆಂದು, ನೆನಸಿಕೊಳ್ಳ ನಮಗೆ ಕಲಿಸು. ನಂಬಿಕೆಯುಳ್ಳ ದೇವರೇ, ನಾವು ಇದನ್ನು ಹೊಳ್ಳೇದಾಗಿ ಚಿತ್ತಕ್ಕೆ ತಂದು, ಈಗಿನ ವ್ಯರ್ಥತ್ವದಲ್ಲಿ ಯಾವದಂನಾದರೂ ನಮಗೆ ಅಲಸ್ಯ ಕೇಡು ಮಾಡಕೊಡದೆ, ಪರಲೋಕದ ಮದಲಿಂಗನ ಹಾದಿ ನೋಡುವ ವಿವೇಕಿಗಳಾದ ಕನ್ಯಾಸ್ತ್ರೀಯರ ಕೂಡ, ಹೊಸ ಹೃದಯಗಳೆಂಬ ಪಾತ್ರೆಗಳಿಗೆ, ಸಮಯವಿರುವಷ್ಟರಲ್ಲಿ. ಪರಿಶುದ್ಧಾತ್ಮದ ಯೆಂಣೆಯಿಂದ ಹೊಸ ಆತ್ಮಜ್ಞಾನವಾದ ಬೆಳಕಂನೂ ಜೀವವಂನೂ ಪರಲೋಕಗಳ ರಾಜ್ಯದ ಯೆಲ್ಲಾ ವರಗಳಂನೂ ಹೊಂದುವ ಹಾಗೆ, ನಮಗೆ ದಯ ಮಾಡು. ಅದರಿಂದ ಯಾವಾಗಲು, ಆತುರವಾದ ದಿವ್ಯ ಪ್ರೀತಿ ಸಹಿತವಾದ ವಿಶ್ವಾಸವೆಂಬ ನಿಶ್ಚಲವಾದ ಬೆಳಕು ಪ್ರಕಾಶಿಸಲಿ. ಅದು ಪಾಪ ಮರಣ ನರಕ ಇವುಗಳ ಭೀತಿಯನ್ನೂ ಕತ್ತಲೆಯನ್ನೂ ಹೋಡಿಸಿ, ರಮ್ಯವಾದ ಆದರಣೆಯಿಂದ ನಮಗೆ ಜೀವದಲ್ಲಿಯೂ, ಮರಣದಲ್ಲಿಯೂ ನಂಮ ಅಮೂಲ್ಯವಾದ ದ್ರವ್ಯವೂ ಲಾಭವೂ ಆಗಿರುವಂಥಾ ಪರಲೋಕದ

ಮದಲಿಂಗನಾದಂಥಾ, ನಂಮ ಅನ್ಯೋನ್ಯವೂ ಪುನರುತ್ಥಾನವೂ ಜೀವವೂ ಆಗಿರುವಂಥಾ, ಯೇಸು ಕ್ರಿಸ್ತನಂನು ಕಾಣ ಮಾಡಲಿ. ಆಮೆನ್.

(Hier wird der Leichnam in das Grab gesenkt, der Geistliche spricht sodann weiter:)

ಮಣ್ಣಿನಿಂದ ನೀನು ತೆಗಿಯಲ್ಪಟ್ಟಿ, ಮಣ್ಣಿಗೆ ತಿರುಗುವಿ. ಶರೀರವನ್ನು ಕರ್ತನಾದ ಯೇಸು ಕ್ರಿಸ್ತನು ಕಡೇ ದಿವಸದಲ್ಲಿ ಯೆಬ್ಬಿಸುವನು; ಆತ್ಮವನ್ನು ದೇವರ ಕೃಪೆಗೂ, ಅಂತಃಕರಣಕ್ಕೂ, ಆತನ ಮಗನಾಗಿರುವ ನಂಮ ಒಬ್ಬನಾದ ರಕ್ಷಕ ಕಾರ್ಯಕರ್ತನಾಗಿರುವಾತನ ನಿಮಿತ್ತ, ಒಪ್ಪಿಸುತ್ತೇವೆ. ಆಮೆನ್.

Oder (ಅಥವಾ):

**Das Lied:** ಮಧ್ಯಜೀವದೊಳಗೆ—ಯೆಂಬ ಗೀತ.

ಪರಲೋಕದಲ್ಲಿರುವ ನಂಮ ತಂದೆಯೇ, ನಿನ್ನ ನಾಮವು ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ, ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯಂನು ಈಹೊತ್ತು ನಮಗೆ ಕೊಡು. ನಾವು ನಂಮ ಸಾಲಗಾರರಿಗೆ ಬಿಡುವ ಪ್ರಕಾರ, ನಂಮ ಸಾಲಗಳಂನು ನಮಗೆ ಬಿಡು. ನಂಮಂನು ಶೋಧನೆಯಲ್ಲಿ ಸೇರಿಸದೆ; ಕೇಡಿನೊಳಗಿಂದ ನಂಮಂನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ, ಯುಗಯುಗಾಂತರಗಳ ವರಿಗೂ ನಿಂನವಾಗಿವೆ. ಆಮೆನ್.

(Und der Segen. — Etwa:)

ಸಮಾಧಾನದ ದೇವರು ತಾನೇ ನಿಂಮಂನು ಸಂಪೂರ್ಣವಾಗಿ ಪರಿ

ಶುದ್ಧ ಮಾಡಲಿ. ಮತ್ತು ನಿಂಮ ಪೂರ್ಣ ಆತ್ಮ ಪ್ರಾಣ ಶರೀರಗಳು, ನಂಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯಲ್ಲಿ ತಪ್ಪಿಲ್ಲದ ಹಾಗೆ ಕಾಪಾಡಲ್ಪಡಲಿ. ಆಮೆನ್.

---

## 2. Kindsleichen (ಕೂಸುಗಳ ಹೂಳಿಕೆ).

(Ein Gebet zu den Obigen:)

ಪರಲೋಕದ ಪ್ರಿಯ ತಂದೆಯೇ, ನೀನು ಈ ಕೂಸಿಗೆ ದಯ ಮಾಡಿ, ಅದಂನು ಈ ಜೀವದಲ್ಲಿ ಅದಕ್ಕೆ ಬರಲಿಕ್ಕಿದ್ದ ಉಪದ್ರ ಕಷ್ಟಗಳೊಳಗಿಂದ ತೆಗದು, ಇಂಥ ಚಿಕ್ಕ ಪ್ರಾಯದಲ್ಲಿ ಈ ಲೋಕದ ಆತಂಕಗಳಿಗೆ ತಪ್ಪಿಸಿ, ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖಾಂತ್ರ, ಪರಲೋಕದ ವಾಸಸ್ಥಳಗಳಲ್ಲಿ ಸೇರಿಸಿದಿ. ಈ ಕೂಸಿನ ಮರಣದಿಂದ ಅದರ ತಂದೆ ತಾಯಿಗಳು ಮೇಲಿನವುಗಳಂನು ಚಿಂತಿಸುವದಕ್ಕೆ ಒಳ್ಳೆ ಯೆಚ್ಚರಿಕೆ ತಕ್ಕೊಳ್ಳುವ ಹಾಗೆ, ದಯ ಮಾಡು. ಯೆಲ್ಲಾ ತಂದೆ ತಾಯಿಗಳು, ನೀನು ಅವರಿಗೆ ಕೊಟ್ಟ ಮಕ್ಕಳು ನಿಂನ ಕೃಪೆಯ ಯೆಂಥಾ ಅಮೂಲ್ಯವಾದ ವರಗಳೆಂದೂ, ನೀನು ಈ ವರಗಳ ವಿಷಯ ಇಂನು ಮುಂದೆ ಅವರ ಕಡೆಯಿಂದ ಲೆಕ್ಕ ಕೇಳುವಿ ಯೆಂದೂ, ನೆನಪು ಮಾಡಿ ಕೊಳ್ಳ ಕಲಿಸು.

ನಿಂನ ಪ್ರಿಯ ಮಗನಾದ ಯೇಸು ಕ್ರಿಸ್ತನಲ್ಲಿ ನೀನು ನಂಮ ಮಕ್ಕಳಂನು ಸಹ ಪರಲೋಕ ರಾಜ್ಯಕ್ಕೆ ಕರೆದಿದ್ದಿ. ಪರಿಶುದ್ಧ ಸ್ನಾನದಿಂದ ಅವರಂನು ನಿಂನ ಕೃಪೆ ಒಡಂಬಡಿಕೆಯಲ್ಲಿ ಅಂಗೀಕರಿಸಿ, ನಿಂನ ಮಕ್ಕಳೆಂದು ಯೆಲ್ಲಾ ಪರಲೋಕದವುಗಳಿಗೆ ಬಾಧ್ಯಸ್ಥರಾಗ ನೇಮಿಸಿದ್ದಿ.

ಹೀಗಿರಲಾಗಿ ನಾವು ಅವರ ಪರಾಂಮರಿಕೆಯಲ್ಲಿ ಯೇನು ಕಡಿಮೆ ಮಾಡದ ಹಾಗೆ, ನಮಗೆ ಕೃಪೆ ಕೊಡು. ನೀನು ಯೆಂದೂ ಅವರಂನು ನಂಮ ಕೈಗಳೊಳಗಿಂದ ಕೇಳುತ್ತಿಯೊ, ಅಂದೂ ನಂಮ ಹೃದಯವು ನಮಗೆ ಆಗ್ಞೆನಿರ್ಣಯ ತೀರಿಸದ ಹಾಗೆ; ನಾವು ಬೇಸರಾಗದ ಜೋಕೆಯಿಂದ ಅವರ ದೇಹಾತ್ಮಗಳಂನು ಕಾದು ಕೊಂಡು, ಚಿಕ್ಕಂದಿನಿಂದ ಅವರಂನು ನಿಂನ ಭಯದಲ್ಲಿಯೂ ಪ್ರೀತಿಯಲ್ಲಿಯೂ ಸಾಕುವದಕ್ಕೆ, ನಂಮಂನು ಯೆಚ್ಚರಿಸು. ಓ ದೇವರೇ, ನಂಮಲ್ಲಿ ವೊಬ್ಬೊಬ್ಬ ತಂದೆಯಂನೂ ವೊಬ್ಬೊಬ್ಬ ತಾಯಿಯಂನೂ ತಮಗೂ ತಂಮ ಮಕ್ಕಳಿಗೂ, ಇಹದಲ್ಲಿಯೂ, ಪರದಲ್ಲಿಯೂ, ಸಮಾಧಾನಕ್ಕೆ ಬೇಕಾದವುಗಳಂನು, ಇಂನು ಸಮಯವಿರುವಷ್ಟರಲ್ಲಿ, ನೆನಪು ಮಾಡಿ ಕೊಳ್ಳ ಕಲಿಸು. ಆಮೆನ್.

# Die Leidensgeschichte Jesu Christi.

Aus den vier Evangelien zusammengefasst.

# ಯೇಸು ಕ್ರಿಸ್ತನ ಶ್ರಮೇಚರಿತ್ರ.

ನಾಲ್ಕು ಸುವಾರ್ತೆ ಪುಸ್ತಕಗಳಿಂದ ಕೂಡಿಸಿದ್ದು.

---

## ೧ನೇ ಸಂಧಿ.

### ಪೀಠಿಕೆ.

ಪಸ್ಕ ಹಬ್ಬಕ್ಕೆ ಆರು ದಿವಸ ಮುಂಚೆ ಯೇಸು ಬೇಥಾನ್ಯಕ್ಕೆ ಬಂದನು. ಅಲ್ಲಿ ಆತನು ಸತ್ತವರೊಳಗಿಂದ ಯೆಬ್ಬಿಸಿದ, ಸತ್ತವನಾಗಿದ್ದ, ಲಾಜರನು ಇದ್ದನು. ಅಲ್ಲಿ ಅವರು ಆತನಿಗೆ ಕುಷ್ಟರೋಗಿಯಾದ ಸೀಮೋನನ ಮನೆಯಲ್ಲಿ ಔತಣ ಮಾಡಿಸಿದರು. ಮಾರ್ಥಳು ಸೇವಿಸಿದಳು; ಆದರೆ ಲಾಜರನು ಆತನ ಸಂಗಡ ಔತಣಕ್ಕೆ ಕೂತವರಲ್ಲಿ ಒಬ್ಬನಾಗಿದ್ದನು.

ಹೀಗಿರಲಾಗಿ ಮರಿಯಳು ಬೆಲೆಯುಳ್ಳ ಶುದ್ಧ ಜಟಮಾಂಸಿ ತೈಲದ ಚಂದ್ರಕಾಂತ ಭರಣಿಯಂನು ಹಿಡಿದು ಕೊಂಡು, ಆತನ ಬಳಿಗೆ ಬಂದು, ಆ ಚಂದ್ರಕಾಂತವಂನು ಒಡೆದು, ಆತನ ತಲೆಯ ಮೇಲೆ ಹೊಯಿದು, ಆತನ ಪಾದಗಳಿಗೆ ಹಚ್ಚಿ, ತಂನ ಕೂದಲಿಂದ ಆತನ ಪಾದಗಳಂನು ಒರಸಿದಳು. ಮತ್ತು ಮನೆಯು ತೈಲದ ಪರಿಮಳದಿಂ

ದ ತುಂಬಿತು. ಆಗಲು ಆತನ ಶಿಷ್ಯರಲ್ಲಿ ಒಬ್ಬನಾದ, ಸೀಮೋನನ ಮಗನಾದ, ಇಸ್ಕರಿಯೋತನೆಂಬ ಯೂದನು, ಆತನಂನು ಒಪ್ಪಿಸಿ ಕೊಡುವದಕ್ಕಿದ್ದವನು, ಈ ತೈಲವಂನು ಯಾಕೆ ಮುಂನೂರು ಪಾವಲಿಗೆ ಮಾರಿ, ದರಿದ್ರರಿಗೆ ಕೊಡಲಿಲ್ಲ?—ಅಂದನು. ಇದಂನು ಅವನು ಬಡವರಿಗೋಸ್ಕರ ಚಿಂತೆ ಪಟ್ಟದರಿಂದಲ್ಲಾ, ತಾನು ಕಳ್ಳನಾಗಿದ್ದು, ಹಣದ ಚೀಲವಂನಿಟ್ಟು ಕೊಂಡು, ಅದರಲ್ಲಿ ಹಾಕಲ್ಪಟ್ಟವುಗಳಂನು ಹೊರುವವನಾಗಿದ್ದದರಿಂದ ಹೇಳಿದನು. ಮತ್ತು ಉಳಿದ ಶಿಷ್ಯರಲ್ಲಿ ಕೆಲವರು ಕೋಪಿಸಿ ಕೊಂಡು, ಈ ನಷ್ಟವು ಯಾಕೆ? ಈ ತೈಲವಂನು ಬಹಳ ಹಣಕ್ಕೆ ಮಾರಿ ಬಡವರಿಗೆ ಕೊಡ ಬಹುದಾಗಿತ್ತು—ಅಂದರು. ಯೇಸು ಅದಂನು ತಿಳಿದು—ಆಕೆಯಂನು ಬಿಡಿರಿ, ಯಾಕೆ ಈ ಸ್ತ್ರೀಯಂನು ತೊಂದರೆ ಪಡಿಸುತ್ತೀರಿ? ಆಕೆ ನನಗೆ ಒಳ್ಳೆ ಕ್ರಿಯೆ ಮಾಡಿದ್ದಾಳೆ; ಯಾಕಂದರೆ ಬಡವರು ಯಾವಾಗಲು ನಿಂಮ ಸಂಗಡ ಇದ್ದಾರೆ, ಮತ್ತು ನಿಮಗೆ ಮನಸ್ಸಿದ್ದಾಗ ಅವರಿಗೆ ಉಪಕಾರ ಮಾಡ ಬಹುದು, ಆದರೆ ನಾನು ನಿಂಮ ಸಂಗಡ ಯಾವಾಗ್ಲು ಇರುವದಿಲ್ಲಾ. ತಂನಿಂದಾಗುವದಂನು ಮಾಡಿದ್ದಾಳೆ. ಈಕೆ ಈ ತೈಲವಂನು ನಂನ ಶರೀರದ ಮೇಲೆ ಹಾಯಿದು, ನಂನಂನು ಹೂಳಿಡುವದಕ್ಕೆ ನಂನ ಶರೀರವಂನು ಅಭಿಷೇಕಿಸ ಮುಂಕೊಂಡಿದ್ದಾಳೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ. ಈ ಸುವಾರ್ತೆಯು ಸಮಸ್ತ ಲೋಕದೊಳಗೆ ಯೆಲ್ಲಿ ಪ್ರಸಂಗವಾಗುವದೋ, ಅಲ್ಲಿ ಈಕೆ ಮಾಡಿದ್ದು ಸಹ ಈಕೆಯ ನೆನಪಿಗಾಗಿ ಹೇಳಲ್ಪಡುವದು—ಅಂದನು.*)

*) ಯೋಹಾನ್. ೧೨, ೧—೮. ಮತ್ಥಾ. ೨೬, ೬—೧೩. ಮಾರ್ಕ. ೧೪, ೩—೯.

ಮರುದಿವಸದಲ್ಲಿ ಹಬ್ಬಕ್ಕೆ ಬಂದ ಬಹು ಸಮೂಹವು ಯೇಸು ಯೆರೂಸಲೇಮಿಗೆ ಬರುತ್ತಾನೆಂದು ಕೇಳಿ, ಖರ್ಜೂರಗರಿಗಳನ್ನು ತೆಗೆದು, ಆತನೆದುರಿಗೆ ಹೋಗಿ,—ಹೋಸನ್ನ! ಕರ್ತನ ಹೆಸರಿನಲ್ಲಿ ಬರುವವನಾದ ಇಸ್ರಾಯೇಲಿನ ಅರಸನು ಸ್ತುತಿಸಲ್ಪಡಲಿ!—ಯೆಂದು ಕೂಗಿದರು. ಮತ್ತು ಯೇಸು ಕತ್ತೆಮರಿಯನ್ನು ಕಂಡುಕೊಂಡು,—ಚಿಯೋನ ಮಗಳೇ ಭಯ ಪಡ ಬೇಡ! ಇಗೋ, ನಿನ್ನ ಅರಸನು ಕತ್ತೆಯ ಮರಿಯ ಮೇಲೆ ಕೂತುಕೊಂಡು ಬರುತ್ತಾನೆಂದು ಬರೆದಿರುವ ಪ್ರಕಾರ, ಅದರ ಮೇಲೆ ಕೂತು ಕೊಂಡನು. ಆದರೆ ಆತನು ಲಾಜರನನ್ನು ಸಮಾಧಿಯೊಳಗಿಂದ ಕರೆದು, ಅವನನ್ನು ಸತ್ತವರೊಳಗಿಂದ ಯೆಬ್ಬಿಸಿದಾಗ, ಆತನ ಸಂಗಡ ಇದ್ದ ಸಮೂಹವು ಆತನಿಗೆ ಸಾಕ್ಷಿ ಕೊಟ್ಟರು. ಆತನು ಆ ಲಕ್ಷಣವನ್ನು ಮಾಡಿದನೆಂದು ಕೇಳಿದ್ದರಿಂದ, ಸಮೂಹವು ಆತನೆದುರಿಗೆ ಬಂತು. ಹೀಗಿರಲಾಗಿ ಫರಿಸಾಯರು,—ನಿಮಗೆ ಯೇನು ಅನುಕೂಲವಿಲ್ಲವೆಂದು ನೋಡುತ್ತೀರೋ? ಇಗೋ ಲೋಕವು ಆತನ ಬೆನ್ನು ಹತ್ತಿತು ಯೆಂದು ತಮ್ಮಲ್ಲಿ ಅಂದು ಕೊಂಡರು.*

ಆದರೆ ಪಸ್ಕವೆಂಬ ಹುಳಿ ಇಲ್ಲದ ರೊಟ್ಟಿಗಳ ಹಬ್ಬ ಸಮೀಪವಾಗಿತ್ತು. ಮತ್ತು ಯೇಸು ತನ್ನ ಶಿಷ್ಯರಿಗೆ—ಯೆರಡು ದಿವಸಗಳ ಮೇಲೆ ಪಸ್ಕವಾಗುವದೆಂದು ಬಲ್ಲಿರಿ; ಆಗ ಮನುಷ್ಯನ ಮಗನು ಶಿಲುಬೆಗೆ ಹಾಕಲ್ಪಡುವದಕ್ಕೆ ಒಪ್ಪಿಸಲ್ಪಡುವನು,—ಅಂದನು. ಆಗ ಪ್ರಧಾನಯಾಜಕರೂ, ಶಾಸ್ತ್ರಿಗಳೂ, ಪ್ರಜೆಯ ಹಿರಿಯರೂ, ಕಾಯಫನೆಂಬ

*) ಯೋ. ೧೨, ೧೨—೧೫. ೧೭—೧೯.

ಪ್ರಧಾನಯಾಜಕನ ಮಠಕ್ಕೆ ಕೂಡಿ ಬಂದು, ಯೇಸುವಂನು ಕಪಟದಿಂದ ಹಿಡಿದು ಕೊಲ್ಲುವ ಹಾಗೆ, ಆಲೋಚನೆ ಮಾಡಿ ಕೊಂಡರು. ಆದರೆ ಜನರಲ್ಲಿ ಗುಲ್ಲು ಆಗದ ಹಾಗೆ, ಹಬ್ಬದಲ್ಲಿ ಬೇಡ, ಅಂದರು. ಮತ್ತು ಜನರಿಗೆ ಅಂಜಿ ಕೊಂಡರು.*)

ಆಗ ಹಂನೆರಡು ಮಂದಿಯಲ್ಲಿ ಒಬ್ಬನಾದ ಇಸ್ಕರಿಯೋತ ಯೂದನೆಂಬವನು ಹೋಗಿ, ಪ್ರಧಾನಯಾಜಕರು ಸೈನ್ಯಾಧಿಪತಿಗಳ ಸಂಗಡ,—ಆತನಂನು ಹೇಗೆ ಒಪ್ಪಿಸ ಬಹುದೆಂದು—ಮಾತಾಡಿ, ನನಗೆ ಯೇನು ಕೊಡುತ್ತೀರಿ? ನಾನು ಆತನಂನು ನಿಮಗೆ ಒಪ್ಪಿಸುವೆನೆಂದು ಅಂದನು. ಅವರು ಇದಂನು ಕೇಳಿ, ಸಂತೋಷ ಪಟ್ಟು, ಹಣ ಕೊಡುತ್ತೇವೆಂದು ಅವನಿಗೆ ಮಾತು ಕೊಟ್ಟು, ಮೂವತ್ತು ರೂಪಾಯಿಗೆ ಒಡಂಬಟ್ಟರು. ಆಗಲವನು ಮಾತು ಕೊಟ್ಟು, ಅಂದಿನಿಂದ ಆತನಂನು ಸಮೂಹಕ್ಕೆ ತಿಳಿಯದೆ, ಅವರಿಗೆ ಒಪ್ಪಿಸುವದಕ್ಕೆ ಒಳ್ಳೇ ಸಮಯವಂನು ಹುಡುಕಿದನು.†)

## ೨ನೇ ಸಂಧಿ.

### ತಂನ ಶಿಷ್ಯರ ಸಂಗಡ ಮಾಡಿದ ಕಡೇ ಭೋಜನ.

ಆದರೆ ಅವರು ಪಸ್ಕವಂನು ಅರ್ಪಿಸುವ ದಿನವಾದ ಹುಳಿ ಇಲ್ಲದ ರೊಟ್ಟಿಗಳ ಮೊದಲನೆ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು, ಆತನಿಗೆ—ನಾವು ಯೆಲ್ಲಿಗೆ ಹೋಗಿ, ನಿನಗೆ ಪಸ್ಕವಂನು ಉಣ್ಣು

*) ಮತ್ತ. ೨೬, ೧–೫. ಮಾರ್ಕ. ೧೪, ೧. ೨. ಲೂಕ. ೨೨, ೧. ೨.

†) ಮತ್ತ. ೨೬, ೧೪–೧೬, ಮಾರ್ಕ. ೧೪, ೧೦. ೧೧. ಲೂಕ. ೨೨, ೪–೬.

ವ ಹಾಗೆ, ಸಿದ್ಧ ಮಾಡ ಬೇಕು?—ಯೆಂದು ಕೇಳಿದಾಗ, ಆತನು ತಂ
ನ ಶಿಷ್ಯರಲ್ಲಿ ಇಬ್ಬರಾದ ಪೇತ್ರನಂನೂ ಯೋಹಾನನಂನೂ ಕಳುಹಿಸಿ,
ಅವರಿಗೆ ಹೇಳಿದ್ದೇನಂದರೆ—ಪಟ್ಣಕ್ಕೆ ಹೋಗಿರಿ; ಅಲ್ಲಿ ನೀರಿನ ಗಡಿಗೆಯ
ನ್ನು ಹೊರುವ ಮನುಷ್ಯನು ನಿಮಗೆದುರಾಗಿ ಬರುವನು; ಅವನಂ
ನು ಹಿಂಬಾಲಿಸಿರಿ. ಮತ್ತು ಅವನು ಪ್ರವೇಶಿಸುವ ಮನೆ ಯಜಮಾ
ನನಿಗೆ—ಬೋಧಕನು ತಾನು ತಂನ ಶಿಷ್ಯರ ಸಂಗಡ ಪಸ್ಕವಂನು ಉಂಣ
ತಕ್ಕ ಶಾಲೆ ಯೆಲ್ಲಿ? ಯೆಂದು ಕೇಳುತ್ತಾನೆಂಬದಾಗಿ ಹೇಳಿರಿ. ಅವನು ನಿ
ಮಗೆ ಸಾಮಗ್ರಿ ಇರುವ ಸಿದ್ಧವಾದ ದೊಡ್ಡ ಮೇಲ್ಮಾಳಿಗೆಯಂನು ತೋ
ರಿಸುವನು; ಅಲ್ಲಿ ನಮಗೆ ಸಿದ್ಧ ಮಾಡಿರಿ. ಆಗಲಾತನ ಶಿಷ್ಯರು ಹೊ
ರಟು, ಪಟ್ಣಕ್ಕೆ ಹೋಗಿ, ಆತನವರಿಗೆ ಹೇಳಿದ ಹಾಗೆ ಕಂಡು, ಪಸ್ಕ
ವಂನು ಸಿದ್ಧ ಮಾಡಿದರು. *)

ಮತ್ತು ಸಾಯಂಕಾಲವಾದಾಗ, ಆತನು ಹಂನೆರಡು ಮಂದಿಯ
ಸಂಗಡ ಬಂದು, ಕೂತು ಕೊಂಡನು. ಆಗಲಾತನು ಅವರಿಗೆ ಹೇಳಿದ್ದೇ
ನಂದರೆ—ನಾನು ಶ್ರಮೆ ಪಡುವದಕ್ಕಿಂತ ಮುಂಚೆ ಈ ಪಸ್ಕವಂನು ನಿಂ
ಮ ಸಂಗಡ ಉಂಣುವದಕ್ಕೆ ಬಹಳವಾಗಿ ಅಪೇಕ್ಷಿಸಿದ್ದೇನೆ. ಯಾಕಂದರೆ
ನಿಮಗೆ ಹೇಳುತ್ತೇನೆ—ಅದು ದೇವರ ರಾಜ್ಯದಲ್ಲಿ ಸಂಪೂರ್ಣವಾಗುವ
ಪರಿಯಂತರ, ನಾನು ಇಂನು ಅದಂನು ಉಂಣುವದಿಲ್ಲ. ಮತ್ತು ಆ
ತನು ಪಾತ್ರೆ ತೆಗೆದು ಕೊಂಡು, ಸ್ತೋತ್ರ ಮಾಡಿ—ಇದಂನು ತೆಗೆದು ಕೊಂ
ಡು, ನಿಂಮಲ್ಲಿ ಹಂಚಿ ಕೊಳ್ಳಿರಿ. ಯಾಕಂದರೆ ದೇವರ ರಾಜ್ಯ ಬರುವ ತ

*.) ಮತ್ತ್. ೨೬, ೧೭—೧೯. ಮಾರ್ಕ. ೧೪, ೧೨—೧೬. ಲೂಕ್. ೨೨, ೭—೧೩.

ನನಾ ಈ ದ್ರಾಕ್ಷೆ ಫಲವನ್ನು ಇಂನು ಕುಡಿಯೆನೆಂದು ನಿಮಗೆ ಹೇಳುತ್ತೇನೆ—ಅಂದನು.*)

ಇದಲ್ಲದೆ ತಮ್ಮೊಳಗೆ ದೊಡ್ಡವನಾಗಿ ಯೆಣಿಸಲ್ಪಡುವವನ್ಯಾರೆಂದು ಅವರಲ್ಲಿ ವಾಗ್ವಾದ ಉಂಟಾದಾಗ, ಆತನವರಿಗೆ ಹೇಳಿದ್ದು—ಜನಾಂಗಗಳ ಅರಸರು ಅವರ ಮೇಲೆ ದೊರೆತನ ಮಾಡುತ್ತಾರೆ; ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆಂದು ಅನಿಸಿ ಕೊಳ್ಳುತ್ತಾರೆ; ನೀವು ಹಾಗಲ್ಲ. ಆದರೆ ನಿಂಮಲ್ಲಿ ದೊಡ್ಡವನು ಚಿಕ್ಕವನ ಹಾಗೆಯೂ, ನಾಯಕನು ಸೇವಕನ ಹಾಗೆಯೂ ಆಗಲಿ. ಹ್ಯಾಗಂದರೆ ಯಾವನು ದೊಡ್ಡವನು? ಊಟಕ್ಕೆ ಕೂತವನೋ? ಸೇವಿಸುವವನೋ? ಊಟಕ್ಕೆ ಕೂತವನಲ್ಲವೋ? ಆದರೆ ನಾನು ನಿಂಮ ಮಧ್ಯದಲ್ಲಿ ಸೇವಿಸುವವನ ಹಾಗಿದ್ದೇನೆ. ಇದಲ್ಲದೆ ನೀವು ನಂನ ಶೋಧನೆಗಳಲ್ಲಿ ನಂನ ಸಂಗಡ ನೆಲೆಯಾದವರಾಗಿದ್ದೀರಿ. ಮತ್ತು ನೀವು ನಂನ ರಾಜ್ಯದಲ್ಲಿ, ನಂನ ಮೇಜಿನ ಹತ್ತರ ಉಂಡು ಕುಡಿದು, ಇಸ್ರಾಯೇಲಿನ ಹಂನೆರಡು ಗೋತ್ರಗಳಿಗೆ ನ್ಯಾಯತೀರಿಸುವವರಾಗಿ, ಸಿಂಹಾಸನಗಳ ಮೇಲೆ ಕೂತು ಕೊಳ್ಳುವ ಹಾಗೆ, ನಂನ ತಂದೆಯು ನನಗೆ ರಾಜ್ಯವಂನು ನಿರ್ಣಯಿಸಿದ ಪ್ರಕಾರ, ನಿರ್ಣಯಿಸುತ್ತೇನೆ.†)

ಆದರೆ ಪಸ್ಕ ಹಬ್ಬಕ್ಕೆ ಮುಂಚೆ, ಯೇಸು ತಾನು ಈ ಲೋಕವಂನು ಬಿಟ್ಟು, ತಂದೆಯ ಬಳಿಗೆ ಹೋಗುವದಕ್ಕೆ ಘಳಿಗೆ ಬಂತೆಂದು ತಿಳಿದು ಕೊಂಡು, ಲೋಕದಲ್ಲಿರುವ ಸ್ವಜನರಂನು ಪ್ರೀತಿ ಮಾಡಿ, ಅಂತ್ಯದ ವರಿ

---

*) ಲೂಕ. ೨೨, ೧೪—೧೮. ಮತ್ತ. ೨೬, ೨೯. ಮಾರ್ಕ. ೧೪, ೨೫. †) ಲೂಕ. ೨೨, ೨೪—೩೦.

ಯಂತರ ಅವರಂನು ಪ್ರೀತಿ ಮಾಡಿದನು. ಮತ್ತು ಭೋಜನವಾದ ಮೇಲೆ ಪಿಶಾಚನು ಆತನಂನು ಒಪ್ಪಿಸಿ ಕೊಡ ಬೇಕೆಂದು ಸೀಮೋನನ ಮಗನಾದ ಇಸ್ಕರಿಯೋತನೆಂಬ ಯೂದನ ಹೃದಯವಂನು ಪ್ರೇರೇಪಿಸಿದ ಮೇಲೆ, ಯೇಸು ತಂದೆಯು ಯೆಲ್ಲವುಗಳಂನು ತಂನ ಕೈಗಳಲ್ಲಿ ಕೊಟ್ಟನೆಂದೂ, ತಾನು ದೇವರ ಬಳಿಯಿಂದ ಹೊರಟು, ದೇವರ ಬಳಿಗೆ ಹೋಗುತ್ತೇನೆಂದೂ, ತಿಳಿದು, ಭೋಜನದಿಂದ ಯೆದ್ದು, ವಸ್ತ್ರಗಳಂನು ತೆಗೆದಿಟ್ಟು, ಅಂಗವಸ್ತ್ರವಂನು ತಕ್ಕೊಂಡು, ನಡು ಕಟ್ಟಿ ಕೊಂಡನು. ಆ ಮೇಲೆ ತೊಳೆಯುವ ಪಾತ್ರೆಯಲ್ಲಿ ನೀರು ಹೊಯಿದು, ಶಿಷ್ಯರ ಕಾಲುಗಳಂನು ತೊಳೆಯಲೂ, ತಾನು ನಡುವಿಗೆ ಕಟ್ಟಿ ಕೊಂಡಿದ್ದ ಅಂಗವಸ್ತ್ರದಿಂದ ಒರಸಲೂ ಆರಂಭಿಸಿದನು.

ಸೀಮೋನ್ ಪೇತ್ರನ ಬಳಿಗೆ ಬರುವಾಗ, ಇವನು ಆತನಿಗೆ—ಕರ್ತನೇ ನೀನು ನನ್ನ ಕಾಲುಗಳಂನು ತೊಳೆಯುತ್ತೀಯೋ? ಅಂದನು. ಯೇಸು ಪ್ರತ್ಯುತ್ತರವಾಗಿ ಅವನಿಗೆ ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇಂನು ಮೇಲೆ ತಿಳಿಯುವದು, ಅಂದನು. ಪೇತ್ರನು ಆತನಿಗೆ—ನೀನು ನನ್ನ ಕಾಲುಗಳಂನು ಯೆಂದಿಗೂ ತೊಳೆಯ ಬಾರದು ಅನ್ನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ—ನಾನು ನಿಂನಂನು ತೊಳೆಯದಿದ್ದರೆ, ನಂನ ಸಂಗಡ ನಿನಗೆ ಪಾಲಿಲ್ಲ, ಅಂದನು. ಸೀಮೋನ್ ಪೇತ್ರನು ಆತನಿಗೆ—ಕರ್ತನೇ, ನಂನ ಕಾಲುಗಳಂನು ಮಾತ್ರವಲ್ಲ, ನಂನ ಕೈಗಳನ್ನೂ ತಲೆಯನ್ನೂ, ತೊಳೆ—ಅಂದಾಗ, ಯೇಸು ಅವನಿಗೆ—ತೊಳೆಯಲ್ಪಟ್ಟವನಿಗೆ ಕಾಲುಗಳಂನು ಹೊರತು ತೊಳೆಯುವದಕ್ಕೆ ಅವಶ್ಯವಿಲ್ಲ; ಸಂಪೂರ್ಣ

ವಾಗಿ ಶುದ್ಧವಾಗಿದ್ದಾನೆ. ಮತ್ತು ನೀವು ಶುದ್ಧರಾಗಿದ್ದೀರಿ. ಆದರೆ ಯೆಲ್ಲರೂ ಅಲ್ಲ, ಅಂದನು. ಯಾಕಂದರೆ ತನ್ನನ್ನು ಒಪ್ಪಿಸಿ ಕೊಡುವವನನ್ನು ತಿಳುಕೊಂಡನು! ಆದದರಿಂದ — ನೀವೆಲ್ಲರು ಶುದ್ಧರಲ್ಲವೆಂದು ಹೇಳಿದನು.

ಅವರ ಕಾಲುಗಳನ್ನು ತೊಳೆದ ಮೇಲೆ ತನ್ನ ವಸ್ತ್ರಗಳನ್ನು ತಕ್ಕೊಂಡು, ತಿರಿಗಿ ಕೂತು ಕೊಂಡು, ಅವರಿಗೆ ಹೇಳಿದ್ದೇನಂದರೆ — ನಾನು ನಿಮಗೆ ಮಾಡಿದ್ದೇನೆಂದು ತಿಳಿಯುತ್ತೀರಾ? ನೀವು ನನ್ನನ್ನು ಬೋಧಕನೆಂದೂ ಕರ್ತನೆಂದೂ ಅನ್ನುತ್ತೀರಿ; ಮತ್ತು ಸರಿಯಾಗಿ ಹೇಳುತ್ತೀರಿ; ಯಾಕಂದರೆ ಹಾಗೆಯೇ ಇದ್ದೇನೆ. ಹಾಗಾದರೆ ಕರ್ತನೂ ಬೋಧಕನೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿದ್ದರೆ ನೀವು ಸಹ ಒಬ್ಬರಿಗೊಬ್ಬರು ಕಾಲುಗಳನ್ನು ತೊಳೆಯ ಬೇಕು. ಯಾಕಂದರೆ ನಾನು ನಿಮಗೆ ಮಾಡಿದ ಪ್ರಕಾರವೇ ನೀವೂ ಮಾಡುವ ಹಾಗೆ, ನಿಮಗೆ ಮಾದರಿ ಕೊಟ್ಟಿದ್ದೇನೆ. ನಿಶ್ಚಯವಾಗಿ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ — ದಾಸನು ತನ್ನ ಕರ್ತನಿಗಿಂತ ದೊಡ್ಡವನಲ್ಲ; ಮತ್ತು ಕಳುಹಿಸಲ್ಪಟ್ಟವನು ತನ್ನನ್ನು ಕಳುಹಿಸಿದವನಿಗಿಂತ ದೊಡ್ಡವನಲ್ಲ. ನೀವು ಇವುಗಳನ್ನು ತಿಳಿದು, ಇವುಗಳನ್ನು ಮಾಡಿದರೆ, ಭಾಗ್ಯವಂತರಾಗಿದ್ದೀರಿ. ನಿಮ್ಮೆಲ್ಲರ ವಿಷಯವಾಗಿ ಹೇಳುವದಿಲ್ಲ; ನಾನು ಆದು ಕೊಂಡವರನ್ನು ಬಲ್ಲೆನು. ಆದರೆ — ನನ್ನ ಸಂಗಡ ರೊಟ್ಟಿ ಉಣ್ಣುವವನು ತನ್ನ ಹಿಮ್ಮಡವನ್ನು ನನ್ನ ಮೇಲೆ ಯೆತ್ತಿದ್ದಾನೆಂಬ ಬರಹವು ಈಡೇರ ಬೇಕು; ಅದು ಆಗುವಾಗ, ನಾನೇ ಆತನೆಂದು ನೀವು ನಂಬುವ ಹಾಗೆ, ಅದು ಆಗುವದಕ್ಕಿಂತ ಮುಂಚೆ

ಈಗಿನಿಂದ ನಿಮಗೆ ಪೇಳುತ್ತೇನೆ. ನಿಶ್ಚಯವಾಗಿ, ನಿಶ್ಚಯವಾಗಿ ನಿಮಗೆ ಪೇಳುತ್ತೇನೆ—ನಾನು ಕಳುಹಿಸುವವನನ್ನು ಅಂಗೀಕರಿಸುವವನು ನಂನಂನು ಅಂಗೀಕರಿಸುತ್ತಾನೆ; ಮತ್ತು ನನ್ನನ್ನು ಅಂಗೀಕರಿಸುವವನು ನಂನಂನು ಕಳುಹಿಸಿದವನನ್ನು ಅಂಗೀಕರಿಸುತ್ತಾನೆ. *)

ಇವುಗಳನ್ನು ಹೇಳಿದ ಮೇಲೆ ಯೇಸು ಆತ್ಮದಲ್ಲಿ ಕಳವಳಗೊಂಡು, ಸಾಕ್ಷಿಯಾಗಿ ಪೇಳಿದ್ದೇನಂದರೆ—ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಪೇಳುತ್ತೇನೆ, ನಿಂಮಲ್ಲಿ ಒಬ್ಬನು ನನ್ನನ್ನು ಒಪ್ಪಿಸಿ ಕೊಡುವನು. ಆಗಲು ಶಿಷ್ಯರು ಯಾವನ ವಿಷಯ ಪೇಳುತ್ತಾನೆಂದು ಅನುಮಾನ ಪಟ್ಟು, ಒಬ್ಬರಂಒಬ್ಬರು ನೋಡಿ ಕೊಂಡರು. ಮತ್ತು ಅವರು ಬಹಳ ದುಃಖ ಪಟ್ಟು ಅವರಲ್ಲಿ ಒಬ್ಬೊಬ್ಬನು—ಕರ್ತನೇ ನಾನೋ? ಬೇರೊಬ್ಬನು ನಾನೋ? ಯೆಂದು ಆತನನ್ನು ಕೇಳಲಾರಂಭಿಸಿದರು. ಆತನು ಉತ್ತರ ಕೊಟ್ಟು—ಹಂನೆರಡು ಮಂದಿಯೊಳಗೆ ನಂನ ಸಂಗಡ ಪಾತ್ರೆಯಲ್ಲಿ ಅದ್ದುವ ಒಬ್ಬನು, ಯೆಂದು ಅವರಿಗೆ ಪೇಳಿದನು. ಆದರೆ ಯೇಸುವಿನ ಯೆದೆಯ ಬಳಿಯಲ್ಲಿ ಆತನ ಶಿಷ್ಯರಲ್ಲಿ ಒಬ್ಬನು ಮಲಗಿ ಕೊಂಡಿದ್ದನು. ಅವನಿಗೆ ಯೇಸು ಪ್ರೀತಿ ಮಾಡಿದನು. ಆದದರಿಂದ ಸೀಮೋನ ಪೇತ್ರನು, ಆತನು ಯಾವನ ವಿಷಯ ಪೇಳುತ್ತಾನೆಂದು ಕೇಳುವದಕ್ಕೆ, ಇವನಿಗೆ ಸನ್ನೆ ಮಾಡಿದನು. ಇವನು ಯೇಸುವಿನ ಯೆದೆಯ ಮೇಲೆ ಆತು ಕೊಂಡು, ಆತನಿಗೆ—ಕರ್ತನೇ ಯಾರು? ಅನ್ನಲು, ಯೇಸು ಪ್ರತ್ಯುತ್ತರವಾಗಿ—ನಾನು ರೊಟ್ಟಿಯ ತುಂಡು ಅದ್ದಿ, ಯಾರಿಗೆ ಕೊಡು

*) ಯೋಹಾನ್. ೧೩, ೧—೨೦.

ವೆನೋ, ಅವನೇ ಅಂದನು. ಆಗ ರೊಟ್ಟಿ ತುಂಡು ಅದ್ದಿ, ಸೀಮೋನನ ಮಗನಾದ ಇಸ್ಕರಿಯೋತನೆಂಬ ಯೂದನಿಗೆ ಕೊಟ್ಟನು. ಮತ್ತು ಆತನು ಮನುಷ್ಯನ ಮಗನು ಆತನ ವಿಷಯವಾಗಿ ಬರೆದಿರುವ ಪ್ರಕಾರ ಹೋಗುತ್ತಾನೆ, ಆದರೆ ಯಾವನಿಂದ ಮನುಷ್ಯನ ಮಗನು ಒಪ್ಪಿಸಲ್ಪಡುತ್ತಾನೋ, ಆ ಮನುಷ್ಯನಿಗೆ ಅಯ್ಯೋ! ಆ ಮನುಷ್ಯನು ಹುಟ್ಟದಿದ್ದರೆ, ಅವನಿಗೆ ಒಳ್ಳೇದಾಗಿತ್ತು, ಅಂದನು. ಆಗಲು ಆತನನ್ನು ಒಪ್ಪಿಸಿ ಕೊಟ್ಟ ಯೂದನು—ರಬ್ಬಿಯೇ ನಾನಾ? ಅನ್ನಲಾಗಿ, ಅವನಿಗೆ—ನೀನು ಹೇಳಿದ್ದೇ ಸರಿ—ಅಂದನು. ತುಂಡು ತಕ್ಕೊಂಡ ಮೇಲೆ ಸೈತಾನನು ಅವನೊಳಗೆ ಹೊಕ್ಕನು. ಆಗಲು ಯೇಸು ಅವನಿಗೆ—ನೀನು ಮಾಡುವದನ್ನು ಬೇಗ ಮಾಡು ಅಂದನು. ಇದನ್ನು ಅವನಿಗೆ ಯಾವ ಕಾರಣದಿಂದ ಹೇಳಿದನೆಂದು ಕೂತು ಕೊಂಡವರಲ್ಲಿ ಒಬ್ಬನಿಗೂ ತಿಳಿಯಲಿಲ್ಲ. ಹ್ಯಾಗಂದರೆ, ಯೂದನು ಹಣದ ಚೀಲವಂನಿಟ್ಟು ಕೊಂಡಿರುವದರಿಂದ, ಯೇಸು ಅವನಿಗೆ—ಹಬ್ಬಕ್ಕೋಸ್ಕರ ನಮಗೆ ಬೇಕಾದವುಗಳನ್ನು ಕೊಂಡುಕೋ, ಇಲ್ಲವೆ—ಬಡವರಿಗೆ ಯೇನಾದರು ಕೊಡು, ಅಂನುತ್ತಾನೆಂಬದಾಗಿ ಕೆಲವರು ನೆನಸಿದರು. ಆದರೆ ಅವನು ತುಂಡು ತಕ್ಕೊಂಡು ಸಂಗಡಲೇ ಹೊರಟನು. ಆಗ ರಾತ್ರಿಯಾಗಿತ್ತು.*)

ಆದರೆ ಯೂದನು ಹೋದ ಮೇಲೆ ಯೇಸು ಹೇಳಿದ್ದೇನಂದರೆ—ಈಗ ಮನುಷ್ಯನ ಮಗನು ಮಹಿಮೆ ಪಟ್ಟಿದ್ದಾನೆ. ಮತ್ತು ದೇವರು

---

*.) ಯೋಹಾನ. ೧೩, ೨೧—೩೦. ಮತ್ತ. ೨೬, ೨೧—೨೫. ಮಾರ್ಕ. ೧೪, ೧೮—೨೧. ಲೂಕ. ೨೨, ೨೧—೨೩.

ಆತನಲ್ಲಿ ಮಹಿಮೆ ಪಟ್ಟಿದ್ದಾನೆ. ದೇವರು ಆತನಲ್ಲಿ ಮಹಿಮೆ ಪಟ್ಟಿದ್ದರೆ, ದೇವರು ಆತನಂನು ತಂನಲ್ಲಿಯೇ ಮಹಿಮೆ ಪಡಿಸುವನು, ಸಂಗಡಲೇ ಆತನಂನು ಮಹಿಮೆ ಪಡಿಸುವನು.*)

ಮತ್ತು ಅವರು ಊಟ ಮಾಡುವಾಗ, ಯೇಸು ರೊಟ್ಟಿಯಂನು ತೆಗದು ಕೊಂಡು, ಸ್ತೋತ್ರ ಮಾಡಿ, ಅದಂನು ಮುರಿದು, ಶಿಷ್ಯರಿಗೆ ಕೊಟ್ಟು—ತಕ್ಕೊಳ್ಳಿರಿ, ತಿಂನಿರಿ, ಇದೇ ನಿಮಗೋಸ್ಕರ ಕೊಡಲ್ಪಡುವ ನಂನ ಶರೀರವು. ನಂನಂನು ನೆನಸುವದಕ್ಕೆ ಇದಂನು ಮಾಡಿರಿ,—ಅಂದನು. ಅದೇ ಪ್ರಕಾರ ಉಂಡ ಮೇಲೆ, ಆತನು ಪಾತ್ರೆ ತೆಗದು ಕೊಂಡು, ಸ್ತೋತ್ರ ಮಾಡಿ, ಅದಂನು ಅವರಿಗೆ ಕೊಟ್ಟು, ಹೇಳಿದ್ದು—ಇದರಲ್ಲಿ ನೀವೆಲ್ಲರು ಕುಡಿಯಿರಿ! ಇದು ನಿಮಗೋಸ್ಕರವೂ, ಅನೇಕರಿಗೋಸ್ಕರವೂ, ಪಾಪಪರಿಹಾರಕ್ಕಾಗಿ ಚೆಲ್ಲಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನಂನ ರಕ್ತವು. ನೀವು ಕುಡಿಯುವಷ್ಟು ಸಾರಿ, ನಂನಂನು ನೆನಸುವದಕ್ಕೆ ಇದಂನು ಮಾಡಿರಿ. ಅವರೆಲ್ಲರು ಅದರಲ್ಲಿ ಕುಡಿದರು. ಮತ್ತು ಆತನು ಅವರಿಗೆ ಹೇಳಿದ್ದು—ನಿಶ್ಚಯವಾಗಿ ನಿಮಗೆ ಹೇಳುತ್ತೇನೆ. ನಿಂಮ ಸಂಗಡ ಅದಂನು ಹೊಸತಾಗಿ ನಂನ ತಂದೆಯ ರಾಜ್ಯದಲ್ಲಿ ಕುಡಿಯುವ ಮಟ್ಟಿಗೂ; ಇಂದಿನಿಂದ ಈ ದ್ರಾಕ್ಷೆಯ ಫಲವಂನು ಕುಡಿಯೆನು.†)

ಮಕ್ಕಳೇ ಇಂನು ಸ್ವಲ್ಪ ಕಾಲ ನಿಂಮ ಸಂಗಡ ಇದ್ದೇನೆ; ನಂನಂನು ಹುಡುಕುವಿರಿ. ಮತ್ತು ನಾನು ಹೋಗುವಲ್ಲಿಗೆ ನೀವು ಬರಲಾರಿರೆಂದು

---

*) ಯೋಹಾನ್. ೧೩, ೩೧. ೩೨.

†) ಮತ್ತ್. ೨೬, ೨೬—೨೯. ಮಾರ್ಕ. ೧೪, ೨೨—೨೫. ಲೂಕ್. ೨೨, ೧೯. ೨೦.

ಯೆಹೂದ್ಯರಿಗೆ ಹೇಳಿದ ಹಾಗೆಯೇ, ಈಗ ನಿಮಗೆ ಹೇಳುತ್ತೇನೆ. ಒಬ್ಬರಿಗೊಬ್ಬರು ಪ್ರೀತಿ ಮಾಡ ಬೇಕೆಂಬ ಹೊಸ ಆಜ್ಞೆ ನಿಮಗೆ ಕೊಡುತ್ತೇನೆ. ನಾನು ನಿಮಗೆ ಪ್ರೀತಿ ಮಾಡಿದ ಹಾಗೆ, ನೀವು ಒಬ್ಬರಿಗೊಬ್ಬರು ಪ್ರೀತಿ ಇಟ್ಟರೆ, ಇದರಲ್ಲಿಯೇ ನೀವು ನಂನ ಶಿಷ್ಯರಾಗಿದ್ದೀರೆಂದು ಯೆಲ್ಲರು ತಿಳುಕೊಳ್ಳುವರು. ಸೀಮೋನ್ ಪೇತ್ರನು ಆತನಿಗೆ—ಕರ್ತನೇ ಯೆಲ್ಲಿಗೆ ಹೋಗುತ್ತಿ? ಅಂನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ—ನಾನು ಹೋಗುವಲ್ಲಿಗೆ ಈಗ ನಂನಂನು ಹಿಂಬಾಲಿಸಲಾರಿ; ಆದರೆ ತರುವಾಯ ನಂನಂನು ಹಿಂಬಾಲಿಸುವಿ—ಅಂದನು. ಪೇತ್ರನು ಆತನಿಗೆ—ಕರ್ತನೇ ಯಾಕೆ ಈಗ ನಿಂನಂನು ಹಿಂಬಾಲಿಸಲಾರೆನು? ನಿಂನಗೋಸ್ಕರ ನಂನ ಜೀವವಂನು ಕೊಡುವೆನು—ಅಂನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ—ನನಗೋಸ್ಕರ ನಿಂನ ಜೀವವಂನು ಕೊಡುವಿಯೋ? ಸೀಮೋನನೇ! ಸೀಮೋನನೇ! ಇಗೋ ಸೈತಾನನು ನಿಂನಂನು ಗೋಧಿಯ ಹಾಗೆ ಕೇರುವದಕ್ಕೆ ಇಚ್ಛೈಸುತ್ತಾನೆ. ಆದರೆ ನಿಂನ ವಿಶ್ವಾಸವು ಅಳಿದು ಹೋಗದ ಹಾಗೆ, ನಿಮಗೋಸ್ಕರ ನಾನು ಬೇಡಿಕೊಂಡಿದ್ದೇನೆ. ಮತ್ತು ನೀನು ತಿರುಗಿಕೊಂಡ ಮೇಲೆ, ನಿಂನ ಸಹೋದರರನು ಸ್ಥಿರಪಡಿಸು. ಅವನು ಆತನಿಗೆ—ಕರ್ತನೇ ನಿಂನ ಸಂಗಡ ಸೆರೆಗೂ ಮರಣಕ್ಕೂ ಹೋಗ ಸಿದ್ಧವಾಗಿದ್ದೇನೆ—ಅಂದಾಗ ಯೇಸು ಹೇಳಿದ್ದು—ಪೇತ್ರನೇ ನೀನು ನಂನಂನು ಅರಿಯೆನೆಂದು ಮೂರು ಸಾರಿ ಬೊಂಕುವದಕ್ಕಿಂತ ಮುಂಚೆ, ಈ ಹೊತ್ತು ಕೋಳಿ ಕೂಗದೆಂದು ನಿನಗೆ ಹೇಳುತ್ತೇನೆ.*)

*) ಯೋಹಾನ್. ೧೩, ೩೩—೩೮. ಲೂಕ್. ೨೨, ೩೧—೩೪.

ಮತ್ತು ಅವರಿಗೆ ಹೇಳಿದ್ದು — ನಾನು ನಿಂಮನ್ನು ಹಣದ ಚೀಲವೂ ಹಮ್ಮಿಣಿಯೂ ಕೆರಗಳೂ, ಇಲ್ಲದವರಾಗಿ ಕಳುಹಿಸಿದಾಗ, ಯೇನಾದರೂ ಕೊರತೆ ಪಟ್ಟಿರಾ? ಅವರು — ಯೇನು ಇಲ್ಲ — ಅಂದರು. ಆಗಲಾತನು ಅವರಿಗೆ ಹೇಳಿದ್ದು — ಆದರೆ ಈಗ ಹಣದ ಚೀಲ ಉಂಟಾದವನು ಅದನ್ನು ಹಮ್ಮಿಣಿಯನ್ನು ಸಹಾ ತಕ್ಕೊಳ್ಳಲಿ; ಮತ್ತು ಇಲ್ಲದವನು ತಂನ ವಸ್ತ್ರವನ್ನು ಮಾರಿ ಬಿಟ್ಟು, ಖಡ್ಗವನ್ನು ಕೊಂಡು ಕೊಳ್ಳಲಿ. ಯಾಕಂದರೆ — ಆತನು ಅನೀತಿವಂತರ ಸಂಗಡ ಯೆಣಿಸಲ್ಪಟ್ಟನು — ಯೆಂಬ ಬರಹವು ಸಹಾ ನಂನಲ್ಲಿ ಈಡೇರ ಬೇಕೆಂದು ನಿಮಗೆ ಹೇಳುತ್ತೇನೆ. ಯಾತಕ್ಕಂದರೆ ನಂನ ವಿಷಯವಾದ ಮಾತುಗಳಿಗೆ ಅಂತ್ಯ ಉಂಟು. ಅವರು — ಕರ್ತನೇ ಇಗೋ ಇಲ್ಲಿ ಯೆರಡು ಖಡ್ಗಗಳು — ಅಂದಾಗ, ಆತನವರಿಗೆ — ಸಾಕು — ಅಂದನು. *)

## ೩ನೇ ಸಂಧಿ.

### ಗೆತ್ಸೇಮನೆಯಲ್ಲಿ ಆದ ಹೋರಾಟವು.

### ಆತನಂನು ಹಿಡಿದು ಒಯ್ದದ್ದು.

ಮತ್ತು ಅವರು ಕೀರ್ತನೆ ಹಾಡಿ, ಯೇಸು ಇಂನು ಬಹಳ ಮಾತುಗಳಂನು ಅವರಿಗೆ ಹೇಳಿದ ಮೇಲೆ, ಆತನು ತಂನ ವಾಡಿಕೆಯ ಪ್ರಕಾರ ಕೆದ್ರೋನ್ ಹಳ್ಳ ದಾಟಿ, ಇಪ್ಪೆ ಗುಡ್ಡಕ್ಕೆ ಹೊರಟನು. ಮತ್ತು ಆತನ ಶಿಷ್ಯರು ಆತನಂನು ಆ ಸ್ಥಳಕ್ಕೆ ಹಿಂಬಾಲಿಸಿದರು. ಆಗ ಯೇಸು ಅವರಿಗೆ ಹೇಳಿದ್ದು — ನೀವೆಲ್ಲರು ಈ ರಾತ್ರಿ ನಂನಲ್ಲಿ ಆತಂಕ

*) ಲೂಕ್. ೨೨, ೩೫—೩೮.

ಪಡುವಿರಿ. ಯಾಕಂದರೆ—ಕುರುಬನಂನು ಹೊಡೆಯುವೆನು, ಕುರಿಗಳು ಚದರಿ ಹೋಗುವವೆಂದು ಬರದದೆ. ಆದರೆ ನಾನು ಯೆದ್ದ ಮೇಲೆ, ನಿಂಮ ಮುಂದಾಗಿ ಗಲಿಲಾಯಕ್ಕೆ ಹೋಗುವೆನು. ಪೇತ್ರನು ಆತನಿಗೆ ಪ್ರತ್ಯುತ್ತರವಾಗಿ—ಯೆಲ್ಲರು ನಿಂನಲ್ಲಿ ಆಶಂಕ ಪಟ್ಟರೂ, ನಾನು ಯೆಂದೂ ಆಶಂಕ ಪಡೆನು—ಅಂನಲು, ಯೇಸು ಅವನಿಗೆ—ನಿಶ್ಚಯವಾಗಿ ನಿನಗೆ ಹೇಳುತ್ತೇನೆ: ಈ ಹೊತ್ತು ಇದೇ ರಾತ್ರಿಯಲ್ಲಿ ಕೋಳಿ ಯೆರಡು ಸಾರಿ ಕೂಗುವದಕ್ಕಿಂತ ಮುಂಚೆ, ಮೂರು ಸಾರಿ ನಂನಂನು ಬೊಂಕುವಿ—ಅಂದನು. ಆದರೆ ಪೇತ್ರನು ಬಹು ಹೆಚ್ಚಾಗಿ—ನಾನು ನಿಂನ ಸಂಗಡ ಸಾಯ ಬೇಕಾದರೂ, ಹ್ಯಾಗೂ ನಿಂನಂನು ಬೊಂಕೆನು—ಅಂದನು. ಅದೇ ಪ್ರಕಾರ ಶಿಷ್ಯರೆಲ್ಲರೂ ಹೇಳಿದರು.*)

ಆಗಲು ಯೇಸು ಅವರ ಸಂಗಡ ಗೆತ್ಸೇಮನೆ ಯೆಂಬ ಸ್ಥಳಕ್ಕೆ ಬಂದನು.—ಅಲ್ಲಿ ಇದ್ದ ತೋಟದೊಳಗೆ ತಾನೂ ಆತನ ಶಿಷ್ಯರೂ ಪ್ರವೇಶಿಸಿದರು. ಆದರೆ ಯೇಸು ಅನೇಕ ಸಾರಿ ತಂನ ಶಿಷ್ಯರ ಸಂಗಡ ಅಲ್ಲಿ ಕೂಡಿ ಕೊಂಡದರಿಂದ, ಆ ಸ್ಥಳವು ಆತನಂನು ಒಪ್ಪಿಸಿ ಕೊಟ್ಟ ಯೂದನಿಗೆ ಸಹಾ ತಿಳಿದಿತ್ತು. ಆತನು ಆ ಸ್ಥಳಕ್ಕೆ ಬಂದಾಗ, ಅವರಿಗೆ—ನಾನು ಅಲ್ಲಿಗೆ ಹೋಗಿ, ಪ್ರಾರ್ಥನೆ ಮಾಡಿ, ಬರುವ ಪರ್ಯಂತರ, ಇಲ್ಲಿ ಕೂತು ಕೊಳ್ಳಿರಿ! ನೀವು ಶೋಧನೆಯೊಳಗೆ ಸೇರದ ಹಾಗೆ, ಪ್ರಾರ್ಥನೆ ಮಾಡಿರಿ! ಯೆಂದು ಹೇಳಿ, ಪೇತ್ರನಂನೂ, ಜೆಬೆದಾಯನ ಇಬ್ಬರು ಮಕ್ಕಳಾದ ಯಾಕೋಬನಂನೂ ಯೋಹಾನನಂನೂ ಕರಕೊಂಡು, ದುಖ್ಖ ವ್ಯಸನ

*) ಮತ್ತ. ೨೬, ೩೦—೩೫. ಮಾರ್ಕ. ೧೪, ೨೬—೩೧. ಲೂಕ. ೨೨, ೩೯. ಯೋಹಾನ. ೧೮, ೧.

ಭಯ ಪಡಲಾರಂಭಿಸಿ, —ನಂನ ಪ್ರಾಣವು ಮರಣದ ಮಟ್ಟಿಗೂ ದುಖಾಕ್ರಾಂತವಾಗಿದೆ; ಇಲ್ಲಿ ಇದ್ದು, ನಂನ ಸಂಗಡ ಯೆಚ್ಚರಿಕೆಯಾಗಿರಿ! ಯೆಂದು ಅವರಿಗೆ ಹೇಳಿ, ಹೆಚ್ಚು ಕಡಿಮೆ ಕಲ್ಲೆಸೆಯುವಷ್ಟು ದೂರ ಅವರಂನು ಬಿಟ್ಟು ಹೋಗಿ, ಮೊಣಕಾಲೂರಿ, ಮೋರೆ ಕೆಳಗಾಗಿ ನೆಲಕ್ಕೆ ಬಿದ್ದು, —ಸಾಧ್ಯವಾಗಿದ್ದರೆ, ಆ ಘಳಿಗೆಯು ತಂನಂನು ಬಿಟ್ಟು ಹೋಗಬೇಕೆಂದು ಪ್ರಾರ್ಥಿಸಿ, ಅಪ್ಪಾ ತಂದೆಯೇ! ನಿನಗೆ ಯೆಲ್ಲಾ ಸಾಧ್ಯವಾಗಿದೆ; ನೀನು ಈ ಪಾತ್ರೆಯಂನು ನನಗೆ ದೂರ ಮಾಡ ಮನಸ್ಸಾಗಿದ್ದರೆ, ಮಾಡು. ಆದಾಗ್ಯೂ ನಂನ ಚಿತ್ತವಲ್ಲಾ, ನಿಂನದೇ ಆಗಲಿ —ಅಂದನು. ಮತ್ತು ತಂನ ಶಿಷ್ಯರ ಬಳಿಗೆ ಬಂದು, ಅವರು ನಿದ್ರೆ ಮಾಡುವದಂನು ಕಂಡು, ಪೇತ್ರನಿಗೆ —ಹೀಗೋ? ಒಂದೇ ಘಳಿಗೆಯಾದರೂ ನಂನ ಸಂಗಡ ಯೆಚ್ಚರವಾಗಿರಲಾರಿರಾ? ಶೋಧನೆಯಲ್ಲಿ ಸೇರದ ಹಾಗೆ, ಯೆಚ್ಚರವಾಗಿದ್ದು, ಪ್ರಾರ್ಥಿಸಿರಿ! ಆತ್ಮವು ಸಿದ್ಧವಾಗಿದೆ; ಆದರೆ ಮಾಂಸವು ಬಲಹೀನವಾಗಿದೆ, —ಅಂದನು. ತಿರುಗಿ ಹೋಗಿ, ಯೆರಡನೇ ಸಾರಿ, —ನಂನ ತಂದೆಯೇ ನಾನು ಅದಂನು ಕುಡಿದರೆ ಹೊರತು, ಈ ಪಾತ್ರೆಯು ನಂನಂನು ಬಿಟ್ಟು ಹೋಗ ಕೂಡದಾದರೆ, ನಿಂನ ಚಿತ್ತವು ಆಗಲಿ, —ಯೆಂದು ಪ್ರಾರ್ಥಿಸಿದನು. ಇದಲ್ಲದೆ ಪರಲೋಕದಿಂದ ಬಂದ ಒಬ್ಬ ದೂತನು ಆತನಿಗೆ ಕಾಣಿಸಿ ಕೊಂಡು, ಆತನಂನು ಬಲ ಪಡಿಸಿದನು. ಮತ್ತು ಆತನು ಹೋರಾಟದಲ್ಲಿದ್ದು, ಇಂನು ಚುರುಕಾಗಿ ಪ್ರಾರ್ಥಿಸಿದನು. ಇದಲ್ಲದೆ ಆತನ ಬೆವರು ಭೂಮಿಗೆ ಬೀಳುವ ರಕ್ತದ ಬಿಂದುಗಳ ಹಾಗಾಯಿತು. ಮತ್ತು ಶಿಷ್ಯರ ಬಳಿಗೆ ಬಂದು ಅವರು ದುಃಖದ

ದೆಶೆಯಿಂದ ನಿದ್ರೆ ಮಾಡುವದಂನು ಕಂಡನು. ಯಾಕಂದರೆ ಅವರ ಕಂಣುಗಳು ಭಾರವಾಗಿದ್ದವು, ಮತ್ತು ಆತನಿಗೆ ಯೇನು ಉತ್ತರ ಕೊಡಬೇಕೆಂದು ತಿಳಿಯದೆ ಇದ್ದರು. ಆಗಲವರಂನು ಬಿಟ್ಟು, ತಿರುಗಿ ಹೋಗಿ, ಮೂರನೆ ಸಾರಿ ಅದೇ ಮಾತು ಹೇಳಿ, ಪ್ರಾರ್ಥಿಸಿದನು. ಮತ್ತು ಆತನು ಪ್ರಾರ್ಥನೆ ಮಾಡಿ ಯೆದ್ದು, ಮೂರನೇ ಸಾರಿ ತಂನ ಶಿಷ್ಯರ ಬಳಿಗೆ ಬಂದು, ಅವರಿಗೆ ಹೇಳಿದ್ದೇನಂದರೆ,—ಇಂನು ನಿದ್ರೆ ಮಾಡಿ ವಿಶ್ರಮಿಸಿ ಕೊಳ್ಳಿರಿ? ಸಾಕಾಯಿತು. ಇಗೋ ಘಳಿಗೆ ಬಂತು; ಮನುಷ್ಯನ ಮಗನು ಪಾಪಿಷ್ಟರ ಕೈಗಳಿಗೆ ಒಪ್ಪಿಸಲ್ಪಡುತ್ತಾನೆ. ಯೇಳಿರಿ, ಹೋಗುವ! ಇಗೋ ನಂನಂನು ಒಪ್ಪಿಸುವವನು ಸಮೀಪಕ್ಕೆ ಬಂದಿದ್ದಾನೆ.*)

ಆತನು ಇಂನು ಮಾತಾಡುತ್ತಿರುವಾಗ, ಸಂಗಡಲೇ, ಹಂನೆರಡು ಮಂದಿಯಲ್ಲಿ ಒಬ್ಬನಾದ ಯೂದನು ಜನರ ಗುಂಪಂನೂ ಪ್ರಧಾನ ಯಾಜಕರ ಫರಿಸಾಯರ ಸೇವಕರಂನೂ ತೆಗದು ಕೊಂಡು, ಬೆಳಕುಗಳೂ ದೀಪಗಳೂ ಖಡ್ಗಗಳೂ ದೊಂಣೆಗಳೂ ಸಹಿತವಾಗಿ ಬಂದು, ಅವರ ಮುಂದೆ ನಡೆದನು. ಆಗಲು ಯೇಸು ತಂನ ಮೇಲೆ ಬರುವವುಗಳನ್ನೆಲ್ಲಾ ತಿಳಿದು, ಹೊರಗೆ ಹೋಗಿ, ಅವರಿಗೆ ಯಾರಂನು ಹುಡುಕುತ್ತೀರಿ? ಅಂದನು. ಆತನಿಗೆ ಪ್ರತ್ಯುತ್ತರವಾಗಿ—ನಜರೇಥಿನವನಾದ ಯೇಸುವನ್ನು—ಅಂದರು. ಯೇಸು ಅವರಿಗೆ—ನಾನೇ ಅಂದನು. ಮತ್ತು ಆತನಂನು ಒಪ್ಪಿಸಿ ಕೊಟ್ಟ ಯೂದನು ಸಹಾ ಅವರ ಸಂಗಡ ನಿಂತಿದ್ದನು. ಆತನವರಿಗೆ—ನಾನೇ— ಅಂದಾಗ, ಅವರು ಹಿಂದಕ್ಕೆ ಹೋಗಿ ನೆಲಕ್ಕೆ ಬಿದ್ದ

*) ಯೋ. ೧೮, ೧—೨. ಮತ್ತ್. ೨೬, ೩೬—೪೬. ಮಾರ್ಕ. ೧೪, ೩೪—೪೨. ಲೂಕ. ೨೨, ೪೦—೪೬.

ರು.—ತಿರುಗಿ ಅವರಿಗೆ—ಯಾರಂನು ಹುಡುಕುತ್ತೀರಿ?—ಅಂದಾಗ, ನಜರೇಥಿನವನಾದ ಯೇಸುವಂನು—ಅಂದರು.—ನೀನು ನನಗೆ ಕೊಟ್ಟವರಲ್ಲಿ ಒಬ್ಬನಂನು ಕಳಕೊಳ್ಳಲಿಲ್ಲವೆಂದು ಹೇಳಿದ ಮಾತು ಈಡೇರುವ ಹಾಗೆ ಯೇಸು—ನಾನೇ—ಯೆಂದು ನಿಮಗೆ ಹೇಳಿದ್ದೇನೆ. ಆದದರಿಂದ ನಂನಂನು ಹುಡಿಕಿದರೆ ಇವರಂನು ಹೋಗ ಗೊಡಿಸಿರಿ, ಯೆಂದು ಉತ್ತರ ಕೊಟ್ಟನು. ಆದರೆ ಆತನಂನು ಒಪ್ಪಿಸುವವನು—ನಾನು ಯಾವನಿಗೆ ಮುದ್ದಿಡುತ್ತೇನೋ ಅವನೇ; ಅವನಂನು ಹಿಡುಕೊಂಡು, ಭದ್ರ ಮಾಡಿ ತಕ್ಕೊಂಡು ಹೋಗಿರಿ,—ಯೆಂದು ಅವರಿಗೆ ಗುರುತು ಹೇಳಿ ಕೊಟ್ಟಿದ್ದನು. ಸಂಗಡಲೇ ಅವನು ಯೇಸುವಿನ ಬಳಿಗೆ ಬಂದು,—ರಬ್ಬಿಯೇ ಶುಭವಾಗಲಿ!—ಯೆಂದು ಆತನಿಗೆ ಮುದ್ದಿಟ್ಟನು. ಆದರೆ ಯೇಸು ಅವನಿಗೆ—ಸ್ನೇಹಿತನೇ ಯಾತಕ್ಕೆ ಬಂದಿ? ಯೂದನೇ! ಮುದ್ದಿನಿಂದ ಮನುಷ್ಯನ ಮಗನಂನು ಒಪ್ಪಿಸುತ್ತೀಯೋ? ಅಂದನು.*)

ಆಗಲು ಅವರು ಹತ್ತರ ಬಂದು, ಯೇಸುವಿನ ಮೇಲೆ ಕೈ ಹಾಕಿ, ಆತನಂನು ಹಿಡಿದರು. ಆತನ ಸುತ್ತಲಿರುವವರು ಆಗುವದಂನು ನೋಡಿ,—ಕರ್ತನೇ ಖಡ್ಗದಿಂದ ಹೊಡೆಯಲೋ?—ಯೆಂದು ಆತನಂನು ಕೇಳಿದರು. ಮತ್ತು ಅವರಲ್ಲಿ ಒಬ್ಬನಾದ ಸೀಮೋನೆಂಬ ಪೇತ್ರನು ಖಡ್ಗ ಉಂಟಾದವನಾಗಿ, ಅದಂನು ಹಿರಿದು, ಪ್ರಧಾನಯಾಜಕನ ದಾಸನಂನು ಹೊಡೆದು, ಅವನ ಬಲಕಿವಿಯಂನು ಹಾರಿಯ ಕಡಿದನು. ಆ ದಾಸನ ಹೆಸರು ಮಲ್ಕನು. ಆದರೆ ಯೇಸು ಉತ್ತರ ಕೊಟ್ಟು,—

*) ಯೋ. ೧೮, ೨—೯. ಮತ್ತ. ೨೬, ೪೭—೫೦. ಮಾರ್ಕ. ೧೪, ೪೩—೪೬. ಲೂಕ. ೨೨, ೪೭—೪೮.

ಇಷ್ಟಿಗೂ ಬಿಡಿರಿ, ಯೆಂದು ಹೇಳಿ, ಅವನ ಕಿವಿಯಂನು ಮುಟ್ಟಿ, ಅವನಂನು ಗುಣ ಮಾಡಿದನು. ಮತ್ತು ಪೇತ್ರನಿಗೆ ಆತನು ಹೇಳಿದ್ದು,—ನಿಂನ ಖಡ್ಗವಂನು ಒರೆಯಲ್ಲಿ ಹಾಕು. ಯಾಕಂದರೆ ಖಡ್ಗವನ್ನು ಹಿಡಿದವರೆಲ್ಲರು ಖಡ್ಗದಿಂದ ನಾಶವಾಗುವರು. ತಂದೆ ನನಗೆ ಕೊಟ್ಟ ಪಾತ್ರೆಯಲ್ಲಿ ನಾನು ಕುಡಿಯ ಬೇಡವೋ? ಇಲ್ಲವೇ ನಾನು ಈಗಲೇ ನನಗೆ ಹನ್ನೆರಡು ಗಣಗಳಿಗಿಂತ ಹೆಚ್ಚಾದ ದೂತರಂನು ಕಳುಹಿಸುವ ಹಾಗೆ, ನನ್ನ ತಂದೆಯನ್ನು ಬೇಡಿ ಕೊಳ್ಳಲಾರೆನೆಂದು, ನೆನಸುತ್ತೀಯೋ? ಹಾಗಾದರೆ, ಹೀಗೆ ಆಗ ಬೇಕೆಂಬ ಬರಹಗಳು ಹ್ಯಾಗೆ ಇದ್ದೇರುವವು.?*)

ಅದೇ ಘಳಿಗೆಯಲ್ಲಿ ಯೇಸು ತಂನ ಹತ್ತರ ಬಂದ ಪ್ರಧಾನಯಾಜಕರಿಗೂ, ದೇವಾಲಯದ ಸೈನ್ಯಾಧಿಪತಿಗಳಿಗೂ, ಹಿರಿಯರಿಗೂ ಹೇಳಿದ್ದು — ಕಳ್ಳನಿಗೆ ವಿರೋಧವಾಗಿ ಬಂದ ಹಾಗೆ, ಖಡ್ಗಗಳಿಂದಲೂ, ದೊಣ್ಣೆಗಳಿಂದಲೂ, ನಂನಂನು ಹಿಡಿಯ ಹೊರಟು ಬಂದಿರೋ? ದಿನಾಲು ದೇವಾಲಯದಲ್ಲಿ ಬೋಧಿಸುತ್ತಾ ನಿಂಮಲ್ಲಿ ಕೂತು ಕೊಂಡಿದ್ದೆನು; ಆಗ ನಂನಂನು ಹಿಡಿಯಲಿಲ್ಲ. ಆದರೆ ಇದು ನಿಂಮ ಘಳಿಗೆಯೂ ಕತ್ತಲೆಯ ಅಧಿಕಾರವೂ, ಆಗಿದೆ. ಪ್ರವಾದಿಗಳ ಬರಹಗಳು ಈಡೇರುವ ಹಾಗೆ, ಇದೆಲ್ಲಾ ಆಯಿತು.

ಆಗ ಶಿಷ್ಯರೆಲ್ಲರು ಆತನಂನು ಬಿಟ್ಟು ಓಡಿ ಹೋದರು. ಮತ್ತು ಒಬ್ಬ ಯೌವನಸ್ಥನು ಮೈಗೆ ನಾರು ಮಡಿ ಸುತ್ತಿ ಕೊಂಡವನಾಗಿ ಆತ

---

*) ಯೊ. ೧೮, ೧೦. ೧೧ ಮತ್ತ್. ೨೬, ೫೦—೫೪. ಮಾರ್ಕ ೧೪, ೪೬. ೪೭. ಲೂಕ. ೨೨, ೪೯—೫೧.

ನಂನು ಹಿಂಬಾಲಿಸುವಾಗ, ಆ ಯೌವನಸ್ಥರು ಅವನಂನು ಹಿಡಿದರು. ಆದರೆ ಅವನು ನಾರುಮಡಿಯಂನು ಬಿಟ್ಟು ಬಿಟ್ಟು, ಬತ್ತಲೆಯಾಗಿ ಅವರ ಕೈಯೊಳಗಿಂದ ತಪ್ಪಿಸಿ ಕೊಂಡು ಓಡಿ ಹೋದನು.*)

## ೪ನೇ ಸಂಧಿ.

### ಮಂತ್ರಿ ಸಭೆಯ ಮುಂದೆ ಆದ ವಿಚಾರಣೆಯೂ ಪೇತ್ರನು ಕರ್ತನಂನು ಅಲ್ಲಗಳೆದದ್ದೂ —

ಆದರೆ ದಂಡಿನವರ ಗುಂಪೂ, ಸಹಸ್ರಾಧಿಪತಿಯೂ, ಯೆಹೂದ್ಯರ ಸೇವಕರೂ ಯೇಸುವಂನು ಹಿಡಿದು, ಆತನಂನು ಕಟ್ಟಿ, ಮೊದಲು ಅಂನನ ಬಳಿಗೆ ಆತನಂನು ತಕ್ಕೊಂಡು ಹೋದರು. ಯಾಕಂದರೆ ಇವನು ಆ ವರುಷದ ಪ್ರಧಾನಯಾಜಕನಾದ ಕಾಯಫನಿಗೆ ಮಾವನಾಗಿದ್ದನು. ಆ ಕಾಯಫನು, — ಪ್ರಜೆಗೋಸ್ಕರ ಒಬ್ಬ ಮನುಷ್ಯನು ಸಂಹರಿಸಲ್ಪಡುವದು ಪ್ರಯೋಜನವಾಗಿದೆ ಯೆಂದು, ಯೆಹೂದ್ಯರಿಗೆ ಆಲೋಚನೆ ಹೇಳಿದವನೇ. ಇದಲ್ಲದೇ ಸೀಮೋನ್ ಪೇತ್ರನೂ ಬೇರೊಬ್ಬ ಶಿಷ್ಯನೂ ಯೇಸುವಂನು ದೂರದಿಂದ ಪ್ರಧಾನಯಾಜಕನ ಮಠದ ಪರಿಯಂತರ ಹಿಂಬಾಲಿಸಿದರು. ಆ ಶಿಷ್ಯನ ಗುರುತು ಪ್ರಧಾನಯಾಜಕನಿಗೆ ತಿಳಿದಿರುವದರಿಂದ, ಯೇಸುವಿನ ಸಂಗಡ ಪ್ರಧಾನಯಾಜಕನ ಪ್ರಾಕಾರದಲ್ಲಿ ಪ್ರವೇಶಿಸಿದನು. ಆದರೆ ಪೇತ್ರನು ಬಾಗಲಿನ ಬಳಿಯಲ್ಲಿ ಹೊರಗೆ ನಿಂತಿದ್ದನು. ಹೀಗಿರುವಾಗ, ಪ್ರಧಾನಯಾಜಕನಿಗೆ ಗುರುತು ತಿಳಿದವನಾದ ಆ ಬೇರೆ ಶಿಷ್ಯನು ಹೊರಗೆ ಹೋಗಿ,

*) ಮತ್ತ್ ೨೬, ೫೫. ೫೬. ಮಾರ್ಕ ೧೪, ೪೮—೫೨. ಲೂಕ್ ೨೨, ೫೨. ೫೩.

ಬಾಗಲು ಕಾಯುವವಳ ಸಂಗಡ ಮಾತಾಡಿ, ಪೇತ್ರನಂನು ಒಳಗೆ ಕರ ಕೊಂಡು ಬಂದನು. ಇವನು ಒಳಗೆ ಹೋಗಿ, ಅಂತ್ಯವಂನು ನೋಡಬೇಕೆಂದು, ಚಾಕರಿಯವರ ಸಂಗಡ ಕೂತು ಕೊಂಡನು. ಆದರೆ ದಾಸರೂ ಸೇವಕರೂ, ಛಳಿ ಆವದರಿಂದ ಮಧ್ಯ ಓಲಗದಲ್ಲಿ ಇದ್ದಲಿಬೆಂಕಿಯಂನು ಹೊತ್ತಿಸಿ ಛಳಿ ಕಾಸಿ ಕೊಳ್ಳುತ್ತಾ ನಿಂತಿರುವಾಗ, ಪೇತ್ರನು ಅವರ ಸಂಗಡ ನಿಂತು, ಛಳಿ ಕಾಸಿ ಕೊಳ್ಳುತ್ತಿದ್ದನು. ಬಾಗಲು ಕಾಯುವವಳು ಬೆಳಕಿಗೆದುರಾಗಿ ಕೂತು ಕೊಂಡಿರುವ ಅವನಂನು ನೋಡಿ, ಅವನ ಮೇಲೆ ದೃಷ್ಟಿ ಇಟ್ಟು, — ನೀನು ಸಹ ಈ ಮನುಷ್ಯನ ಶಿಷ್ಯರಲ್ಲಿ ಸೇರಿದವನಲ್ಲವೋ? ಅಂದಾಗ, ಅವನು ಯೆಲ್ಲರ ಮುಂದೆ — ಅಲ್ಲ, ನೀನು ಹೇಳುವದಂನು ಅರಿಯೆನೆಂದು ಅಲ್ಲಗಳೆದನು. ಅವನು ಹೊರಗೆ ಬಾಗಲಿಗೆ ಹೋಗುವಾಗ, ಕೋಳಿ ಕೂಗಿತು. ಮತ್ತೊಬ್ಬಳು ಅವನಂನು ನೋಡಿ, ಅಲ್ಲಿರುವವರಿಗೆ — ಇವನು ಸಹ ನಜರೇಥಿನವನಾದ ಯೇಸುವಿನ ಸಂಗಡ ಇದ್ದವನು — ಅಂದಳು. ಆಗಲವನು — ಆ ಮನುಷ್ಯನಂನು ಅರಿಯೆನೆಂದು, ಆಣೆ ಇಟ್ಟು ತಿರಿಗಿ ಅಲ್ಲಗಳೆದನು.*)

ಹೀಗಿರುವಾಗ್ಯೆ ಪ್ರಧಾನಯಾಜಕನು ಆತನ ಶಿಷ್ಯರ ವಿಷಯವಾಗಿಯೂ, ಆತನ ಬೋಧನೆಯ ವಿಷಯವಾಗಿಯೂ, ಯೇಸುವನ್ನು ವಿಚಾರಿಸುವಾಗ, ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದು — ನಾನು ಬಹಿರಂಗವಾಗಿ ಲೋಕದ ಮುಂದೆ ಮಾತಾಡಿದ್ದೇನೆ. ಯೆಹೂದ್ಯರು

*) ಯೋ. ೧೮, ೧೨—೧೮. ಮತ್ತ್. ೨೬, ೫೭. ೫೮. ೬೯—೭೫. ಮಾರ್ಕ. ೧೪, ೫೩. ೫೪. ೬೬—೬೯. ಲೂಕ್. ೨೨, ೫೪—೫೮.

ಯಾವಾಗಲು ಕೂಡಿ ಬರುವ ಸಭೆಮನೆಯಲ್ಲಿಯೂ ದೇವಾಲಯದಲ್ಲಿಯೂ ನಾನು ಯಾವಾಗಲು ಬೋಧಿಸಿದ್ದೇನೆ; ಗುಪ್ತವಾಗಿ ಯೇನು ಮಾತಾಡಲಿಲ್ಲಾ. ಯಾತಕ್ಕೆ ನಂನಂನು ವಿಚಾರಿಸುತ್ತೀ? ಕೇಳಿದವರಂನು ನಾನು ಅವರ ಸಂಗಡ ಮಾತಾಡಿದ್ದು ಯೇನೆಂದು ವಿಚಾರಿಸು. ಇಗೋ ನಾನು ಪೇಳಿದ್ದಂನು ಅವರು ಬಲ್ಲರು. ಆತನು ಇದಂನು ಪೇಳಲಾಗಿ, ಸೇವಕರಲ್ಲಿ ಹತ್ತರ ನಿಂತಿದ್ದ ವೊಬ್ಬನು ಯೇಸುವಿಗೆ ಪೆಟ್ಟು ಪೊಡೆದು — ಪ್ರಧಾನ ಯಾಜಕನಿಗೆ ಪೀಗೆ ಉತ್ತರ ಕೊಡುತ್ತಿಯೋ ಅಂದನು. ಯೇಸು ಅವನಿಗೆ ಪ್ರತ್ಯುತ್ತರವಾಗಿ — ನಾನು ಕೆಟ್ಟದ್ದನ್ನು ಮಾತಾಡಿದ್ದರೆ, ಕೆಟ್ಟದರ ವಿಷಯವಾಗಿ ಸಾಕ್ಷಿ ಕೊಡು; ವೊಳ್ಳೇದ್ದಂನು ಮಾತಾಡಿದ್ದರೆ, ಯಾತಕ್ಕೆ ನಂನಂನು ಪೊಡಿಯುತ್ತಿ? ಅಂದನು.*)

ಇದಲ್ಲದೆ ಯೇಸುವನ್ನು ಪಿಡಿದ ಜನರು ಆತನಂನು ಪಾಸ್ಯ ಮಾಡಿ, ಆತನ ಮುಖದಲ್ಲಿ ಉಗುಳಿ, ಆತನಂನು ಗುದ್ದಿದರು. ಕೆಲವರು ಆತನ ಮುಖಕ್ಕೆ ಮುಸುಕು ಹಾಕಿ, ಆತನನ್ನು ಬಡಿದು — ಕ್ರಿಸ್ತನೇ ನಿನ್ನನ್ನು ಹೊಡೆದವನ್ಯಾರೆಂದು ನಮಗೆ ಪ್ರವಾದನೆ ಪೇಳು — ಅಂದರು. ಈ ಮೊದಲಾದ ಅನೇಕ ದೂಷಣೆಗಳಂನು ಆತನಿಗೆ ಪೇಳಿದರು. ಮತ್ತು ಸೇವಕರು ಅಂಗೈಯಿಂದ ಆತನಂನು ಬಡಿದರು.†)

ಆಗಲು ಸೀಮೋನ್ ಪೇತ್ರನು ನಿಂತು ಛಳಿ ಕಾಸಿ ಕೊಳ್ಳುತ್ತಿರಲಾಗಿ, ಪೊತ್ತು ಕಡಿಮೆ ವೊಂದು ತಾಸಾದ ಮೇಲೆ, ಅಲ್ಲಿ ನಿಂತಿದ್ದವರು ಪೇತ್ರ

*) ಯೊ. ೧೮, ೧೯—೨೩. †) ಮತ್ತ್. ೨೬, ೬೭—೬೮. ಮಾರ್ಕ್. ೧೪, ೬೫. ಲೂಕ್. ೨೨, ೬೩—೬೫.

ನ ಬಳಿಗೆ ಬಂದು,—ನೀನು ಸಹಾ ಅವರಲ್ಲಿ ಒಬ್ಬನು, ನಿಶ್ಚಯ, ನಿನ ಮಾತು ನಿಂನಂನು ತೋರಿಸುತ್ತದೆ, ನೀನು ಗಲಿಲಾಯದವನೇ, ನಿನ್ನ ಭಾಷೆ ಹಾಗದೆ—ಅಂದರು. ಮತ್ತು ಪೇತ್ರನು ಕಿವಿ ಕಡಿದು ಹಾಕಿದವನ ನೆಂಟನಾಗಿಯೂ ಪ್ರಧಾನಯಾಜಕನ ದಾಸನಾಗಿಯೂ ಇರುವ ಒಬ್ಬನು—ನಿಂನಂನು ತೋಟದಲ್ಲಿ ಅವನೊಂದಿಗೆ ನಾನು ನೋಡಲಿಲ್ಲವೋ? ಅಂದಾಗ, ಪೇತ್ರನು ತಿರಿಗಿ ಅಲ್ಲಗಳೆದು,—ನೀವು ಹೇಳುವ ಆ ಮನುಷ್ಯನಂನು ನಾನರಿಯೆನೆಂದು ಶಪಿಸಿ ಕೊಳ್ಳಲೂ, ಆಣೆ ಇಟ್ಟು ಕೊಳ್ಳಲೂ, ಆರಂಭಿಸಿದನು. ಸಂಗಡಲೇ ಅವನು ಇಂನು ಮಾತಾಡುತ್ತಿರುವಾಗ, ಕೋಳಿ ಯೆರಡನೆ ಸಾರಿ ಕೂಗಿತು. ಮತ್ತು ಕರ್ತನು ತಿರುಗಿ ಕೊಂಡು ಪೇತ್ರನ ಮೇಲೆ ದೃಷ್ಟಿ ಇಟ್ಟಾಗ, ಪೇತ್ರನು—ಕೋಳಿ ಯೆರಡು ಸಾರಿ ಕೂಗುವದಕ್ಕಿಂತ ಮುಂಚೆ, ಮೂರು ಸಾರಿ ನನ್ನನ್ನು ಅಲ್ಲಗಳೆಯುವಿ—ಯೆಂದು ಕರ್ತನು ಹೇಳಿದ ಮಾತಂನು ಜ್ಞಾಪಕ ಮಾಡಿ ಕೊಂಡನು. ಆಗಲು ಪೇತ್ರನು ಹೊರಗೆ ಹೋಗಿ ಬಹಳವಾಗಿ ಅತ್ತನು.*)

ಅನ್ನನು ಯೇಸುವಂನು ಕಟ್ಟಿದವನಾಗಿ ಪ್ರಧಾನಯಾಜಕನಾದ ಕಾಯಫನ ಬಳಿಗೆ ಕಳುಹಿಸಿದನು.†)

ಬೆಳಗಾದ ಮೇಲೆ ಪ್ರಧಾನಯಾಜಕರೂ, ಪ್ರಜೆಯ ಹಿರಿಯರೂ, ಶಾಸ್ತ್ರಿಗಳೂ ಸಮಸ್ತ ಮಂತ್ರಿಸಭೆಯೂ ಕೂಡಿ ಕೊಂಡು ಆತನನ್ನು ತಂಮ ಮಂತ್ರಿಸಭೆಗೆ ತಕ್ಕೊಂಡು ಹೋದರು. ಆಗಲು ಪ್ರಧಾನ

---

*) ಯೋ. ೧೮, ೨೫—೨೭. ಮತ್ತ್. ೨೬, ೭೩—೭೫. ಮಾರ್ಕ. ೧೪, ೭೦—೭೨. ಲೂಕ್. ೨೨, ೫೯—೬೨. †) ಯೋ. ೧೮, ೨೪.

ಯಾಜಕರೂ, ಹಿರಿಯರೂ, ಮಂತ್ರಿಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸುವ ಹಾಗೆ, ಆತನಿಗೆ ವಿರೋಧವಾಗಿ ಅಪಸಾಕ್ಷಿಯನ್ನು ಹುಡುಕಿದರು, ಆದರೆ ಸಿಕ್ಕಲಿಲ್ಲ. ಬಹು ಮಂದಿ ಅಪಸಾಕ್ಷಿಗಳು ಬಂದರೂ, ಸಿಕ್ಕಲಿಲ್ಲ; ಅವರ ಸಾಕ್ಷಿಗಳು ಒಪ್ಪಿಗೆ ಆಗಲಿಲ್ಲ. ಕಡೆಯಲ್ಲಿ ಇಬ್ಬರು ಅಪಸಾಕ್ಷಿಗಳು ಬಂದು,—ನಾನು ಕೈಕೆಲಸವಾದ ದೇವಾಲಯವನ್ನು ಕೆಡವಿ ಮೂರು ದಿನದೊಳಗೆ ಕೈಕೆಲಸವಲ್ಲದ ಬೇರೊಂದು ಕಟ್ಟುವೆನೆಂದು ಅವನು ಹೇಳಿದ್ದಂನು ಕೇಳಿದ್ದೇವೆ—ಅಂದರು. ಹಾಗೂ ಅವರ ಸಾಕ್ಷಿಯು ಒಪ್ಪಿಗೆ ಆಗಲಿಲ್ಲ.

ಆಗಲು ಪ್ರಧಾನಯಾಜಕನು ಯೆದ್ದು, ಮಧ್ಯದಲ್ಲಿ ನಿಂತು, ಯೇಸುವಿಗೆ—ನೀನು ಯೇನು ಉತ್ತರ ಕೊಡುವದಿಲ್ಲವೋ? ಇವರು ನಿನ್ನ ಮೇಲೆ ಸಾಕ್ಷಿ ಕೊಡುವದೇನು? ಯೆಂದು ಕೇಳಿದಾಗ, ಆತನು ಸುಂಮನಿದ್ದು, ಯೇನು ಉತ್ತರ ಕೊಡಲಿಲ್ಲ. ಮತ್ತು ಮಂತ್ರಿಸಭೆಯವರು—ನೀನು ಕ್ರಿಸ್ತನಾಗಿದ್ದೀಯೋ? ನಮಗೆ ಹೇಳು—ಅಂದರು. ಆತನವರಿಗೆ—ನಾನು ನಿಮಗೆ ಹೇಳಿದರೆ, ನಂಬುವದೇ ಇಲ್ಲ; ನಾನು ಕೇಳಿದರೂ, ಉತ್ತರ ಕೊಡುವದೇ ಇಲ್ಲ; ಮತ್ತು ನನ್ನನ್ನು ಬಿಡುವದಿಲ್ಲ—ಅಂದನು. ಆಗ ಪ್ರಧಾನಯಾಜಕನು ತಿರುಗಿ,—ನೀನು ಸ್ತುತಿಸ ತಕ್ಕಾತನಾದ ದೇವರ ಮಗನಾದ ಕ್ರಿಸ್ತನಾಗಿದ್ದೀಯೋ? ನಮಗೆ ಹೇಳ ಬೇಕೆಂದು, ನಿನಗೆ ಜೀವವುಳ್ಳ ದೇವರ ಆಣೆ ಇಡುತ್ತೇನೆ—ಅಂನಲಾಗ, ಯೇಸು ಅವನಿಗೆ—ನೀನು ಹೇಳಿದ್ದೇ ಸರಿ, ಇದ್ದೇನೆ. ಆದಾಗ್ಯೂ ಇಂನು ಮೇಲೆ ಮನುಷ್ಯನ ಮಗನು ದೇವರ ಶಕ್ತಿಯ ಬಲಪಾರ್ಶ್ವದಲ್ಲಿ ಕೂತು ಕೊಂಡು, ಆಕಾ

ಶದ ಮೇಘಗಳ ಮೇಲೆ ಬರುವದನ್ನು ನೋಡುವಿರೆಂದು, ನಿಮಗೆ ಹೇಳುತ್ತೇನೆ—ಅಂದನು. ಆಗಲು ಪ್ರಧಾನಯಾಜಕನು ತನ್ನ ವಸ್ತ್ರಗಳನ್ನು ಹರುಕೊಂಡು,—ಅವನು ದೂಷಿಸಿದ್ದಾನೆ; ಸಾಕ್ಷಿಗಳು ಇಂನ್ಯಾತಕ್ಕೆ? ಇಗೋ ಈಗಲೇ ಅವನ ದೂಷಣೆಯನ್ನು ಕೇಳಿದ್ದೀರಿ. ನಿಮಗೆ ಹ್ಯಾಗೆ ತೋರುತ್ತದೆ? ಅನ್ನಲು, ಅವರು ಪ್ರತ್ಯುತ್ತರವಾಗಿ,—ಮರಣಕ್ಕೆ ಪಾತ್ರನಾಗಿದ್ದಾನೆಂದು ನಿರ್ಣೈಸಿದರು.*)

## ೫ನೇ ಸಂಧಿ.

### ಪಿಲಾತನ ಮುಂದೆ ಆದ ವಿಚಾರಣೆಗಳು.

ತರುವಾಯ ಹೊತ್ತಾರೆಯಾಗಿ, ಅವರ ಸಮೂಹವೆಲ್ಲಾ ಯೆದ್ದು, ಯೇಸುವಂನು ಕಟ್ಟಿ, ಕಾಯಫನ ಬಳಿಯಿಂದ ನ್ಯಾಯಸ್ಥಾನಕ್ಕೆ ತಕೊಂಡು ಹೋಗಿ, ಅಧಿಪತಿಯಾದ ಪೊಂತ್ಯಪಿಲಾತನಿಗೆ ಆತನಂನು ಒಪ್ಪಿಸಿದರು.†)

ಆಗಲು ಆತನಂನು ಒಪ್ಪಿಸಿ ಕೊಟ್ಟ ಯೂದನು, ಆತನು ಆಜ್ಞೆ ನಿರ್ಣೈಸಲ್ಪಟ್ಟನೆಂದು ನೋಡಿ, ಪಶ್ಚಾತ್ತಾಪ ಪಟ್ಟು, ಪ್ರಧಾನಯಾಜಕರಿಗೂ ಹಿರಿಯರಿಗೂ ಆ ಮೂವತ್ತು ರೂಪಾಯಿಗಳಂನು ತಿರಿಗಿ ತಂದು,—ನಾನು ನಿರಾಪರಾಧವಾದ ರಕ್ತವಂನು ಒಪ್ಪಿಸಿ ಕೊಟ್ಟು ಪಾಪ ಮಾಡಿದೆನು,—ಅಂದನು. ಆದರೆ ಅವರು—ನಮಗೇನು? ನೀನೇ ನೋಡಿಕೋ—ಅಂದರು. ಆಗಲಾರೂಪಾಯಿಗಳಂನು ದೇವಾಲಯದೊಳಗೆ ಹಾ

*) ಮತ್ತ್. ೨೭, ೧. ೨೬, ೫೯—೬೬. ಮಾರ್ಕ. ೧೫, ೧. ೧೪, ೫೫—೬೪. ಲೂಕ್ ೨೨, ೬೬—೭೧.

†) ಯೋ. ೧೮, ೨೮. ಮತ್ತ್. ೨೭, ೨. ಮಾರ್ಕ. ೧೫, ೧. ಲೂಕ್. ೨೩, ೧.

ತಿ ಬಿಟ್ಟು, ಹೊರಟು ಹೋಗಿ, ಉರ್ಲು ಹಾಕಿ ಕೊಂಡನು. ಆದರೆ ಪ್ರಧಾನಯಾಜಕರು ಆ ರೂಪಾಯಿಗಳಂನು ತೆಗದು,—ರಕ್ತದ ಕ್ರಯವಾದದರಿಂದ ಅವುಗಳಂನು ಬೊಕ್ಕಸದಲ್ಲಿ ಹಾಕ ಬಾರದೆಂದು ಹೇಳಿ, ಆಲೋಚನೆ ಮಾಡಿ, ಅವುಗಳಿಂದ ಪರದೇಶಿಗಳಂನು ಹೂಳುವದಕ್ಕೋಸ್ಕರ ಕುಂಬಾರನ ಹೊಲವಂನು ಕೊಂಡು ಕೊಂಡರು. ಆದದರಿಂದ ಇಂದಿನ ವರೆಗೂ ಆ ಹೊಲಕ್ಕೆ ರಕ್ತದ ಹೊಲವೆಂಬ ಹೆಸರು ಉಂಟಾಯಿತು. ಆಗಲು ಪ್ರವಾದಿಯಾದ ಎರೆಮಿಯನಿಂದ ಹೇಳಲ್ಪಟ್ಟದ್ದು ಈಡೇರಿತು! ಅದೇನಂದರೆ—ಇಸ್ರಾಯೇಲ ಮಕ್ಕಳು ಯಾವನಂನು ಕ್ರಯ ಮಾಡಿದರೋ, ಆ ಕ್ರಯ ಮಾಡಲ್ಪಟ್ಟವನ ಕ್ರಯವಾದ ಮೂವತ್ತು ರೂಪಾಯಿ ತೆಗದು, ಕರ್ತನು ನನಗೆ ನೇಮಿಸಿದ ಪ್ರಕಾರ ಕುಂಬಾರನ ಹೊಲಕ್ಕೆ ಕೊಟ್ಟರು.*)

ಆದರೆ ಯೆಹೂದ್ಯರು ಕಳಂಕವಾಗದೆ ಪಸ್ಕವಂನು ತಿಂನುವ ಹಾಗೆ, ನ್ಯಾಯಸ್ಥಾನದಲ್ಲಿ ಪ್ರವೇಶಿಸಲಿಲ್ಲ. ಆದದರಿಂದ ಪಿಲಾತನು ಅವರ ಬಳಿಗೆ ಹೊರಗೆ ಬಂದು,— ಈ ಮನುಷ್ಯನಿಗೆ ವಿರೋಧವಾಗಿ ಯೇನು ದೂರಂನು ತರುತ್ತೀರಿ? ಅಂದಾಗ, ಅವನಿಗೆ ಪ್ರತ್ಯುತ್ತರವಾಗಿ,—ಇವನು ಅಕ್ರಮಗಾರನಲ್ಲದಿದ್ದರೆ, ನಾವು ಅವನಂನು ನಿನಗೆ ಒಪ್ಪಿಸುತ್ತಿದ್ದಿಲ್ಲ—ಅಂದರು. ಆಗಲು ಪಿಲಾತನು ಅವರಿಗೆ—ನೀವೇ ಅವನಂನು ತಕ್ಕೊಂಡು, ನಿಂಮ ನ್ಯಾಯಪ್ರಮಾಣದ ಪ್ರಕಾರ ಅವನಿಗೆ ನ್ಯಾಯ ತೀರಿಸಿರಿ—ಅಂದಾಗ, ಯೆಹೂದ್ಯರು ಅವನಿಗೆ—ನಾವು ಯಾವನಂನಾದರೂ ಕೊಂದು

*) ಮತ್ತ. ೨೭, ೩—೧೦.

ಹಾಕ ಕೂಡದು—ಅಂದರು. ಹೀಗೆಯೇ ಯೇಸು, ತಾನು ಯೆಂಥಾ ಮರಣದಿಂದ ಸಾಯ ಬೇಕೆಂದು, ಸೂಚಿಸಿ ಹೇಳಿದ ಮಾತು ಈಡೇರಿತು.*)

ಮತ್ತು ಪ್ರಧಾನಯಾಜಕರೂ ಹಿರಿಯರೂ ಆತನ ಮೇಲೆ ದೂರು ಹೇಳಲಾರಂಭಿಸಿ, ಇವನು ಜನಾಂಗವನ್ನು ತಿರುಗ ಬೀಳ ಮಾಡಿ, ತಾನು ಕ್ರಿಸ್ತನೆಂಬ ಅರಸನಾಗಿದ್ದೇನೆಂದು ಹೇಳಿ, ಕೈಸರನಿಗೆ ತೆರಿಗೆ ಕೊಡದ ಹಾಗೆ, ಅಡ್ಡಿ ಮಾಡುವದನ್ನು ಕಂಡಿದ್ದೇವೆ—ಅಂದರು.†)

ಆಗಲು ಪಿಲಾತನು ತಿರುಗಿ ನ್ಯಾಯಸ್ಥಾನದಲ್ಲಿ ಪ್ರವೇಶಿಸಿ, ಯೇಸುವನ್ನು ಕರೆದು, ಆತನಿಗೆ—ನೀನು ಯೆಹೂದ್ಯರ ಅರಸನೋ?—ಅಂನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ—ನಿಂನಷ್ಟಕ್ಕೆ ನೀನೇ ಇದನ್ನು ಹೇಳುತ್ತೀಯೋ? ಬೇರೊಬ್ಬರು ನನ್ನ ವಿಷಯವಾಗಿ ನಿನಗೆ ಹೇಳಿದ್ದಾರೋ?—ಅನ್ನಲು, ಪಿಲಾತನು—ನಾನು ಯೆಹೂದ್ಯನೋ? ನಿನ್ನ ಜನಾಂಗವೂ ಪ್ರಧಾನಯಾಜಕರೂ ನಿಂನಂನು ನನಗೆ ಒಪ್ಪಿಸಿದ್ದಾರೆ; ಯೇನು ಮಾಡಿದ್ದೀ?—ಯೆಂದು ಉತ್ತರ ಕೊಟ್ಟನು. ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ನನ್ನ ರಾಜ್ಯವು ಈ ಲೋಕದ್ದಲ್ಲ, ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ, ನಾನು ಯೆಹೂದ್ಯರಿಗೆ ಒಪ್ಪಿಸಲ್ಪಡದ ಹಾಗೆ, ನನ್ನ ಸೇವಕರು ಯುದ್ಧ ಮಾಡುವರು. ಆದರೆ ಈಗ ನನ್ನ ರಾಜ್ಯವು ಇಲ್ಲಿಯದಲ್ಲ. ಪಿಲಾತನು ಆತನಿಗೆ—ಹಾಗಾದರೆ ನೀನು ಅರಸನೋ?—ಅಂನಲು, ಯೇಸು ಪ್ರತ್ಯುತ್ತರವಾಗಿ? ಹೇಳಿದ್ದು—ನಾನು ಅರಸನಾಗಿದ್ದೇ

*) ಯೋ. ೧೮, ೨೮—೩೨. †) ಲೂಕ. ೨೩, ೨.

ನೆಂದು ನೀನೇ ಹೇಳುತ್ತೀ; ನಾನು ಸತ್ಯಕ್ಕೆ ಸಾಕ್ಷಿ ಕೊಡುವದಕ್ಕೋಸ್ಕರವೇ ಹುಟ್ಟಿ, ಅದಕ್ಕೋಸ್ಕರವೇ ಲೋಕಕ್ಕೆ ಬಂದಿದ್ದೇನೆ. ಸತ್ಯದವರೆಲ್ಲರು ನನ್ನ ಶಬ್ದವನ್ನು ಕೇಳುತ್ತಾರೆ. ಪಿಲಾತನು ಆತನಿಗೆ—ಸತ್ಯವೆಂದರೇನು?—ಅಂದನು. ಇದನ್ನು ಹೇಳಿ, ತಿರಿಗಿ ಯೆಹೂದ್ಯರ ಬಳಿಗೆ ಹೊರಗೆ ಬಂದು, ಅವರಿಗೆ ಹೇಳಿದ್ದೇನಂದರೆ,—ನಾನು ಈ ಮನುಷ್ಯನಲ್ಲಿ ಯಾವ ಅಪರಾಧವನ್ನೂ ಕಾಣೆನು.*)

ಆದರೆ ಪ್ರಧಾನಯಾಜಕರೂ ಹಿರಿಯರೂ ಆತನ ಮೇಲೆ ಬಹಳ ದೂರುಗಳಂನು ಹೇಳಿದರು. ಆತನು ಯೇನು ಉತ್ತರ ಕೊಡಲಿಲ್ಲ. ಆಗಲು ಪಿಲಾತನು ಆತನಿಗೆ—ಯೇನು ಉತ್ತರ ಹೇಳುವದಿಲ್ಲವೋ? ಇವರು ನಿಂನ ಮೇಲೆ ಇಷ್ಟು ದೂರು ಹೇಳುತ್ತಾರೆಂದು ಕೇಳುವದಿಲ್ಲವೋ?—ಅಂನಲು, ಅವನಿಗೆ ಒಂದು ಮಾತಿಗಾದರೂ ಉತ್ತರ ಕೊಡದೆ ಇರುವದರಿಂದ ಅಧಿಪತಿಯು ಅಶ್ಚರ್ಯ ಪಟ್ಟನು.†)

ಆದರೆ ಅವರು—ಆತನು ಗಲಿಲಾಯದಿಂದ ಆರಂಭ ಮಾಡಿ, ಇಲ್ಲಿಯ ಮಟ್ಟಿಗೂ ಸಮಸ್ತ ಯೆಹೂದ್ಯವೆಲ್ಲಾ ಬೋಧಿಸುತ್ತಾ, ಜನರಂನು ಯೆಬ್ಬಿಸುತ್ತಾನೆಂದು—ದೃಢವಾಗಿ ಹೇಳಿದರು. ಪಿಲಾತನು ಗಲಿಲಾಯವೆಂದು ಕೇಳಿದಾಗ,—ಆ ಮನುಷ್ಯನು ಗಲಿಲಾಯದವನೋ? ಯೆಂದು ವಿಚಾರಿಸಿದನು, ಮತ್ತು ಆತನು ಹೆರೋದನ ಅಧಿಕಾರದೊಳಗೆ ಇದ್ದಾನೆಂದು ತಿಳಿದು, ಆ ದಿವಸಗಳಲ್ಲಿ ಯೆರೂಸಲೇಮಿನಲ್ಲಿ ಇದ್ದ ಹೆರೋ

*) ಯೋ. ೧೮, ೩೩—೩೮. ಮತ್ತ್. ೨೭, ೧೧. ಮಾರ್ಕ್. ೧೫, ೨. ಲೂಕ್. ೨೩, ೩. ೪.

†) ಮಾರ್ಕ್. ೧೫, ೩—೫. ಮತ್ತ್. ೨೭, ೧೨—೧೪.

ದನ ಬಳಿಗೆ ಆತನಂನು ಕಳುಹಿಸಿದನು. ಇದಲ್ಲದೆ ಹೆರೋದನು ಯೇಸುವಂನು ನೋಡಿ ಬಹು ಸಂತೋಷ ಪಟ್ಟನು. ಯಾಕಂದರೆ ಆತನ ವಿಷಯವಾಗಿ ಅನೇಕ ಮಾತುಗಳಂನು ಕೇಳಿದದರಿಂದ, ಬಹು ಕಾಲದಿಂದ ಆತನಂನು ನೋಡ ಬೇಕೆಂದಿದ್ದನು. ಮತ್ತು ಆತನಿಂದಾಗುವ ಒಂದು ಗುರುತಂನು ನೋಡ ಹಾರೈಸಿದನು. ಹೀಗಿರುವದರಿಂದ ಆತನಂನು ಬಹು ಮಾತುಗಳಿಂದ ವಿಚಾರಿಸುವಾಗ, ಆತನು ಅವನಿಗೆ ಯೇನು ಉತ್ತರ ಕೊಡಲಿಲ್ಲ. ಇದಲ್ಲದೆ ಪ್ರಧಾನಯಾಜಕರೂ, ಶಾಸ್ತ್ರಿಗಳೂ, ಆತನ ಮೇಲೆ ದೃಢವಾಗಿ ದೂರು ಹೇಳುತ್ತಾ ನಿಂತಿದ್ದರು. ಮತ್ತು ಹೆರೋದನು ತಂನ ಸೈನ್ಯದವರ ಸಂಗಡ ಆತನಂನು ಅಶ್ರದ್ಧೆ ಹಾಸ್ಯ ಮಾಡಿ, ಪ್ರಕಾಶವಾದ ವಸ್ತ್ರವಂನು ಆತನಿಗೆ ಹೊದ್ದಿಸಿ, ಆತನಂನು ಪಿಲಾತನಿಗೆ ತಿರಿಗಿ ಕಳುಹಿಸಿದನು. ಇದಲ್ಲದೆ ಪಿಲಾತನೂ ಹೆರೋದನೂ ಆ ದಿವಸದಲ್ಲಿ ಒಬ್ಬರಿಗೊಬ್ಬರು ಸ್ನೇಹಿತರಾದರು. ಯಾಕಂದರೆ ಮುಂಚೆ ಒಬ್ಬರಿಗೊಬ್ಬರು ಶತ್ರುಗಳಾಗಿದ್ದರು.*)

ಮತ್ತು ಪಿಲಾತನು ಪ್ರಧಾನಯಾಜಕರಂನೂ, ಅಧಿಪತಿಗಳಂನೂ, ಪ್ರಜೆಯಂನೂ, ಕೂಡ ಕರಿಸಿ, ಅವರಿಗೆ ಹೇಳಿದ್ದೇನಂದರೆ,—ನೀವು ಈ ಮನುಷ್ಯನಂನು ಜನಾಂಗವಂನು ತಿರುಗ ಬೀಳ ಮಾಡುವವನೆಂದು ನಂನ ಬಳಿಗೆ ತಂದಿದ್ದೀರಿ. ಮತ್ತು ಇಗೋ, ನಾನು ನಿಂಮ ಮುಂದೆ ವಿಚಾರಿಸಿ, ನೀವು ಅವನ ಮೇಲೆ ದೂರು ಹೇಳುವವುಗಳಲ್ಲಿ ಒಂದು ಅಪರಾಧವಂನಾದರೂ ಈ ಮನುಷ್ಯನಲ್ಲಿ ಕಾಣಲಿಲ್ಲ; ಹೆರೋದನು

*) ಲೂಕ್. ೨೩, ೫—೧೨.

ಸಹ ಕಾಣಲಿಲ್ಲ; ಅವನ ಬಳಿಗೆ ನಿಂಮಂನು ಕಳುಹಿಸಿದೆನು. ಮತ್ತು ಇಗೋ, ಮರಣಕ್ಕೆ ಪಾತ್ರವಾದದ್ದೇನಾದರೂ ಅವನಿಗೆ ತೀರ್ಪು ಆಗಲಿಲ್ಲ. ಹೀಗಿರುವದರಿಂದ ಅವನಂನು ಶಿಕ್ಷಿಸಿ ಬಿಡಿಸುವೆನು.*)

ಆದರೆ ಹಬ್ಬದ ಸಮಯದಲ್ಲಿ ಅಧಿಪತಿಯು ಸಮೂಹಕ್ಕೆ ಅವರು ಇಚ್ಛೈಸುವ ಒಬ್ಬ ಸೆರೆಯವನಂನು ಬಿಡುವ ಮರ್ಯಾದೆ ಇತ್ತು. ಆ ಸಮಯದಲ್ಲಿ ಬರಬ್ಬನೆಂಬ ಒಬ್ಬ ಪ್ರಸಿದ್ಧನಾದ ಸೆರೆಯವನು ಇದ್ದನು. ಇವನು ಪಟ್ಣದಲ್ಲಿ ಉಂಟಾದ ಒಂದು ಕಲಹ ನರಹತ್ಯದ ನಿಮಿತ್ತ ಸೆರೆಯಲ್ಲಿ ಹಾಕಲ್ಪಟ್ಟನು. ಆಗ ಸಮೂಹವು ಗದ್ದಲ ಮಾಡಿ, ಅವನು ಯಾವಾಗಲೂ ತಮಗೆ ಮಾಡಿದ ಪ್ರಕಾರ ಮಾಡ ಬೇಕೆಂದು, ಬೇಡಿ ಕೊಳ್ಳಲಾರಂಭಿಸಿದರು. ಅವರು ಕೂಡಿ ಬಂದಿರುವಾಗ, ಅವರಿಗೆ ಪಿಲಾತನು —ನಿಮಗೆ ಯಾವನಂನು ಬಿಡ ಬೇಕು? ಬರಬ್ಬನಂನೋ? ಯೆಹೂದ್ಯರ ಅರಸನಾದ ಕ್ರಿಸ್ತನೆಂಬ ಯೇಸುವಂನೋ? ಅಂದನು. ಯಾಕಂದರೆ ಪ್ರಧಾನಯಾಜಕರು ಹೊಟ್ಟೆಕಿಚ್ಚಿನಿಂದ ಆತನಂನು ಒಪ್ಪಿಸಿದರೆಂದು ತಿಳುಕೊಂಡನು.

ಇದಲ್ಲದೆ ಅವನು ಸದರಿನ ಮೇಲೆ ಕೂತಿರುವಾಗ, ಅವನ ಹೆಂಡತಿಯು,—ನಿನಗೆ ಆ ನೀತಿವಂತನ ಗೊಡವೆ ಬೇಡ. ಯಾಕಂದರೆ ಈ ಹೊತ್ತು ಸ್ವಪ್ನದಲ್ಲಿ ಆತನಿಗೋಸ್ಕರ ಬಹಳ ಶ್ರಮೆ ಪಟ್ಟೆನೆಂದು, ಅವನ ಬಳಿಗೆ ಹೇಳಿ ಕಳುಹಿಸಿದಳು.†)

---

*) ಲೂಕ್. ೨೩, ೧೩—೧೬.

†) ಮತ್ತ್. ೨೭, ೧೫—೧೯. ಮಾರ್ಕ್. ೧೫, ೬—೧೦. ಲೂಕ್. ೨೩, ೧೭. ಯೋ. ೧೮, ೩೯.

ಆದರೆ ಪ್ರಧಾನಯಾಜಕರೂ ಹಿರಿಯರೂ ಬರಬ್ಬನಂನು ಬೇಡಿ ಕೊಂಡರು; ಯೇಸುವಂನು ನಾಶನ ಮಾಡ ಬೇಕೆಂದು ಸಮೂಹದವರಂನು ಯೆಬ್ಬಿಸಿ, ಸಮ್ಮತಿ ಪಡಿಸಿದರು. ಆಗ ಅಧಿಪತಿಯು ಪ್ರತ್ಯುತ್ತರವಾಗಿ ಅವರಂನು — ಈ ಇಬ್ಬರಲ್ಲಿ ಯಾವನಂನು ನಿಮಗೆ ಬಿಡ ಬೇಕು? ಕೇಳಲು, ಯೆಲ್ಲರು ಕೂಡ — ಇವನಂನು ತೆಗದು ಹಾಕು; ಬರಬ್ಬನಂನು ನಮಗೆ ಬಿಡಿಸು — ಯೆಂದು ಕೂಗಿದರು. ಬರಬ್ಬನು ಕಳ್ಳನಾಗಿದ್ದನು. ಆಗ ಪಿಲಾತನು ಯೇಸುವಂನು ಬಿಡಿಸ ಬೇಕೆಂದು, ತಿರಿಗಿ ಅವರಿಗೆ ಕೂಗಿ, — ಹಾಗಾದರೆ ಕ್ರಿಸ್ತನೆಂಬ ಯೇಸುವಂನು ಯೇನು ಮಾಡಲಿ? — ಯೆಂದು ಕೇಳಲು, ಅವರೆಲ್ಲರು — ಅವನಂನು ಶಿಲುಬೆಗೆ ಹಾಕು! ಶಿಲುಬೆಗೆ ಹಾಕು! ಯೆಂದು ಕೂಗಿದರು. ಆದರೆ ಮೂರನೆ ಸಾರಿ ಅವರಿಗೆ — ಯಾಕೆ? ಯೇನು ಕೇಡು ಮಾಡಿದ್ಧಾನೆ? ನಾನು ಮರಣಕ್ಕೆ ಪಾತ್ರವಾದ ಅಪರಾಧ ಒಂದಂನಾದರೂ ಅವನಲ್ಲಿ ಕಾಣಲಿಲ್ಲ; ಆದದರಿಂದ ಅವನಂನು ಶಿಕ್ಷಿಸಿ ಬಿಡಿಸುವೆನು — ಅಂದನು. ಆದರೆ ಅವರು ಅವನಂನು ಶಿಲುಬೆಗೆ ಹಾಕ ಬೇಕೆಂದು ಮಹಾ ಶಬ್ದಗಳಿಂದ ಬೇಡಿ ಕೊಂಡು, ತೊಂದರೆ ಪಡಿಸಿದರು. ಮತ್ತು ಅವರ ಶಬ್ದಗಳೂ ಪ್ರಧಾನಯಾಜಕರ ಶಬ್ದಗಳೂ ಗೆದ್ದವು.*)

ಆಗ ಪಿಲಾತನು ಯೇಸುವಂನು ತಕ್ಕೊಂಡು, ಬಾರುಗಳಿಂದ ಹೊಡಿಸಿದನು. ಮತ್ತು ಅಧಿಪತಿಯ ರಾಣುವೆಯವರು ಯೇಸುವಂನು ಕಾವಲಿ ಮನೆಯಾದ ಓಲಗದೊಳಗೆ ತಕ್ಕೊಂಡು ಹೋಗಿ, ಕಾವಲಿಯವರನ್ನೆ

*) ಮತ್ತ. ೨೭, ೨೦—೨೬. ಮಾರ್ಕ. ೧೫, ೧೧—೧೪. ಲೂಕ. ೨೩, ೧೮—೨೫. ಯೋ. ೧೮, ೪೦.

ಲ್ಲಿ ಆತನ ಪಾತ್ರ ಕೂಡ ಕರೆದು, ಆತನ ವಸ್ತ್ರಗಳಂನು ತೆಗದು ಬಿಟ್ಟು, ರಕ್ತಾಂಬರದ ಶಾಲ್ಲಿಯಂನು ಆತನಿಗೆ ಹೊದ್ದಿಸಿ, ಮುಳ್ಳುಗಳಿಂದ ಕಿರೀಟವಂನು ಹೆಣೆದು, ಆತನ ತಲೆಯ ಮೇಲೆ ಇಟ್ಟು, ಆತನ ಬಲ ಕೈಯಲ್ಲಿ ಬೆತ್ತ ಕೊಟ್ಟು, ಆತನ ಮುಂದೆ ಮೊಣಕಾಲೂರಿ,—ಯೆಹೂದ್ಯರ ಅರಸನೇ! ಶುಭವಾಗಲಿ!—ಯೆಂದು ಆತನಂನು ಹಾಸ್ಯ ಮಾಡಿದರು. ಮತ್ತು ಆತನಿಗೆ ಪೆಟ್ಟು ಹೊಡೆದು, ಆತನ ಮೇಲೆ ಉಗುಳಿ ಬೆತ್ತ ತಕ್ಕೊಂಡು ಆತನ ತಲೆಯ ಮೇಲೆ ಹೊಡೆದರು.*)

ಆಗ ಪಿಲಾತನು ತಿರಿಗಿ ಹೊರಗೆ ಬಂದು, ಅವರಿಗೆ ಹೇಳಿದ್ದು,—ಇಗೋ, ನಾನು ಅವನಲ್ಲಿ ಯಾವ ಅಪರಾಧವಂನು ಕಾಣೆನೆಂದು ನೀವು ತಿಳುಕೊಳ್ಳುವ ಹಾಗೆ, ಅವನಂನು ನಿಮಗೋಸ್ಕರ ಹೊರಗೆ ತರುತ್ತೇನೆ. ಆಗ ಯೇಸು ಮುಳ್ಳಿನ ಕಿರೀಟವಂನೂ ರಕ್ತಾಂಬರವಂನೂ ಧರಿಸಿದವನಾಗಿ ಹೊರಗೆ ಬರಲು, ಪಿಲಾತನು ಅವರಿಗೆ—ಇಗೋ ಈ ಮನುಷ್ಯನು!—ಅಂದನು. ಪ್ರಧಾನಯಾಜಕರೂ ಸೇವಕರೂ ಆತನಂನು ನೋಡಿದಾಗ,—ಶಿಲುಬೆಗೆ ಹಾಕು! ಶಿಲುಬೆಗೆ ಹಾಕು! ಯೆಂದು ಕೂಗಿದರು. ಪಿಲಾತನು ಅವರಿಗೆ—ನೀವೇ ಅವನಂನು ತಕ್ಕೊಂಡು ಶಿಲುಬೆಗೆ ಹಾಕಿರಿ, ಯಾಕಂದರೆ ನಾನು ಅವನಲ್ಲಿ ಯೇನು ಅಪರಾಧ ಕಾಣೆನು,—ಅಂದನು. ಯೆಹೂದ್ಯರು ಅವನಿಗೆ ಪ್ರತ್ಯುತ್ತರವಾಗಿ—ನಮಗೆ ನ್ಯಾಯಪ್ರಮಾಣ ಉಂಟು; ನಂಮ ನ್ಯಾಯಪ್ರಮಾಣದ ಪ್ರಕಾರ

* * *

*) ಯೋ. ೧೯, ೧—೩. ಮತ್ತ್. ೨೭, ೨೭—೩೦. ಮಾರ್ಕ. ೧೫, ೧೬—೧೯.

ಅವನು ಸಾಯ ಬೇಕು. ಯಾಕಂದರೆ ತಂನಂನು ದೇವರ ಮಗನು ಯೆಂದು ಮಾಡಿ ಕೊಂಡಿದ್ದಾನೆ,—ಅಂದರು *).

ಪಿಲಾತನು ಈ ಮಾತು ಕೇಳಿ, ಇಂನು ಭಯ ಪಟ್ಟು, ತಿರಿಗಿ ನ್ಯಾಯ ಸ್ಥಾನದಲ್ಲಿ ಪ್ರವೇಶಿಸಿ, ಯೇಸುವಿಗೆ—ನೀನು ಯೆಲ್ಲಿಂದ ಬಂದವನು? ಅಂದನು. ಆದರೆ ಯೇಸು ಆವನಿಗೆ ಉತ್ತರ ಕೊಡಲಿಲ್ಲ. ಹೀಗಿರುವಾಗ ಪಿಲಾತನು ಆತನಿಗೆ—ನೀನು ನಂನ ಸಂಗಡ ಮಾತಾಡುವದಿಲ್ಲವೋ? ನಿಂನಂನು ಶಿಲುಬೆಗೆ ಹಾಕುವದಕ್ಕೆ ಅಧಿಕಾರವೂ ಬಿಡಿಸುವದಕ್ಕೆ ಅಧಿಕಾರವೂ ನನಗುಂಟೆಂದು ತಿಳಿಯುವದಿಲ್ಲವೋ? ಅಂದನು. ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ನಿನಗೆ ಮೇಲಿನಿಂದ ಕೊಡಲ್ಪಟ್ಟರೆ ಹೊರತು, ನಂನ ಮೇಲೆ ನಿನಗೆ ಯಾವ ಅಧಿಕಾರವೂ ಇರದು. ಆದದರಿಂದ ನಿನಗೆ ನಂನಂನು ಒಪ್ಪಿಸಿದವನಿಗೆ ಹೆಚ್ಚಾದ ಪಾಪ ಉಂಟು. ಆಗಿನಿಂದ ಪಿಲಾತನು ಆತನಂನು ಬಿಡಿಸ ಹುಡಿಕಿದನು. ಆದರೆ ಯೆಹೂದ್ಯರು—ಇವನಂನು ಬಿಡಿಸಿದರೆ, ನೀನು ಕೈಸರನ ಸ್ನೇಹಿತನಲ್ಲ; ತಂನಂನು ಅರಸನಾಗ ಮಾಡಿ ಕೊಳ್ಳುವ ಒಬ್ಬೊಬ್ಬನು ಕೈಸರನಿಗೆ ವಿರೋಧವಾಗಿ ಮಾತಾಡುತ್ತಾನೆಂದು ಕೂಗಿ ಹೇಳಿದರು.

ಪಿಲಾತನು ಈ ಮಾತು ಕೇಳಿ, ಯೇಸುವಂನು ಹೊರಗೆ ಕರಕೊಂಡು ಹೋಗಿ, ಕಲ್ಲುಕಟ್ಟಣೆ ಯೆಂದು ಇಬ್ರಿಯ ಮಾತಿನಲ್ಲಿ ಗಬ್ಬತವೆಂದು ಕರೆಯಲ್ಪಟ್ಟ ಸ್ಥಳದಲ್ಲಿ ಸದರಿನ ಮೇಲೆ ಕೂತು ಕೊಂಡನು. ಪಸ್ಕಕ್ಕೆ ಸಿದ್ಧ ಮಾಡುವ ದಿವಸ ಹೆಚ್ಚು ಕಡಿಮೆ ಆರನೇ ತಾಸಾಗಿತ್ತು. ಆಗ ಯೆಹೂ

*) ಯೋ. ೧೯, ೪—೧೫.

ದ್ಯರಿಗೆ—ಇಗೋ ನಿಂಮ ಅರಸನು! ಅಂದನು. ಆದರೆ—ತೆಗದು ಹಾಕು! ತೆಗದು ಹಾಕು! ಅವನಂನು ಶಿಲುಬೆಗೆ ಹಾಕು!—ಯೆಂದು ಕೂಗಿದರು. ಪಿಲಾತನು ಅವರಿಗೆ—ನಿಂಮ ಅರಸನಂನು ಶಿಲುಬೆಗೆ ಹಾಕಲೋ? ಅಂದಾಗ, ಪ್ರಧಾನಯಾಜಕರು—ಕೈಸರನೇ ಹೊರತು ನಮಗೆ ಅರಸನು ಇಲ್ಲ—ಯೆಂದು ಉತ್ತರ ಕೊಟ್ಟರು.

ಆಗಲು ಪಿಲಾತನು ಗುಲ್ಲು ಹೆಚ್ಚಾಗುವದೇ ಹೊರತು ಪ್ರಯೋಜನವೇನು ಇಲ್ಲ ಯೆಂದು ನೋಡಿ, ನೀರಂನು ತೆಗದು ಕೊಂಡು, ಸಮೂಹದ ಮುಂದೆ ಕೈಗಳಂನು ತೊಳೆದು,—ಈ ನೀತಿವಂತನ ರಕ್ತಕ್ಕೆ ನಿರಾಪರಾಧಿಯಾಗಿದ್ದೇನೆ. ನೀವೇ ನೋಡಿ ಕೊಳ್ಳಿರಿ,—ಅಂನಲಾಗಿ, ಪ್ರಜೆ ಯೆಲ್ಲಾ ಪ್ರತ್ಯುತ್ತರವಾಗಿ—ಅವನ ರಕ್ತವು ನಂಮ ಮೇಲೆಯೂ ನಂಮ ಮಕ್ಕಳ ಮೇಲೆಯೂ ಬರಲಿ—ಅಂದರು. ಹೀಗಿರಲಾಗಿ ಪಿಲಾತನು ಸಮೂಹವಂನು ಮೆಚ್ಚಿಸ ಬೇಕೆಂದು, ಕಲಹ ಕೊಲೆಗಳ ನಿಮಿತ್ತ ಸೆರೆಯಲ್ಲಿ ಬಿದ್ದಿರುವ, ಅವರು ಬೇಡಿ ಕೊಂಡ ಬರಬ್ಬನಂನು ಅವರಿಗೆ ಬಿಡಿಸಿದನು. ಆದರೆ ಬಾರುಗಳಿಂದ ಹೊಡಿಸಿದ ಯೇಸುವಂನು ಶಿಲುಬೆಗೆ ಹಾಕಲ್ಪಡುವದಕ್ಕೆ ಅವರ ಚಿತ್ತಕ್ಕೆ ಒಪ್ಪಿಸಿದನು.*)

## ೭ನೇ ಸಂಧಿ.

## ಶಿಲುಬೆಗೆ ಹಾಕೋಣವೂ ಮರಣವೂ.

ರಾಣುವೆಯವರು ಆತನಿಗೆ ಹಾಸ್ಯ ಮಾಡಿದ ಮೇಲೆ, ರಕ್ತಾಂಬರದ ಒಲ್ಲಿಯಂನು ಆತನಿಂದ ತೆಗದು, ಸ್ವಂತ ವಸ್ತ್ರಗಳಂನು ಆತನಿಗೆ ಹೊ

*) ಮತ್ತ್. ೨೭, ೨೪—೨೬ ಮಾರ್ಕ್. ೧೫, ೧೫. ಲೂಕ್. ೨೩, ೨೪. ೨೫. ಯೋ. ೧೯, ೧೬.

ದ್ದಿಸಿ, ಆತನಂನು ಶಿಲುಬೆಗೆ ಹಾಕುವದಕ್ಕೆ ತಕ್ಕೊಂಡು ಹೋದರು. ಆತನು ತಂನ ಶಿಲುಬೆಯಂನು ಹೊತ್ತುಕೊಂಡು ಕಪಾಲ ಸ್ಥಳವೆಂದೂ ಇಬ್ರಿಯ ಮಾತಿನಲ್ಲಿ ಗೊಲ್ಗೊಥವೆಂದೂ ಕರೆಯಲ್ಪಟ್ಟ ಸ್ಥಳಕ್ಕೆ ಹೊರಟನು. ಆತನಂನು ತಕ್ಕೊಂಡು ಹೋಗುವಾಗ, ಅವರು ಹೊಲದಿಂದ ಬಂದಂಥ, ಅಲೆಕ್ಸಂದ್ರನಿಗೂ ರೂಫನಿಗೂ ತಂದೆಯಾದಂಥ, ಕುರೇನ್ಯನಾದ ಸೀಮೋನನೆಂಬ ಮನುಷ್ಯನಂನು ಹಿಡದು, ಅವನು ಯೇಸುವಿನ ಶಿಲುಬೆ ಹೊತ್ತುಕೊಂಡು ಹೋಗುವ ಹಾಗ, ಅವನಂನು ಬಿಟ್ಟಿ ಮಾಡಿಸಿ, ಅವನ ಮೇಲೆ ಶಿಲುಬೆ ಹಾಕಿದರು.*)

ಇದಲ್ಲದೆ ಜನರೂ, ಆತನಿಗೋಸ್ಕರ ಬಡಕೊಂಡು ಅಳುವ ಹೆಂಗಸರೂ, ಬಹು ಸಮೂಹವಾಗಿ ಆತನಂನು ಹಿಂಬಾಲಿಸಿದರು. ಆಗ ಯೇಸು ಆ ಹೆಂಗಸರ ಬಳಿಗೆ ತಿರಿಗಿ ಕೊಂಡು ಹೇಳಿದ್ದೇನಂದರೆ,— ಯೆರೂಸಲೇಮಿನ ಕುಮಾರ್ತಿಗಳೇ! ನಂನ ಗೋಸ್ಕರ ಅಳ ಬೇಡಿರಿ; ನಿಂಮ ಗೋಸ್ಕರವೂ ನಿಂಮ ಮಕ್ಕಳಿಗೋಸ್ಕರವೂ ಅಳಿರಿ. ಯಾಕಂದರೆ ಇಗೋ, ಬಂಜೆಯಾದವರೂ ಹೆರದ ಗರ್ಭಿಣಿಗಳೂ, ಹಾಲು ಕೊಡದ ಮೊಲೆಗಳೂ ಭಾಗ್ಯವುಳ್ಳವುಗಳೆಂದು ಹೇಳುವ ದಿವಸಗಳು ಬರುತ್ತವೆ. ಆಗಲು ಬೆಟ್ಟಗಳಿಗೆ—ನಂಮ ಮೇಲೆ ಬೀಳಿರಿ! ಗುಡ್ಡಗಳಿಗೆ ನಂಮಂನು ಮುಚ್ಚಿರಿ! ಯೆಂದು ಹೇಳಲಾರಂಭಿಸುವರು. ಯಾಕಂದರೆ ಹಸಿ ಮರದಲ್ಲಿ ಇವುಗಳಂನು ಮಾಡಿದರೆ, ಒಣಗಿದ್ದರಲ್ಲಿ ಯೇನಾಗುವದೋ?†)

---

*) ಮತ್ಥ್. ೨೭, ೩೧—೩೨. ಮಾರ್ಕ್. ೧೫, ೨೦. ೨೧. ಲೂಕ್. ೨೩, ೨೬. ಯೋ. ೧೯, ೧೬. ೧೭.

†) ಲೂಕ್. ೨೩, ೨೭—೩೧.

ಇದಲ್ಲದೆ ಬೇರೆ ಇಬ್ಬರು ಅಪರಾಧಸ್ಥರು ಆತನ ಸಂಗಡ ಸಂಹಾರಿಸಲ್ಪಡುವದಕ್ಕೆ ವೊಯ್ಯಲ್ಪಟ್ಟರು.*)

ಮತ್ತು ಅವರು ಗೊಲ್ಗೊಥಾ ಯೆಂಬ ಸ್ಥಳಕ್ಕೆ ಬಂದಾಗ, ಬೋಳ ಕಲಿಸಿದ ದ್ರಾಕ್ಷೆರಸವಂನು ಆತನಿಗೆ ಕುಡಿಯ ಕೊಟ್ಟರು. ಆದರೆ ಆತನು ಅದಂನು ರುಚಿ ನೋಡಿ, ಕುಡಿಯಲೊಲ್ಲದೆ, ತೆಗದು ಕೊಳ್ಳಲಿಲ್ಲ.†)

ಅಲ್ಲಿ ಅವರು ಆತನಂನೂ, ಆತನ ಸಂಗಡ ಇಬ್ಬರು ಕಳ್ಳರಂನೂ, ಆತನ ಬಲಕಡೆಯಲ್ಲಿ ವೊಬ್ಬನಂನೂ, ಯೆಡಕಡೆಯಲ್ಲಿ ವೊಬ್ಬನಂನೂ, ಶಿಲುಬೆಗೆ ಹಾಕಿದರು. ಆತನು ಅನ್ನೀತಿವಂತರ ಸಂಗಡ ಯೆಣಿಸಲ್ಪಟ್ಟನೆಂಬ ಬರಹವು ಹಾಗೆ ಈಡೇರಿತು. ಆತನಂನು ಶಿಲುಬೆಗೆ ಹಾಕುವಾಗ, ಮೂರನೇ ತಾಸಾಗಿತ್ತು.‡)

ಆದರೆ ಯೇಸು — ತಂದೆಯೇ! ಅವರಿಗೆ ಮಂನಿಸು; ಮಾಡುವದೇನೆಂದು ಅರಿಯರು — ಅಂದನು.§)

ಮತ್ತು ಆತನ ದೂರಂನು ಬರೆಸಿ, ಆತನ ತಲೆಯ ಮೇಲ್ಗಡೆ ಹಚ್ಚಿದರು. ಹ್ಯಾಗಂದರೆ ಪಿಲಾತನು ಮೇಲ್ಬರಹವಂನು ಬರೆದು, ಶಿಲುಬೆಯ ಮೇಲೆ ಇಡಿಸಿದನು. ಬರದದ್ದೇನಂದರೆ — ಯೆಹೂದ್ಯರ ಅರಸನಾಗಿರುವ ನಜರೇಥಿನವನಾದ ಯೇಸು. ಈ ಮೇಲ್ಬರಹವಂನು ಯೆಹೂದ್ಯರಲ್ಲಿ ಅನೇಕರು ವೋದಿ ಕೊಂಡರು. ಯಾಕಂದರೆ ಯೇಸು ಶಿಲುಬೆಗೆ ಹಾಕಲ್ಪಟ್ಟ ಸ್ಥಳವು ಪಟ್ಣಕ್ಕೆ ಸಮೀಪವಾಗಿತ್ತು. ಮತ್ತು ಅದು

*) ಲೂಕ್. ೨೩, ೩೨. †) ಮತ್ತ್. ೨೭, ೩೩. ೩೪. ಮಾರ್ಕ್. ೧೫, ೨೩.

‡) ಮತ್ತ್. ೨೭, ೩೮. ಲೂಕ್. ೨೩, ೩೩. ಯೋ. ೧೯, ೧೮. ಮಾರ್ಕ್. ೧೫, ೨೭. ೨೮.

§) ಲೂಕ್. ೨೩, ೩೪.

ಇಬ್ರಿಯ, ಗ್ರೀಕ, ರೋಮಾಯ, ಭಾಷೆಗಳಲ್ಲಿ ಬರೆದಿತ್ತು. ಹೀಗಿರಲಾಗಿ ಯೆಹೂದ್ಯರ ಪ್ರಧಾನಯಾಜಕರು ಪಿಲಾತನಿಗೆ — ಯೆಹೂದ್ಯರ ಅರಸನೆಂದಲ್ಲಾ; ಅವನು ಯೆಹೂದ್ಯರ ಅರಸನಾಗಿದ್ದೇನೆಂದು ಹೇಳಿದನೆಂಬದಾಗಿ, ಬರಿಯ ಬೇಕು — ಅಂದಾಗ, ಪಿಲಾತನು ಪ್ರತ್ಯುತ್ತರವಾಗಿ, — ನಾನು ಬರೆದದ್ದಂನು ಬರೆದಿದ್ದೇನೆ. ಅಂದನು — *)

ಇದಲ್ಲದೆ ರಾಣುವೆಯವರು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ, ಆತನ ವಸ್ತ್ರಗಳನ್ನು ತೆಗದು, ಒಬ್ಬೊಬ್ಬ ರಾಣುವೆಯವನಿಗೆ — ಒಂದೊಂದು ಪಾಲಾಗಿ, ನಾಲ್ಕು ಪಾಲು ಮಾಡಿದರು. ಅಂಗಿಯನ್ನು ಸಹಾ ತಕ್ಕೊಂಡರು; ಆದರೆ ಅಂಗಿಯು ಹೊಲಿಗೆ ಇಲ್ಲದೆ, ಮೇಲಿನಿಂದಲೇ ಯೆಲ್ಲಾ ನೇಯಿದದ್ದಾಗಿರುವದರಿಂದ, ಅದಂನು ಛೇದಿಸದೆ, ಯಾರಿಗೆ ಆಗುವದೋ — ಅದಕ್ಕೆ ಚೀಟು ಹಾಕುವ ಯೆಂದು, ತಂಮೊಳಗೆ ಹೇಳಿ ಕೊಂಡರು. ನನ್ನ ವಸ್ತ್ರಗಳನ್ನು ಪಾಲಿಟ್ಟು ಕೊಂಡು, ನನ್ನ ಅಂಗಿಗೆ ಚೀಟು ಹಾಕಿದರು — ಯೆಂಬ ಬರಹವು ಈಡೇರುವ ಹಾಗೆ, ರಾಣುವೆಯವರು ಹೀಗೆ ಮಾಡಿದರು. ಮತ್ತು ಅಲ್ಲಿ ಕೂತು ಕೊಂಡು, ಆತನನ್ನು ಕಾಯುತ್ತಿದ್ದರು. †)

ಜನರು ನೋಡುತ್ತಾ ನಿಂತರು. ಇದಲ್ಲದೆ ಹಾದು ಹೋಗುವವರು ತಮ್ಮ ತಲೆಗಳನ್ನು ಅಲ್ಲಾಡಿಸಿ, — ಅಯ್ಯೋ ದೇವಾಲಯವನ್ನು ಕೆಡವಿ, ಮೂರು ದಿವಸಗಳಲ್ಲಿ ಕಟ್ಟುವವನೇ! ನಿನ್ನನ್ನು ನೀನೇ ರಕ್ಷಿಸಿಕೋ! ನೀನು

*) ಮತ್ತ. ೨೭, ೩೭. ಲೂಕ. ೨೩, ೩೮. ಮಾರ್ಕ. ೧೫, ೨೬. ಯೋ. ೧೯, ೧೯—೨೨.

†) ಯೋ. ೧೯, ೨೩. ೨೪. ಮತ್ತ. ೨೭, ೩೫. ೩೬. ಮಾರ್ಕ. ೧೫, ೨೪. ಲೂಕ. ೨೩, ೩೪.

ದೇವರ ಮಗನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ! ಯೆಂದು ಆತನನ್ನು ದೂಷಿಸಿದರು. ಅದೇ ಮೇರೆಗೆ ಪ್ರಧಾನಯಾಜಕರು ಶಾಸ್ತ್ರಿಗಳ ಹಿರಿಯರ ಸಂಗಡ ಆತನಿಗೆ ಹಾಸ್ಯ ಮಾಡಿ,—ಬೇರೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಲಾರನು; ಅವನು ದೇವರು ಆರಿಸಿಕೊಂಡ ಕ್ರಿಸ್ತನೆಂಬ ಇಸ್ರಾಯೇಲಿನ ಅರಸನಾಗಿದ್ದರೆ, ಶಿಲುಬೆಯಿಂದ ಈಗ ಇಳಿದು ಬರಲಿ. ನೋಡುವಾಗ, ಅವನಲ್ಲಿ ವಿಶ್ವಾಸವಿಡುತ್ತೇವೆ. ದೇವರನ್ನು ನಂಬಿದನು; ಆತನಿಗೆ ಬೇಕಾಗಿದ್ದರೆ, ಈಗ ಇವನನ್ನು ಬಿಡಿಸಲಿ. ದೇವರ ಮಗನಾಗಿದ್ದೇನೆಂದು ಹೇಳಿದನಲ್ಲ?—ಅಂದರು.*)

ಮತ್ತು ತೂಗಿರುವ ಅಪರಾಧಸ್ಥರಲ್ಲಿ ಒಬ್ಬನು—ನೀನು ಕ್ರಿಸ್ತನಾಗಿದ್ದರೆ, ನಿಂನಂನೂ ನಂಮಂನೂ ರಕ್ಷಿಸಿಕೋ? ಯೆಂದು ಆತನಂನು ದೂಷಿಸಿದನು. ಆದರೆ ಬೇರೊಬ್ಬನು ಅವನಂನು ಗದರಿಸಿ,—ಅದೇ ಆಜ್ಞೆಯಲ್ಲಿರುವ ನೀನು ದೇವರಿಗೆ ಭಯ ಪಡುವದಿಲ್ಲವೋ? ನಮಗೆ ನ್ಯಾಯವಾಗಿದೆ ಸರಿ. ಯಾಕಂದರೆ ನಾವು ಮಾಡಿದವುಗಳಿಗೆ ತಕ್ಕದಂನು ಹೊಂದುತ್ತೇವೆ; ಆದರೆ ಇವನು ಅಯೋಗ್ಯವಾದದ್ದೇನೂ ಮಾಡಲಿಲ್ಲ—ಯೆಂದು ಹೇಳಿ, ಯೇಸುವಿಗೆ ಕರ್ತನೇ ನಿಂನ ರಾಜ್ಯದೊಳಗೆ ಬರುವಾಗ, ನಂನಂನು ಜ್ಞಾಪಕ ಮಾಡಿಕೋ!—ಅಂದನು. ಯೇಸು ಅವನಿಗೆ ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ಈ ಹೊತ್ತು ನಂನ ಸಂಗಡ ಪರದೈಸಿನಲ್ಲಿ ಇರುವಿ—ಅಂದನು.†)

*) ಲೂಕ್. ೨೩, ೩೫. ೩೬. ಮತ್ತ್. ೨೭, ೩೯—೪೩. ಮಾರ್ಕ. ೧೫, ೨೯—೩೨.

†) ಲೂಕ್ ೨೩, ೩೯—೪೩.

ಆದರೆ ಯೇಸುವಿನ ಶಿಲುಬೆಗೆ ಸಮೀಪವಾಗಿ ಆತನ ತಾಯಿಯೂ, ಆತನ ತಾಯಿಯ ಸಹೋದರಿಯಾಗಿರುವ ಕ್ಲ್ಯೋಫನ ಹೆಂಡತಿಯಾದ ಮರಿಯಳೂ, ಮಗ್ದಲದವಳಾದ ಮರಿಯಳೂ ನಿಂತಿದ್ದರು. ಯೇಸು ತಂನ ತಾಯಿಯೂ, ತಾನು ಪ್ರೀತಿ ಮಾಡಿದ ಶಿಷ್ಯನೂ ಹತ್ತರ ನಿಂತಿರುವದಂನು ನೋಡಿ, ತಂನ ತಾಯಿಗೆ—ಸ್ತ್ರೀಯೇ ಇಗೋ ನಿಂನ ಮಗನು!—ಅಂದನು. ಆಗಲು ಆ ಶಿಷ್ಯನಿಗೆ—ಇಗೋ ನಿಂನ ತಾಯಿಯು!—ಅಂದನು. ಆ ಘಳಿಗೆಯಿಂದ ಆ ಶಿಷ್ಯನು ಆಕೆಯಂನು ಸ್ವಂತ ಮನೆಯಲ್ಲಿ ಸೇರಿಸಿ ಕೊಂಡನು. *)

ಹೊತ್ತು ಕಡಿಮೆ ಆರನೇ ತಾಸಾದಾಗ, ದೇಶವೆಲ್ಲಾದರ ಮೇಲೆ ಒಂಬತ್ತನೇ ತಾಸಿನ ವರಿಗೂ—ಕತ್ತಲಾಯಿತು. ಸೂರ್ಯನು ಕತ್ತಲಾದನು. ಹೊತ್ತು ಕಡಿಮೆ ಒಂಬತ್ತನೆ ತಾಸಿನಲ್ಲಿ ಯೇಸು ಮಹಾ ಶಬ್ದದಿಂದ—ಎಲೀ! ಎಲೀ! ಲಮ್ಮಾ ಸಬಕ್ತಾನಿ! ಯೆಂದು ಕೂಗಿದನು. ಅದೇನಂದರೆ—ನಂನ ದೇವರೇ! ನಂನ ದೇವರೇ! ಯಾಕೆ ನಂನಂನು ಬಿಟ್ಟು ಬಿಟ್ಟಿದ್ದಿ?— ಯೆಂಬುವದು. ಅಲ್ಲಿ ನಿಂತವರಲ್ಲಿ ಕೆಲವರು ಅದಂನು ಕೇಳಿ,—ಇಗೋ ಎಲಿಯನಂನು ಕರೆಯುತ್ತಾನೆ ಅಂದರು. †)

ಆಮೇಲೆ ಯೇಸು—ಯೆಲ್ಲಾ ಈಗ ತೀರಿತೆಂದು ತಿಳುಕೊಂಡು, ಬರಹವು ಈಡೇರುವ ಹಾಗೆ,—ದಾಹವಾಯಿತು ಅಂದನು. ಹುಳಿ ರಸ ತುಂಬಿದ ಪಾತ್ರೆಯು ಅಲ್ಲಿ ಇತ್ತು. ಆಗಲವರು ಪಾಚಿಯಂನು

---

*) ಯೋಹಾನ್ ೧೯, ೨೫—೨೭.

†) ಲೂಕ್. ೨೩, ೪೪. ೪೫. ಮತ್ತ್. ೨೭, ೪೫—೪೭. ಮಾರ್ಕ. ೧೫, ೩೩—೩೫.

ಹುಳಿರಸದಿಂದ ತೋಯಿಸಿ, ಹಿಸ್ಸೋಪಿನ ಕೋಲಿಗೆ ಶಿಕ್ಕಿಸಿ, ಆತನ ಬಾಯಿಗೆ ತಗಲಿಸಿ, ಆತನಿಗೆ ಕುಡಿಯ ಕೊಟ್ಟರು. ಮಿಕ್ಕಾದವರು — ಬಿಡು! ಎಲಿಯನು ಬಂದು,ಅವನಂನು ರಕ್ಷಿಸುವನೇನೋ? ನೋಡೋಣ — ಅಂದರು.*)

ಯೇಸು ಆ ಹುಳಿರಸವಂನು ತಕ್ಕೊಂಡ ಮೇಲೆ, — ತೀರಿತು! — ಯೆಂದು ಹೇಳಿದನು. ಮತ್ತು ಯೇಸು ತಿರಿಗಿ ಮಹಾ ಶಬ್ದದಿಂದ ಕೂಗಿ, — ತಂದೆಯೇ! ನಿಂನ ಕೈಗಳಲ್ಲಿ ನಂನ ಆತ್ಮವಂನು ಇಡುತ್ತೇನೆ — ಅಂದನು. ಇವುಗಳಂನು ಹೇಳಿ, ತಲೆ ಬಾಗಿಸಿ, ಪ್ರಾಣ ಬಿಟ್ಟನು.†)

ಆಗಲು ಇಗೋ, ದೇವಾಲಯದ ಪರದೆಯು ಮೇಲಿನಿಂದ ಕೆಳಗಿನ ಪರಿಯಂತರ ಯೆರಡಾಗಿ ಹರಿದು ಹೋಯಿತು. ಭೂಮಿಯು ಕಂಪಿಸಿತು. ಬಂಡೆಗಳು ಸೀಳಿ ಹೋದವು. ಸಮಾಧಿಗಳು ತೆರೆಯಲ್ಪಟ್ಟವು. ಮತ್ತು ಮಲಗಿದ್ದ ಅನೇಕ ಪರಿಶುದ್ಧರ ಶರೀರಗಳು ಯೆಬ್ಬಿಸಲ್ಪಟ್ಟವು. ಆತನು ಯೆದ್ದ ಮೇಲೆ, ಅವರು ಸಮಾಧಿಗಳಿಂದ ಹೊರಟು, ಪರಿಶುದ್ಧ ಪಟ್ಣದಲ್ಲಿ ಪ್ರವೇಶಿಸಿ, ಅನೇಕರಿಗೆ ಕಾಣಿಸಿ ಕೊಂಡರು.‡)

ಆದರೆ ಆತನಿಗೆದುರಾಗಿ ಹತ್ತರ ನಿಂತ ಶತಾಧಿಪತಿಯೂ, ಅವನ ಸಂಗಡ ಯೇಸುವಂನು ಕಾಯುವವರೂ ಭೂಕಂಪವಂನೂ ಆತನು ಹಾಗೆ ಕೂಗಿ ಪ್ರಾಣ ಬಿಟ್ಟದ್ದಂನೂ ನೋಡಿ, ಬಹು ಭಯ ಪಟ್ಟು ದೇವರಂನು ಮಹಿಮೆ ಪಡಿಸಿ, — ನಿಶ್ಚಯವಾಗಿ ಈ ಮನುಷ್ಯನು ನೀ

*) ಯೋ. ೧೯, ೨೮. ೨೯. ಮತ್ತ್. ೨೭, ೪೮. ೪೯. ಮಾರ್ಕ. ೧೫, ೩೬.

†) ಯೋ. ೧೯, ೨೯. ಲೂಕ್. ೨೩, ೪೬. ಮತ್ತ್. ೨೭, ೫೦. ಮಾರ್ಕ. ೧೫, ೩೭.

‡) ಮತ್ತ್. ೨೭, ೫೧—೫೩. ಮಾರ್ಕ. ೧೫, ೩೮. ಲೂಕ್. ೨೩, ೪೫.

ತಿವಂತನಾಗಿಯೂ ದೇವರ ಮಗನಾಗಿಯೂ ಇದ್ದನು — ಅಂದರು. ಮತ್ತು ಆ ನೋಟಕ್ಕೆ ಕೂಡಿ ಬಂದ ಸಮೂಹಗಳೆಲ್ಲಾ ಆದವುಗಳಂನು ನೋಡಿ, ಯೆದೆ ಬಡು ಕೊಂಡು, ತಿರಿಗಿ ಹೋದರು.*)

ಇದಲ್ಲದೆ ಆತನ ಪರಿಚಿತಿಯಾದವರೆಲ್ಲರೂ, ಆತನ ಸಂಗಡ ಗಲಿಲಾಯದಿಂದ ಬಂದು, ಆತನಂನು ಹಿಂಬಾಲಿಸಿ, ಆತನಿಗೆ ಸೇವಿಸಿದ ಸ್ತ್ರೀಯರೂ ಇವುಗಳಂನು ನೋಡುತ್ತಾ, ದೂರದಲ್ಲಿ ನಿಂತಿದ್ದರು. ಅವರೊಳಗೆ ಮಗ್ದಲದವಳಾದ ಮರಿಯಳೂ ಚಿಕ್ಕ ಯಾಕೋಬನಿಗೂ ಯೋಸೆಗೂ ತಾಯಿಯಾದ ಮರಿಯಳೂ, ಜೆಬೆದಾಯನ ಮಕ್ಕಳ ತಾಯಿಯಾದ ಸಲೋಮೆಯೂ, ಆತನ ಸಂಗಡ ಯೆರೂಸಲೇಮಿಗೆ ಯೇರಿ ಹೋದ ಬೇರೆ ಅನೇಕ ಹೆಂಗಸರೂ ಇದ್ದರು.†)

ಆಗ ಯೆಹೂದ್ಯರು ದೊಡ್ಡದಾದ ಆ ಸಬ್ಬತಿನ ದಿವಸಕ್ಕೆ ಸಿದ್ಧ ಮಾಡುವ ದಿವಸ ಇರಲಾಗಿ, ಸಬ್ಬತಿನಲ್ಲಿ ಹೆಣಗಳು ಶಿಲುಬೆಯಲ್ಲಿ ಇರದ ಹಾಗೆ, ಅವರ ಕಾಲುಗಳಂನು ಮುರಿದು; ಅವರಂನು ಇಳಿಸಬೇಕೆಂದು, ಪಿಲಾತನಂನು ಬೇಡಿಕೊಂಡರು. ಆಗ ರಾಣುವೆಯವರು ಬಂದು, ಯೇಸುವಿನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಮೊದಲನೇಯವನ ಕಾಲುಗಳಂನೂ ಮತ್ತೊಬ್ಬನ ಕಾಲುಗಳಂನೂ ಮುರಿದು, ಯೇಸುವಿನ ಬಳಿಗೆ ಬಂದು, ಆತನು ಆಗಲೇ ಸತ್ತಿರುವದಂನು ನೋಡಿ, ಆತನ ಕಾಲುಗಳಂನು ಮುರಿಯಲಿಲ್ಲ. ಆದರೆ ರಾಣುವೆಯವರಲ್ಲಿ

*) ಮತ್ತ್. ೨೭, ೫೪. ಮಾರ್ಕ. ೧೫, ೩೯. ಲೂಕ್. ೨೩, ೪೭. ೪೮.

†) ಮತ್ತ್. ೨೭, ೫೫. ೫೬. ಮಾರ್ಕ. ೧೫, ೪೦. ೪೧. ಲೂಕ್. ೨೩, ೪೯.

ವಾಬ್ಬನು ಭಲ್ಲೆಯಿಂದ ಆಶನ ಪಕ್ಕೆ ಶಿವಿದನು. ಸಂಗಡಲೇ ನೀರೂ ರಕ್ತವೂ ಪೊರಗೆ ಬಂತು. ಅದಂನು ನ್ಯಾಡಿದವನು ಸಾಕ್ಷಿ ಕಾಟ್ಟಿದ್ದಾನೆ; ಅವನ ಸಾಕ್ಷಿ ನಿಜವೆ ಮತ್ತು ನೀವು ನಂಬುವ ಪಾಗೆ, ಸತ್ಯವನ್ನು ಪೋಳುತ್ತಾನೆಂದು ಅವನು ಬಲ್ಲನು. ಯಾಕಂದರೆ,—ಆಶನ ಯೆಲುವು ಮುರಿಯಲ್ಪಡದೆಂಬ ಬರಪಾವು ಇದ್ದೇರುವ ಪಾಗೆ ಇವು ಉಂಟಾದವು. ಇಂನು ಬೇರೆ ಬರಪಾವು,--ಅವರು ಶಾವು ಶಿವಿದವನಂನು ನ್ಯಾಡುವರು—ಯೆಂದು ಪೋಳುತ್ತದೆ.*)

## ೭ನೇ ಸಂಧಿ.

## ಪೂಳಿಟ್ಟದ್ದು.

ಮತ್ತು ಇಗ್ಯಾ, ಸಬ್ಬತಿನ ಮುಂಚಿನ ದಿವಸವಾದ ಸಿದ್ಧ ಮಾಡುವ ದಿವಸವಾಗಿದ್ದದರಿಂದ, ಆಗಲೇ ಸಾಯಂಕಾಲ ಬಂದಕಾರಣ, ಯೆಪೂದ್ಯರ ಪಟ್ಣವಾದ ಅರಿಮತ್ಥಾಯದ ಯೋಸೇಫನೆಂಬ ಘನವುಳ್ಳ ಮಂತ್ರಿಯಾದ ವಾಬ್ಬ ಐಶ್ವರ್ಯವುಳ್ಳ ಮನುಷ್ಯನು ಬಂದನು. ಇವನು ವಾಳ್ಳೇ ನೀತಿವಂತನಾದ ಮನುಷ್ಯನಾಗಿ, ಅವರ ಆಲ್ಯೋಚನೆಗೂ ಕೃತ್ಯಕ್ಕೂ ಸಮ್ಮತಿ ಪಡದೆ ಇದ್ದನು. ಅವನು ಸಪಾ ದೇವರ ರಾಜ್ಯವಂನು ನಿರೀಕ್ಷಿಸಿ ಕೊಳ್ಳುವವನಾಗಿ, ಯೆಪೂದ್ಯರ ಭಯದ ದೆಶೆಯಿಂದ ಗುಪ್ತವಾಗಿ ಯೇಸುವಿನ ಶಿಷ್ಯನಾಗಿದ್ದನು. ಇವನು ಧೈರ್ಯವಾಗಿ ಪಿಲಾತನ ಬಳಿಗೆ ಪ್ರವೇಶಿಸಿ, ತಾನು ಯೇಸುವಿನ ಶರೀರವಂನು ತಕ್ಕಾಂಡು ಪ್ಯಾಗುವ ಪಾಗೆ, ಬೇಡಿ ಕಾಂಡನು. ಆದರೆ ಪಿಲಾತನು ಆತ

*) ಯಾ. ೧೯, ೩೧—೩೭.

ನು ಆಗಲೇ ಸತ್ತನೇನಾ ಆಶ್ಚರ್ಯಪಟ್ಟು, ಶತಾಧಿಪತಿಯಂನು ಕರೆದು, ಆತನು ಸತ್ತಾಯಿತಾ? ಯೆಂದು ವಿಚಾರಿಸಿದನು ಶತಾಧಿಪತಿಯಿಂದ ಅದಂನು ತಿಳುಕೊಂಡ ಮೇಲೆ, ಹೆಣವಂನು ಯೋಸೇಫನಿಗೆ ಕೊಡಬೇಕೆಂದು ಅಪ್ಪಣೆ ಮಾಡಿದನು. ಇವನು ನಾರುಮಡಿ ತೆಗದು ಕೊಂಡು ಬಂದು, ಯೇಸುವಿನ ಶವವಂನು ಇಳಿಸಿದನು.*)

ಇದಲ್ಲದೆ ಮೊದಲು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದ ನಿಕೊದೇಮನು ಸಹಾ, ಬೋಳವೂ ಅಗರೂ ಕಲಸಿದ ಹೊಟ್ಟು ಕಡಿಮೆ ನೂರು ಸೇರು ತೆಗದು ಕೊಂಡು ಬಂದನು. ಆಗ ಯೇಸುವಿನ ಶವವಂನು ತಕ್ಕೊಂಡು, ಯೆಹೂದ್ಯರಲ್ಲಿ ಹೂಣಿಡುವ ಮರ್ಯಾದೆಯ ಪ್ರಕಾರ, ಅದಂನು ಸುಗಂಧಗಳ ಸಂಗಡ ಬಟ್ಟೆಗಳಿಂದ ಸುತ್ತಿದರು.†)

ಇದಲ್ಲದೆ ಆತನು ಶಿಲುಬೆಗೆ ಹಾಕಲ್ಪಟ್ಟಲ್ಲಿ ತೋಟವೂ, ತೋಟದಲ್ಲಿ ಯಾವನೂ ಯೆಂದು ಇಡಲ್ಪಡದ ಹೊಸ ಸಮಾಧಿಯೂ ಇತ್ತು. ಅದು ತಾನು ಬಂಡೆಯಲ್ಲಿ ತೋಡಿಸಿದ ಯೋಸೇಫನ ಸ್ವಂತವಾದ ಹೊಸ ಸಮಾಧಿ ಇತ್ತು. ಆ ಸಮಾಧಿ ಸಮೀಪವಾಗಿರುವದರಿಂದ, ಯೆಹೂದ್ಯರು ಸಿದ್ಧ ಮಾಡುವ ದಿವಸದ ನಿಮಿತ್ತ, ಯೇಸುವಂನು ಅಲ್ಲಿ ಇಟ್ಟರು. ಆದರೆ ಮಗ್ದಲದವಳಾದ ಮರಿಯಳೂ, ಯೋಸೆಯ ಮರಿಯಳೂ ಸಹಾ ಹಿಂಬಾಲಿಸಿ, ಅಲ್ಲಿ ಸಮಾಧಿಗೆದುರಾಗಿ ಕೂತು ಕೊಂಡು, ಸಮಾಧಿಯಂನೂ ಆತನ ಶವವು ಇಡಲ್ಪಟ್ಟ ರೀತಿಯಂನೂ ನೋಡಿ

---

*) ಮತ್ತ್. ೨೭, ೫೭–೫೯. ಮಾರ್ಕ. ೧೫, ೪೨–೪೬. ಲೂಕ್. ೨೩, ೫೦–೫೩. ಯೋ. ೧೯, ೩೮.

†) ಯೋ. ೧೯, ೩೯. ೪೦.

ದರು. ಮತ್ತು ಯೋಸೇಫನು ಸಮಾಧಿಯ ಬಾಗಲಿಗೆ ದೊಡ್ಡ ಕಲ್ಲಂನು ಹೊರಳಿಸಿ ಹೋದನು. ತರುವಾಯ ಅವರು ತಿರಿಗಿ ಹೋಗಿ ಸುಗಂಧಗಳಂನೂ, ತೈಲಗಳಂನೂ ಸಿದ್ಧ ಮಾಡಿ, ಕಟ್ಟಳೆಯ ಮೇರೆಗೆ ಸಬ್ಬತಿನಲ್ಲಿ ಸುಂಮನಿದ್ದರು.*)

ಆದರೆ ಶಿದ್ಧ ಮಾಡುವ ದಿವಸಕ್ಕೆ ಮರುದಿವಸದಲ್ಲಿ, ಪ್ರಧಾನಯಾಜಕರೂ, ಫರಿಸಾಯರೂ, ಪಿಲಾತನ ಬಳಿಗೆ ಕೂಡಿ ಬಂದು,—ಧೊರೆಯೇ! ಆ ಮೋಸಗಾರನು ಬದುಕುತ್ತಿರುವಾಗ—ಮೂರು ದಿವಸಗಳ ಮೇಲೆ ಯೇಳುತ್ತೇನೆಂದು ಹೇಳಿದ್ದಂನು ನೆನಪು ಮಾಡಿ ಕೊಳ್ಳುತ್ತೇವೆ. ಆದಕಾರಣ ಅವನ ಶಿಷ್ಯರು ರಾತ್ರಿಯಲ್ಲಿ ಬಂದು, ಅವನಂನು ಕದ್ದು ಕೊಂಡು ಹೋಗಿ,—ಸತ್ತವರೊಳಗಿಂದ ಯೆದ್ದಿದ್ಧಾನೆಂದು--ಜನರಿಗೆ ಹೇಳಿದರೆ, ಕಡೇ ಮೋಸವು ಮೊದಲಿನದಕ್ಕಿಂತ ಕೆಟ್ಟದಾಗದ ಹಾಗೆ, ಸಮಾಧಿಯಂನು ಮೂರನೆ ದಿವಸ ಪರಿಯಂತರ ಭದ್ರ ಮಾಡುವದಕ್ಕೆ ಅಪ್ಪಣೆ ಕೊಡ ಬೇಕು—ಅಂದರು. ಪಿಲಾತನು ಅವರಿಗೆ—ನಿಮಗೆ ಕಾವಲಿ ಉಂಟು; ಹೋಗಿ ನಿಂಮ ಕೈಲಾದ ಮಟ್ಟಿಗೂ ಭದ್ರ ಮಾಡಿರಿ. ಅಂನಲಾಗಿ, ಅವರು ಹೋಗಿ ಕಲ್ಲಿಗೆ ಮುದ್ರೆ ಹಾಕಿ, ಸಮಾಧಿಯಂನು ಕಾವಲಿಯಿಂದ ಭದ್ರ ಮಾಡಿದರು.†)

---

*) ಯೋ. ೧೯, ೪೧—೪೨. ಮತ್ತ್. ೨೭, ೬೦. ೬೧. ಮಾರ್ಕ್. ೧೫, ೪೬. ೪೭. ಲೂಕ್. ೨೩, ೫೩—೫೬.

†) ಮತ್ತ್ ೨೭, ೬೨—೬೬.

# Inhaltsverzeichniss.

(ಅನುಕ್ರಮಣಿಕೆ.)

---

## I. Gebete.



## Beilage A.

## Beilage B.



## C. Litanei für Betstunden.



## II. Handlungen.

---

## ERRATUM.

Lies die Seitenüberschrift von Seite 79 bis 81 statt "Fürbitte für die Königin:" "Gebet für Betstunden."

---

# LITURGIE

DER

# EVANGELISCH DEUTSCHEN MISSIONSKIRCHE

IN

# INDIEN.

---

ಡೈಚ ದೇಶದಿಂದ ಬಂದ ಬೋಧಕರು
ಸುವಾರ್ತೆಯ ಆಧಾರದಿಂದ ಹಿಂದು ದೇಶದಲ್ಲಿ ಕೂಡಿಸಿ ಸ್ಥಾಪಿಸಿದ
ಸಭೆಗಳಲ್ಲಿ ದೇವರ ಆರಾಧನೆಗಾಗಿ ಓದಲಿಕ್ಕೆ ನೇಮಿಸಿದ

## ಸಭೇಪ್ರಾರ್ಥನೆಗಳು.

MANGALORE:
PRINTED BY G. PLEBST, GERMAN MISSION PRESS.
1858.